ಸೋಮವಾರ, ಮೇ 18, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗೇರುಹಣ್ಣು...
ಮಂಗಳೂರಿನ ಕದ್ರಿ ಉದ್ಯಾನದಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮ, ಅರಣ್ಯ ಇಲಾಖೆ ಆಯೋಜಿಸಿರುವ ಗೇರುಮೇಳದಲ್ಲಿ ಮಕ್ಕಳ ಸಂಭ್ರಮ





ಗುಬ್ಬಿ ಕೂಗು...
ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಜೋಡಿ ಗುಬ್ಬಿಗಳು ನೆಲದ ಮೇಲೆ ಕೂತು ಕೂಗಿದವು




ಜನರ ಜೊತೆ, ಜನರಿಗಾಗಿ
ಜನರ ಬೆಂಬಲ, ಅಭಿವೃದ್ಧಿಯ ಬಲ
94 ನೇ ಜನ್ಮದಿನ
18-05-2026
ಸೋಮವಾರ
ಭಾರತದ ಹೆಮ್ಮೆಯ ಮಣ್ಣಿನಮಗ, ರಾಷ್ಟ್ರಕಂಡ ಮಹಾನ್ ಮುತ್ಸದ್ದಿ
ಸನ್ಮಾನ್ಯ ಶ್ರೀ
ಹೆಚ್.ಡಿ ದೇವೇಗೌಡ
ಅಪ್ಪಾಜಿ ಅವರಿಗೆ
ಇಳಿ ವಯಸ್ಸಿನಲ್ಲೂ ಹೋರಾಟ ಎಂದರೆ ಪುಟಿದೇಳುವ ಹೆಚ್.ಡಿ. ದೇವೇಗೌಡ ಅಪ್ಪಾಜಿ ಅವರು ಭಾರತದ ಮುತ್ಸದ್ದಿ ರಾಜಕಾರಣಿ. ಪ್ರಧಾನಿ ಹುದ್ದೆ ಅಲಂಕರಿಸಿದ ಮೊದಲ ಕನ್ನಡಿಗ. ಸುದೀರ್ಘ ರಾಜಕೀಯ ಜೀವನದಲ್ಲಿ ಅವರು ಚಳವಳಿ, ಹೋರಾಟ, ಅಧಿಕಾರ- ಈ ಎಲ್ಲದರ ಮೂಲಕ ಶ್ರಮಿಸಿದ್ದು ಈ ದೇಶವಾಸಿಗಳ ಕಲ್ಯಾಣಕ್ಕಾಗಿ, ಅವರ ನಾಡು, ನುಡಿಯೆಡೆಗಿನ ಬದ್ಧತೆ; ರೈತರು, ಬಡವರ ಬದುಕು ಹಸನುಗೊಳಿಸಲು ಅವರು ನೀಡಿದ ಕೊಡುಗೆ ಅನನ್ಯ, ಅನುಪಮ; ನಿಜಾರ್ಥದಲ್ಲಿ ಅವರುದೇಶ ಕಂಡ ಏಕೈಕ 'ಮಣ್ಣಿನ ಮಗ'. ಇನ್ನೂ ದೀರ್ಘಕಾಲ ಆಯುರಾರೋಗ್ಯದಿಂದ ಬಾಳಿಬದುಕಿ, ನಮ್ಮೆಲ್ಲರ ಶ್ರೇಯೋಭಿವೃದ್ಧಿಗೆ ಮಾರ್ಗದರ್ಶನ ನೀಡಲಿ. ಅವರ ಆಶೀರ್ವಾದ ಎಂದೆಂದಿಗೂ ನಮ್ಮ ಮೇಲಿರಲಿ ಎಂದು ಹೃದಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.
ಜನ್ಮದಿನದ ಶುಭಾಶಯಗಳು
ಶ್ರೀ ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ
ರಾಜ್ಯ ಯುವ ಜನತಾದಳ, ಜೆಡಿಎಸ್
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬಿಬಿಎಂಪಿ, ಗ್ರಾಪಂ ಮತ್ತು ತಾಪಂ
ಮಾಜಿ ಸದಸ್ಯರು, ಉತ್ತರಹಳ್ಳಿ
ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಎನ್. ಕುಮಾರ್
ಬಸವನಪುರ
ಶುಭ ಕೋರುವವರು:
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ
ನಂದಿ ಪ್ರಿಂಟ್ಸ್, ಗೊಟ್ಟಿಗೆರೆ

ಸೋಮವಾರ, ಮೇ 18, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 137 | ಪುಟ 16

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ವಾರದಲ್ಲಿ 1,500 ಪ್ರಾಚ್ಯಾವಶೇಷ ಸಂಗ್ರಹ 9



ಸ್ಟಾರ್ಕ್ ಮಿಂಚು
ಡೆಲ್ಲಿ ಕ್ಯಾಪಿಟಲ್ಸ್ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ಅವರು ದೆಹಲಿಯಲ್ಲಿ ಭಾನುವಾರ ನಡೆದ ರಾಜಸ್ಥಾನ ರಾಯಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ನಾಲ್ಕು ವಿಕೆಟ್ ಪಡೆದು ಮಿಂಚಿದರು



ಭಾರತ– ಡಚ್: 17 ಒಪ್ಪಂದಕ್ಕೆ ಸಹಿ

ಪಶ್ಚಿಮ ಏಷ್ಯಾ, ಉಕ್ರೇನ್ ಸ್ಥಿತಿ–ಗತಿ ಕುರಿತು ಮೋದಿ–ರಾಬ್ ಜೆಟ್ಟೆನ್ ಚರ್ಚೆ

ದಿ ಹೇಗ್ (ಪಿಟಿಐ): ಭಾರತ ಮತ್ತು ನೆದರ್ಲೆಂಡ್ಸ್ ನಡುವೆ ರಕ್ಷಣಾ ಪಾಲುದಾರಿಕೆ ಬಲಗೊಳಿಸಲು, ವಿರಳ ಖನಿಜಗಳು ಮತ್ತು ಇತರ ಮಹತ್ವದ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸಲು 17 ಒಪ್ಪಂದಗಳು ಏರ್ಪಟ್ಟಿವೆ.

ಎರಡೂ ದೇಶಗಳ ನಡುವೆ ವ್ಯಾಪಾರ, ಹೂಡಿಕೆ, ಭದ್ರತೆ, ಸೆಮಿಕಂಡಕ್ಟರ್, ಬಾಹ್ಯಾಕಾಶ, ಕ್ವಾಂಟಮ್ ಕಂಪ್ಯೂಟಿಂಗ್ ಸೇರಿದಂತೆ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಂಬಂಧ ಬಲಗೊಳ್ಳಲು ಈ ಒಪ್ಪಂದಗಳು ನೆರವಾಗಲಿವೆ.

ನೆದರ್ಲೆಂಡ್ಸ್, ಸ್ವೀಡನ್, ನಾರ್ವೆ, ಇಟಲಿ ದೇಶಗಳಿಗೆ ನಾಲ್ಕು ದಿನಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ನೆದರ್ಲೆಂಡ್ಸ್ ಪ್ರಧಾನಿ ರಾಬ್ ಜೆಟ್ಟೆನ್ ಅವರ ಜತೆ ಮಾತುಕತೆ ನಡೆಸಿದ ಬಳಿಕ ಈ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

‘ಎರಡೂ ದೇಶಗಳು ಸಾಗಬೇಕಾದ ಗುರಿ, ಉದ್ದೇಶಗಳ ಕುರಿತು ಈ ವೇಳೆ ವಿಸ್ತೃತವಾಗಿ ಚರ್ಚೆ ನಡೆದಿದೆ. ತಂತ್ರಜ್ಞಾನ ವರ್ಗಾವಣೆ, ಜಂಟಿ ಉದ್ಯಮಗಳ ಸ್ಥಾಪನೆ ಮೂಲಕ ರಕ್ಷಣಾ ಉಪಕರಣಗಳು, ಘಟಕಗಳು ಸೇರಿದಂತೆ ಇತರ ವಸ್ತುಗಳ ಉತ್ಪಾದನೆಯನ್ನು ಖಚಿತಪಡಿಸಿಕೊಳ್ಳುವ ಅಗತ್ಯವಿದೆ’ ಎಂದು ಇಬ್ಬರೂ ನಾಯಕರು ಪ್ರತಿಪಾದಿಸಿದರು.

> **ಭಾರತದಲ್ಲಿ ಹೂಡಿಕೆ ಮಾಡಲು ಮತ್ತು ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಅಪಾರ ಅವಕಾಶಗಳಿವೆ. ಅದಕ್ಕಾಗಿ ಡಚ್ ಕಂಪನಿಗಳನ್ನು ಸ್ವಾಗತಿಸುತ್ತೇನೆ**
> **ನರೇಂದ್ರ ಮೋದಿ,** ಪ್ರಧಾನಿ

ಐರೋಪ್ಯ ದೇಶಗಳ ಪೈಕಿ ನೆದರ್ಲೆಂಡ್ಸ್, ಭಾರತದ ಪ್ರಮುಖ ಹೂಡಿಕೆದಾರ ದೇಶವಾಗಿದೆ. ಆ ದೇಶದ 55.6 ಬಿಲಿಯನ್ ಡಾಲರ್ (ಸುಮಾರು ₹5.5 ಲಕ್ಷ ಕೋಟಿ) ವಿದೇಶಿ ನೇರ ಹೂಡಿಕೆ ಭಾರತದಲ್ಲಿದೆ.

ಪಶ್ಚಿಮ ಏಷ್ಯಾದ ಸ್ಥಿತಿ–ಗತಿ ಚರ್ಚೆ: ಇಬ್ಬರೂ ನಾಯಕರು ಪಶ್ಚಿಮ ಏಷ್ಯಾದಲ್ಲಿನ ಸ್ಥಿತಿಗತಿ ಕುರಿತು ಚರ್ಚಿಸಿ, ತೀವ್ರ ಕಳವಳ ವ್ಯಕ್ತಪಡಿಸಿದರು. ಜಾಗತಿಕ ಇಂಧನ ಪೂರೈಕೆ ಸರಪಳಿ ಮತ್ತು ವ್ಯಾಪಾರ ಜಾಲಕ್ಕೆ ಹೊಡೆತ ಬಿದ್ದಿರುವ ಬಗ್ಗೆ ಚರ್ಚಿಸಿದರು. ಹೊರ್ಮುಜ್ ಜಲಸಂಧಿಯಲ್ಲಿ ನಿರ್ಬಂಧವಿಲ್ಲದೆ, ಮುಕ್ತ ಸಂಚಾರಕ್ಕೆ ಅವಕಾಶ ಇರಬೇಕು ಎಂದು ಪ್ರತಿಪಾದಿಸಿದರು.

ಇದೇ ವೇಳೆ ಇಬ್ಬರೂ ನಾಯಕರು ಉಕ್ರೇನ್–ರಷ್ಯಾ ಯುದ್ಧ ಮತ್ತು ಅಲ್ಲಿನ ಸ್ಥಿತಿಗತಿಗಳು ಮತ್ತು ಪ್ರಾದೇಶಿಕ ಭದ್ರತೆಗೆ ಸಂಬಂಧಿಸಿದ ವಿಚಾರಗಳ ಕುರಿತು ಚರ್ಚಿಸಿದರು.

ವಿಶ್ವಸಂಸ್ಥೆಯ ಚಾರ್ಟರ್, ಅಂತರ ರಾಷ್ಟ್ರೀಯ ಕಾನೂನಿನ ಅನ್ವಯ ಉಕ್ರೇನ್ ಮತ್ತು ರಷ್ಯಾ ನಡುವೆ ರಾಜತಾಂತ್ರಿಕ ಮಾರ್ಗಗಳ ಮೂಲಕ ಸಂವಾದ ನಡೆಯಬೇಕು ಎಂದು ಪ್ರತಿಪಾದಿಸಿರುವ ಉಭಯ ನಾಯಕರು, ಈ ದಿಸೆಯಲ್ಲಿ ಸಮಗ್ರ, ನ್ಯಾಯಯುತ ಮತ್ತು ಶಾಶ್ವತ ಶಾಂತಿ ಸ್ಥಾಪನೆಗೆ ನಡೆಯುವ ಪ್ರಯತ್ನಗಳನ್ನು ಬೆಂಬಲಿಸುವುದಾಗಿ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಮತ್ತು ನೆದರ್ಲೆಂಡ್ಸ್ ಪ್ರಧಾನಿ ರಾಬ್ ಜೆಟ್ಟೆನ್ ಅವರು ದ್ವಿಪಕ್ಷೀಯ ಮಾತುಕತೆ ವೇಳೆ ಹಸ್ತಲಾಘವ ಮಾಡಿದರು —ಪಿಟಿಐ ಚಿತ್ರ

ಸಹಕಾರ ವೃದ್ಧಿಗೆ ಭಾರತ–ಸ್ವೀಡನ್ ಪಣ

ಗೊತೆನ್‌ಬರ್ಗ್ (ಸ್ವೀಡನ್): ನೆದರ್ಲೆಂಡ್ಸ್ ಭೇಟಿ ಬಳಿಕ ಭಾನುವಾರ ಸ್ವೀಡನ್‌ಗೆ ಬಂದಿಳಿದ ಪ್ರಧಾನಿ ಮೋದಿ ಅವರು ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟೆರ್‌ಸನ್ ಜತೆ ಮಾತುಕತೆ ನಡೆಸಿದರು. ಭಾರತ–ಸ್ವೀಡನ್ ದ್ವಿಪಕ್ಷೀಯ ಸಂಬಂಧವನ್ನು ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಲು ಇಬ್ಬರೂ ನಾಯಕರು ಒಪ್ಪಿಕೊಂಡರು.

ವ್ಯಾಪಾರ, ಹೂಡಿಕೆ, ತಂತ್ರಜ್ಞಾನ ಮತ್ತು ನಾವೀನ್ಯತೆ, ಬಾಹ್ಯಾಕಾಶ, ರಕ್ಷಣೆ, ಭದ್ರತೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ಸಂಶೋಧನಾ ಕ್ಷೇತ್ರಗಳಲ್ಲಿ ಸಂಬಂಧ ಬಲಗೊಳಿಸುವ ಬಗ್ಗೆ ಚರ್ಚಿಸಿದರು.

ಭಾರತ-ಸ್ವೀಡನ್ ಸಂಬಂಧ ವೃದ್ಧಿಗೆ ನೀಡಿದ ಅಸಾಧಾರಣ ಕೊಡುಗೆಗಳಿಗಾಗಿ ಮೋದಿ ಅವರಿಗೆ ಸ್ವೀಡನ್ ಸರ್ಕಾರದ ಪ್ರತಿಷ್ಠಿತ ‘ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಧಾನಿ ಹೇಳಿದ್ದು

- ಈ ವರ್ಷ ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದವಾಗಿದೆ. ಇದು ಭಾರತ–ಯುರೋಪ್ ನಡುವಿನ ಸಂಬಂಧದಲ್ಲಿ ಹೊಸ ಸುವರ್ಣ ಯುಗವನ್ನು ಆರಂಭಿಸಿದೆ
- ಭಾರತದಲ್ಲಿ 300ಕ್ಕೂ ಹೆಚ್ಚು ಡಚ್ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ ನೆದರ್ಲೆಂಡ್ಸ್ 2ನೇ ಅತಿದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿದೆ
- ಭಾರತವು ಖಾಸಗಿ ವಲಯಕ್ಕೆ ಹೆಚ್ಚಿನ ಅವಕಾಶಗಳನ್ನು ನೀಡುತ್ತಿದ್ದು, ಬಾಹ್ಯಾಕಾಶ, ಖನಿಜ ಮತ್ತು ಪರಮಾಣು ಇಂಧನ ಕ್ಷೇತ್ರವನ್ನು ಮುಕ್ತಗೊಳಿಸಿದೆ
- ಉದ್ಯಮಗಳಿಗೆ ಸುಲಭವಾಗಿ ವ್ಯವಹಾರ ನಡೆಸಲು ಪೂರಕವಾದ ತೆರಿಗೆ ವ್ಯವಸ್ಥೆ ಮತ್ತು ಕಾರ್ಮಿಕ ಸಂಹಿತೆಯಲ್ಲಿ ಸುಧಾರಣೆ ತರಲಾಗಿದೆ
- ಭಾರತ ಮತ್ತು ನೆದರ್ಲೆಂಡ್ಸ್ ದೇಶಗಳ ನಡುವೆ ವಿಶ್ವವಿದ್ಯಾಲಯಗಳ ಪಾಲುದಾರಿಕೆ, ಜಂಟಿಯಾಗಿ ಸಂಶೋಧನಾ ಮತ್ತು ಅಭಿವೃದ್ಧಿ ಕಾರ್ಯಗಳು ನಡೆಯಲಿವೆ

‘ಸುಪ್ರೀಂ’ ನ್ಯಾಯಮೂರ್ತಿ ಸಂಖ್ಯೆ 38ಕ್ಕೆ: ಸುಗ್ರೀವಾಜ್ಞೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆಯನ್ನು 33ರಿಂದ 38ಕ್ಕೆ (ಭಾರತದ ಮುಖ್ಯ ನ್ಯಾಯಮೂರ್ತಿ ಸೇರಿ) ತ್ವರಿತವಾಗಿ ಹೆಚ್ಚಿಸಲು ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ.

ಈ ಕುರಿತು ಸಂಸತ್ತಿನಲ್ಲಿ ಮಸೂದೆ ಮಂಡಿಸಲು ಕೇಂದ್ರ ಸಚಿವ ಸಂಪುಟ ಮೇ 5ರಂದು ನಿರ್ಧಾರ ತೆಗೆದುಕೊಂಡಿತ್ತು. ಅದರ ಬೆನ್ನಲ್ಲೇ ಸುಗ್ರೀವಾಜ್ಞೆ ಹೊರಡಿಸಲಾಗಿದೆ.

‘ಸುಪ್ರೀಂ ಕೋರ್ಟ್ (ನ್ಯಾಯಮೂರ್ತಿಗಳ ಸಂಖ್ಯೆ) ತಿದ್ದುಪಡಿ ಸುಗ್ರೀವಾಜ್ಞೆ–2026’ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಸಹಿ ಮಾಡಿದ್ದಾರೆ.

ಆದಾಗ್ಯೂ, ಆರು ತಿಂಗಳೊಳಗೆ ಈ ಸುಗ್ರೀವಾಜ್ಞೆ ಸಂಸತ್ತಿನಲ್ಲಿ ಅಂಗೀಕಾರ ಪಡೆಯಬೇಕು. ಇಲ್ಲದಿದ್ದರೆ ಅದು ರದ್ದಾಗುತ್ತದೆ. ಜುಲೈನಲ್ಲಿ ಮಳೆಗಾಲದ ಅಧಿವೇಶನ ನಡೆಯುವ ಸಾಧ್ಯತೆಯಿದೆ. ಆದರೆ, ಈ ಸುಗ್ರೀವಾಜ್ಞೆಯನ್ನು ತುರ್ತಾಗಿ ತರುವ ಅಗತ್ಯವೇನಿತ್ತು ಎಂಬುದು ಸ್ಪಷ್ಟವಾಗಿಲ್ಲ. ನ್ಯಾಯಮೂರ್ತಿಗಳ ಸಂಖ್ಯೆಯ ಹೆಚ್ಚಳವು ತ್ವರಿತ ಮತ್ತು ಪರಿಣಾಮಕಾರಿ ನ್ಯಾಯವನ್ನು ಖಾತರಿಪಡಿಸುತ್ತದೆ ಎಂದು ಸರ್ಕಾರ ಈ ಹಿಂದೆ ಹೇಳಿತ್ತು.

ಸಂವಿಧಾನವು ಒಬ್ಬ ಮುಖ್ಯ ನ್ಯಾಯಮೂರ್ತಿ ಮತ್ತು ಇತರ ಏಳು ನ್ಯಾಯಮೂರ್ತಿಗಳಿಗೆ ಅವಕಾಶ ನೀಡಿದ್ದರೂ, ‘ಸುಪ್ರೀಂ ಕೋರ್ಟ್ (ನ್ಯಾಯಮೂರ್ತಿಗಳ ಸಂಖ್ಯೆ) ಕಾಯ್ದೆ–1956’ ನ್ಯಾಯಮೂರ್ತಿಗಳ ಸಂಖ್ಯೆಯನ್ನು 10ಕ್ಕೇರಿಸಲು ಅವಕಾಶ ಮಾಡಿಕೊಟ್ಟಿತು. ಈ ಕಾಯ್ದೆಗೆ ಹಲವು ಬಾರಿ ತಿದ್ದುಪಡಿಗಳಾಗಿದ್ದು, 1960ರಲ್ಲಿ ನ್ಯಾಯಮೂರ್ತಿಗಳ ಸಂಖ್ಯೆ 13ಕ್ಕೆ, 1977ರಲ್ಲಿ 17ಕ್ಕೆ, 1986ರಲ್ಲಿ 25ಕ್ಕೆ, 2008ರಲ್ಲಿ 30ಕ್ಕೆ ಹಾಗೂ 2019ರಲ್ಲಿ ತಿದ್ದುಪಡಿ ಮೂಲಕ ನ್ಯಾಯಮೂರ್ತಿಗಳ ಸಂಖ್ಯೆಯನ್ನು 33ಕ್ಕೆ ಹೆಚ್ಚಿಸಲಾಯಿತು.

‘7,000 ಕಿ.ಮೀ. ಬುಲೆಟ್ ರೈಲು ಜಾಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ದೀರ್ಘಕಾಲೀನ ಯೋಜನೆಯ ಭಾಗವಾಗಿ ಮುಂಬೈ, ಬೆಂಗಳೂರು ಹಾಗೂ ಇತರ ಪ್ರಮುಖ ನಗರಗಳನ್ನ ಸಂಪರ್ಕಿಸುವ ಸುಮಾರು 7,000 ಕಿಮೀ ಉದ್ದದ ಬುಲೆಟ್ ರೈಲು ಜಾಲವನ್ನು ನಿರ್ಮಿಸುವ ಉದ್ದೇಶವಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಎಸ್ಎಂವಿಟಿ ಬೆಂಗಳೂರು–ಎಲ್‌ಟಿಟಿ ಮುಂಬೈ ಎಕ್ಸ್‌ಪ್ರೆಸ್ ರೈಲಿಗೆ ವರ್ಚುವಲ್ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಬೆಂಗಳೂರು–ಹೈದರಾಬಾದ್ ಹಾಗೂ ಬೆಂಗಳೂರು–ಚೆನ್ನೈ ನಡುವೆ ಬುಲೆಟ್ ಟ್ರೈನ್ ಕಾರಿಡಾರ್‌ಗಳಿಗೆ ಅನುಮೋದನೆ ನೀಡಲಾಗಿದೆ. ಪ್ರಸ್ತುತ ಕರ್ನಾಟಕದಲ್ಲಿ 12 ಜೋಡಿ ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ. ಬೆಂಗಳೂರು–ಮಂಗಳೂರು ಮಾರ್ಗದಲ್ಲಿ ವಂದೇ ಭಾರತ್ ರೈಲು ಓಡಿಸಲು ಪರೀಕ್ಷೆ ನಡೆಯುತ್ತಿದೆ. ಶೀಘ್ರದಲ್ಲೇ ಕರಾವಳಿ ಭಾಗದ ಸಂಪರ್ಕ ಮಡಗಾಂವ್‌ವರೆಗೆ ವಿಸ್ತರಿಸಲಿದೆ ಎಂದು ಮಾಹಿತಿ ನೀಡಿದರು. 9

ಬೆಂಗಳೂರು ಬಳಗಕ್ಕೆ ಪ್ಲೇ ಆಫ್ ರಹದಾರಿ

ಧರ್ಮಶಾಲಾ (ಪಿಟಿಐ): ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪ್ಲೇ ಆಫ್ ಪ್ರವೇಶಿಸಿತು. ಭಾನುವಾರ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು ಜಯಿಸಿ ಈ ಸಾಧನೆ ಮಾಡಿತು.



ಆರ್‌ಸಿಬಿ 4ಕ್ಕೆ222 (20 ಓವರ್‌ಗಳಲ್ಲಿ)

ಪಂಜಾಬ್ ಕಿಂಗ್ಸ್ 8ಕ್ಕೆ199 (20 ಓವರ್‌ಗಳಲ್ಲಿ)

ವಿರಾಟ್ ಕೊಹ್ಲಿ		ವೆಂಕಟೇಶ್ ಅಯ್ಯರ್
58	ರನ್	73*
37	ಎಸೆತ	40
4	ಬೌಂಡರಿ	8
3	ಸಿಕ್ಸರ್	4

ಫಲಿತಾಂಶ: ಆರ್‌ಸಿಬಿಗೆ 23 ರನ್ ಜಯ

18 ಆರ್‌ಸಿಬಿ 13 ಪಂದ್ಯಗಳಿಂದ ಗಳಿಸಿರುವ ಅಂಕಗಳು

67 ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ದಾಖಲಿಸಿದ ಅರ್ಧಶತಕಗಳ ಸಂಖ್ಯೆ

11 ಟೂರ್ನಿಯ ಇತಿಹಾಸದಲ್ಲಿ ಆರ್‌ಸಿಬಿ ಪ್ಲೇ ಆಫ್ ಪ್ರವೇಶಿಸಿದ್ದು

COSMOS CO-OP. BANK LTD. MULTISTATE SCHEDULED BANK
Enriching Life!
Attractive ROI on Deposits
Period : 16 Months
General 7.05%* | Senior Citizen 7.30%*
*T&C (ROI p.a.)
Monthly & Quarterly Interest Payout
080-26619950 / 22421999

ಕಲ್ಯಾಣ, ಕಿತ್ತೂರು ಕರ್ನಾಟಕದ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಶನಿವಾರ ರಾತ್ರಿ ಮತ್ತು ಭಾನುವಾರ ಉತ್ತಮ ಮಳೆಯಾಗಿದೆ. ಪ್ರತ್ಯೇಕ ಪ್ರಕರಣಗಳಲ್ಲಿ ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದಾರೆ.

ಕಿತ್ತೂರು ಕರ್ನಾಟಕದ ಧಾರವಾಡ, ಗದಗ, ಉತ್ತರ ಕನ್ನಡ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ಬಹುತೇಕ ಕಡೆ ಮರಗಳು, ವಿದ್ಯುತ್ ಕಂಬಗಳು ಉರುಳಿವೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಭಟ್ಕಳ, ಹೊನ್ನಾವರದಲ್ಲಿ ವ್ಯಾಪಕ ಮಳೆಯಾಯಿತು.




ಗದಗ ತಾಲ್ಲೂಕಿನ ಕುರ್ತಕೋಟಿ, ಶ್ಯಾಗೋಟಿ, ದುಂದೂರು, ಹುಲಕೋಟಿ ಭಾಗದಲ್ಲಿ ಜೋರು ಮಳೆಯಾಗಿದೆ. ಗಜೇಂದ್ರಗಡ-ನರೇಗಲ್ ಮಾರ್ಗದಲ್ಲಿ ಪವನ ವಿದ್ಯುತ್ ಕಂಬ ಬಿದ್ದರೆ, ಹಲವೆಡೆ ಜಮೀನು ಜಲಾವೃತವಾಗಿವೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ಕೊಪ್ಪಳ, ರಾಯಚೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಯಿತು. ರಾಯಚೂರು ಜಿಲ್ಲೆಯ ಮುದಗಲ್ ಹೊರವಲಯದಲ್ಲಿ ಸಿಡಿಲು ಬಡಿದು ಬಣವಿ ಸುಟ್ಟರೆ, ಕನ್ನಾಪುರ ಹಟ್ಟಿ ಗ್ರಾಮದಲ್ಲಿ ವಿದ್ಯುತ್ ಕಂಬಗಳು, ಮರಗಳು ಬಿದ್ದಿವೆ.

ಕಲಬುರಗಿ ಜಿಲ್ಲೆಯ ಜೇವರ್ಗಿ, ಕೊಪ್ಪಳ ಜಿಲ್ಲೆಯ ಯಲಬುರ್ಗಾ, ಕುಷ್ಟಗಿ ತಾಲ್ಲೂಕಿನ ವಿವಿಧೆಡೆ ಉತ್ತಮ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳು ಗರಿಗೆದರಿವೆ.

ದಾವಣಗೆರೆ ಜಿಲ್ಲೆಯಲ್ಲಿ ಶನಿವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಗೆ 622 ಎಕರೆ ಜಮೀನಿನಲ್ಲಿ ಬೆಳೆನಷ್ಟ ಸಂಭವಿಸಿದೆ.



ಮದ್ಯ: ಪರಿಷ್ಕೃತ ಬೆಲೆಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದಲ್ಲಿನ ಆಲ್ಕೋಹಾಲ್ ಪ್ರಮಾಣದ ಆಧಾರದಲ್ಲಿ ಅಬಕಾರಿ ಸುಂಕ ವಿಧಿಸುವ ನೀತಿ ಜಾರಿಗೆ ಬಂದ ನಂತರ, ವಿವಿಧ ಬ್ರ್ಯಾಂಡ್‌ನ ಮದ್ಯದ ಬೆಲೆಯಲ್ಲಿ ಗಣನೀಯ ಬದಲಾವಣೆ ಆಗಿದೆ. ಮದ್ಯದ ಪರಿಷ್ಕೃತ ಬೆಲೆಯನ್ನು ಅಬಕಾರಿ ಇಲಾಖೆಯು ಪ್ರಕಟಿಸಿದೆ. ಅತಿಹೆಚ್ಚು ಪ್ರಮಾಣದಲ್ಲಿ ಮಾರಾಟವಾಗುವ ಕೆಲ ಮದ್ಯಗಳ ಬೆಲೆಪಟ್ಟಿ ಇಲ್ಲಿದೆ.



ಪರಿಷ್ಕೃತ ಬೆಲೆ: ಲೆಗಸಿ ಸ್ಪೆಷಲ್ ತ್ರಿಬಲ್ ಎಕ್ಸ್ ರಮ್‌ನ 90 ಎಂಎಲ್ ಬೆಲೆ ₹45, 180 ಎಂ.ಎಲ್‌ಗೆ ₹90 ಮತ್ತು 750 ಎಂಎಲ್‌ಗೆ ₹370 ನಿಗದಿಪಡಿಸಲಾಗಿದೆ. ಡಿಕೆ ಡಬಲ್ ಕಿಕ್ ವಿಸ್ಕಿ ₹55 (90 ಎಂಎಲ್) ಮತ್ತು ₹95 (180 ಎಂಎಲ್), ರಾಜಾ ವಿಸ್ಕಿ ₹55 (90 ಎಂಎಲ್) ಮತ್ತು ₹110 (180 ಎಂಎಲ್), ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ₹55 (90 ಎಂಎಲ್) ಮತ್ತು ₹110 (180 ಎಂಎಲ್), 8ಪಿಎಂ ಬ್ಲೂ ಡಿಲಕ್ಸ್ ವಿಸ್ಕಿ ₹80 (90 ಎಂಎಲ್) ಮತ್ತು ₹155 (180 ಎಂಎಲ್).

ಆಫೀಸರ್ಸ್ ಚಾಯ್ಸ್ ಸ್ಪೆಷಲ್ ವಿಸ್ಕಿ, ಓಲ್ಡ್ ಮಾಂಕ್ ಸ್ಪೆಷಲ್ ರಮ್, ಡೈರೆಕ್ಟರ್ಸ್ ಸ್ಪೆಷಲ್ ವಿಸ್ಕಿ, ಡಿಎಸ್‌ಪಿ ಬ್ಲ್ಯಾಕ್ ಸ್ಪೆಷಲ್ ವಿಸ್ಕಿ, ₹90 (90 ಎಂಎಲ್) ಮತ್ತು ₹175 (180 ಎಂಎಲ್), ಇಂಪೀರಿಯಲ್ ಬ್ಲ್ಯೂ ವಿಸ್ಕಿ, ಮ್ಯಾನ್ಷನ್ ಹೌಸ್ ಫ್ರೆಂಚ್ ಬ್ರ್ಯಾಂಡಿ ₹110 (90 ಎಂಎಲ್) ಮತ್ತು ₹215 (180 ಎಂಎಲ್).

ಟೀಚರ್ಸ್ ಸ್ಕಾಚ್ ವಿಸ್ಕಿ ₹575 (180 ಎಂಎಲ್) ಮತ್ತು ₹2,360 (750 ಎಂಎಲ್), ಬ್ಲ್ಯಾಕ್ ಅಂಡ್ ವೈಟ್ ಸ್ಕಾಚ್ ವಿಸ್ಕಿ/100 ಪೈಪರ್ಸ್ ಸ್ಕಾಚ್ ವಿಸ್ಕಿ/ವ್ಯಾಟ್ 69 ಸ್ಕಾಚ್ ವಿಸ್ಕಿ ₹580 (180 ಎಂಎಲ್) ಮತ್ತು ₹2,375 (750 ಎಂಎಲ್), ಅಮೃತ್ ಇಂಡಿಯನ್ ಜಿನ್ ₹575 (180 ಎಂಎಲ್) ಮತ್ತು ₹2,350 (750 ಎಂಎಲ್). 12

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸಿಬಿಎಸ್‌ಇ: ಮರು ಮೌಲ್ಯಮಾಪನ ಶುಲ್ಕ ₹100ಕ್ಕೆ ಇಳಿಕೆ

ನವದೆಹಲಿ (ಪಿಟಿಐ): ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳ ಮರು-ಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆ ಪರಿಶೀಲನಾ ಶುಲ್ಕವನ್ನು ಪ್ರತಿ ಪತ್ರಿಕೆಗೆ ₹100ಕ್ಕೆ ಇಳಿಸಲಾಗಿದೆ ಎಂದು ಶಿಕ್ಷಣ ಸಚಿವಾಲಯ ಪ್ರಕಟಿಸಿದೆ. ಅಲ್ಲದೆ, ಆನ್–ಸ್ಕ್ರೀನ್ ಮಾರ್ಕಿಂಗ್ (ಒಎಸ್‌ಎಂ) ವ್ಯವಸ್ಥೆ ಅಳವಡಿಸಿರುವುದರಿಂದ ವಿದ್ಯಾರ್ಥಿಗಳ ಅಂಕಗಳ ಮೇಲೆ ಪರಿಣಾಮ ಬೀರುತ್ತದೆ ಎಂಬ ವಿದ್ಯಾರ್ಥಿಗಳ ಕಳವಳವನ್ನು ಕೂಡ ಸಚಿವಾಲಯ ತಳ್ಳಿಹಾಕಿದೆ.

ವಿವರ 9

ಬೇಸಿಗೆಯ ದಿನಗಳು
ಈಗ ಮನೆಯಲ್ಲಿ ಬೇಕು



ಕೈಲಾಸ ಜೀವನ
ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್

ಕಣ್ಣುಗಳ ಉರಿತ
ಬೆಚ್ಚನೆ ನೀರಿನಿಂದ ಮುಖ ಮತ್ತು ಕಣ್ಣುಗಳನ್ನು ಸ್ವಚ್ಛ ಮಾಡಿ. ರಾತ್ರಿ ಮಲಗುವಾಗ ಕೈಲಾಸ ಜೀವನವನ್ನು ಲೇಪಿಸಿ ಮೇಲೆ ಹತ್ತಿಯ ಮಡಿಕೆಯನ್ನಿರಿಸಿ. ತಂಪು ಉಂಟಾಗಿ ಕಣ್ಣುಗಳ ಉರಿತ ಮತ್ತು ಕೆಂಪು ಕಡಿಮೆಯಾಗಲು ನೆರವಾಗುವುದು.

ಗುಳ್ಳೆಗಳು, ಮೊಡವೆ
ಬೆಚ್ಚನೆ ನೀರಿನಿಂದ ಮುಖಕ್ಕೆ ಶಾಖ ಕೊಟ್ಟು, ಮೆತ್ತನೆಯ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. (ಉಜ್ಜಬೇಡಿ.) ಮೊಡವೆ, ಗುಳ್ಳೆಗಳಿಂದ ಶೀಘ್ರ ಆರಾಮ ಲಭಿಸಲು ನೆರವಾಗುತ್ತದೆ. ಮುಖ ತೇಜಸ್ವಿ, ಆಕರ್ಷಕ, ತಿಳಿಯಾಗಲು ನೆರವಾಗುವುದು.

ಕಾಲಿನ ಬಿರುಕುಗಳು
ಕಾಲುಗಳನ್ನು ಸ್ವಚ್ಛವಾಗಿ ತೊಳೆದು, ತುಸು ಹೊತ್ತು ಬೆಚ್ಚನೆ ನೀರಲ್ಲಿ ಅದ್ದಿಟ್ಟು, ಮೆತ್ತಗೆ ಮಾಡಿ. ಮೆತ್ತನೆ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. ಉಜ್ಜಬೇಡಿ. ಕಾಲಿನ ಬಿರುಕುಗಳು ತುಂಬಿ ಬರಲು ನೆರವಾಗುವುದು. ಕಾಲುಗಳ ಚರ್ಮ ನವುರು ಹಾಗೂ ಮೃದುವಾಗುವುದು.

ಮೂಲವ್ಯಾಧಿ / ಫಿಶೂರ್
ಒಂದು ಚಮಚೆ ಕೈಲಾಸ ಜೀವನವನ್ನು ಅಷ್ಟೇ ಸಕ್ಕರೆಯೊಂದಿಗೆ ರಾತ್ರಿ 21 ದಿನಗಳ ಕಾಲ ಸೇವಿಸಿ. ಕೆಜೆ ಕ್ರೀಮ್ ಅನ್ನು ಪೀಡಿತ ಪ್ರದೇಶಕ್ಕೆ ದಿನಕ್ಕೆ 2/3 ಬಾರಿ ಅನ್ವಯಿಸಿ. ಇದು ಬಿರುಕುಗಳಿಂದ ಪರಿಹಾರವನ್ನು ತರುತ್ತದೆ. ಎಣ್ಣೆ, ಮಾಂಸ ಮತ್ತು ಮದ್ಯವನ್ನು ತಪ್ಪಿಸಿ.

ಕಣ್ಣುಗಳ ಉರಿತ, ಮೊಡವೆ, ಗುಳ್ಳೆಗಳು, ಕಾಲಿನ ಬಿರುಕುಗಳು, ಸುಡುವಿಕೆ, ಗಾಯ ಮತ್ತು ಕೊಯ್ತಗಳು, ಬಿರುಕುಗಳು... ಇತ್ಯಾದಿಗಳಿಗೆ ಪರಿಣಾಮಕಾರಿ!
ರೋಗ ಹಲವು, ಪರಿಹಾರ ಒಂದು... ಹೀಗಾಗಿ ಮಲ್ಟಿಪರ್ಪಸ್ ! ಇಂದೇ ಖರೀದಿಸಿ !
Also available on amazon netmeds.com India Ki Pharmacy
Available in: 12g & 20g Tube, 30g, 60g, 120g, 230g Bottle
Manufacturer: ASUM, Pune: 020-24486865 | Customer Care: Prashant: 91300 26070
| asumkj@gmail.com | www.asum.com |

ಸೂರ್ಯೋದಯ: 5:54 ಸೂರ್ಯಾಸ್ತ : 6:38 ಚಂದ್ರೋದಯ: ಬೆ. 5:59 ಚಂದ್ರಾಸ್ತ: ಸ. 7:23 | ಭಾನುವಾರದ ಉಷ್ಣಾಂಶ : ಗರಿಷ್ಠ 32° ಕನಿಷ್ಠ 23°

ಸೋಮವಾರದ ಉಷ್ಣಾಂಶ 33° ಗರಿಷ್ಠ 23° ಕನಿಷ್ಠ | ಮಂಗಳವಾರ 33° : 23° | ಬುಧವಾರ 34° : 22° | ಗುರುವಾರ 35° : 22°

ಹವಾಮಾನ ಮುನ್ಸೂಚನೆ: ನಗರದಲ್ಲಿ ಇಂದು ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ

ಇಂದಿನಿಂದ ಮಹೇಶ್ವರಮ್ಮ ಜಾತ್ರೆ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಗ್ರಾಮದಲ್ಲಿ ಮಹೇಶ್ವರಮ್ಮ ದೇವರ ಜಾತ್ರೆಯು ಸೋಮವಾರದಿಂದ ನಾಲ್ಕು ದಿನ ವೈಭವದಿಂದ ಜರುಗಲಿದೆ.

18ರಂದು ಬೆಳಿಗ್ಗೆ 8ಕ್ಕೆ ಮುತ್ತುರಾಯ ಸ್ವಾಮಿ ಮತ್ತು ಬಸವಣ್ಣ ದೇವರಿಗೆ ಬೆಲ್ಲದ ಆರತಿ, 11ಕ್ಕೆ ಚಿಕ್ಕಮ್ಮ ಮತ್ತು ದೊಡ್ಡಮ್ಮ ದೇವರಿಗೆ ಆರತಿ ಹಾಗೂ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

19ರಂದು ಬೆಳಿಗ್ಗೆ 10.30ಕ್ಕೆ ಧನಿನ ಮಾರಮ್ಮ ಮತ್ತು ಮಹೇಶ್ವರಮ್ಮ ದೇವರಿಗೆ ಆರತಿ ಹಾಗೂ ಪೂಜಾ ಕಾರ್ಯಕ್ರಮಗಳು, ಅಮ್ಮನವರ ರಥೋತ್ಸವ ಹಾಗೂ ಡೊಳ್ಳುಕುಣಿತ, ಸಂಜೆ 5ಕ್ಕೆ ಅಗ್ನಿಕುಂಡ ಪ್ರವೇಶ ಮತ್ತು 6.30ಕ್ಕೆ ಚಪ್ಪಲಮ್ಮ ದೇವರಿಗೆ ಆರತಿ ಹಾಗೂ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

20ರಂದು ಸಂಜೆ 7ಕ್ಕೆ ಘಾಮದಮ್ಮ ದೇವರಿಗೆ ಆರತಿ ಹಾಗೂ ಪೂಜಾ ಕಾರ್ಯಕ್ರಮ, 21ರಂದು ಬೆಳಿಗ್ಗೆ 10ಕ್ಕೆ ಮಹೇಶ್ವರಮ್ಮ, ಚಪ್ಪಲಮ್ಮ, ಧನಿನ ಮಾರಮ್ಮ ದೇವರ ಭಕ್ತಾದಿಗಳಿಗೆ ಪ್ರಸಾದ ವಿತರಣೆ, ನಂತರ ಡೊಳ್ಳುಕುಣಿತ, ವೀರಗಾಸೆ, ಸೋಮನಕುಣಿತ, ಕೀಲುಕುದುರೆ ಕಲಾತಂಡಗಳಿಂದ ಮೆರವಣಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಇರುತ್ತವೆ ಎಂದು ಪ್ರಕಟಣೆ ತಿಳಿಸಿದೆ.

ಅನುವಾದಿತ ಸಂಪುಟಕ್ಕೆ ಅನುದಾನವಿಲ್ಲ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಹಿಂದಿನ ಕಾರ್ಯಕಾರಿ ಸಮಿತಿ ಕೈಗೊಂಡಿದ್ದ ಯೋಜನೆ ನನೆಗುದಿಗೆ

• ವರುಣ ಹೆಗಡೆ



ಪುಸ್ತಕ ಪ್ರಕಟಣೆ ಸೇರಿ ವಿವಿಧ ಯೋಜನೆ ಹಮ್ಮಿಕೊಂಡಿದ್ದು, ಅವುಗಳಿಗೆ ಅನುದಾನ ಹೊಂದಿಸಬೇಕಿದೆ. ಅನುದಾನದ ಲಭ್ಯತೆ ಆಧಾರದಲ್ಲಿ ಮುದ್ರಣಕ್ಕೆ ಬಾಕಿಯಿರುವ ಸಂಪುಟಗಳನ್ನು ಪರಿಶೀಲಿಸುತ್ತೇವೆ

ಚನ್ನಪ್ಪ ಕಟ್ಟಿ, ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಈ ಹಿಂದಿನ ಕಾರ್ಯಕಾರಿ ಸಮಿತಿ ಕೈಗೊಂಡಿದ್ದ ವಿವಿಧ ಅನುವಾದ ಯೋಜನೆಗಳು ಅನುದಾನದ ಕೊರತೆಯಿಂದ ನನೆಗುದಿಗೆ ಬಿದ್ದಿವೆ. ಪ್ರಕಟಣೆಗೆ ಸಿದ್ಧವಾಗಿದ್ದ ಮಹತ್ವದ ಸಂಪುಟಗಳು ಪ್ರಾಧಿಕಾರದ ಕಚೇರಿಯಲ್ಲಿಯೇ ಬಂಧಿಯಾಗಿವೆ.

ಪ್ರಾಧಿಕಾರದ ಈ ಹಿಂದಿನ ಅಧ್ಯಕ್ಷರಾಗಿದ್ದ ಅಜಕ್ಕಳ ಗಿರೀಶ್ ಭಟ್ ಅವರ ನೇತೃತ್ವದ ಕಾರ್ಯಕಾರಿ ಸಮಿತಿ ಸುರೇಂದ್ರನಾಥ್ ದಾಸ್‌ಗುಪ್ತ ಅವರ 'ಎ ಹಿಸ್ಟರಿ ಆಫ್ ಇಂಡಿಯನ್ ಫಿಲಾಸಫಿ' ಕೃತಿಯನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ಪ್ರಭಾಕರ್ ಜೋಶಿ ಸಂಪಾದಕತ್ವದಲ್ಲಿ ಐವರು ವಿದ್ವಾಂಸರು ಅದನ್ನು ಅನುವಾದಿಸಿದ್ದರು. ಇತಿಹಾಸಕಾರ, ಗಾಂಧಿವಾದಿ ಹಾಗೂ ಭಾರತೀಯ ಚಿಂತಕರಾದ ಧರ್ಮಪಾಲ್ ಅವರ ಲೇಖನಗಳ 11 ಸಂಪುಟಗಳನ್ನೂ ಹಿಂದಿ ಮತ್ತು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಲಾಗಿತ್ತು. ಆದರೆ, ಪ್ರಕಟಣೆಗೆ ಟೆಂಡರ್ ಪ್ರಕ್ರಿಯೆಯನ್ನು ನಡೆಸುವಷ್ಟರಲ್ಲಿ ಕಾರ್ಯಕಾರಿ ಸಮಿತಿ ಅವಧಿ ಮುಗಿದ ಪರಿಣಾಮ ಈ ಅನುವಾದಗಳು ಮುದ್ರಣಗೊಂಡಿಲ್ಲ.

2019ರ ಅಕ್ಟೋಬರ್‌ನಲ್ಲಿ ರಚನೆಯಾಗಿದ್ದ ಈ ಹಿಂದಿನ ಕಾರ್ಯಕಾರಿ ಸಮಿತಿಯ ಅವಧಿ 2022ರ ಅಕ್ಟೋಬರ್‌ನಲ್ಲಿ ಪೂರ್ಣಗೊಂಡಿತ್ತು. ನಂತರ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಿಸಿ ಈ ಹಿಂದಿನ ಬಿಜೆಪಿ ಸರ್ಕಾರ ಆದೇಶ ಹೊರಡಿಸಿತ್ತು. ಆ ವೇಳೆ ಪ್ರಾಧಿಕಾರದ ಆಡಳಿತಾಧಿಕಾರಿ ಅನುವಾದಿತ ಸಂಪುಟಗಳ ಪ್ರಕಟಣೆಗೆ ಕ್ರಮ ಕೈಗೊಳ್ಳದ ಕಾರಣ, ಸಾವಿರಾರು ಪುಟಗಳ ಅನುವಾದವು ಪುಸ್ತಕ ರೂಪ ಪಡೆಯಲಿಲ್ಲ.



ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಅನುದಾನದ ಕೊರತೆ: ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ 2024ರ ಮಾರ್ಚ್‌ನಲ್ಲಿ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ನೂತನ ಕಾರ್ಯಕಾರಿ ಸಮಿತಿ ರಚಿಸಿತ್ತು. ಕುವೆಂಪು ಭಾಷಾ ಭಾರತಿಗೆ ಅಧ್ಯಕ್ಷರಾಗಿ ನೇಮಕಗೊಂಡ ಚನ್ನಪ್ಪ ಕಟ್ಟಿ ಹಾಗೂ ಅವರ ನೇತೃತ್ವದ ಹಾಲಿ ಕಾರ್ಯಕಾರಿ ಸಮಿತಿ, ಅನುದಾನದ ಕೊರತೆಯ ಕಾರಣ ಈ ಹಿಂದಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿಲ್ಲ. ಪ್ರಾಧಿಕಾರಕ್ಕೆ ವಾರ್ಷಿಕ ₹50 ಲಕ್ಷದಷ್ಟು ಅನುದಾನವನ್ನು ಮಾತ್ರ ಇಲಾಖೆ ಒದಗಿಸುತ್ತಿದೆ. ಪುಸ್ತಕ ಮಾರಾಟದಿಂದ ಆದಾಯ ಬಂದರೂ ಹಾಲಿ ಕಾರ್ಯಕಾರಿ ಸಮಿತಿಯು ಪ್ರಮುಖ ಸಾಹಿತಿಗಳ ಇ–ಪುಸ್ತಕ, ಆಡಿಯೊ ಬುಕ್‌ನಂತಹ ಯೋಜನೆಗಳನ್ನು ಕೈಗೊಂಡಿದೆ. ಈ ಹಿಂದಿನ ಯೋಜನೆಗಳಿಗೆ ಪ್ರತ್ಯೇಕ ಅನುದಾನ ಲಭ್ಯವಿಲ್ಲದ ಕಾರಣ ಅವುಗಳನ್ನು ಬದಿಗಿಟ್ಟಿದೆ.

'ಕಾರ್ಯಕಾರಿ ಸಮಿತಿ ಬದಲಾದಂತೆ ಯೋಜನೆಗಳೂ ಬದಲಾಗುತ್ತಿರುವುದು ವಿಪರ್ಯಾಸ. ಈಗಾಗಲೇ ಅನುವಾದ ಮಾಡಲಾದ ವಿವಿಧ ಸಂಪುಟಗಳು ಪ್ರಕಟವಾಗದೆ ಹಾಗೇ ಉಳಿದರೆ ಪರಿಶ್ರಮ ಮತ್ತು ಹಣ ವ್ಯರ್ಥವಾಗುತ್ತದೆ. ಕನ್ನಡ ಸಾಹಿತ್ಯಕ್ಕೂ ನಷ್ಟವಾಗುತ್ತದೆ. ಆದ್ದರಿಂದ ಇಲಾಖೆ ಈ ನಿಟ್ಟಿನಲ್ಲಿ ಕ್ರಮ ಕೈಗೊಂಡು, ವಿಶೇಷ ಅನುದಾನ ಒದಗಿಸುವ ಮೂಲಕ ಈ ಹಿಂದೆ ಅನುವಾದ ಮಾಡಲ್ಪಟ್ಟ ಸಂಪುಟಗಳನ್ನು ಪ್ರಕಟಿಸಬೇಕು' ಎಂದು ಅನುವಾದಕರೊಬ್ಬರು ಆಗ್ರಹಿಸಿದರು.

ಹಳೆಯ ಸಂಪುಟಗಳು

'ಎ ಹಿಸ್ಟರಿ ಆಫ್ ಇಂಡಿಯನ್ ಫಿಲಾಸಫಿ' ಪುಸ್ತಕದ ಐದು ಸಂಪುಟಗಳು ಭಾರತೀಯ ತತ್ತ್ವಶಾಸ್ತ್ರವನ್ನು ವ್ಯಾಖ್ಯಾನಿಸಿವೆ. 1922ರಲ್ಲಿ ಪ್ರಥಮ ಸಂಪುಟ ಪ್ರಕಟವಾಗಿತ್ತು. ಇಂಗ್ಲಿಷ್ ಸಂಪುಟಗಳು ಆನ್‌ಲೈನ್ ವೇದಿಕೆಯಲ್ಲಿ ಈಗಲೂ ಲಭ್ಯವಿವೆ. ಪ್ರತಿ ಸಂಪುಟವು 500ಕ್ಕೂ ಅಧಿಕ ಪುಟಗಳನ್ನು ಒಳಗೊಂಡಿವೆ. 'ಧರ್ಮಪಾಲ್' ಸಂಪುಟಗಳು ಭಾರತದ ಇತಿಹಾಸ, ಸಂಸ್ಕೃತಿ, ಶಿಕ್ಷಣ ಮತ್ತು ಆಡಳಿತ ವ್ಯವಸ್ಥೆಯ ಕುರಿತು ಕೇಂದ್ರೀಕೃತವಾಗಿದ್ದವು. ಎಸ್.ವಿ. ಪರಮೇಶ್ವರ ಭಟ್ಟ ಅವರ ಸಮಗ್ರ ಸಾಹಿತ್ಯ ಸಂಪುಟದ ಮರುಮುದ್ರಣಕ್ಕೂ ಈ ಹಿಂದಿನ ಕಾರ್ಯಕಾರಿ ಸಮಿತಿ ಕ್ರಮ ವಹಿಸಿತ್ತು. ಆದರೆ, ಈ ಪ್ರಕ್ರಿಯೆ ವೇಳೆಗೆ ಅವಧಿ ಪೂರ್ಣಗೊಂಡ ಕಾರಣ ಸಾಕಾರವಾಗಿರಲಿಲ್ಲ.

ಸುದ್ದಿ 2 ನಿಮಿಷ

ಕೆಪಿಎಸ್‌ಸಿ ನೇಮಕಾತಿ ತನಿಖೆಗೆ ಆಗ್ರಹ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) 1998ರಿಂದ 2024ರ ಅವಧಿಯಲ್ಲಿ ಸಿ, ಬಿ ಮತ್ತು ಎ ಗ್ರೂಪ್ ಅಧಿಕಾರಿ ಹಾಗೂ ಸಿಬ್ಬಂದಿ ನೇಮಕಾತಿಯಲ್ಲಿ ನಡೆದಿರುವ ಭ್ರಷ್ಟಾಚಾರ, ಪರೀಕ್ಷಾ ಅವ್ಯವಹಾರಗಳ ಬಗ್ಗೆ ಉನ್ನತಮಟ್ಟದ ಸಂಸ್ಥೆಗಳಿಂದ ತನಿಖೆ ನಡೆಸಬೇಕು ಎಂದು ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘಟನೆ(ಆಕ್ಸಾ) ಆಗ್ರಹಿಸಿದೆ.

ಅಕ್ರಮದಲ್ಲಿ ಭಾಗಿಯಾದವರಿಗೆ ಶಿಕ್ಷೆ ಕೊಡಿಸಬೇಕು ಮತ್ತು ಆಯ್ಕೆ ಪಟ್ಟಿಯನ್ನು ರದ್ದುಪಡಿಸಿ ಬಡ ಪ್ರತಿಭಾವಂತ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಿದೆ. ಈ ಸಂಬಂಧ ಮನವಿಯನ್ನು ರಾಷ್ಟ್ರಪತಿ, ರಾಜ್ಯಪಾಲ, ಸಿಬಿಐ ನಿರ್ದೇಶಕ, ಲೋಕಾಯುಕ್ತ ನ್ಯಾಯಮೂರ್ತಿ, ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಗೆ ಕಳುಹಿಸಿದೆ.

ಕೆಪಿಎಸ್ಸಿಯ ಯಾವುದೇ ನೇಮಕಾತಿ ಯಲ್ಲಿ ಪಿ.ಸಿ.ಹೋಟಾ ಸಮಿತಿಯ ಶಿಫಾರಸು ಪಾಲಿಸದ ಕಾರಣ ಎಲ್ಲಾ ನೇಮಕಾತಿಗಳನ್ನು ಅಮಾನತ್ತಿನಲ್ಲಿ ಇರಿಸಬೇಕು. ಪರೀಕ್ಷಾ ಅಕ್ರಮದಲ್ಲಿ ಭಾಗಿ ಯಾಗಿರುವ ಸಿಬ್ಬಂದಿ, ಅಧಿಕಾರಿಗಳು, ಸದಸ್ಯರನ್ನು ತನಿಖೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದೆ.

ಆಯ್ಕೆ ಪಟ್ಟಿ ರದ್ದುಪಡಿಸದಿದ್ದರೆ ಕೆಪಿಎಸ್ಸಿಗೆ ಮುತ್ತಿಗೆ ಹಾಕುವ ಚಳವಳಿ ನಡೆಸಲಾಗುವುದು ಎಂದು ನಿರುದ್ಯೋಗಿ ಅಭ್ಯರ್ಥಿಗಳು ಎಚ್ಚರಿಕೆ ನೀಡಿದ್ದಾರೆ.

ಆಂಜನೇಯ ಸ್ವಾಮಿಗೆ ಸಂಪ್ರೋಕ್ಷಣೆ

ದಾಬಸ್ ಪೇಟೆ: ಸೊಂಪುರ ಹೋಬಳಿ, ಚನ್ನೋಹಳ್ಳಿ ಗ್ರಾಮದ ವರದ ಆಂಜನೇಯ ಸ್ವಾಮಿ ದೇವರ ಸಂಪ್ರೋಕ್ಷಣೆ ಮತ್ತು ಪೂಜಾ ಕಾರ್ಯಕ್ರಮ ಎರಡು ದಿನ ನಡೆಯಿತು. ಶನಿವಾರ ಸಂಜೆ ದೇವಾಲಯದ ಪುಣ್ಯ ಕಾರ್ಯಕ್ರಮ, ಭಾನುವಾರ ಬೆಳಿಗ್ಗೆ ಹೋಮ ಅಭಿಷೇಕ, ಮಹಾಮಂಗಳಾರತಿ ನೆರವೇರಿತು. ಗ್ರಾಮದ ಮಾರಮ್ಮ, ಗಣೇಶ ದೇವರಿಗೂ ಪೂಜೆ ನೆರವೇರಿಸಲಾಯಿತು. ಪುರೋಹಿತರಾದ ನವೀನ್ ಮತ್ತು ತಂಡದವರು ಪೂಜಾ ಕಾರ್ಯಕ್ರಮ ನಡೆಸಿಕೊಟ್ಟರು.

24ರಿಂದ ಜಲಮಂಡಳಿ ಗುತ್ತಿಗೆ ನೌಕರರ ಮುಷ್ಕರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನೇರವಾಗಿ ವೇತನ ಪಾವತಿ, ಒಂದು ತಿಂಗಳ ಬೋನಸ್ ಸೇರಿ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬೆಂಗಳೂರು ಜಲಮಂಡಳಿಯ ಗುತ್ತಿಗೆ ನೌಕರರು ಮೇ 24ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮುಷ್ಕರ ಆರಂಭಿಸಲಿದ್ದಾರೆ.

'ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಸಮ್ಮುಖದಲ್ಲಿ ಕಾರ್ಮಿಕ ಇಲಾಖೆ, ಜಲಮಂಡಳಿ ಹಾಗೂ ನೌಕರರ ಸಂಘದವರ ಸಭೆ ನಡೆಸಿದಾಗ ಒಂದು ತಿಂಗಳ ಬೋನಸ್, ಕ್ಯಾಂಟೀನ್ ಸೌಲಭ್ಯವನ್ನು ಎಲ್ಲಾ ಗುತ್ತಿಗೆ ನೌಕರರಿಗೆ ನೀಡುವುದಾಗಿ ಭರವಸೆ ನೀಡಲಾಗಿತ್ತು. ಆದರೆ, ಈವರೆಗೂ ಜಾರಿಯಾಗಿಲ್ಲ. ಇದರಿಂದ ಮುಷ್ಕರ ನಡೆಸುವುದು ಅನಿವಾರ್ಯವಾಗಿದೆ ಎಂದು ಜಲಮಂಡಳಿ ಗುತ್ತಿಗೆ ಕಾರ್ಮಿಕರ ಸಂಘದ ಗೌರವ ಅಧ್ಯಕ್ಷ ಎಸ್. ಬಾಲನ್ ತಿಳಿಸಿದ್ದಾರೆ.

'ಕೆಳ ಹಂತದಲ್ಲಿ ನಾಲ್ಕು ಸಾವಿರ ಮಂದಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದು, ಇವರ ವೇತನವನ್ನು ಏಜೆನ್ಸಿ ಮೂಲಕ ನೀಡಲಾಗುತ್ತಿದೆ. ಮೊದಲು ಶೇ 11ರಷ್ಟು ಕಮಿಷನ್ ಪಡೆಯಲಾಗುತ್ತಿತ್ತು. ಈಗ ಶೇ 5ಕ್ಕೆ ಇಳಿಕೆ ಮಾಡಲಾಗಿದೆ. ಇದನ್ನು ಸಂಪೂರ್ಣ ರದ್ದು ಮಾಡಿ ನೇರವಾಗಿ ಜಲಮಂಡಳಿಯಿಂದಲೇ ಪಾವತಿ ಮಾಡಬೇಕು. ಮನೆ ಬಾಡಿಗೆ ಭತ್ಯೆ, ಗ್ರಾಚ್ಯುಟಿ ಸೌಲಭ್ಯ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ಕಾನೂನುಬದ್ಧವಾಗಿ ಸೌಲಭ್ಯ ನೀಡುವಂತೆ ನಿರಂತರವಾಗಿ ಮನವಿ ಮಾಡುತ್ತಲೇ ಇದ್ದೇವೆ. ಜಲಮಂಡಳಿ ಅಧ್ಯಕ್ಷರು ಹಾಗೂ ಅಧಿಕಾರಿಗಳು ಭರವಸೆ ನೀಡಿದರೂ ಜಾರಿ ಮಾಡಿಲ್ಲ. ಹೀಗಾಗಿ ಸಂಘದ ಅಧ್ಯಕ್ಷ ಆದಿನಾರಾಯಣ, ಉಪಾಧ್ಯಕ್ಷೆ ವಸಂತಮ್ಮ, ಪ್ರಧಾನ ಕಾರ್ಯದರ್ಶಿ ಸತೀಶ್, ಪದಾಧಿಕಾರಿಗಳ ಸಭೆಯಲ್ಲಿ ಹೋರಾಟಕ್ಕೆ ನಿರ್ಧರಿಸಲಾಗಿದೆ' ಎಂದಿದ್ದಾರೆ.

'ದಿ ಕೊರಚಾಸ್ ಆಫ್ ಕರ್ನಾಟಕ' ಜನಾರ್ಪಣೆಯಲ್ಲಿ ಬರಗೂರು ಅಭಿಮತ

'ಅಜ್ಞಾತಗಳ ಅನಾವರಣವೇ ಸಂಶೋಧನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಹುಸಂಸ್ಕೃತಿ, ಬಹುಭಾಷೆಯ ಈ ದೇಶದಲ್ಲಿ ಅಜ್ಞಾತವಾಗಿರುವ ಜೀವನವಿಧಾನ, ಭಾಷೆಗಳನ್ನು ಅನಾವರಣ ಮಾಡುವ ಸಂಶೋಧನೆಗಳು ಹೆಚ್ಚಬೇಕು. ಅಜ್ಞಾತಗಳ ಅನಾವರಣವೇ ನಿಜವಾದ ಸಂಶೋಧನೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ನೇಗಿಲ ಯೋಗಿ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಚ್.ಆರ್. ಸ್ವಾಮಿ ಅವರ 'ಕುಡ್ರ್ ವಾತಕತ' (ಕೊರಚ ಮಾತುಕತೆ) ಹಾಗೂ ಅವರ 'ಕರ್ನಾಟಕದ ಕೊರಚರು' ಕೃತಿಯ ಇಂಗ್ಲಿಷ್ ಅನುವಾದ 'ದಿ ಕೊರಚಾಸ್ ಆಫ್ ಕರ್ನಾಟಕ' (ಅನುವಾದಕರು ಶ್ರೀಹರ್ಷ) ಕೃತಿಯನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

'ಬಹುತ್ವದ ಪ್ರತಿಪಾದನೆಯ ಕಾಲದಲ್ಲಿ ನಾವಿದ್ದೇವೆ. ಕೊರಚ ಭಾಷೆಯನ್ನು ಕುರಿತ ಈ ಕೃತಿಗೆ ಸಾಹಿತ್ಯಿಕ ಮಹತ್ವವಷ್ಟೇ ಅಲ್ಲ, ಸಾಮಾಜಿಕ ಮಹತ್ವವೂ ಇದೆ. ನಮ್ಮ ಅನೇಕ ಸಣ್ಣ ಸಾಮಾಜಿಕ ಸಮುದಾಯಗಳು ತಮ್ಮ ಜನಾಂಗ ವಲಯದಲ್ಲಿ ಬಳಸುವ ಭಾಷೆಗಳು ಮೌಖಿಕವಾಗಿರುವುದೇ ಹೆಚ್ಚು. ಸಣ್ಣ ಸಮುದಾಯಗಳು ಎನ್ನುವುದು ಸಂಖ್ಯೆಯ ದೃಷ್ಟಿಯಿಂದಲೇ ಹೊರತು ಸಂಸ್ಕೃತಿಯ ದೃಷ್ಟಿಯಿಂದಲ್ಲ. ಕೊರಚರಂತಹ ಸಮುದಾಯಗಳು ಸಂಖ್ಯೆಯಲ್ಲಿ ಸಣ್ಣದಾಗಿದ್ದರೂ ಸಂಸ್ಕೃತಿಗಳು ಮಹತ್ವಪೂರ್ಣವಾಗಿವೆ' ಎಂದು ಹೇಳಿದರು.

'ಭಾಷಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಈ ಕೃತಿಗಳು ಅದ್ಭುತ ದಾಖಲೆಯಾಗಿವೆ. ಮುಂದಿನ ಅಧ್ಯಯನಾಸಕ್ತರಿಗೆ ಅಪೂರ್ವ ಆಕರವಾಗಿವೆ. ವಿವಿಧ ಭಾಷೆಗಳನ್ನಾಡುವ ಸಾಂಸ್ಕೃತಿಕ ಬದುಕನ್ನು ದಾಖಲಿಸುವ ಕೆಲಸ ನಿರಂತರವಾಗಿ ನಡೆಯಬೇಕು. ಈ ಮೂಲಕ ಭಾರತದ ಬಹುರೂಪತೆಯನ್ನು ಸ್ಥಿರೀಕರಿಸಬೇಕು' ಎಂದು ಹೇಳಿದರು.

'ಕೊರಚ ಮಾತುಕತೆ' ಕೃತಿಯ ಬಗ್ಗೆ ಮಾತನಾಡಿದ ತುಮಕೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಬಸವರಾಜು ಜಿ., 'ಈ ಕೃತಿಯು 22 ಅಧ್ಯಾಯಗಳನ್ನು ಹೊಂದಿದ್ದು, ಕೊರಚ ಭಾಷೆಯ ಶಬ್ದಕೋಶವಾಗಿ ರೂಪುಗೊಂಡಿದೆ. ಕೊರಚ ಸಮುದಾಯದ ಸಂಸ್ಕೃತಿ, ಆಚಾರ ವಿಚಾರ, ಜನ ಜೀವನವನ್ನು ದಾಖಲಿಸಲಾಗಿದೆ' ಎಂದರು.

ಗ್ರಂಥಾಲಯ ಇಲಾಖೆಯ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ ರಾಜಪ್ಪ ದಳವಾಯಿ, 'ಈ ಕೃತಿಗಳು ಕೊರಚ ಭಾಷೆ ತಿಳಿಯಲು ಕೈಪಿಡಿಯಾಗಲಿವೆ' ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಹಂಪ ನಾಗರಾಜಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮೊದಲು ರಾಜಪ್ಪ ಕೋಲಾರ ಮತ್ತು ತಂಡದಿಂದ ಕೊರಚ ಭಾಷೆಯಲ್ಲಿ ವಚನ ಗಾಯನ ನಡೆಯಿತು.



ಕಾರ್ಯಕ್ರಮದಲ್ಲಿ ಎಚ್‌.ಆರ್‌. ಸ್ವಾಮಿ, ಅನ್ವೇಶ ಒಬೆರಾಯ್, ಅಗ್ರಹಾರ ಕೃಷ್ಣಮೂರ್ತಿ, ಬರಗೂರು ರಾಮಚಂದ್ರಪ್ಪ, ಹಂಪ ನಾಗರಾಜಯ್ಯ, ಆರ್‌.ವಿ. ಚಂದ್ರಶೇಖರ್ ಅವರು ಕೊರಚ ಭಾಷೆಯಲ್ಲಿ ಸಂವಿಧಾನ ಪಾಲನೆಯ ಪ್ರತಿಜ್ಞಾ ವಿಧಿ ಸ್ವೀಕರಿಸಿದರು ಪ್ರಜಾವಾಣಿ ಚಿತ್ರ



ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಇತ್ತೀಚೆಗೆ ನಡೆದ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಸಹಾಯಕ ನರ್ಸಿಂಗ್ ಅಧೀಕ್ಷಕಿ ಕವಿತಾ ಜಗನ್ನಾಥ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 'ಫ್ಲಾರೆನ್ಸ್ ನೈಟಿಂಗೇಲ್' ಪ್ರಶಸ್ತಿ ಪ್ರದಾನ ಮಾಡಿದರು

ತಮಿಳು ಚಿತ್ರ ನಿರ್ಮಾಪಕ ರಾಜನ್ ಆತ್ಮಹತ್ಯೆ

ಚೆನ್ನೈ (ಪಿಟಿಐ): ತಮಿಳು ಚಿತ್ರ ನಿರ್ಮಾಪಕ ಕೆ.ರಾಜನ್ (87) ಭಾನುವಾರ ಅಡ್ಯಾರ್ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಅಡ್ಯಾರ್ ನದಿ ಸೇತುವೆ ಮೇಲಿನಿಂದ ನದಿಗೆ ಹಾರಿ ಸಾವಿಗೀಡಾಗಿದ್ದಾರೆ. ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ.

'ಮುಸ್ಲಿಂ ಮಹಿಳೆಯರ ಬಗ್ಗೆ ಪೂರ್ವಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದಲ್ಲಿ ಮುಸ್ಲಿಂ ಮಹಿಳೆಯರ ಬಗ್ಗೆ ಅನೇಕ ಪೂರ್ವಗ್ರಹಗಳಿದ್ದು, ಅವರನ್ನು ಕೇವಲ ಉಡುಪುಗಳಿಂದ ಗುರುತಿಸಲಾಗುತ್ತಿದೆ. ಅವರ ಧ್ವನಿಯನ್ನು ಕೇಳದೇ ತೀರ್ಪು ನೀಡಲಾಗುತ್ತದೆ. ಅವರ ಸಾಮರ್ಥ್ಯ ಅಳೆಯುವುದನ್ನು ಬಿಟ್ಟು ಅನುಮಾನ ವ್ಯಕ್ತಪಡಿಸಲಾಗುತ್ತದೆ' ಎಂದು ಲೇಖಕಿ ಬಾನು ಮುಷ್ತಾಕ್ ಹೇಳಿದರು.

ಜಕ್ಕೂರಿನ ಅಹಮದಿಯಾ ಮುಸ್ಲಿಂ ಕಮ್ಯುನಿಟಿ ಭಾನುವಾರ ಆಯೋಜಿಸಿದ್ದ ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಮುಸ್ಲಿಂ ಮಹಿಳೆಯರು ಬಹಳ ಕೊಳಕಾಗಿರುತ್ತಾರೆ, ಅನೇಕ ಮಕ್ಕಳನ್ನು ಹೆರುತ್ತಾರೆ, ಅವಿದ್ಯಾವಂತರಾಗಿದ್ದಾರೆ, ಭಯೋತ್ಪಾದಕರು, ಅವರು ಸರಿಯಿಲ್ಲ. ಬುರ್ಕಾ ಧರಿಸಿ ನಮ್ಮ ಪಕ್ಕ ಕುಳಿತುಕೊಂಡರೆ ನಮಗೆ ಹೆದರಿಕೆ ಆಗುತ್ತದೆ ಎಂಬ ಅನೇಕ ಪೂರ್ವಗ್ರಹಗಳಿವೆ. ಇದನ್ನು ಸಮಾಜದೊಳಗೆ ಮತ್ತು ಮಾಧ್ಯಮಗಳಲ್ಲಿ ನಿರಂತವಾಗಿ ಹೇಳಲಾಗುತ್ತಿದೆ. ಇದು ಸಂಪೂರ್ಣವಾಗಿ ಅವರದೇ ತಪ್ಪಾ? ಇದರಲ್ಲಿ ನಮ್ಮ ತಪ್ಪು ಇಲ್ವಾ?' ಎಂದರು.

'ಇಲ್ಲಿ ಮಾಧ್ಯಮ ಹಾಗೂ ಸಮಾಜದ ಪೂರ್ವಗ್ರಹಗಳಿಗೆ ಮುಸ್ಲಿಂ ಮಹಿಳೆಯರು ಎಷ್ಟು ಹೊಣೆಗಾರರಾಗಿದ್ದಾರೋ, ನಾವು ಅಷ್ಟೇ ಕಾರಣ ಆಗಿದ್ದೇವೆ ಎಂಬ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಪರ್ದಾ ಆಚರಣೆ ಎಂದರೆ ತಲೆಯ ಮೇಲೆ ಬಟ್ಟೆ ಹಾಕಿಕೊಳ್ಳುವುದು. ನಾನು ಸಹ ಪರ್ದಾ ಆಚರಿಸುತ್ತಿದ್ದೇನೆ' ಎಂದರು.

'ನಮ್ಮ ಗುರುತು ಅಥವಾ ಅಸ್ಮಿತೆ ಎಂದರೇ ಬರಿ ಬಟ್ಟೆನಾ? ಚಿಂತನೆ ಏನಾದರೂ ಇದೆಯಾ? ಕುರಾನ್‌ನಲ್ಲಿ ಪುರುಷ ಮತ್ತು ಮಹಿಳೆಯರಿಗೆ ಸಮಾನ ಗೌರವ ಹಾಗೂ ಅವಕಾಶಗಳನ್ನು ನೀಡಲಾಗಿದೆ. ಆದರೆ ಈಗ ನಮ್ಮನ್ನು ಬರೀ ಉಡುಪಿನ ಮೂಲಕ ಗುರುತಿಸುತ್ತಿರುವುದು ಎಷ್ಟು ಸರಿ? ಗುರುತು ನಮಗೆ ಮುಖ್ಯವಾಗುವುದಾದರೆ ಜಾತ್ಯತೀತ ಗುರುತು ಮುಖ್ಯವೊ ಅಥವಾ ಧಾರ್ಮಿಕ ಗುರುತು ಮುಖ್ಯವೊ' ಎಂದು ಪ್ರಶ್ನಿಸಿದರು.

'ಧರ್ಮ ಎಂಬುದು ನನಗೆ ವೈಯಕ್ತಿಕ. ನಾನು ಮನೆಯ ಹೊಸ್ತಿಲ ಒಳಗೆ ನನ್ನ ಧರ್ಮವನ್ನು ಆಚರಿಸುತ್ತೇನೆ. ಹೊರಗಡೆ ನಾನು ಜಾತ್ಯತೀತ ಮುಸ್ಲಿಂ ಆಗಿದ್ದೇನೆ. ಈಗ ಜಾತ್ಯತೀತ ಮುಸ್ಲಿಮರಿಗೂ ರಕ್ಷಣೆ ಇಲ್ಲ. ಭಾರತೀಯತೆ ಯಾರ ಅಪ್ಪನ ಮನೆಯ ಆಸ್ತಿಯೂ ಅಲ್ಲ. ಅದು ನಮ್ಮ ಹಕ್ಕು, ಜೀವ, ನಮ್ಮ ಉಸಿರು' ಎಂದರು.



ಬಾನು ಮುಷ್ತಾಕ್ ಅವರನ್ನು ಸನ್ಮಾನಿಸಲಾಯಿತು. ಬ್ರಹ್ಮಕುಮಾರಿ ಸಂಸ್ಥೆಯ ಬಿ.ಕೆ. ರೂಪಾ, ಕಮ್ಯುನಿಟಿಯ ಜಿಲ್ಲಾ ಘಟಕದ ಅಧ್ಯಕ್ಷೆ ರೂಮನ್ ರಿಜ್ವಾನ್, ಜಕ್ಕೂರು ಘಟಕದ ಅಧ್ಯಕ್ಷೆ ರಬಿಬಾ ಇಕ್ಬಾಲ್ ಮತ್ತು ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನುಂ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಧಾರ್ಮಿಕ ಕ್ಷೇತ್ರದಲ್ಲಿ ಭಾರತೀಯ ಗುರುತು ತೋರಿಕೆ'

'ಭಾರತದಲ್ಲಿ ನಾವು ಇಡೀ ದೇಹ ಮುಚ್ಚಿಕೊಂಡು, ಕಣ್ಣು ಮಾತ್ರ ಕಾಣಿಸುವ ಹಾಗೆ ಬಟ್ಟೆ ಹಾಕಿಕೊಳ್ಳುತ್ತೇವೆ. ಇಲ್ಲಿ ನಮಗೆ ಧಾರ್ಮಿಕ ಗುರುತು ಮುಖ್ಯವಾಗುತ್ತದೆ. ಆದರೆ ಹಜ್ ಪ್ರಾರ್ಥನೆಗಾಗಿ ಸೌದಿ ಅರೇಬಿಯಾಕ್ಕೆ ಹೋದಾಗ ಮೀನಾ ನಗರದಲ್ಲಿ ತಂಗುವ ಭಾರತೀಯರು ತ್ರಿವರ್ಣ ಧ್ವಜ ಹಾರಿಸುತ್ತಾರೆ. ಈ ಧಾರ್ಮಿಕ ಕ್ಷೇತ್ರದಲ್ಲಿ ನಾವು ಭಾರತೀಯರು ಎಂಬ ಗುರುತು ನಮಗೆ ಮುಖ್ಯವಾಗುತ್ತದೆ. ಆದರೆ, ಭಾರತದಲ್ಲಿ ನಾವು ಧಾರ್ಮಿಕ ಗುರುತನ್ನು ತೋರಿಸುತ್ತಿದ್ದೇವೆ. ಧಾರ್ಮಿಕ ಕ್ಷೇತ್ರಕ್ಕೆ ತೆರಳಿ ಭಾರತೀಯ ಗುರುತನ್ನು ತೋರಿಸುತ್ತಿದ್ದೇವೆ' ಎಂದು ಬಾನು ಮುಷ್ತಾಕ್ ಹೇಳಿದರು.

ಡಿಕೆಶಿ ಜನ್ಮದಿನ : ಸವಲತ್ತು ವಿತರಣೆ

ರಾಜರಾಜೇಶ್ವರಿನಗರ: ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಜನ್ಮ ದಿನವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಇದೇ ವೇಳೆ ಹತ್ತು ಬಡ ವಿದ್ಯಾರ್ಥಿಗಳಿಗೆ ತಲಾ ₹25 ಸಾವಿರ, ಅಪಘಾತದಲ್ಲಿ ಗಾಯಗೊಂಡಿದ್ದ ಬಾಲಕಿಯ ಶಸ್ತ್ರ ಚಿಕಿತ್ಸೆಯ ವೆಚ್ಚ ಭರಿಸುವುದು ಮತ್ತು ಅಂಗವಿಕಲರು, ಅಂಧ ಕುಟುಂಬಗಳಿಗೆ ಒಂದು ತಿಂಗಳ ದಿನಸಿ ಕಿಟ್ ವಿತರಣೆ ಮಾಡಲಾಯಿತು.

ಲಗ್ಗೆರೆಯ ಅರ್ಪಿತಾ ಸೇವಾ ಟ್ರಸ್ಟ್, ಕಾಂಗ್ರೆಸ್ ಸಮಿತಿ, ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ, ಕಾಂಗ್ರೆಸ್ ಮುಖಂಡ ರಾಜೇಶ್ ಗೂಳಿಗೌಡ ಹಾಗೂ ಪಾಲಿಕೆ ಮಾಜಿ ಸದಸ್ಯ ಜಿ.ಮೋಹನ್ ಕುಮಾರ್ ಅವರು ನೀಡಿದ ಸವಲತ್ತುಗಳನ್ನು ಲಗ್ಗೆರೆ ಅನ್ನಪೂರ್ಣೇಶ್ವರಿನಗರ, ಬಂಗಾರಪ್ಪ ನಗರ, ರಾಜರಾಜೇಶ್ವರಿ ನಗರ, ಬಿಇಎಂಎಲ್ ಲೇಔಟ್, ಸುಂಕದಕಟ್ಟೆ, ಪೀಣ್ಯ, ಯಶವಂತಪುರ, ಜಾಲಹಳ್ಳಿಯಲ್ಲಿ ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ವಿತರಿಸಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256



'ಕಸದ ರಾಶಿ ತೆರವುಗೊಳಿಸಿ'

ಮೆಜೆಸ್ಟಿಕ್‌ಗೆ ಸಂಪರ್ಕ ಕಲ್ಪಿಸುವ ಕೆಂಪೇಗೌಡ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಹಾಕಲಾಗಿದೆ. ನಿತ್ಯ ಸಾವಿರಾರು ಜನ ಓಡಾಡುವ ಈ ಪ್ರದೇಶದಲ್ಲಿ ಕಸವನ್ನು ವಿಲೇವಾರಿ ಮಾಡದೇ ಹಾಗೆಯೇ ಬಿಡಲಾಗಿದೆ. ಇದರಿಂದ ಈ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಕೂಡಲೇ ಇಲ್ಲಿ ಹಾಕಿರುವ ಕಸದ ರಾಶಿಯನ್ನು ತೆರವುಗೊಳಿಸಬೇಕು.

ಶಿವಪ್ರಸಾದ್ ಎಸ್., ಗಾಂಧಿನಗರ



'ಪಾದಚಾರಿ ಮಾರ್ಗ ದುರಸ್ತಿಗೊಳಿಸಿ'

ಹೆಬ್ಬಾಳದ ಗುಂಡಪ್ಪ ರೆಡ್ಡಿ ಲೇಔಟ್‌ನ ಒಂದನೇ ಕ್ರಾಸ್‌ನ ಮುಖ್ಯ ರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್‌ನ ಸ್ಲ್ಯಾಬ್‌ಗಳು ಕುಸಿದು ಹೋಗಿವೆ. ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ಮುಖ್ಯರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ಬಂದಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದು, ಅಪಘಾತಗಳು ಆಗುವ ಸಾಧ್ಯತೆ ಇದೆ. ಇದರ ಜೊತೆಗೆ ಸಂಚಾರ ದಟ್ಟಣೆಯೂ ಆಗುತ್ತಿದೆ. ಪಾಲಿಕೆ ಸಿಬ್ಬಂದಿ ಕೂಡಲೇ ಈ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು.

ಜಿ.ಎಸ್. ಮಂಜುನಾಥ್, ಅಮರಜ್ಯೋತಿ ಲೇಔಟ್

'ರಸ್ತೆ ಗುಂಡಿ ಮುಚ್ಚಿ'



ಆರ್‌ಪಿಸಿ ಲೇಔಟ್‌ನ ಡೆಕ್ಕನ್ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಬಳಿಯ ಸರ್ವೀಸ್ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದು, ರಸ್ತೆಯಲ್ಲಿ ಗುಂಡಿ ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಈ ಬಗ್ಗೆ ದೂರು ನೀಡಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಕೂಡಲೇ ರಸ್ತೆಯನ್ನು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಆರ್‌ಪಿಸಿ ಲೇಔಟ್‌ನ ನಿವಾಸಿಗಳು

'ರಸ್ತೆಯಲ್ಲಿ ಹಾಕಿರುವ ಕಸ ತೆರವುಗೊಳಿಸಿ'

ಹೊಸಕೆರೆಹಳ್ಳಿ ವರ್ತುಲ ರಸ್ತೆಯಿಂದ (ವೀರಭದ್ರನಗರದ ಮೇಲ್ಸೇತುವೆ) ನೈಸ್ ರಸ್ತೆಗೆ ಸಂಪರ್ಕಿಸುವ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದೆ. ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಬೀದಿ ನಾಯಿಗಳು ಹಾಗೂ ಬೀಡಾಡಿ ದನಗಳು ಕಸವನ್ನು ರಸ್ತೆಗೆ ಎಳೆದು ತರುತ್ತಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಈ ಕಸದ ರಾಶಿಯನ್ನು ತೆರವುಗೊಳಿಸಿ, ನಗರದ ಸೌಂದರ್ಯ ಕಾಪಾಡಬೇಕು.

ಎಸ್.ವಿ. ಗೋಪಾಲ್ ರಾವ್, ಹನುಮಗಿರಿನಗರ



ಹಾಲು ಉತ್ಪಾದನೆ 1.20 ಲಕ್ಷ ಲೀಟರ್‌ನಿಂದ 1 ಲಕ್ಷ ಲೀಟರ್‌ಗೆ ಇಳಿಕೆ

ಬಿಸಿಲ ತಾಪ: ಹಾಲಿನ ಉತ್ಪಾದನೆ ಕುಸಿತ

• ಸಿ.ಜಿ.ಮೋಹನ್ ಕುಮಾರ್

ಮುಖ್ಯಾಂಶಗಳು

- ಹಸಿ ಮೇವಿನ ಅಭಾವ, ರೈತರ ಆದಾಯ ಕುಂಠಿತ
- ಹೈನುಗಾರಿಕೆ ಉದ್ಯಮಕ್ಕೆ ಬಿಸಿಲಿನ ಆಘಾತ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಗ್ರಾಮೀಣ ಭಾಗದ ನೂರಾರು ಕುಟುಂಬಗಳ ಜೀವನೋಪಾಯಕ್ಕೆ ಆಧಾರವಾಗಿದ್ದ ಹೈನುಗಾರಿಕೆ ಮೇಲೆ ಮಳೆ ಕೊರತೆ ಹಾಗೂ ಬಿಸಿಲಿನ ಝಳ ಗಂಭೀರ ಪರಿಣಾಮ ಬೀರಿದ್ದು, ರೈತರನ್ನು ಸಂಕಷ್ಟಕ್ಕೆ ದೂಡಿದೆ.

ದಿನದಿಂದ ದಿನಕ್ಕೆ ಬಿಸಿಲಿನ ತಾಪ ಹೆಚ್ಚುತ್ತಿದೆ. ಇದರಿಂದ ಕೊಳವೆ ಬಾವಿಗಳಲ್ಲಿನ ನೀರು ಕಡಿಮೆಯಾಗುತ್ತಿದೆ. ಬಿಸಿಲಿನ ತಾಪಕ್ಕೆ ದನಗಳನ್ನು ಹೊರಗಡೆ ಬಿಡದೇ, ಕಟ್ಟಿ ಮೇವು ಹಾಕಬೇಕಾದ ಪರಿಸ್ಥಿತಿ ಎದುರಾಗಿದೆ.

ದಿನಕ್ಕೆ 10ರಿಂದ 12 ಲೀಟರ್‌ವರೆಗೆ ಹಾಲು ನೀಡುತ್ತಿದ್ದ ಹಸುಗಳು ಈಗ 6ರಿಂದ 7 ಲೀಟರ್ ಹಾಲು ನೀಡುತ್ತಿವೆ. ಇದು ಹಸುಗಳಿಗೆ ಮೇವು, ನೀರು, ಪಶು ಆಹಾರ ಸೇರಿದಂತೆ ನಿರ್ವಹಣೆಗಾಗಿ ಮಾಡುತ್ತಿರುವ ಖರ್ಚಿಗೂ ಸಾಲುತ್ತಿಲ್ಲ ಎಂದು ರೈತರು ಹೇಳಿದರು.

ಹಸುಗಳಿಗೆ ಕೊಡುವ ಪಶು ಆಹಾರದ ಬೆಲೆ ಕಡಿಮೆಯಾಗಿಲ್ಲ. ಹಸಿ ಮೇವು ಸಿಗುತ್ತಿಲ್ಲ. ಬಣವೆಗಳಲ್ಲಿನ ಮೇವು ದಿನೇ ದಿನೇ ಕಡಿಮೆಯಾಗುತ್ತಿದೆ. ರಾಸುಗಳು ಸೊರಗುತ್ತಿವೆ. ಹೀಗಾದರೆ ಹೈನುಗಾರಿಕೆ ಮಾಡುವುದೇ ಕಷ್ಟವಾಗಲಿದೆ ಎನ್ನುವುದು ರೈತರ ಅಳಲು.

'ಹಾಲು ಉತ್ಪಾದನೆ ಕುಸಿದಿದೆ. ಈಗ ಬರುತ್ತಿರುವ ಆದಾಯ ರಾಸುಗಳ ನಿರ್ವಹಣೆಯ ಖರ್ಚಿಗೆ ಸಾಕಾಗುತ್ತಿದೆ. ರೈತರ ಮೇಲೆ ಹೊರೆ ಹೆಚ್ಚಾಗುತ್ತಿದೆ. ಬೇಸಿಗೆಯಲ್ಲಿ ನಿತ್ಯ ಹಸುಗಳ ಮೈ ತೊಳೆದು, ಹೊಟ್ಟೆ ತುಂಬ ಮೇವು ಹಾಕಿ ಹೊರಗಿನ ಆಹಾರ ಕೊಟ್ಟರೆ ಉತ್ತಮ ಹಾಲು ಸಿಗುತ್ತದೆ. ಬಿಸಿಲಿನ ತಾಪ, ನೀರಿನ ಕೊರತೆಯಿಂದ ರಾಸುಗಳ ಆರೈಕೆ ಹೇಗೆ ಎಂಬುದೇ ಚಿಂತೆಯಾಗಿದೆ' ಎಂದು ರೈತ ಮಹಿಳೆ ಲೀಲಾ ಬೇಸರ ವ್ಯಕ್ತಪಡಿಸಿದರು.

'ಡೇರಿಗೆ ಬರುತ್ತಿರುವ ಹಾಲಿನಲ್ಲಿ ಕೊಬ್ಬಿನ ಅಂಶ ಕಡಿಮೆಯಾಗಿದೆ. ಹಾಲಿನ ಗುಣಮಟ್ಟವು ಕುಸಿದಿದೆ. ರೈತರಿಗೆ ಹಾಗೂ ಸಂಘಕ್ಕೆ ಇದರಿಂದ ಆದಾಯ ಕುಂಠಿತವಾಗುತ್ತಿದೆ ಎಂದು ನಿಜಗಲ್ ಕೆಂಪೋಹಳ್ಳಿ ಡೇರಿ ಕಾರ್ಯನಿರ್ವಾಹಕ ಅಧಿಕಾರಿ ನಟರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.



ಚನ್ನೋಹಳ್ಳಿ ಡೇರಿಯಲ್ಲಿನ ಶೈತ್ಯಾಗಾರಕ್ಕೆ ತಂದಿರುವ ಹಾಲಿನ ಕ್ಯಾನ್‌ಗಳು

'ಮಳೆಗಾಲದಲ್ಲಿ ನಿತ್ಯ ಸುಮಾರು 1.20 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. ಬೇಸಿಗೆಯಲ್ಲಿ ಅದು 1 ಲಕ್ಷಕ್ಕೆ ಕುಸಿದಿದೆ. ಹಾಲಿನಲ್ಲಿನ ಕೊಬ್ಬಿನ ಅಂಶ ಕಡಿಮೆಯಾಗಿದೆ. ಇದು ರೈತರಿಗೆ ಹಾಗೂ ಡೇರಿಗೂ ನಷ್ಟ' ಎನ್ನುತ್ತಾರೆ ನೆಲಮಂಗಲ ತಾಲ್ಲೂಕು ಶಿಬಿರದ ಅಧಿಕಾರಿ ಒಬ್ಬರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Graphic Designers

REQUIRED GRAPHIC Designer– Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಸಕ್ರಮ: ಚದರ ಅಡಿಗೆ ₹5,000 ದಂಡ

ಹಣದ ಕೊರತೆ ಎದುರಿಸುತ್ತಿರುವ ಪಾಲಿಕೆಗಳಿಗೆ ಹೊಸ ಆದಾಯದ ಮೂಲ ಸೃಷ್ಟಿಸುವ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ನಿಯಮಗಳ ಉಲ್ಲಂಘನೆ ಆಗಿದ್ದರೆ ಪ್ರತಿ ಚದರ ಅಡಿಗೆ ₹5,000 ದಂಡ ಪಾವತಿ ಮಾಡಿ ಆಸ್ತಿ ಮಾಲೀಕರು ಸಕ್ರಮಗೊಳಿಸಿಕೊಳ್ಳಬಹುದಾಗಿದೆ. ಉಲ್ಲಂಘನೆಯ ವಿನಾಯಿತಿ ಮಿತಿಯನ್ನು (ಎತ್ತರ, ಎಫ್‌ಎಆರ್, ಸೆಟ್ ಬ್ಯಾಕ್) ಸರ್ಕಾರವು ಇತ್ತೀಚೆಗೆ ಶೇ 5ರ ಬದಲಾಗಿ ಶೇ 15ಕ್ಕೆ ಹೆಚ್ಚಿಸಿದೆ.

ಈ ಮೊತ್ತವು ದುಬಾರಿಯಂತೆ ಕಂಡು ಬಂದರೂ, ರಿಯಲ್ ಎಸ್ಟೇಟ್ ಮೌಲ್ಯದಲ್ಲಿನ ಭಾರಿ ಏರಿಕೆಯನ್ನು ಗಮನಿಸಿದರೆ ಇದು ಆಸ್ತಿ ಮಾಲೀಕರಿಗೆ ಆಕರ್ಷಕ ಕೊಡುಗೆಯಾಗಿದೆ ಎಂದು ಹೇಳಲಾಗುತ್ತಿದೆ. ಇದಲ್ಲದೆ, ಈ ಸಡಿಲಿಕೆಯು ಹಣದ ಕೊರತೆ ಎದುರಿಸುತ್ತಿರುವ ಪಾಲಿಕೆಗಳಿಗೆ ಹೊಸ ಆದಾಯದ ಮೂಲವನ್ನು ಸೃಷ್ಟಿಸುವ ನಿರೀಕ್ಷೆಯಿದೆ.

ರಾಜ್ಯ ಸರ್ಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಡಿಯಲ್ಲಿ ಹೊಸದಾಗಿ ರಚಿಸಲಾದ ಐದೂ ನಗರ ಪಾಲಿಕೆಗಳಿಗೆ ಅನ್ವಯವಾಗುವಂತೆ ತಿದ್ದುಪಡಿ ಮಾಡಿದ ಕಟ್ಟಡ ಉಪ-ನಿಯಮಗಳ ಅಧಿಸೂಚನೆಯನ್ನು ಕಳೆದ ವಾರ ಹೊರಡಿಸಿತ್ತು. ಈ ಅಧಿಸೂಚನೆಯು ನಿವೇಶನದ ಮಾರ್ಗಸೂಚಿ ದರದ ಆಧಾರದ ಮೇಲೆ, ಉಲ್ಲಂಘನೆ ಪ್ರಕರಣಗಳನ್ನು ಸಕ್ರಮಗೊಳಿಸಲು ವಿಧಿಸಲಾಗುವ ಶುಲ್ಕ ಮತ್ತು ದಂಡವನ್ನು ವಿವರಿಸಿದೆ.

ವಸತಿ ಮತ್ತು ವಸತಿಯೇತರ ವರ್ಗಗಳ ಆಧಾರದ ಮೇಲೆ ಮಾರ್ಗಸೂಚಿ ಮೌಲ್ಯದ ಶೇ 6ರಿಂದ ಶೇ 12ರವರೆಗೆ ಶುಲ್ಕ ವಿಧಿಸಲಾಗುತ್ತದೆ. ಸರ್ಕಾರವು ಪ್ರತಿ ಚದರ ಅಡಿಗೆ ಕನಿಷ್ಠ ₹5,000 ಎಂದು ನಿಗದಿಪಡಿಸಿದೆ.

ಟೆರೇಸ್‌ನಲ್ಲಿ ಕೊಠಡಿ, ಬಾಲ್ಕನಿ ವಿಸ್ತರಣೆಗಳಂತಹ ಉಲ್ಲಂಘನೆಗಳಿಗಾಗಿ ಪ್ರತ್ಯೇಕವಾಗಿ ಶೇ 14ರಿಂದ ಶೇ 18ರಷ್ಟು ದಂಡವನ್ನು ನಿಗದಿಪಡಿಸಲಾಗಿದೆ 1.75 ಎಫ್‌ಎಆರ್ ಹೊಂದಿರುವ 2,000 ಚದರ ಅಡಿಯ ನಿವೇಶನದಲ್ಲಿ 3,500 ಚದರ ಅಡಿಯವರೆಗೆ ನಿರ್ಮಾಣ ಮಾಡಲು ಅವಕಾಶವಿರುತ್ತದೆ. ಶೇ 15ರಷ್ಟು ಸಡಿಲಿಕೆಯನ್ನು ಪರಿಗಣಿಸಿದರೆ, ಮಾಲೀಕರು ಹೆಚ್ಚುವರಿಯಾಗಿ 525 ಚದರ ಅಡಿ ನಿರ್ಮಿಸಬಹುದು. ಇದಕ್ಕೆ ಸುಮಾರು ₹26.25 ಲಕ್ಷ ದಂಡ ಪಾವತಿಸಬೇಕಾಗುತ್ತದೆ. ನಿರ್ಮಾಣ ವೆಚ್ಚವನ್ನೂ ಸೇರಿಸಿದರೆ ಇದು ದುಬಾರಿ ಎನಿಸಿದರೂ, ಪ್ರತಿ ಚದರ ಅಡಿಗೆ ₹10,000ಕ್ಕಿಂತ ಹೆಚ್ಚಿನ ಬೆಲೆ ಇರುವ ಪ್ರಮುಖ ಪ್ರದೇಶಗಳಲ್ಲಿ ಇದು ಲಾಭದಾಯಕವಾಗಲಿದೆ.

‘ಕೇವಲ ಆದಾಯಕ್ಕಾಗಿ ಇಂತಹ ಸಡಿಲಿಕೆಗಳನ್ನು ಜಾರಿಗೆ ತರುವ ಮೂಲಕ ಸರ್ಕಾರ ತಪ್ಪು ಮಾಡುತ್ತಿದೆ. ನೀರಿನ ಪೈಪ್‌ಲೈನ್ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಲು ಪಾಲಿಕೆಗೆ ತಗಲುವ ವೆಚ್ಚವು ಈ ದಂಡದ ಆದಾಯಕ್ಕಿಂತ ಹೆಚ್ಚಾಗಿರುತ್ತದೆ’ ಎಂದು ಸಿ.ವಿ. ರಾಮನ್‌ನಗರದ ಸುಹಾಸ್ ಅನಂತ್ ರಾಜ್‌ಕುಮಾರ್ ಅಭಿಪ್ರಾಯಪಟ್ಟರು.

ಮಾಲೀಕರು ಶೇ 15ಕ್ಕಿಂತ ಹೆಚ್ಚು (ಕೆಲವು ಸಂದರ್ಭಗಳಲ್ಲಿ ಶೇ 50ರಷ್ಟು) ಉಲ್ಲಂಘನೆ ಮಾಡಿ, ನಂತರ ಇದೇ ಯೋಜನೆಯಡಿ ಸಕ್ರಮಗೊಳಿಸಬಹುದು ಎಂಬ ಆತಂಕವೂ ವ್ಯಕ್ತವಾಗಿದೆ.



ನಗರ ಪಾಲಿಕೆಯ ವಿವಿಧ ಪ್ರದೇಶಗಳಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ತಾತ್ಕಾಲಿಕ ಕುರಿ ಮತ್ತು ಮೇಕೆ ಮಾರುಕಟ್ಟೆ ಶೆಡ್‌ಗಳನ್ನು ತೆರವುಗೊಳಿಸುವ ಮುನ್ನ ಕುರಿಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಯಿತು

ಕುರಿ, ಮೇಕೆ ಮಾರಾಟ: ಅನಧಿಕೃತ ಶೆಡ್‌ಗಳ ತೆರವು

ಬಕ್ರೀದ್ ಪ್ರಯುಕ್ತ ನಗರ ಪಾಲಿಕೆಯ ವಿವಿಧ ಪ್ರದೇಶಗಳಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಕುರಿ, ಮೇಕೆಗಳ ತಾತ್ಕಾಲಿಕ ಮಾರುಕಟ್ಟೆ ಶೆಡ್‌ಗಳನ್ನು ಬೆಂಗಳೂರು ಉತ್ತರ ನಗರ ಪಾಲಿಕೆ ವತಿಯಿಂದ ತೆರವುಗೊಳಿಸಲಾಗಿದೆ.

ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ, ಸರ್ಕಾರಿ ಜಾಗ ಹಾಗೂ ರಾಜಕಾಲುವೆ ಪಕ್ಕಗಳಲ್ಲಿ ಅನುಮತಿ ಪಡೆಯದೆ ನಿರ್ಮಿಸಲಾಗಿದ್ದ ತಾತ್ಕಾಲಿಕ ಶೆಡ್‌ಗಳನ್ನು ಅಧಿಕಾರಿಗಳು ತೆರವುಗೊಳಿಸಿದರು.

ಪರಿಶೀಲನೆ: ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಕಲ್ಕೆರೆ-ಹೊಯ್ಸಳನಗರ ಪ್ರದೇಶಗಳಲ್ಲಿನ ಮಳೆ ನೀರು ಕಾಲುವೆಗಳನ್ನು ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಪರಿಶೀಲನೆ ನಡೆಸಿದರು.

ಡೆಂಗಿ ಜಾಗೃತಿ

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಕೃಷ್ಣರಾಜಪುರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ, ರಾಷ್ಟ್ರೀಯ ಡೆಂಗಿ ದಿನಾಚರಣೆ ಅಂಗವಾಗಿ ದೂರವಾಣಿ ನಗರದಲ್ಲಿರುವ ಬಿಎಂಟಿಸಿ ಕಾರ್ಯಾಗಾರ–2ರಲ್ಲಿ ಡೆಂಗಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಡೆಂಗಿ ಜ್ವರದ ಲಕ್ಷಣಗಳು, ಚಿಕಿತ್ಸೆ ಹಾಗೂ ಡೆಂಗಿ ನಿಯಂತ್ರಣದಲ್ಲಿ ಸಾರ್ವಜನಿಕರ ಪಾತ್ರದ ಕುರಿತು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗುರುರಾಜ್ ಮಾಹಿತಿ ನೀಡಿದರು.

ಹೊರ ರಾಜ್ಯಗಳಲ್ಲಿ ಹುಡುಕಾಟ

ಪ್ರಜಾವಾಣಿ ವಾರ್ತೆ

ಜಿಲೆಟಿನ್ ಕಡ್ಡಿ ಪತ್ತೆ ಪ್ರಕರಣ

ಬೆಂಗಳೂರು: ಕಗ್ಗಲೀಪುರ ಪೊಲೀಸ್ ಠಾಣೆ ವ್ಯಾಪ್ತಿಯ ವಡೇರಹಳ್ಳಿಯ ಸೇತುವೆ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿ ವಾರ ಕಳೆದರೂ ಆರೋಪಿಗಳು ಪತ್ತೆಯಾಗಿಲ್ಲ. ತನಿಖೆ ಚುರುಕುಗೊಳಿಸಿರುವ ವಿಶೇಷ ಪೊಲೀಸ್ ತಂಡವು, ಆರೋಪಿಗಾಗಿ ಹೊರ ರಾಜ್ಯದಲ್ಲಿ ಹುಡುಕಾಟ ನಡೆಸುತ್ತಿದೆ.

ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ನಗರಕ್ಕೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಸಂಚರಿಸಿದ ನೈಸ್ ರಸ್ತೆಯ ಸಮೀಪದಲ್ಲಿಯೇ ಎರಡು ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು.

ಪ್ರಕರಣದ ತನಿಖೆಗೆ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡ ನೇತೃತ್ವದಲ್ಲಿ ಆರು ತಂಡಗಳನ್ನು ರಚಿಸಲಾಗಿದೆ. ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಕೈಗೆತ್ತಿಕೊಂಡಿದ್ದು, ಮಾಹಿತಿ ಕಲೆ ಹಾಕಿ, ತನಿಖೆ ನಡೆಸುತ್ತಿದೆ.

ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ತನಿಖಾ ತಂಡವು ಆರೋಪಿಗಾಗಿ ಶೋಧ ನಡೆಸುತ್ತಿದೆ. ನಾಲ್ಕು ತಂಡಗಳು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ತನಿಖೆ ಕೈಗೊಂಡಿವೆ. ಈವರೆಗೆ ಕಗ್ಗಲೀಪುರ, ತಾತಗುಣಿ ಪ್ರದೇಶ ವ್ಯಾಪ್ತಿಯಲ್ಲಿ 150ಕ್ಕೂ ಹೆಚ್ಚು ಮಂದಿಯ ವಿಚಾರಣೆ ನಡೆಸಲಾಗಿದೆ.

ತನಿಖೆ ವೇಳೆ ಕನಕಪುರ ರಸ್ತೆ ಸಮೀಪದ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಮಣ್ಣಿನ ರಸ್ತೆಯಿಂದ ಸುಮಾರು 20 ಅಡಿ ದೂರದಲ್ಲಿ ಬ್ಯಾಟರಿ ಪ್ಯಾಕ್, ವೈಯರ್, ಟೇಪ್‌ಗಳು, ಸರ್ಕಿಟ್ ಬೋರ್ಡ್‌ನಂತೆ ಕಾಣುವ ವಸ್ತುಗಳು ಪತ್ತೆಯಾಗಿದ್ದವು.

ವಿದ್ಯಾರ್ಥಿಗೆ ಚಾಕು ಇರಿತ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿನಗರದ ಬಳಿ ದುಷ್ಕರ್ಮಿಗಳು ಭಾನುವಾರ ನಸುಕಿನಲ್ಲಿ ಬಿಬಿಎಂ ವಿದ್ಯಾರ್ಥಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದ್ದು, ಘಟನೆ ನಡೆದ ಕೆಲವೇ ತಾಸುಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ.

ಚಾಕು ಇರಿತದಿಂದ ಗಾಯಗೊಂಡಿರುವ ವಿದ್ಯಾರ್ಥಿ ಧೀರಜ್ (21) ಎಂಬಾತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿಗಳಾದ ಭುವನ್, ಮಿಥುನ್ ಮತ್ತು ಬಾಲಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಮಮೂರ್ತಿನಗರ ಸಮೀಪದ ಬಂಜಾರ ಲೇಔಟ್‌ನ ಧೀರಜ್, ಬೆಳಗಿನ ಜಾವ ಬೈಕ್‌ನಲ್ಲಿ ಹೊಸಕೋಟೆ ಕಡೆಗೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ. ಹೊರ ವರ್ತುಲ ರಸ್ತೆಯಲ್ಲಿ ಆರೋಪಿಗಳು ಬೈಕ್‌ನಲ್ಲಿ ಎದುರಿನಿಂದ ಬಂದಿದ್ದಾರೆ. ಈ ವಿಚಾರಕ್ಕೆ ಧೀರಜ್ ಹಾಗೂ ಆರೋಪಿಗಳ ನಡುವೆ ವಾಗ್ವಾದ ನಡೆದು ಜಗಳವಾಗಿದೆ. ಬಳಿಕ ಆರೋಪಿಗಳು ಧೀರಜ್‌ನ ತೊಡೆ ಹಾಗೂ ಬೆನ್ನಿಗೆ ಚಾಕು ಇರಿದು ಬೈಕ್ ಕಿತ್ತುಕೊಂಡು ಪರಾರಿಯಾಗಿದ್ದರು.

ಘಟನೆಯ ವಿಷಯ ತಿಳಿಯುತ್ತಿದ್ದಂತೆ ಬಾಣಸವಾಡಿ ಠಾಣೆ ಪೊಲೀಸರೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿ ಬೈಕ್ ಜಪ್ತಿ ಮಾಡಲಾಗಿದೆ.

692 ಮೊಬೈಲ್‌ಗಳ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಶಾನ್ಯ ವಿಭಾಗದ ಪೊಲೀಸರು ಕಾರ್ಯಾಚರಣೆ ನಡೆಸಿ, ಕಳವು ಆಗಿದ್ದ ₹1.75 ಕೋಟಿ ಮೌಲ್ಯದ ಮೊಬೈಲ್‌ಗಳನ್ನು ಸಿಇಐಆರ್ ಪೋರ್ಟಲ್ ಮೂಲಕ ಪತ್ತೆ ಮಾಡಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆ, ದೇವನಹಳ್ಳಿ ಪೊಲೀಸ್ ಠಾಣೆ, ಸಂಪಿಗೆಹಳ್ಳಿ ಉಪ ವಿಭಾಗ, ಯಲಹಂಕ, ವಿದ್ಯಾರಣ್ಯಪುರ, ಕೊಡಿಗೇಹಳ್ಳಿ ಠಾಣೆಯಲ್ಲಿ ದಾಖಲಾಗಿದ್ದ ಮೊಬೈಲ್ ಕಳ್ಳತನ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ.

ನಗರದ ಜಿಕೆವಿಕೆಯ ಕುವೆಂಪು ಸಭಾಂಗಣದಲ್ಲಿ ಈಶಾನ್ಯ ವಿಭಾಗದ ಡಿಸಿಪಿ ಮಿಥುನ್ ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಾರಸುದಾರರಿಗೆ ಮೊಬೈಲ್‌ಗಳನ್ನು ಹಿಂತಿರುಗಿಸಲಾಯಿತು.

ಡಿಸಿಪಿ ಮಿಥುನ್ ಕುಮಾರ್ ಮಾತನಾಡಿ, ‘ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಸುಮಾರು 692 ಮೊಬೈಲ್‌ಗಳನ್ನು ಪತ್ತೆ ಮಾಡಲಾಗಿದೆ’ ಎಂದರು.

ಮೊಬೈಲ್ ಬಳಕೆಯಿಂದಲೇ ಹೆಚ್ಚು ಸೈಬರ್ ಅಪರಾಧ ಕೃತ್ಯಗಳು ನಡೆಯುತ್ತಿವೆ. ನಕಲಿ ಆ್ಯಪ್ ಡೌನ್‌ಲೋಡ್, ಲಿಂಕ್‌ಗಳು, ಜಾಲತಾಣಗಳ ಮೂಲಕ ಸೈಬರ್ ವಂಚಕರ ಆಮಿಷಗಳಿಂದ ಹೆಚ್ಚು ಆರ್ಥಿಕ ಅಪರಾಧಗಳು ಸಂಭವಿಸುತ್ತಿವೆ. ಆದ್ದರಿಂದ ಸಾರ್ವಜನಿಕರು ಜಾಗೃತರಾಗಿರಬೇಕು. ಉಚಿತ ಪ್ರವಾಸ ಅಥವಾ ಇತರೆ ಆಮಿಷಗಳ ಹೆಸರಿನಲ್ಲಿ ಬರುವ ಅನುಮಾನಾಸ್ಪದ ಲಿಂಕ್‌ಗಳನ್ನು ತೆರೆಯುವುದರಿಂದ ಖಾತೆ ಹ್ಯಾಕ್ ಆಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ವಿದ್ಯಾವಂತರೇ ಹೆಚ್ಚು ಆನ್‌ಲೈನ್ ವಂಚನೆಗೆ ಒಳಗಾಗುತ್ತಿರುವ ಪ್ರಕರಣಗಳು ದಾಖಲಾಗುತ್ತಿವೆ. ಅತಿ ಆಸೆ ಮತ್ತು ತ್ವರಿತ ಲಾಭದ ನಿರೀಕ್ಷೆಯಿಂದ ಉಳಿತಾಯ ಮಾಡಿದ ಹಣವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದರು.

ಇದೇ ವೇಳೆ ಸಾರ್ವಜನಿಕರ ಕುಂದು ಕೊರತೆಗಳನ್ನು ಡಿಸಿಪಿ ಆಲಿಸಿದರು.



ಆರೋಪಿಗಳಿಂದ ವಶಪಡಿಸಿಕೊಂಡ ಮೊಬೈಲ್‌ಗಳನ್ನು ವಾರಸುದಾರರಿಗೆ ಪೊಲೀಸರು ಹಸ್ತಾಂತರಿಸಿದರು

ಇ–ಲಾಸ್ಟ್ ಆ್ಯಪ್

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು ಇ–ಲಾಸ್ಟ್ ಆ್ಯಪ್ ಮತ್ತು ಕೇಂದ್ರ ಸರ್ಕಾರ ರೂಪಿಸಿರುವ ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ಜಾಲತಾಣದಲ್ಲಿ ದಾಖಲು ಮಾಡಲಾಗುತ್ತದೆ. ತಾಂತ್ರಿಕ ಸುಳಿವು ಆಧರಿಸಿ, ತನಿಖೆ ನಡೆಸಿ ಮೊಬೈಲ್ ಪತ್ತೆ ಹಚ್ಚಲಾಗುತ್ತದೆ.

ಮೊಬೈಲ್ ಕಳೆದು ಹೋದ ತಕ್ಷಣ ಐಎಂಇಐ ಸಂಖ್ಯೆ ಸಹಿತ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಎಫ್‌ಐಆರ್ ಅಥವಾ ಇ–ಲಾಸ್ಟ್ ಪ್ರತಿಯನ್ನು ಸಿಇಐಆರ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡಬೇಕು. ಆಗ ಕದ್ದ ಮೊಬೈಲ್‌ಗೆ ಹೊಸ ಸಿಮ್ ಹಾಕಿದಾಗ ಪೊಲೀಸರಿಗೆ ಸಂದೇಶ ಬರಲಿದೆ. ಅದನ್ನು ಆಧರಿಸಿ ತನಿಖೆ ಆರಂಭವಾಗಲಿದೆ.

ನಿರಾಶ್ರಿತರ ಕೇಂದ್ರ: ನಾಲ್ವರು ವಿದೇಶಿ ಮಹಿಳೆಯರು ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯ ನಿರಾಶ್ರಿತರ ಕೇಂದ್ರದಿಂದ ನಾಲ್ವರು ವಿದೇಶಿ ಮಹಿಳೆಯರು ಪರಾರಿಯಾಗಿದ್ದಾರೆ.

ಮೇ 11ರಂದು ಬೆಳಗಿನ ಜಾವ ಈ ಘಟನೆ ನಡೆದಿದ್ದು, ಕಟ್ಟಡದ ಎರಡನೇ ಅಂತಸ್ತಿನ ಕಿಟಕಿಯ ಸರಳು ಮುರಿದು ಉಗಾಂಡದ ಟೋಪಿಸ್ಟಾ, ನಾಗವಾ, ಸಫೈನಾ ಹಾಗೂ ಬುರುಂಡಿಯ ಫಿಟಿನಾ ಎಂಬುವರು ಪಾರಾರಿಯಾಗಿದ್ದಾರೆ. ಈ ಸಂಬಂಧ ಕೇಂದ್ರದ ವ್ಯವಸ್ಥಾಪಕ ಎನ್. ಶ್ರೀನಿವಾಸ್ ಎಂಬವರು ದೂರು ನೀಡಿದ್ದು, ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಮಾದಕ ವಸ್ತು ಮಾರಾಟ ಹಾಗೂ ಅಕ್ರಮ ವಾಸ ಆರೋಪದ ಮೇರೆಗೆ ಸ್ಥಳೀಯ ಪೊಲೀಸರು ಆರೋಪಿಗಳನ್ನು ಬಂಧಿಸಿ, ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ಅಧಿಕಾರಿಗಳ ಸೂಚನೆ ಮೇರೆಗೆ ದೊಡ್ಡಗುಬ್ಬಿಯಲ್ಲಿರುವ ನಿರಾಶ್ರಿತರ ಕೇಂದ್ರದಲ್ಲಿ ಇರಿಸಲಾಗಿತ್ತು.

ಆರೋಪಿಗಳ ಪೈಕಿ ಟೋಪಿಸ್ಟಾ ಮತ್ತು ನಾಗವಾ ಅವರನ್ನು ಹೆಣ್ಣೂರು ಠಾಣೆ ಮತ್ತು ಸಫೈನಾ ಎಂಬಾಕೆಯನ್ನು ಪರಪ್ಪನ ಅಗ್ರಹಾರ ಠಾಣೆ ಹಾಗೂ ಫಿಟಿನಾ ಎಂಬಾಕೆಯನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಿಟ್ಟು ಹೋಗಿದ್ದರು. ಆದರೆ, ಆರೋಪಿಗಳು ಮುಂಜಾನೆ 3ರಿಂದ 6 ಗಂಟೆ ಅವಧಿಯಲ್ಲಿ ಕಟ್ಟಡದ 2ನೇ ಮಹಡಿಯಲ್ಲಿರುವ ಕೋಣೆಯ ಕಿಟಕಿಯ ಗ್ರಿಲ್ ಮುರಿದು ತಪ್ಪಿಸಿಕೊಂಡಿದ್ದಾರೆ.

ಆರೋಪಿಗಳನ್ನು ಬಂಧಿಸಿ, ಕರೆ ತಂದಿದ್ದ ಪೊಲೀಸ್ ಠಾಣೆ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ಹೇಳಿದರು.

ನಗದು, ಮೊಬೈಲ್ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿನಗರದ ಸಂಗಮ್ ಕ್ರಾಸ್‌ನಲ್ಲಿ ದುಷ್ಕರ್ಮಿಗಳು ಭಾನುವಾರ ನಸುಕಿನಲ್ಲಿ ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ನಿಗಮದ ಸಂಚಾರ ನಿಯಂತ್ರಕರನ್ನು (ಟಿ.ಸಿ) ಅಡ್ಡಗಟ್ಟಿ ಹಣ ಹಾಗೂ ಮೊಬೈಲ್ ದೋಚಿದ್ದಾರೆ.

ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ನಿಗಮದ ಸಂಚಾರ ನಿಯಂತ್ರಕ ಮಹಿಪಾಲ್ ಅವರು ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮಹಿಪಾಲ್, ಶಾಂತಲಾ ಸಿಲ್ಕ್ ಹೌಸ್ ಮುಂಭಾಗದಲ್ಲಿರುವ ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಶನಿವಾರ ರಾತ್ರಿ ಪಾಳಿಯ ಕರ್ತವ್ಯದಲ್ಲಿದ್ದ ಅವರು ಕೆಲಸ ಮುಗಿಸಿಕೊಂಡು ಬೆಳಗಿನ ಜಾವ ಗಾಂಧಿನಗರದ ಕಡೆಗೆ ನಡೆದು ಹೋಗುತ್ತಿದ್ದಾಗ ಮೂವರು ದುಷ್ಕರ್ಮಿಗಳು ಹಿಂಬಾಲಿಸಿಕೊಂಡು ಬಂದು ಅಡ್ಡಗಟ್ಟಿ ಚಾಕುವಿನಿಂದ ಬೆದರಿಸಿ ₹ 600 ನಗದು ಮತ್ತು 2 ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿ ಪರಿಶೀಲಿಸಲಾಗಿದೆ. ಆರೋಪಿಗಳ ಸುಳಿವು ಸಿಕ್ಕಿದ್ದು, ಸದ್ಯದಲ್ಲೇ ಅವರನ್ನು ಬಂಧಿಸುತ್ತೇವೆ ಎಂದು ಪೊಲೀಸರು ಹೇಳಿದ್ದಾರೆ.



ರಿಯಲ್ ಎಸ್ಟೇಟ್ ಉದ್ಯಮಿಗೆ ಜೀವ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿ ಜಿ.ಕೆ.ಶಂಕರ್ ಎಂಬುವರಿಗೆ ಕಿಡಿಗೇಡಿಗಳು ಭೂಗತ ಪಾತಕಿ ವಿಕ್ಕಿ ಶೆಟ್ಟಿ ಹೆಸರಿನಲ್ಲಿ ಕರೆ ಮಾಡಿ, ಹಣ ನೀಡುವಂತೆ ಜೀವ ಬೆದರಿಕೆ ಹಾಕಿದ್ದಾರೆ. ಈ ಸಂಬಂಧ ಶಂಕರ್ ಅವರು ಸಿಸಿಬಿ ಪೊಲೀಸರಿಗೆ ದೂರು ನೀಡಿದ್ದಾರೆ.

ವಿದ್ಯಾರಣ್ಯಪುರದ ಬಳಿಯ ಬಿಇಎಲ್ ಲೇಔಟ್ ನಿವಾಸಿಯಾದ ಶಂಕರ್ ಅವರು ಹತ್ತು ವರ್ಷಗಳಿಂದ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಅಪರಿಚಿತ ವ್ಯಕ್ತಿಗಳು ಅವರಿಗೆ ವಿಕ್ಕಿ ಶೆಟ್ಟಿ ಹೆಸರಿನಲ್ಲಿ ಕರೆ ಮಾಡಿ, ಹಣ ಕೊಡುವಂತೆ ಬೆದರಿಕೆ ಹಾಕಿದ್ದಾರೆ ಎಂದು ಸಿಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಶಂಕರ್ ಅವರಿಗೆ ಕೆಲ ದಿನಗಳ ಹಿಂದೆ ಮೊದಲ ಬಾರಿಗೆ ಬೆದರಿಕೆ ಕರೆ ಬಂದಿತ್ತು. ಆ ವ್ಯಕ್ತಿ ಸಂಭಾಷಣೆ ವೇಳೆ ತಾನು ವಿಕ್ಕಿ ಶೆಟ್ಟಿ ಎಂದು ಹೇಳಿಕೊಂಡು ಹಣಕ್ಕೆ ಬೇಡಿಕೆ ಇಟ್ಟಿದ್ದ. ಹಣ ಕೊಡದಿದ್ದರೆ ಶಂಕರ್ ಅವರ ಮಗನ ಮದುವೆ ಸಮಾರಂಭದ ವೇಳೆ ಅವರನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದ ಎಂದು ಅಧಿಕಾರಿಗಳು ಹೇಳಿದ್ದಾರೆ.

ಶಂಕರ್, ಆರಂಭದಲ್ಲಿ ಬೆದರಿಕೆ ಕರೆಗಳನ್ನು ನಿರ್ಲಕ್ಷಿಸಿದ್ದರು. ಆದರೆ, ಪದೇ ಪದೇ ಬೆದರಿಕೆ ಕರೆಗಳು ಬರಲಾರಂಭಿಸಿದ್ದರಿಂದ ದೂರು ಕೊಟ್ಟಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ಕರೆಗಳ ಮೂಲ ಮತ್ತು ಸುಲಿಗೆ ಪ್ರಯತ್ನದ ಹಿಂದಿನ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಮಂಗಳೂರು ಮೂಲದ ಭೂಗತ ಪಾತಕಿ ವಿಕ್ಕಿ ಶೆಟ್ಟಿ ವಿದೇಶದಲ್ಲಿ ನೆಲಸಿದ್ದು ಭೂಗತ ಪಾತಕಿ ರವಿ ಪೂಜಾರಿಯ ಸಹಚರ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಗರದಲ್ಲಿ ಇಂದು


ಕೃಷಿ–ಮಾಧ್ಯಮ ಸಂವಾದ: ಉದ್ಘಾಟನೆ: ಎನ್. ಚಲುವರಾಯಸ್ವಾಮಿ, ಅತಿಥಿಗಳು: ವೈ.ಎಸ್. ಪಾಟೀಲ, ಜಿ.ಟಿ. ಪುತ್ರ, ಸಿ.ಎನ್. ಶಿವಪ್ರಕಾಶ್, ಎ.ಬಿ. ಪಾಟೀಲ್, ಎಸ್.ವಿ. ಸುರೇಶ, ಆರ್. ಶ್ರೀಧರ, ಶಿವಕುಮಾರ್ ಬೆಳ್ಳಿತಟ್ಟೆ, ಆಯೋಜನೆ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕೃಷಿ ಇಲಾಖೆ, ಸ್ಥಳ: ಪ್ರೆಸ್‌ಕ್ಲಬ್ ಆವರಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಪ್ರಯುಕ್ತ ಹಲ್ಮಿಡಿ ಶಾಸನ ಮತ್ತು ಕರ್ನಾಟಕದ ದೇವಾಲಯಗಳ ಛಾಯಾಚಿತ್ರ ಪ್ರದರ್ಶನ: ಉದ್ಘಾಟನೆ: ಮುನಿಯಪ್ಪ, ‘ಶಾಸನಗಳಲ್ಲಿ ಸಾಂಸ್ಕೃತಿಕ ಐಕ್ಯತೆ’ ವಿಷಯದ ಬಗ್ಗೆ ಉಪನ್ಯಾಸ: ಕೆ.ಆರ್. ಗಣೇಶ, ಉಪಸ್ಥಿತಿ: ಟಿ. ಕೆಂಪಣ್ಣ, ಡಿ.ಎಚ್. ಅಂಬರೀಶ್, ಅಧ್ಯಕ್ಷತೆ: ಡಿ. ಸ್ಮಿತಾ, ಆಯೋಜನೆ: ಪುರಾತತ್ವ, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಸ್ಥಳ: ವೆಂಕಟಪ್ಪ ಚಿತ್ರಶಾಲೆ, ಬೆಳಿಗ್ಗೆ 10.30

‘ಮಾಧ್ಯಮ ಮಂಥನ’ ಪತ್ರಕರ್ತರೊಂದಿಗೆ ಸಂವಾದ: ಉದ್ಘಾಟನೆ: ಬಿ. ರಮೇಶ್, ಭಾಗವಹಿಸುವವರು: ಡಿ. ಉಮಾಪತಿ, ಮಂಜುಶ್ರೀ ಕಡಕೋಳ, ದಯಾನಂದ, ಆಯೋಜನೆ: ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣ, ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11

‘ರಂಗ ವೈವಿಧ್ಯ’ ವಿಭಿನ್ನ ನಾಟಕಗಳ ಉತ್ಸವ: ಉದ್ಘಾಟನೆ: ‘ಮುಖ್ಯಮಂತ್ರಿ’ ಚಂದ್ರು, ರಂಗ ಗೌರವ ಸ್ವೀಕರಿಸುವವರು: ಗೊ.ರು. ಚನ್ನಬಸಪ್ಪ, ರಂಗ ಗೌರವ ಪ್ರದಾನ: ಬಿ.ಎಸ್. ಮಂಜುನಾಥಸ್ವಾಮಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಬಿ.ವಿ. ರಾಜಾರಾಂ, ‘ಮೈಸೂರು ಮಲ್ಲಿಗೆ’ ನಾಟಕ ಪ್ರದರ್ಶನ, ತಂಡ: ಕಲಾಗಂಗೋತ್ರಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

‘ಅಧಿಕ ಮಾಸ ಮಹಾತ್ಮೆ’ ಧಾರ್ಮಿಕ ಪ್ರವಚನ: ಕಂಬಾಲೂರು ಶ್ರೀವತ್ಸಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, 11ನೇ ಅಡ್ಡರಸ್ತೆ, ತ್ಯಾಗರಾಜನಗರ, ಸಂಜೆ 6





ಚಿಟಿಕೆ ಸುದ್ದಿ

ಹೂಡಿ ಹಾಲ್ಟ್ ಇಂದಿನಿಂದ ಬಂದ್

ಬೆಂಗಳೂರು: ಕಂಟೋನ್ಮೆಂಟ್-ವೈಟ್‌ಫೀಲ್ಡ್ ನಡುವೆ ಚತುಷ್ಪಥ ರೈಲ್ವೆ ಮಾರ್ಗ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 18ರಿಂದ ಹೂಡಿ ಹಾಲ್ಟ್ ನಿಲ್ದಾಣವನ್ನು ಪ್ರಯಾಣಿಕರ ಸಂಚಾರಕ್ಕೆ ತಾತ್ಕಾಲಿಕವಾಗಿ ಮುಚ್ಚಲು ತೀರ್ಮಾನಿಸಲಾಗಿದೆ. ಹಾಗಾಗಿ ಮೆಮು ರೈಲುಗಳ ನಿಲುಗಡೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ.

ಕೆಎಸ್‌ಆರ್ ಬೆಂಗಳೂರು-ಮಾರಿಕುಪ್ಪಂ-ಕೆಎಸ್‌ಆರ್ ಬೆಂಗಳೂರು ಮೆಮು, ಕೆಎಸ್‌ಆರ್ ಬೆಂಗಳೂರು – ಜೋಲಾರಪೇಟೆ-ಕೆಎಸ್‌ಆರ್ ಬೆಂಗಳೂರು ಮೆಮು, ಕೆಎಸ್‌ಆರ್ ಬೆಂಗಳೂರು – ವೈಟ್ ಫೀಲ್ಡ್-ಕೆಎಸ್‌ಆರ್ ಬೆಂಗಳೂರು ಮೆಮು, ಕೆಎಸ್‌ಆರ್ ಬೆಂಗಳೂರು-ಬಂಗಾರಪೇಟೆ-ಕೆಎಸ್‌ಆರ್ ಬೆಂಗಳೂರು ಮೆಮು, ಬಾಣಸವಾಡಿ- ಕುಪ್ಪಂ-ಬಾಣಸವಾಡಿ ಮೆಮು, ಕೆ.ಆರ್. ಪುರ-ಮಾರಿಕುಪ್ಪಂ-ಕೆ.ಆರ್.ಪುರ ಮೆಮು, ಕಂಟೋನ್ಮೆಂಟ್ - ಕೋಲಾರ-ಕಂಟೋನ್ಮೆಂಟ್ ಮೆಮು ರೈಲುಗಳ ನಿಲುಗಡೆ ರದ್ದುಗೊಂಡಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಮುಷ್ಕರ: ಸಂಧಾನ ಸಭೆ ಇಂದು

ಬೆಂಗಳೂರು: ವೇತನ ಪರಿಷ್ಕರಣೆಯನ್ನು 2024ರ ಬದಲು 2025ರಿಂದ ಅನ್ವಯಿಸಿರುವುದನ್ನು ವಿರೋಧಿಸಿ, ಶೇ 25ರ ಬದಲು ಶೇ 12.5ರಷ್ಟು ಹೆಚ್ಚಳ ಮಾಡಿರುವುದನ್ನು ಖಂಡಿಸಿ ಮೇ 20ರಂದು ಮುಷ್ಕರಕ್ಕೆ ಕರೆ ನೀಡಿರುವ ನಾಲ್ಕು ಸಾರಿಗೆ ನಿಗಮಗಳ ನೌಕರರ ಸಂಘಟನೆಗಳೊಂದಿಗೆ ಕಾರ್ಮಿಕ ಆಯುಕ್ತರು ಮೇ 18ರಂದು ರಾಜಿ ಸಂಧಾನ ಸಭೆಯನ್ನು ಕರೆದಿದ್ದಾರೆ.

ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾರ್ಮಿಕ ಭವನದ ಮೂರನೇ ಮಹಡಿಯಲ್ಲಿ ಕಾರ್ಮಿಕ ಸಂಘಟನೆಗಳ ನಾಯಕರೊಂದಿಗೆ ಅಧಿಕಾರಿಗಳು ಮಧ್ಯಾಹ್ನ 3ಕ್ಕೆ ಸಭೆ ನಡೆಸಲಿದ್ದಾರೆ.

ಆಡಳಿತ ವರ್ಗ, ಕಾರ್ಮಿಕ ಸಂಘದ ನಡುವೆ ಕೈಗಾರಿಕಾ ವಿವಾದ ಉದ್ಭವಿಸಿದೆ ಎಂದು ಈ ಪ್ರಕರಣವನ್ನು ಪರಿಗಣಿಸಿ, ಮಧ್ಯಪ್ರವೇಶಿಸುವುದು ಸೂಕ್ತ ಎಂದು ಭಾವಿಸಿ ಸಭೆಯ ಕರೆಯಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

‘ಲೋಕ ಅರಿಯಲು ಕವಿರಾಜಮಾರ್ಗ’

ಬೆಂಗಳೂರು: ‘ಲೋಕ ವಿವೇಕ ಅರಿಯಲು, ಕನ್ನಡಿಗರ ನಿಜವಾದ ವಿವೇಕ ತಿಳಿಯಲು ಶ್ರೀವಿಜಯನ ಕವಿರಾಜಮಾರ್ಗ ಸಹಕಾರಿ’ ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಹೇಳಿದರು.

ಜೈನ್ ಮಿಲನ್, ಬೆಂಗಳೂರು ಸೆಂಟ್ರಲ್ ಹಾಗೂ ಜಯನಗರದ ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜ ಹಮ್ಮಿಕೊಂಡಿದ್ದ ‘ಜೈನ ಸಾಹಿತ್ಯ ಸಿರಿ’ ಕಾರ್ಯಕ್ರಮದ ತಿಂಗಳ ಉಪನ್ಯಾಸದಲ್ಲಿ ಮಾತನಾಡಿದರು.

‘ಮಾನವ ಕುಲ ನಾಶದ ಹಂತಕ್ಕೆ ಹೋಗುತ್ತಿರುವ ಕಾಲಘಟ್ಟದಲ್ಲಿ ಶ್ರೀವಿಜಯನ ವಿವೇಕ ನಮಗೆ ಬೇಕಿದೆ. ಕನ್ನಡನಾಡಿನ ಭೌಗೋಳಿಕ ವಿಸ್ತಾರವನ್ನು ತಿಳಿಸಿದ ಕವಿ, ‘ಗಡಿಗಳನ್ನು ಮೀರಿದ್ದು ಜನರ ಭಾವನೆಗಳು. ಅಂತಹ ಭಾವನೆಗಳಿಗೆ ಮನ್ನಣೆ ಸಿಗಬೇಕು’ ಎಂದು ಹೇಳಿದ್ದ. ‘ಒಂದು ರಾಜ್ಯ ಕವಿಗಳು ಮತ್ತು ರಾಜರು ಸೇರಿದಾಗ ಮಾತ್ರ ನಾಡಾಗುತ್ತದೆ. ಕವಿಗಳು ಅಂದರೆ ಕಲೆಗಳು ಇರುವ ರಾಜ್ಯವೇ ನಿಜವಾದ ರಾಜ್ಯ’ ಎಂದು ಹೇಳಿದ್ದ’ ಎಂದು ವಿವರಿಸಿದರು.

‘ಶ್ರೀವಿಜಯ ತನ್ನ ಕಾಲದ ಜನ ಸಾಮಾನ್ಯರ ಅಭಿರುಚಿ ಬಗ್ಗೆ ಹೇಳುತ್ತಾ, ‘ನನ್ನ ಕನ್ನಡ ನಾಡಿನ ಜನ ಓದಲು ಬರೆಯಲು ಬಾರದಿದ್ದರೂ ಒಂದು ಕಾವ್ಯವನ್ನು ಕೇಳಿ ಅದು ಉತ್ತಮವೋ ಅಲ್ಲವೋ ಎಂದು ನಿರ್ಧರಿಸಬಲ್ಲ ವಿವೇಕಶಾಲಿಗಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತರು. ಅಂತಹ ತಾಕತ್ತು ಕನ್ನಡ ಜನಸಾಮಾನ್ಯರಿಗೆ ಇತ್ತು’ ಎಂದು ತಿಳಿಸಿದ್ದಾನೆ’ ಎಂದರು.

ಶೋಭಾ ವಿಮುಕ್ತ ಜೈನ್ ಅಧ್ಯಕ್ಷತೆ ವಹಿಸಿದ್ದರು. ಸೆಂಟ್ರಲ್ ಜೈನ್ ಮಿಲನ್ ಅಧ್ಯಕ್ಷೆ ಮಮತಾ ಕಾಂತರಾಜ್, ಸಂಚಾಲಕರಾದ ಪದ್ಮಿನಿ ನಾಗರಾಜು, ವಿಮುಕ್ತ ಜೈನ್, ಬ್ರಾಹ್ಮಿಲ ಮದನಕುಮಾರ ಉಪಸ್ಥಿತರಿದ್ದರು.

ಶಾಸನ–ಛಾಯಾಚಿತ್ರ ಪ್ರದರ್ಶನ

ಬೆಂಗಳೂರು: ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯದ ದಿನಾಚರಣೆಯ ಅಂಗವಾಗಿ ಇದೇ 18ರಿಂದ 24ರವರೆಗೆ ವೆಂಕಟಪ್ಪ ಚಿತ್ರಶಾಲೆಯಲ್ಲಿ ಹಲ್ಮಿಡಿ ಶಾಸನ ಹಾಗೂ ಕರ್ನಾಟಕದ ಪ್ರಾಚೀನ ಐತಿಹಾಸಿಕ ದೇವಾಲಯಗಳ ಛಾಯಾಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ.

ನಿವೃತ್ತ ಅಧಿಕಾರಿ ಟಿ. ಕೆಂಪಣ್ಣ ಅವರಿಂದ ಈ ಛಾಯಾಚಿತ್ರ ಪ್ರದರ್ಶನ ನಡೆಯಲಿದೆ. ಶಾಸನ ತಜ್ಞ ಕೆ.ಆರ್. ಗಣೇಶ್ ಅವರು ‘ಶಾಸನಗಳಲ್ಲಿ ಸಾಂಸ್ಕೃತಿಕ ಐಕ್ಯತೆ’ ವಿಷಯದ ಬಗ್ಗೆ ಉಪನ್ಯಾಸ ಮಾಡಲಿದ್ದಾರೆ.

ಪ್ರದರ್ಶನದಲ್ಲಿ ಈ ಶಾಸನದ ವೀಕ್ಷಣೆ ಸಾಧ್ಯವಾಗಲಿದ್ದು, ಉಚಿತ ಪ್ರವೇಶ ಇರಲಿದೆ ಎಂದು ಇಲಾಖೆಯ ನಿರ್ದೇಶಕಿ ಸ್ಮಿತಾ ಡಿ. ತಿಳಿಸಿದ್ದಾರೆ.

ನಗರದೊಳಗೆ ಬಾರದು ಮುಂಬೈ ರೈಲು

ಪ್ರಯಾಣಿಕರಿಗೆ ಪ್ರಯಾಸ ತರಲಿದೆ 24 ತಾಸಿನ ಪ್ರಯಾಣದ ಅವಧಿ

• ಬಾಲಕೃಷ್ಣಪಿ.ಎಚ್.



ಬೆಂಗಳೂರು: ಹಲವು ವರ್ಷಗಳ ಬೇಡಿಕೆಯಾಗಿದ್ದ ಬೆಂಗಳೂರು–ಮುಂಬೈ ಎಕ್ಸ್‌ಪ್ರೆಸ್ ರೈಲು ಮೇ 17ರಂದು ಆರಂಭಗೊಳ್ಳುತ್ತಿದೆ. ಈ ರೈಲು ಪ್ರಯಾಣಕ್ಕೆ 24 ತಾಸು ತೆಗೆದುಕೊಳ್ಳುತ್ತಿರುವುದು ಮತ್ತು ಬೆಂಗಳೂರು ನಗರದ ಒಳಗೆ ಬಾರದೇ ಇರುವುದರಿಂದ ನಗರದ ಜನರಿಗೆ ಹೆಚ್ಚು ಪ್ರಯೋಜನವಾಗದು ಎಂದು ರೈಲ್ವೆ ಯಾತ್ರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) ಮತ್ತು ಮುಂಬೈಯ ಲೋಕಮಾನ್ಯ ತಿಲಕ್ ಟರ್ಮಿನಸ್ (ಎಲ್‌ಟಿಟಿ) ನಡುವೆ ವಾರಕ್ಕೆರಡು ದಿನ ಹೊಸ ಎಕ್ಸ್‌ಪ್ರೆಸ್ ರೈಲು ಸಂಚರಿಸಲಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸುವ, ಬೆಂಗಳೂರು, ಉತ್ತರ ಕರ್ನಾಟಕದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಮಹಾರಾಷ್ಟ್ರದ ಪುಣೆ, ಮುಂಬೈ ನಗರಗಳ ನಡುವೆ ಸಂಪರ್ಕವನ್ನು ಸುಧಾರಿಸುವ ಈ ರೈಲಿಗೆ ಭಾನುವಾರ ಚಾಲನೆ ದೊರೆತಿದೆ.

ನಿಯಮಿತ ರೈಲುಗಳು ಮೇ 23ಕ್ಕೆ ಎಸ್‌ಎಂವಿಟಿಯಿಂದ, ಮೇ 24ಕ್ಕೆ ಎಲ್‌ಟಿಟಿ ಮುಂಬಯಿಂದ ಆರಂಭ ಗೊಳ್ಳಲಿದೆ. ಪ್ರತಿ ಮಂಗಳವಾರ ಮತ್ತು ಶನಿವಾರ ಎಸ್‌ಎಂವಿಟಿಯಿಂದ ರಾತ್ರಿ 8.35ಕ್ಕೆ ಹೊರಟು ಮರುದಿನ ರಾತ್ರಿ 8.40ಕ್ಕೆ ಮುಂಬೈ ತಲುಪಲಿದೆ. ಪ್ರತಿ ಬುಧವಾರ ಮತ್ತು ಭಾನುವಾರ ಮುಂಬೈಯ ಎಲ್‌ಟಿಟಿಯಿಂದ ರಾತ್ರಿ 11.15ಕ್ಕೆ ಹೊರಟು ಮರುದಿನ ರಾತ್ರಿ 10.30ಕ್ಕೆ ಎಸ್‌ಎಂವಿಟಿ ತಲುಪಲಿದೆ.

ರೈಲುಗಳು ತುಮಕೂರು, ದಾವಣಗೆರೆ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮೀರಜ್ ಜಂಕ್ಷನ್, ಸಾಂಗ್ಲಿ, ಕರಾಡ್, ಸತಾರಾ, ಲೋನಾಂಡ್, ಪುಣೆ, ಲೋನಾವಾಲಾ, ಕರ್ಜತ್, ಕಲ್ಯಾಣ್ ಮತ್ತು ಥಾಣೆ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿವೆ.

ಸೂಪರ್ ಫಾಸ್ಟ್ ಎಲ್ಲಿದೆ?: ‘ನಮಗೆ ಬೇಕಿರುವುದು ಸೂಪರ್ ಫಾಸ್ಟ್ ರೈಲು. ಬೆಂಗಳೂರಿನಿಂದ ಹೊರಟರೆ 20 ತಾಸುಗಳ ಒಳಗೆ ಮುಂಬೈ ತಲುಪಬೇಕು. ಆದರೆ, ರೈಲ್ವೆ ಮಂಡಳಿಯು ಸೂಪರ್ ಫಾಸ್ಟ್ ರೈಲು ನೀಡುವುದಾಗಿ ಹೇಳಿ ಸೂಪರ್ ಸ್ಲೋ ರೈಲು ನೀಡಿದೆ. ಸಂಚಾರ ಅವಧಿಯನ್ನು ಕಡಿಮೆ ಮಾಡದೇ ಇದ್ದರೆ ಪ್ರಯೋಜನವಿಲ್ಲ’ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಪ್ರತಿಕ್ರಿಯಿಸಿದ್ದಾರೆ.

‘ಸೂಪರ್ ಫಾಸ್ಟ್ ರೈಲು ಆಗಿದ್ದರೆ ನಿಗದಿಪಡಿಸಿದ ನಿಲುಗಡೆ ಹೊರತುಪಡಿಸಿ ಹೆಚ್ಚುವರಿಯಾಗಿ ನಿಲುಗಡೆಯನ್ನು ಯಾರೂ ಕೇಳುವುದಿಲ್ಲ. ಈಗ ಈ ಎಕ್ಸ್‌ಪ್ರೆಸ್ ರೈಲಿಗೆ ರಾಯಭಾಗ, ಗೋಕಾಕ ಸಹಿತ ಹಲವು ಕಡೆಗಳಲ್ಲಿ ನಿಲುಗಡೆ ನೀಡಬೇಕು ಎಂಬ ಕೂಗು ಎದ್ದಿದೆ’ ಎಂದು ಹೇಳಿದರು.

‘ವಾರಕ್ಕೆ ಎರಡು ದಿನ ಸಂಚರಿಸಲಿರುವ ಬೆಂಗಳೂರು–ಮುಂಬೈ ಎಕ್ಸ್‌ಪ್ರೆಸ್ ರೈಲಿಗೆ 2025ರ ಡಿಸೆಂಬರ್‌ನಲ್ಲಿಯೇ ರೈಲ್ವೆ ಮಂಡಳಿ ಅನುಮೋದನೆ ನೀಡಿತ್ತು. ಆರು ತಿಂಗಳು ತಡವಾಗಿ ಆರಂಭವಾಗುತ್ತಿದೆ. ಅದರ ಜೊತೆಗೆ ನಗರದ ಹೊರಗಿನ ಬೈಯಪ್ಪನಹಳ್ಳಿಯಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ಗೆ ಬಂದು ಅಲ್ಲಿಂದಲೇ ಮುಂಬೈಗೆ ಹೋಗುತ್ತಿದೆ. ಬಾಣಸವಾಡಿ–ಹೆಬ್ಬಾಳ–ಲೊಟ್ಟೆಗೊಲ್ಲಹಳ್ಳಿ–ಯಶವಂತಪುರ ಬೈಪಾಸ್–ಚಿಕ್ಕಬಾಣಾವರ ಮೂಲಕ ಸಾಗುತ್ತಿದ್ದರೂ ನಗರದೊಳಗೆ ಎಲ್ಲಿಯೂ ನಿಲುಗಡೆ ಇಲ್ಲ. ಶ್ರೀನಗರ, ಹನುಮಂತನಗರ ಸಹಿತ ಬೆಂಗಳೂರು ದಕ್ಷಿಣ ಭಾಗದ ಜನರಿಗೆ ಸಂಪರ್ಕ ಸಮಸ್ಯೆಯಾಗಲಿದೆ. ಯಶವಂತಪುರ ಇಲ್ಲವೇ ಕಂಟೋನ್ಮೆಂಟ್ ನಿಲ್ದಾಣದವರೆಗೆ ವಿಸ್ತರಿಸಬೇಕು’ ಎಂದು ರೈಲು ಪ್ರಯಾಣಿಕ ಟಿ.ಪಿ. ಲೋಕೇಶ್ ಆಗ್ರಹಿಸಿದರು.

‘ಬರಲಿದೆ ವಂದೇ ಭಾರತ್’

‘ಬೆಂಗಳೂರಿನಿಂದ ಹುಬ್ಬಳ್ಳಿ ಮಾರ್ಗವಾಗಿ ಮುಂಬೈಗೆ ನೇರ ರೈಲು ಇರಲಿಲ್ಲ. ಈಗ ವಾರಕ್ಕೆರಡು ದಿನ ಸಂಚರಿಸುವ ಎಕ್ಸ್‌ಪ್ರೆಸ್ ರೈಲು ಆರಂಭವಾಗುತ್ತಿದೆ. ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಪ್ರತಿದಿನ 150ಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತವೆ. ಜಾಗ ಸಾಕಾಗುತ್ತಿಲ್ಲ. ಈ ಕಾರಣದಿಂದ ಹೊಸ ರೈಲು ಎಸ್‌ಎಂವಿಟಿಯಿಂದ ಸಂಚರಿಸುತ್ತಿದೆ’ ಎಂದು ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

‘ಎಲ್ಲವೂ ಒಂದೇ ಬಾರಿ ಆಗಬೇಕು ಎಂದರೆ ಕಷ್ಟ. ಈಗ ಎಕ್ಸ್‌ಪ್ರೆಸ್ ರೈಲು ಸಿಕ್ಕಿದೆ. ಮುಂದೆ ವಂದೇ ಭಾರತ್ ರೈಲು ಬರಲಿದೆ. ಅದು ವೇಗವಾಗಿ ಚಲಿಸಲಿದೆ’ ಎಂದು ಸಚಿವರು ಹೇಳಿದರು.

ಸುದ್ದಿ 2 ನಿಮಿಷ

ಸಾರಿಗೆ ನೌಕರರ ಬೇಡಿಕೆ ಈಡೇರಿಸಲು ಎಐಟಿಯುಸಿ ಆಗ್ರಹ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸುವ ಮೂಲಕ ಸೌಹಾರ್ದಯುತ ಕೈಗಾರಿಕಾ ಒಪ್ಪಂದಕ್ಕೆ ಸರ್ಕಾರ ಮುಂದಾಗಬೇಕು ಎಂದು ಎಐಟಿಯುಸಿ ಆಗ್ರಹಿಸಿದೆ.

‘ವೇತನ ಸಂಬಂಧಿತ ಬೇಡಿಕೆಗಳನ್ನು ಈಡೇರಿಸುವಂತೆ ಸಾರಿಗೆ ನೌಕರರು ಕೆಲವು ವರ್ಷಗಳಿಂದ ಹೋರಾಟ, ಪ್ರತಿಭಟನೆಗಳನ್ನು ನಡೆಸುತ್ತಿದ್ದರೂ ಅವರ ಸಮಸ್ಯೆಯನ್ನು ಸಹಾನುಭೂತಿಯಿಂದ ಬಗೆಹರಿಸದಿರುವುದು ಕಾರ್ಮಿಕ ವಿರೋಧಿ ಧೋರಣೆಯಾಗಿದೆ’ ಎಂದು ಎಐಟಿಯುಸಿ ರಾಜ್ಯ ಸಮಿತಿ ಅಧ್ಯಕ್ಷ ಬಾಬು ಮ್ಯಾಥ್ಯು, ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ್ ಡಿ.ಎ. ತಿಳಿಸಿದ್ದಾರೆ.

‘ರಾಜ್ಯದಲ್ಲಿ ಸುಮಾರು 1.15 ಲಕ್ಷದಷ್ಟು ಸಾರಿಗೆ ಕಾರ್ಮಿಕರು ಶ್ರಮವಹಿಸಿ ಸಮಾಜಕ್ಕೆ ಅವಿರತ ಸೇವೆ ನೀಡುತ್ತಿದ್ದಾರೆ. ಅವರ ಬದುಕಿನ ಮೂಲ ಬೇಡಿಕೆಯಾದ ವೇತನ ಪರಿಷ್ಕರಣೆ, ಕೈಗಾರಿಕಾ ಒಪ್ಪಂದಗಳ ಪ್ರಕಾರ ವೇತನ ಹಿಂಬಾಕಿಯನ್ನು ನೀಡದೇ ಶೋಷಣೆ ಮಾಡಲಾಗುತ್ತಿದೆ. ಬೇಡಿಕೆಗಳನ್ನು ಈಡೇರಿಸದ ರಾಜ್ಯ ಸರ್ಕಾರ ಏಕಪಕ್ಷೀಯ ನಿರ್ಧಾರ ಕೈಗೊಳ್ಳುತ್ತಿರುವುದು ಕೈಗಾರಿಕಾ ಒಪ್ಪಂದಗಳ ಉಲ್ಲಂಘನೆಯಾಗಿದೆ’ ಎಂದು ಹೇಳಿದ್ದಾರೆ.



‘ಸಾರಿಗೆ ನೌಕರರು ಮೇ 19ರಂದು ಹಮ್ಮಿಕೊಂಡಿರುವ ತುಮಕೂರು ಚಲೋ, ಕಪ್ಪು ಬಾವುಟ ಪ್ರದರ್ಶಿಸುವ ಮತ್ತು 20ರಿಂದ ನಡೆಸುವ ಮುಷ್ಕರಕ್ಕೆ ಬೆಂಬಲಿಸಿ, ಪಾಲ್ಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ಬಿಎಂಟಿಸಿಯ 100 ಸಿಬ್ಬಂದಿಗೆ 26 ತಿಂಗಳ ಹಿಂಬಾಕಿ ಪಾವತಿ

ಬೆಂಗಳೂರು: ಬಿಎಂಟಿಸಿಯ ಯಶವಂತಪುರ ಘಟಕದಲ್ಲಿ 100 ಸಿಬ್ಬಂದಿಗೆ ಮೊದಲ ಕಂತಿನ ರೂಪದಲ್ಲಿ 11 ತಿಂಗಳ ಹಿಂಬಾಕಿ ಬದಲು ಎಲ್ಲ 26 ತಿಂಗಳ ಹಿಂಬಾಕಿ ಪಾವತಿಯಾಗಿದೆ. ಜಮೆ ಆಗಿರುವ ಹೆಚ್ಚುವರಿ ಹಣವನ್ನು ಬಿಎಂಟಿಸಿ ವಾಪಸ್ ಪಡೆಯುತ್ತಿದೆ.

ಶನಿವಾರ ಹಿಂಬಾಕಿ ಮೊತ್ತ ಪಾವತಿ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ, ಬಿಲ್ಲಿಂಗ್ ಕ್ಲರ್ಕ್ ಅವರಿಂದ ಉಂಟಾದ ಅನಪೇಕ್ಷಿತ ಡೇಟಾ ಎಂಟ್ರಿ ದೋಷದಿಂದ ಸುಮಾರು 100 ನಿರ್ವಾಹಕರ ಖಾತೆಗಳಿಗೆ 26 ತಿಂಗಳ ಪೂರ್ಣ ಹಿಂಬಾಕಿ ಮೊತ್ತ ಜಮೆಯಾಗಿದೆ. ಚಾಲಕರು, ಚಾಲಕ ಕಂ ನಿರ್ವಾಹಕರು, ಮೆಕ್ಯಾನಿಕ್‌ಗಳು ಹಾಗೂ ಆಡಳಿತ ವಿಭಾಗದ ಸಿಬ್ಬಂದಿಗೆ ನಿಯಮಾನುಸಾರ 11 ತಿಂಗಳ ಮೊದಲ ಕಂತಿನ ಮೊತ್ತವೇ ಜಮೆಯಾಗಿದೆ. ಈ ವ್ಯತ್ಯಾಸ ಗಮನಕ್ಕೆ ಬಂದ ತಕ್ಷಣ, ಘಟಕ ವ್ಯವಸ್ಥಾಪಕರು ಕೇಂದ್ರ ಕಚೇರಿಗೆ ಮಾಹಿತಿ ನೀಡಿ ತುರ್ತು ಕ್ರಮ ಕೈಗೊಂಡಿದ್ದಾರೆ. ಸಂಬಂಧಿತ ನಿರ್ವಾಹಕರನ್ನು ಸಂಪರ್ಕಿಸಿ ಪರಿಸ್ಥಿತಿಯನ್ನು ಪಾರದರ್ಶಕವಾಗಿ ವಿವರಿಸಲಾಗಿದ್ದು, ಹೆಚ್ಚುವರಿಯಾಗಿ ಜಮೆಯಾಗಿರುವ ಮೊತ್ತವನ್ನು ಹಿಂತಿರುಗಿಸಲು ಸಹಕಾರ ಕೋರಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಹೆಚ್ಚುವರಿ ಮೊತ್ತ ಮರುಪಾವತಿ ಪ್ರಕ್ರಿಯೆಯನ್ನು ಇಲಾಖೆಗೆ ಸಂಬಂಧಿಸಿದ ಚೌಡೇಶ್ವರಿ ದೇವಸ್ಥಾನ ಬಸ್ ನಿಲ್ದಾಣ ಕಚೇರಿಯ ಕ್ಯೂಆರ್ ಸ್ಕ್ಯಾನರ್/ಖಾತೆಯ ಮೂಲಕ ಸ್ವೀಕರಿಸಲಾಗುತ್ತಿದೆ. ಮರುಪಾವತಿಸಿದ ಸಿಬ್ಬಂದಿಗೆ ಅಧಿಕೃತ ರಶೀದಿ ನೀಡಲಾಗುತ್ತಿದೆ. ಇಲಾಖೆಯ ಅಧಿಕೃತ ಮೇಲ್ವಿಚಾರಣೆಯಲ್ಲೇ ಪ್ರಕ್ರಿಯೆ ನಡೆಯುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ತಪ್ಪು ಮಾಹಿತಿಯಿಂದ ಸಿಬ್ಬಂದಿ ಗೊಂದಲಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿದ್ದಾರೆ.

‘ದಕ್ಷ ಸರ್ಕಾರ ಅಧಿಕಾರಕ್ಕೆ ತರುವೆ’

ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಬಿ.ಎಸ್. ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಬದುಕಿನ ಕೊನೆಯ ಉಸಿರು ಇರುವವರೆಗೂ ಹೋರಾಟ ಮುಂದುವರಿಸುತ್ತೇನೆ. ಮತ್ತೊಮ್ಮೆ ರಾಜ್ಯದ ಉದ್ದಗಲಕ್ಕೂ ಓಡಾಡಿ ಜನರ ಪ್ರೀತಿ, ವಿಶ್ವಾಸ ಗಳಿಸಿ ಸ್ವಚ್ಛ, ದಕ್ಷ ಮತ್ತು ಪ್ರಾಮಾಣಿಕ ಸರ್ಕಾರ ತರಲು ಪ್ರಯತ್ನ ಮಾಡುವೆ’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಶಪಥ ಮಾಡಿದರು.

50 ವರ್ಷಗಳ ರಾಜಕೀಯ ಬದುಕಿನ ಪ್ರಯುಕ್ತ ಭಾನುವಾರ ಇಲ್ಲಿ ಏರ್ಪಡಿಸಲಾಗಿದ್ದ ತವರಿನ ಜನರ ಕೃತಜ್ಞತೆ ಸಲ್ಲಿಕೆ ಹಾಗೂ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜಾತಿ–ಬೇಧ ತೋರದೆ, ದೀನ–ದಲಿತರಿಗೆ ಅನ್ಯಾಯ ಮಾಡದೆ, ಎಲ್ಲರೂ ಒಂದಾಗಿ ಬಾಳಲು ಏನೇನು ಮಾಡಬೇಕೋ ಅದನ್ನೆಲ್ಲಾ ಮುಂದಿನ ದಿನಗಳಲ್ಲಿ ಮಾಡುವೆ’ ಎಂದರು.

ಯಡಿಯೂರಪ್ಪ ಅವರನ್ನು ಅಭಿನಂದಿಸಿದ ಭದ್ರಾವತಿಯ ಕಾಂಗ್ರೆಸ್ ಶಾಸಕ ಬಿ.ಕೆ.ಸಂಗಮೇಶ್ವರ, ‘ಬಿಎಸ್‌ವೈ ಜಾತ್ಯತೀತ ನಾಯಕ. ಎಂದಿಗೂ ದ್ವೇಷದ ರಾಜಕಾರಣ ಮಾಡದ ಅವರದ್ದು ಸ್ನೇಹಪರ ವ್ಯಕ್ತಿತ್ವ’ ಎಂದು ಬಣ್ಣಿಸಿದರು.



ಶಿವಮೊಗ್ಗದಲ್ಲಿ ಭಾನುವಾರ ನಡೆದ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದ ನೋಟ

ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಅಭಿನಂದನಾ ಭಾಷಣ ಮಾಡಿದರು.

ಇದಕ್ಕೂ ಮುನ್ನ ಶಿವಮೊಗ್ಗದ ಗಾಂಧಿ ಬಜಾರ್‌ನ ಬಸವೇಶ್ವರ ದೇವಸ್ಥಾನದಿಂದ ಅಲ್ಲಮಪ್ರಭು ಮೈದಾನದವರೆಗೆ ರಂಭಾಪುರಿ ಪೀಠದ ಜಗದ್ಗುರು ವೀರಸೋಮೇಶ್ವರ ಸ್ವಾಮೀಜಿ, ಕಾಶಿ ಪೀಠದ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉಜ್ಜಿನಿ ಪೀಠದ ಜಗದ್ಗುರು ಸಿದ್ಧಲಿಂಗ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲ ಪೀಠದ ಜಗದ್ಗುರು ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು. ಭಕ್ತರು ಶ್ರೀಗಳನ್ನು ಪಲ್ಲಕ್ಕಿಯಲ್ಲಿ ಹೊತ್ತು ಸಾಗಿಬಂದರು. ಕೇದಾರ ಪೀಠದ ಜಗದ್ಗುರು ಭೀಮಾ ಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ ಗೈರಾಗಿದ್ದರು.

ವ್ಯಕ್ತಿ ಕೊಲೆ: ಬಂಧನ

ಬೆಂಗಳೂರು: ಪತ್ನಿ ಬಗ್ಗೆ ಅಶ್ಲೀಲವಾಗಿ ಮಾತನಾಡಿದ್ದನ್ನು ಪ್ರಶ್ನಿಸಿದ ಪತಿಯನ್ನು ಹೊಡೆದು ಕೊಲೆ ಮಾಡಿದ ಆರೋಪದ ಮೇಲೆ ಇಬ್ಬರನ್ನು ಆರ್‌ಎಂಸಿ ಯಾರ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೊಪ್ಪಳದ ಆನಂದ್, ಮುನೇಶ್ವರ ಪಾಳ್ಯ ನಿವಾಸಿ ದಕ್ಷಿಣಮೂರ್ತಿ ಬಂಧಿತರು. ಆರೋಪಿಗಳು ಕೊಪ್ಪಳದ ಶರಣಪ್ಪ (37) ಎಂಬವವರ ಮೇಲೆ ಮೇ 10ರಂದು ಯಶವಂತಪುರದ ಗೋವರ್ಧನ್ ಟಾಕೀಸ್ ಸಮೀಪದಲ್ಲಿರುವ ಬಾರ್‌ನಲ್ಲಿ ಹಲ್ಲೆ ನಡೆಸಿದ್ದು, ಗಾಯಗೊಂಡಿದ್ದ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಶರಣಪ್ಪ ನಗರದಲ್ಲಿ ಸಿಮೆಂಟ್ ಅಂಗಡಿಯ ವಾಹನ ಚಾಲಕನಾಗಿದ್ದರು. ಆನಂದ್ ಆರ್‌ಎಂಸಿ ಯಾರ್ಡ್‌ನಲ್ಲಿ ಹಾಗೂ ದಕ್ಷಿಣಮೂರ್ತಿ ಗಾರೆ ಕೆಲಸ ಮಾಡಿಕೊಂಡಿದ್ದರು. ಮೂವರೂ ಪರಸ್ಪರ ಪರಿಚಯಸ್ಥರು.

ಮದ್ಯ ಸೇವಿಸುತ್ತಿದ್ದಾಗ ಆನಂದ್, ಶರಣಪ್ಪ ಪತ್ನಿ ಬಗ್ಗೆ ಅಶ್ಲೀಲವಾಗಿ ಮಾತನಾಡಿದ್ದಾರೆ. ಇದರಿಂದ ವಾಗ್ವಾದ ನಡೆದಿದೆ ದಕ್ಷಿಣಮೂರ್ತಿ ಮತ್ತು ಆನಂದ್ ಅವರು ಶರಣಪ್ಪಗೆ ಹೊಡೆದಿದ್ದಾರೆ. ಕೆಳಗೆ ಬಿದ್ದ ಅವರ ತಲೆಯ ಹಿಂಭಾಗದಲ್ಲಿ ಗಾಯವಾಗಿತ್ತು. ಚಿಕಿತ್ಸೆ ಪಡೆದಿರಲಿಲ್ಲ.

ಚಿತ್ರಾವಳಿ



ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದ 45ನೇ ವರ್ಷದ ಸಂಭ್ರಮಾಚರಣೆಯ ಭಾಗವಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕೇಂದ್ರದ ಸಂಸ್ಥಾಪಕರಾದ ಶ್ರೀ ಶ್ರೀ ರವಿಶಂಕರ ಗುರೂಜಿ ಅವರನ್ನು ಭೇಟಿ ಮಾಡಿ ಗೌರವಿಸಿದರು



ಈ ಹೊತ್ತಿಗೆ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಸನ್ಮಾನ, ಗೋಷ್ಠಿ, ಓದು’ ಕಾರ್ಯಕ್ರಮದಲ್ಲಿ ಲೇಖಕಿ ಡಾ. ವಸುಂಧರಾ ಭೂಪತಿ ಅವರಿಗೆ ಸನ್ಮಾನ ಮಾಡಲಾಯಿತು. ಟ್ರಸ್ಟ್ ಅಧ್ಯಕ್ಷೆ ಜಯಲಕ್ಷ್ಮಿ ಪಾಟೀಲ, ವಿಮರ್ಶಕಿಯರಾದ ಗೀತಾ ವಸಂತ ಹಾಗೂ ಎಂ.ಎಸ್. ಆಶಾದೇವಿ ಉಪಸ್ಥಿತರಿದ್ದರು



ವೈಟ್‌ಫೀಲ್ಡ್‌ನ ಚನ್ನಸಂದ್ರದಲ್ಲಿರುವ ಎಂವಿಜೆ ಪದವಿ ಕಾಲೇಜಿನಲ್ಲಿ ಎಂವಿಜೆ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಆಸ್ಪತ್ರೆಯ ಸಹಯೋಗದಲ್ಲಿ ಶನಿವಾರ ಉಚಿತ ವೈದ್ಯಕೀಯ ಶಿಬಿರ ಹಾಗೂ ರಕ್ತದಾನ ಶಿಬಿರ ನಡೆಯಿತು. ಎಂವಿಜೆ ಪದವಿ ಕಾಲೇಜು ಪ್ರಾಂಶುಪಾಲ ಬಾಲಕೃಷ್ಣ ಅಲಿವೆಲಿ, ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಬಿ. ರವಿಚಂದರ್, ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಅಜಯನ್, ಆಯೋಜಕ ಶ್ರೀಕಾಂತ್ ಭಾಗವಹಿಸಿದ್ದರು

‘ಮಹಿಳೆ ಏಕ ಶಿಲಾಫಲಕದ ರಚನೆ ಅಲ್ಲ’

‘ಟ್ರಾನ್ಸ್ ಫೆಮಿನಿಸ್ಟ್ ಕಲೆಕ್ಟಿವ್’ ಉದ್ಘಾಟನಾ ಕಾರ್ಯಕ್ರಮದಲ್ಲಿ ಮನೋರಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆ ಎಂದರೆ ಏಕಶಿಲಾ ಫಲಕದ ರಚನೆ ಅಲ್ಲ. ಅದರಲ್ಲಿ ಮುಸ್ಲಿಂ, ದಲಿತ, ಧಾರ್ಮಿಕ, ಭಾಷಾ ಅಲ್ಪಸಂಖ್ಯಾತ, ದಮನಿತ ಸಮುದಾಯದವರು ಸೇರಿದಂತೆ ಭಿನ್ನ ವಾತಾವರಣದ, ಭಿನ್ನ ಅನುಭವದ, ಭಿನ್ನ ಸ್ತರದ ಮಹಿಳೆಯರು ಇದ್ದಾರೆ’ ಎಂದು ದಲಿತ ಮಹಿಳೆಯರ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷೆ ರುತ್ ಮನೋರಮಾ ಹೇಳಿದರು.

ಅಂತರರಾಷ್ಟ್ರೀಯ ಸಮಲೈಂಗಿಕತೆ, ದ್ವಿಲೈಂಗಿಕತೆ ಮತ್ತು ಟ್ರಾನ್ಸ್‌ಫೋಬಿಯಾ ವಿರೋಧಿ ದಿನದ ಅಂಗವಾಗಿ ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಮಹಿಳಾ ಹೋರಾಟಗಾರ್ತಿಯರು ಸೇರಿ ಸ್ತ್ರೀವಾದಿ ದೃಷ್ಟಿಕೋನದಿಂದ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಹೋರಾಟ, ಸಂಘಟನೆ, ಇತಿಹಾಸವನ್ನು ನೋಡುವ ಉದ್ದೇಶದಿಂದ ಭಾನುವಾರ ನಗರದಲ್ಲಿ ಆಯೋಜಿಸಿದ್ದ ‘ಟ್ರಾನ್ಸ್ ಫೆಮಿನಿಸ್ಟ್ ಕಲೆಕ್ಟಿವ್’ ಉದ್ಘಾಟನಾ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.

ಲಿಂಗತ್ವ ಅಲ್ಪಸಂಖ್ಯಾತರು ಸ್ತ್ರೀವಾದದ ತಳಹದಿಯಲ್ಲಿ ಒಗ್ಗಟ್ಟಾಗಬೇಕು ಎನ್ನುವ ದೃಷ್ಟಿಕೋನ ಇಟ್ಟುಕೊಂಡು ಈ ವೇದಿಕೆ ಆರಂಭವಾಗಿದೆ. ಈ ಎಲ್ಲ ಮಹಿಳೆಯರ ಹಕ್ಕೊತ್ತಾಯಗಳು ವಿಶಾಲ ಮಹಿಳಾ ಚಳವಳಿ ಮೂಲಕ ಹೊಸ ಜೀವ ಪಡೆದುಕೊಳ್ಳಬೇಕು. ಪ್ರಸ್ತುತದ ಹಲವು ಸವಾಲುಗಳನ್ನು ಚಳವಳಿ ತೆಗೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ‘ಟ್ರಾನ್ಸ್ ಫೆಮಿನಿಸ್ಟ್ ಕಲೆಕ್ಟಿವ್’ ಕೆಲಸ ಮಾಡಬೇಕು ಎಂದು ಆಶಿಸಿದರು.

ಮಹಿಳಾ ಪರ ಹೋರಾಟಗಾರ್ತಿ ಮಲ್ಲಿಗೆ ಸಿರಿಮನೆ ಮಾತನಾಡಿ, ‘ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಗಳಿಗೆ ಅನೇಕ ಸವಾಲುಗಳಿವೆ. ಅವುಗಳನ್ನು ಸಮುದಾಯ ಆಗಿಂದಾಗಲೇ ಅಲ್ಲಲ್ಲೇ ಎದುರುಗೊಂಡು ಉತ್ತರ ನೀಡುತ್ತಿದೆ. ತನ್ನ ಅಸ್ತಿತ್ವ, ಘನತೆಗೋಸ್ಕರ, ಸಂವಿಧಾನ ಕೊಟ್ಟಿರುವ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಲೇ ಬಂದಿದೆ. ಈ ಸಮುದಾಯಕ್ಕೆ ಮುಂದೆ ಕೂಡ ಅನೇಕ ಸಮಸ್ಯೆಗಳು ಎದುರಾಗಲಿವೆ. ಲಿಂಗತ್ವ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಚರ್ಚೆಗಳು ಮುಖ್ಯವಾಹಿನಿಯಲ್ಲಿ ನಡೆಯುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಇತ್ತೀಚೆಗೆ ಕೇಂದ್ರ ಸರ್ಕಾರ ಜಾರಿ ಮಾಡಿರುವ ಟ್ರಾನ್ಸ್‌ಜೆಂಡರ್ ಕಾಯ್ದೆಗೆ ಸಂಬಂಧಪಟ್ಟಂತೆ ಹಾಗೂ ದೀರ್ಘಕಾಲದಲ್ಲಿ ಶೋಷಣೆಗೆ ಒಳಗಾಗಿರುವ ಎಲ್ಲ ಬಗೆಯ ಲಿಂಗತ್ವದ ವ್ಯಕ್ತಿಗಳು, ಅತ್ಯಂತ ಶೋಷಣೆಗೆ ಒಳಗಾಗಿರುವ ದಲಿತ, ಮುಸ್ಲಿಂ, ಆದಿವಾಸಿ, ಲಿಂಗತ್ವ ಮತ್ತು ಅಲ್ಪಸಂಖ್ಯಾತ ಮಹಿಳೆಯರು ಸೇರಿದಂತೆ ಎಲ್ಲರನ್ನು ಹೇಗೆ ಬೆಸೆಯಬೇಕು ಎನ್ನುವುದರ ಕುರಿತು ಚರ್ಚೆ, ಸಂವಾದಗಳು ವಿವಿಧ ಗೋಷ್ಠಿಗಳಲ್ಲಿ ನಡೆದವು.

ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟಗಾರ್ತಿಯರಾದ ಅಕ್ಕೈ ಪದ್ಮಶಾಲಿ, ಎ.ಸೌಮ್ಯಾ, ಉಮಾ, ಚಾಂದಿನಿ, ಕ್ರಿಸ್ಸಿ, ರಕ್ಷಿತಾ, ಮಹಿಳಾ ಪರ ಹೋರಾಟಗಾರ್ತಿಯರಾದ ಮಧು ಭೂಷಣ್, ಶಕುನ್, ರೇವತಿ, ಕೌದಿ ಪ್ರಕಾಶನದ ಮಮತಾ, ವಕೀಲೆ ಮನೋರಂಜನಿ ಭಾಗವಹಿಸಿದ್ದರು.

ಮುಖ್ಯಾಂಶ

- ಅಂತರರಾಷ್ಟ್ರೀಯ ಸಮಲೈಂಗಿಕತೆ, ದ್ವಿಲೈಂಗಿಕತೆ ಮತ್ತು ಟ್ರಾನ್ಸ್‌ಫೋಬಿಯಾ ವಿರೋಧಿ ದಿನ



‘ಟ್ರಾನ್ಸ್ ಫೆಮಿನಿಸ್ಟ್ ಕಲೆಕ್ಟಿವ್’ ಉದ್ಘಾಟನಾ ಕಾರ್ಯಕ್ರಮದಲ್ಲಿ ಎ. ಸೌಮ್ಯಾ, ರುತ್ ಮನೋರಮಾ, ಅಕ್ಕೈ ಪದ್ಮಶಾಲಿ ಪೋಸ್ಟರ್ ಬಿಡುಗಡೆ ಮಾಡಿದರು

‘ಎಫ್‌ಡಿಐ ಇಳಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದೇಶಿ ನೇರ ಬಂಡವಾಳ ಹೂಡಿಕೆ ಗಮನಾರ್ಹವಾಗಿ ಕಡಿಮೆಯಾಗಿದೆ. ಜಾಗತಿಕ ಹೂಡಿಕೆದಾರರು ಭಾರತವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಅಗತ್ಯ ಪ್ರಮಾಣದಲ್ಲಿ ಬಂಡವಾಳ ತೊಡಗಿಸುತ್ತಿಲ್ಲ’ ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ.ಅನಂತ ನಾಗೇಶ್ವರನ್ ಹೇಳಿದರು.

ಶನಿವಾರ ಇಲ್ಲಿ ನಡೆದ ‘ಪ್ಯಾನ್ ಐಐಟಿ ಹಳೆಯ ವಿದ್ಯಾರ್ಥಿಗಳ ಸಮಾವೇಶ 2026’ ಉದ್ಘಾಟನಾ ಸಮಾರಂಭದಲ್ಲಿ ನೀತಿ ನಿರೂಪಕರು, ತಂತ್ರಜ್ಞರು, ಉದ್ಯಮಿಗಳು, ಹೂಡಿಕೆದಾರರು ಮತ್ತು ಕೈಗಾರಿಕೋದ್ಯಮಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಭಾರತಕ್ಕೆ ಪ್ರತಿವರ್ಷ ಕನಿಷ್ಠ ಎಂಟು ಮಿಲಿಯನ್ (80 ಲಕ್ಷ) ಹೊಸ ಉದ್ಯೋಗಗಳು ಅಥವಾ ಜೀವನೋಪಾಯ ಅವಕಾಶಗಳು ಅಗತ್ಯವಾಗಿವೆ ಎಂದು ಅಭಿಪ್ರಾಯಪಟ್ಟರು.

ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಮಾತನಾಡಿದರು.

ಸಮಾವೇಶವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಉದ್ಘಾಟಿಸಿದರು. ಪ್ಯಾನ್ ಐಐಟಿ ಅಲುಮ್ನಿ ಇಂಡಿಯಾದ ಅಧ್ಯಕ್ಷ ಪ್ರಭಾತ್ ಕುಮಾರ್ ಮಾತನಾಡಿದರು.

ರಾಜಕಾರಣಿಗಳಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ ಕಿವಿಮಾತು

‘ಅಧಿಕಾರ ಜನಹಿತಕ್ಕಾಗಿಯೇ ಹೊರತು ಸ್ವಹಿತಕ್ಕಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಚಾಯಿತಿಯಿಂದ ಸಂಸತ್ತಿನವರೆಗೆ ಚುನಾಯಿತರಾದ ಜನಪ್ರತಿನಿಧಿಗಳು, ತಮಗೆ ಸಿಕ್ಕ ಅಧಿಕಾರವು ಜನಹಿತಕ್ಕಾಗಿಯೇ ಹೊರತು ಸ್ವಹಿತಕ್ಕಲ್ಲ ಎನ್ನುವುದನ್ನು ಅರಿತಿರಬೇಕು’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ ಕಿವಿಮಾತು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಮ್ಮಿಕೊಂಡಿದ್ದ ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ ದತ್ತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಜನಮತದಿಂದ ಅಧಿಕಾರ ಪಡೆದ ರಾಜಕಾರಣಿಗಳು ತಮ್ಮ ಕುರ್ಚಿಯನ್ನು ದರ್ಪಕ್ಕಾಗಿ ಬಳಸಿಕೊಳ್ಳದೆ, ಸೇವೆಗೆ ಉಪಯೋಗಿಸಿಕೊಳ್ಳಬೇಕು. ಸರ್ಕಾರವೊಂದು ಕೈಗೊಳ್ಳುವ ಆಡಳಿತಾತ್ಮಕ ತೀರ್ಮಾನಗಳು ನಾಗರಿಕರ ಮೇಲೆ ಪರಿಣಾಮ ಬೀರಲಿವೆ. ಆದ್ದರಿಂದ ರಾಜಕೀಯ ಕ್ಷೇತ್ರದಲ್ಲಿರುವವರು ಪ್ರಾಮಾಣಿಕ, ಸರಳ ಹಾಗೂ ಜನಪರವಾಗಿರಬೇಕು. ಸಾಂವಿಧಾನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವ ಜನರು ಒಳ್ಳೆಯ ಚರಿತ್ರೆ ಹೊಂದಿರಬೇಕು. ಅಂತಹವರು ಸಿಗುವವರೆಗೂ ಸಂವಿಧಾನದ ಆಶಯಗಳು ಪರಿಣಾಮಕಾರಿಯಾಗಿ ಜಾರಿಯಾಗುವುದಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ಒಬ್ಬ ವ್ಯಕ್ತಿ ಎಷ್ಟು ದಿನ ಅಧಿಕಾರದಲ್ಲಿ ಇರುತ್ತಾನೆ ಎನ್ನುವುದು ಮುಖ್ಯವಲ್ಲ. ಬದಲಾಗಿ, ಅಧಿಕಾರದಲ್ಲಿ ಇದ್ದಾಗ ಆತ ಏನು ಮಾಡಿದ ಎನ್ನುವುದು ಮುಖ್ಯ. ಕಡಿದಾಳ್ ಮಂಜಪ್ಪ ಅವರು ಮುಖ್ಯಮಂತ್ರಿಯಾಗಿ, ಕಂದಾಯ ಸಚಿವರಾಗಿ ರೈತಪರ ಕಾಳಜಿಯಿಂದ ಕೆಲಸ ಮಾಡಿದ್ದರು. ಅವರು ಗಾಂಧಿ ವಿಚಾರಧಾರೆಯನ್ನು ಜೀವನದಲ್ಲಿ ಅಳವಡಿಸಿಕೊಂಡು, ಪ್ರಾಮಾಣಿಕತೆ, ಸರಳತೆ ಹಾಗೂ ನೈತಿಕತೆಯನ್ನು ಜೀವಂತವಾಗಿಟ್ಟುಕೊಂಡಿದ್ದರು. ಅಂತಹವರು ರಾಜಕೀಯ ಕ್ಷೇತ್ರದಲ್ಲಿ ಕಾಣಸಿಗುವುದು ವಿರಳ’ ಎಂದರು.

ದತ್ತಿ ಉಪನ್ಯಾಸ ನೀಡಿದ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ‘35 ವರ್ಷಗಳಿಂದ ಚುನಾವಣೆಗೆ ಸ್ಪರ್ಧಿಸಿದವರಲ್ಲಿ, ನನ್ನನ್ನು ಸೇರಿ ಯಾರೂ ಕೂಡ ಪ್ರಾಮಾಣಿಕರಾಗಿರಲು ಸಾಧ್ಯವಿಲ್ಲ. ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳು ಖರ್ಚು ಮಾಡುವ ಹಣ ಚುನಾವಣಾ ಆಯೋಗ ನಿಗದಿ ಮಾಡಿದ ಹಣಕ್ಕಿಂತ ಜಾಸ್ತಿಯೇ ಇರುತ್ತದೆ. ಆದರೆ, ಪ್ರಮಾಣಪತ್ರ ಸಲ್ಲಿಸುವಾಗ ಕಡಿಮೆ ಖರ್ಚಿನ ಲೆಕ್ಕ ನೀಡುತ್ತೇವೆ. ಆದ್ದರಿಂದ ರಾಜಕಾರಣಿಗಳು ಪ್ರಾಮಾಣಿಕರಾಗಿರಲು ಸಾಧ್ಯವಿಲ್ಲ. ಪ್ರಾಮಾಣಿಕತೆ ಹಾಗೂ ಭ್ರಷ್ಟಾಚಾರಕ್ಕೆ ದೊಡ್ಡ ವ್ಯತ್ಯಾಸವಿದೆ’ ಎಂದು ಹೇಳಿದರು.

ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆಯ ಉಪಾಧ್ಯಕ್ಷ ಡಿ.ಆರ್. ಪಾಟೀಲ, ‘ಈಗ ಕಡಿದಾಳ್ ಮಂಜಪ್ಪ ಅಂತಹ ನಾಯಕರ ಕೊರತೆಯಿದೆ. ರಾಜಕೀಯ ಕ್ಷೇತ್ರ ಬಹಳ ಕೆಳಗೆ ಹೋಗಿದೆ. ಎಲ್ಲ ನಾಯಕರು ವಿಫಲರಾದಾಗ ಸಮಾಜವೇ ರೊಚ್ಚಿಗೆದ್ದು ಬದಲಾವಣೆ ತರುವ ಕಾಲ ಬರುತ್ತದೆ. ಮುಂಬರುವ ವ್ಯವಸ್ಥೆಯಲ್ಲಿ ಕಡಿದಾಳ್ ಮಂಜಪ್ಪ ಅಂತಹವರು ಉದಯಿಸುತ್ತಾರೆಂಬ ವಿಶ್ವಾಸವಿದೆ’ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕಾರ್ಯಕ್ರಮಗಳ ನಿರ್ದೇಶಕ ಜಿ.ಬಿ. ಶಿವರಾಜು, ‘ಕಡಿದಾಳ್ ಮಂಜಪ್ಪ ಅವರ ವ್ಯಕ್ತಿತ್ವವನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕು. ಅವರ ಸಮಾಧಿ ಸ್ಥಳವನ್ನು ಯಾತ್ರಾಸ್ಥಳವನ್ನಾಗಿ ಅಭಿವೃದ್ಧಿಪಡಿಸಬೇಕು. ಅವರು ವಾಸವಿದ್ದ ಮನೆ ಒಂದೆರಡು ವರ್ಷದಲ್ಲಿ ಬೀಳುವ ಸಾಧ್ಯತೆಯಿದ್ದು, ಕವಿಶೈಲ ಮಾದರಿಯಲ್ಲಿ ಉಳಿಸಿಕೊಳ್ಳಬೇಕು’ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



ಕಾರ್ಯಕ್ರಮದಲ್ಲಿ ಎಚ್.ಬಿ. ದಿನೇಶ್, ಡಿ.ಆರ್. ಪಾಟೀಲ, ಬಿ.ಎಲ್. ಶಂಕರ್, ಶಿವರಾಜ್ ವಿ. ಪಾಟೀಲ, ಎಚ್ ಶರತ್‌ಚಂದ್ರ, ಎಂ.ಸಿ. ನರೇಂದ್ರ ಮತ್ತು ವೂಡೇ ಪಿ. ಕೃಷ್ಣ ಅವರು ಕಡಿದಾಳ್ ಮಂಜಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು
ಪ್ರಜಾವಾಣಿ ಚಿತ್ರ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಸಾರಿಗೆ ಮೂರು ವರ್ಷಗಳ ಪ್ರಗತಿಯ ಪಯಣ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಹೊಸ ಬಸ್ಸುಗಳ ಸೇರ್ಪಡೆ

7800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ | ಈಗಾಗಲೇ **5998** ಬಸ್ಸುಗಳ ಸೇರ್ಪಡೆ (ಕರಾರಸಾನಿ-**1286** (EV ಬಸ್ - **50**), ಬಿಎಂಟಿಸಿ-**2329** (EV ಬಸ್ - **1730**), ವಾಕರಸಾಸಂ-**1210**, ಕಕರಸಾನಿ-**1173**)



ಶಕ್ತಿ ಗ್ಯಾರಂಟಿ
ಮಹಿಳಾ ಸಬಲೀಕರಣದತ್ತ ಪಯಣ
740 ಕೋಟಿ
ಉಚಿತ ಟಿಕೆಟ್‌ಗಳು
ರೂ. 19349.26 ಕೋಟಿ ಮೌಲ್ಯ

ಪ್ರಾಜೆಕ್ಟ್ ಮೆಜೆಸ್ಟಿಕ್

ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ **'ಸಾರಿಗೆ ಹಬ್'** ನಿರ್ಮಾಣಕ್ಕೆ ಕಾರ್ಯ ಯೋಜನೆ ರೂಪಿಸಲಾಗಿದೆ

ವೇತನ ಪರಿಷ್ಕರಣೆ

1.05 ಲಕ್ಷ ನೌಕರರಿಗೆ ಶೇ. **12.5** ರಷ್ಟು ವೇತನ ಹೆಚ್ಚಳ | ನಾಲ್ಕು ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳು **ರೂ. 72.80** ಕೋಟಿ, ಪ್ರತಿ ವರ್ಷ **ರೂ. 873.64** ಕೋಟಿ ಹೆಚ್ಚುವರಿ ವೆಚ್ಚ

ಮಾರ್ಚ್ 2023 ರ ವೇತನ ಹೆಚ್ಚಳ ಹಿಂಬಾಕಿ

ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತ **ರೂ. 1271.92** ಕೋಟಿ ಪಾವತಿಗೆ ಅನುಮೋದನೆ ಮೊದಲ ಕಂತಿನ ಹಣ **ರೂ. 450** ಕೋಟಿ ಬಿಡುಗಡೆ

ಕೆ ಎಸ್ ಆರ್ ಟಿ ಸಿ ಆರೋಗ್ಯ

280ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳಿಗೆ ಹಾಗೂ ಅವಲಂಬಿತರಿಗೆ ಚಿಕಿತ್ಸೆ | ಇಲ್ಲಿಯವರೆಗೆ ಒಟ್ಟು **1,86,973** ಕ್ಲೇಮುಗಳು | **ರೂ. 55.02** ಕೋಟಿ ಪಾವತಿ | ವೈದ್ಯಕೀಯ ಮರುಪಾವತಿ ವೆಚ್ಚ ವಾರ್ಷಿಕ **ರೂ.16** ಕೋಟಿ

ಸಾರಿಗೆ ಸುರಕ್ಷಾ / ಕುಟುಂಬ ಕಲ್ಯಾಣ ವಿಮಾ ಯೋಜನೆ

ಅಪಘಾತದಲ್ಲಿ (ಆನ್ ಡ್ಯೂಟಿ / ಆಫ್ ಡ್ಯೂಟಿ) ಮೃತಪಟ್ಟ ಸಿಬ್ಬಂದಿಯ ಅವಲಂಬಿತರಿಗೆ **ರೂ.1** ಕೋಟಿ / **ರೂ. 50** ಲಕ್ಷ / **ರೂ. 30** ಲಕ್ಷದಂತೆ **ರೂ. 66.50** ಕೋಟಿ ಪಾವತಿ, ಅಪಘಾತ ಹೊರತು ಪಡಿಸಿ ಮೃತಪಟ್ಟ ಸಿಬ್ಬಂದಿಗಳ ಕುಟುಂಬಕ್ಕೆ **ರೂ. 3** ಲಕ್ಷದಿಂದ **ರೂ. 14** ಲಕ್ಷದವರೆಗೆ ಹೆಚ್ಚಳ, ಒಟ್ಟು **ರೂ. 93.28** ಕೋಟಿ ಪಾವತಿ

ಸಾರಿಗೆ ಮಿತ್ರ (HRMS 2.0)

ನೌಕರರ ರಜೆ ಹಾಗೂ ಹಾಜರಾತಿಯಲ್ಲಿ ಪಾರದರ್ಶಕತೆ / ಏಕರೂಪತೆ, ಸಮಗ್ರ ಸೇವಾ ದಾಖಲಾತಿ, ಭವಿಷ್ಯ ನಿಧಿ ಮಾಹಿತಿ

ಡಿಜಿಟಲ್ ಉಪಕ್ರಮಗಳು

ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ ಅವತಾರ್ 4.0 | ಶೇ. **52** ರಷ್ಟು UPI ಬಳಕೆ | ಇನ್ವೆಂಟರಿ ಮ್ಯಾನೇಜ್‌ಮೆಂಟ್ (ಇ-ಉಗ್ರಾಣ) | 'ನಮ್ಮ ಬಿಎಂಟಿಸಿ' ಮೊಬೈಲ್ ಅಪ್ಲಿಕೇಶನ್ | ಲ್ಯಾಂಡ್‌ಬೀಟ್ ಆಪ್ | ಇ-ವಾಣಿಜ್ಯ | ವಾಯುವ್ಯ ಸ್ನೇಹಿ | ನಮ್ಮ ಕಲಬುರಗಿ | ಅಪಘಾತ ನಿರ್ವಹಣಾ ತಂತ್ರಾಂಶ | ಇ-ಮಳಿಗೆ | ನ್ಯಾಯ ಪಥ



ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳು

1997-2026	ಮೇ 2023 - ಮೇ 2026
694	**245**

ಶಕ್ತಿ ಯೋಜನೆಯಡಿಯಲ್ಲಿ ಮಹಿಳಾ ಪ್ರಯಾಣಿಕರ ಪ್ರಯಾಣವು ವಿಶ್ವದಾಖಲೆಗಳಲ್ಲಿ ಸೇರ್ಪಡೆ

ಹೊಸ ನೇಮಕಾತಿ

10497 ಹುದ್ದೆಗಳ ನೇಮಕಾತಿ | **9000** ಹೊಸ ನೇಮಕಾತಿ | **1497** ಅನುಕಂಪದ ನೇಮಕಾತಿ ಪೂರ್ಣ

ಬಸ್ಸುಗಳ ಪುನಃಶ್ಚೇತನ ಕಾರ್ಯ

2109 ಬಸ್ಸುಗಳ ಪುನಃಶ್ಚೇತನ ಕಾರ್ಯ

ಬಸ್ ಟ್ರಿಪ್‌ಗಳು

ಪ್ರತಿದಿನದ ಬಸ್ ಟ್ರಿಪ್‌ಗಳ ಸಂಖ್ಯೆ **154955** ರಿಂದ **186506**ಕ್ಕೆ ಹೆಚ್ಚಳ

ಧ್ವನಿ ಸ್ಪಂದನ

ದೃಷ್ಟಿ ವಿಶೇಷ ಚೇತನ ಪ್ರಯಾಣಿಕ ಸ್ನೇಹಿ ಉಪಕ್ರಮ

ತರಬೇತಿ

ಸಂಸ್ಥೆಗಳಲ್ಲಿ ಪರಿಣಾಮಕಾರಿ ತರಬೇತಿ ಕಾರ್ಯಯೋಜನೆ ರೂಪಿಸಿದ್ದು, ಒಂದು ವರ್ಷದ ಅವಧಿಯಲ್ಲಿ **33482** ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ



ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರಾದ **ಶ್ರೀ ರಾಮಲಿಂಗಾ ರೆಡ್ಡಿ** ಅವರು ನೂತನವಾಗಿ ನೇಮಕಗೊಂಡ ಚಾಲನಾ ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡಿದರು

ಮೂಲಸೌಕರ್ಯ ಅಭಿವೃದ್ಧಿ ಕಾರ್ಯ

ಮೈಸೂರು ನಗರದಲ್ಲಿ **ರೂ.120** ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ | ಬೆಳಗಾವಿ, ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಬಸ್ ನಿಲ್ದಾಣ ನಿರ್ಮಾಣ | ರಾಜ್ಯಾದ್ಯಂತ **31** ಬಸ್ ನಿಲ್ದಾಣಗಳು | **12** ಬಸ್ ಘಟಕಗಳು | **12** ಸ್ಥಳ/ಘಟಕಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳು | **10** ಸಿಬ್ಬಂದಿ ವಸತಿ ಗೃಹಗಳು ಮತ್ತು **02** ತರಬೇತಿ ಕೇಂದ್ರಗಳ ನಿರ್ಮಾಣ / ಮೇಲ್ದರ್ಜೆಗೇರಿಸಲಾಗಿದೆ | **ಸ್ಮಾರ್ಟ್ ಸಿಟಿ ಯೋಜನೆ**ಯಡಿ ಬೆಳಗಾವಿ, ತುಮಕೂರು (ಮೊದಲ ಹಂತ), ದಾವಣಗೆರೆ ಮತ್ತು ಬೇತೂರು ರಸ್ತೆ ಬಸ್ ನಿಲ್ದಾಣಗಳ ಮರುನಿರ್ಮಾಣ

ಬಸ್ಸುಗಳ ಬ್ರಾಂಡಿಂಗ್

ಅಶ್ವಮೇಧ | ಪಲ್ಲಕ್ಕಿ | ಅಂಬಾರಿ ಉತ್ಸವ | ಕಲ್ಯಾಣ ರಥ | ಐರಾವತ ಕ್ಲಬ್ ಕ್ಲಾಸ್ 2.0 | ಅಮೋಘವರ್ಷ | ರಾಜ ರಥ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

18,758 ಸಿಬ್ಬಂದಿಗಳಿಗೆ ಹೃದಯ ತಪಾಸಣೆ, **10** ಸಿಬ್ಬಂದಿಗಳಿಗೆ ತೆರೆದ ಹೃದಯ ಚಿಕಿತ್ಸೆ ಹಾಗೂ **42** ಸಿಬ್ಬಂದಿಗಳಿಗೆ ಸ್ಟಂಟ್ ಅಳವಡಿಕೆ, ವೆಚ್ಚ **ರೂ. 50.56** ಲಕ್ಷ ಪಾವತಿ

ಸಾರಿಗೆ ವಿದ್ಯಾ ಚೇತನ / ವಿದ್ಯಾ ಸ್ಫೂರ್ತಿ

ಸಿಬ್ಬಂದಿಗಳ ಮಕ್ಕಳಿಗೆ ಅತ್ಯಧಿಕ ಮೊತ್ತದ ವಿದ್ಯಾರ್ಥಿ ವೇತನ ಹೆಚ್ಚಳ ಹಾಗೂ ಇಲ್ಲಿಯವರೆಗೆ **ರೂ. 4.25** ಕೋಟಿ ಪಾವತಿ

ಮೊಬೈಲ್ ಕಾರ್ಯಾಗಾರ/ ಮೆಟ್ರೋ ಫೀಡರ್ ವ್ಯವಸ್ಥೆ

ಅಪಘಾತ ತುರ್ತು ಸ್ಪಂದನ ವಾಹನ | ಸಂಚಾರಿ ಕಾರ್ಯಾಗಾರ ನಿಯೋಜನೆ | **241** ಮೆಟ್ರೋ ಫೀಡರ್ ಬಸ್ಸುಗಳು | **12** ಪ್ಯಾಕೇಜ್ ಟೂರ್ | **142** ಎಕ್ಸ್ ಪ್ರೆಸ್ | **33** ನೈಸ್ ರಸ್ತೆಗಳ ಸೇವೆಗಳು | **10292** ಪ್ರತಿ ದಿನ ಹೆಚ್ಚುವರಿ ಟ್ರಿಪ್‌ಗಳು

ವರದಕ್ಷಿಣೆ ನಿಷೇಧ: ತಾಂಡಾಗಳ ನಿರ್ಣಯ

ಚಿಂಚೋಳಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಯಾವುದೇ ತಾಂಡಾದಲ್ಲಿ ವರದಕ್ಷಿಣೆ ಕೊಡುವುದು ಅಥವಾ ಪಡೆಯುವುದನ್ನು ನಿಷೇಧಿಸಿ, ಪಾಲ್ತ್ಯಾ ತಾಂಡಾದ ಡಾ.ರಾಮರಾವ್ ಮಹಾರಾಜ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ 'ಬಂಜಾರಾ ಮಹಾ ಪಂಚಾಯತ್'ನಲ್ಲಿ ನಿರ್ಣಯ ತೆಗೆದು ಕೊಳ್ಳಲಾಗಿದೆ.

ಸಲಗರ ಬಸಂತಪುರದ ಆದಿ ಲಕ್ಷ್ಮಿ ಪೀಠದ ರಾಜು ಮಹಾರಾಜರ ಸಾನ್ನಿಧ್ಯದಲ್ಲಿ ನಡೆದ ಮಹಾ ಪಂಚಾಯತ್‌ನಲ್ಲಿ, 'ವಧು ಮತ್ತು ವರನ ಕುಟುಂಬದವರಿಂದ ಮಹಾ ಪಂಚಾಯತ್‌ನ ನಿರ್ಣಯಕ್ಕೆ ಬದ್ಧವಿರುವ ಕುರಿತು ಮುಚ್ಚಳಿಕೆ ಪತ್ರ ಬರೆದುಕೊಡುವ ಷರತ್ತು ಮತ್ತು ಯಾರಾದರೂ ಉಲ್ಲಂಘಿಸಿದರೆ ಅಂತಹವರನ್ನು ತಾಂಡಾದಿಂದ ಬಹಿಷ್ಕರಿಸುವ' ಕುರಿತು ನಿರ್ಣಯ ಕೈಗೊಳ್ಳಲಾಗಿದೆ.

ಕಾಣಿಕೆಯಾಗಿ ಅರ್ಧ ತೊಲ ಬಂಗಾರ ನೀಡಲು ಪಂಚಾಯತ್ ಒಪ್ಪಿಗೆ ಸೂಚಿಸಿದೆ. ಆದರೆ, ಕೊಡಲೇಬೇಕೆಂಬ ಕಟ್ಟಪ್ಪಣೆಯಿಲ್ಲ. ನಗದು, ಕಾರು, ಜೀಪು, ಬೈಕ್ ನೀಡುವುದು ನಿಷೇಧಿಸಿದೆ. ಇದನ್ನು ಉಲ್ಲಂಘಿಸಿದರೆ ತಾಂಡಾದಿಂದ ಬಹಿಷ್ಕರಿಸಲು ಠರಾವು ಪಾಸ್ ಮಾಡಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮು.ಪ್ರವ್ಯ(ತಾ)/ಉ.ಪ್ರವ್ಯ(ಪ್ರೊ & ಎಪಿಸಿಸಿ)/ಕಾನಿಇಂ-4/ಸ.ಇ1/26-27/894-909 ದಿನಾಂಕ: 16.05.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ/ಕಾಮಗಾರಿಯ ವಿವರ
ಕವಿಪ್ರನಿನಿ/2026-27/ಎಸ್‌ಎಸ್/ವರ್ಕ್_ಇಂಡೆಂಟ್3727
ಕಾಮಗಾರಿ-ಎ: ಬೆಂಗಳೂರು ಜಿಲ್ಲೆ, ದಕ್ಷಿಣ ತಾಲ್ಲೂಕಿನ **220/66ಕೆವಿ ಹೆಚ್‌ಎಸ್‌ಆರ್ ಲೇಔಟ್** ಉಪ ಕೇಂದ್ರದಲ್ಲಿ 1X100ಎಂವಿಎ, 220/66/11ಕೆವಿ ವಿದ್ಯುತ್ ಪರಿವರ್ತಕವನ್ನು 1X150ಎಂವಿಎ, 220/66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಬಿ:** ಬೆಂಗಳೂರು ಜಿಲ್ಲೆ, ಉತ್ತರ ತಾಲ್ಲೂಕಿನ **220/66ಕೆವಿ ಪೀಣ್ಯ** ಉಪ ಕೇಂದ್ರದಲ್ಲಿ 1X67.5 ಎಂವಿಎ, 220/66/11ಕೆವಿ ವಿದ್ಯುತ್ ಪರಿವರ್ತಕವನ್ನು 1X150ಎಂವಿಎ, 220/66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಎಲ್ಲಾ ಉಪಕರಣಗಳು / ಸಾಮಗ್ರಿಗಳ ಹಾಗೂ ಮ್ಯಾಂಡೇಟರಿ ಸ್ಪೇರ್‌ಗಳ ಸರಬರಾಜು ಮತ್ತು ಎಲ್ಲಾ ಉಪಕರಣಗಳು / ಸಾಮಗ್ರಿಗಳ ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.
ಕವಿಪ್ರನಿನಿ/2026-27/ಎಸ್‌ಎಸ್/ವರ್ಕ್_ಇಂಡೆಂಟ್3732
1. ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿರುವ **220/110/11ಕೆವಿ ಉಪ-ಕೇಂದ್ರ ಅಹೇರಿಯಲ್ಲಿ** ಬ್ಯಾಟರಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ. 2. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು ಅಸ್ತಿತ್ವದಲ್ಲಿರುವ **400/220ಕೆವಿ ಗುಟ್ಟೂರು** ಸ್ವೀಕರಿಸುವ ಕೇಂದ್ರದಲ್ಲಿ 220ಕೆವಿ ಟರ್ಮಿನಲ್ ಬೇ ನಿರ್ಮಾಣ. 3. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ **220/66/11ಕೆವಿ ಮಧುವನಹಳ್ಳಿ** ಉಪ-ಕೇಂದ್ರದಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ. 4. ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನಲ್ಲಿರುವ **220ಕೆವಿ ಹುಮನಾಬಾದ್** ಉಪ-ಕೇಂದ್ರದಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ. 5. ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿರುವ **220ಕೆವಿ ಶಹಾಪುರ** ಉಪ-ಕೇಂದ್ರದಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ. 6. ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿರುವ **220ಕೆವಿ ಮಲ್ಲತ್** ಉಪ-ಕೇಂದ್ರದಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **18.05.2026** ರಂದು ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **02.06.2026 @ 15.00 ಗಂಟೆ**. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ನಿಗಮ ಕಛೇರಿ, ಕ.ವಿ.ಪ್ರ.ನಿ.ನಿ., 11ನೇ ಮಹಡಿ, ಇಂಧನ ಭವನ, ಆನಂದ ರಾವ್ ವೃತ್ತ, ಬೆಂಗಳೂರು-560009.

75-80 ಸ್ಥಾನ ಗೆಲುವು: ಎಚ್‌ಡಿಕೆ ವಿಶ್ವಾಸ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್ ಸಮಾವೇಶ

• ಈ ಕ್ಷೇತ್ರ ಪಕ್ಷದ ಭದ್ರಕೋಟೆ ಎಂದು ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಂದಿನ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ 75-80 ಸ್ಥಾನ ಗೆಲ್ಲಲಿದ್ದು, ನಮ್ಮನ್ನು ಟೀಕಿಸುವವರಿಗೆ ತಕ್ಕ ಉತ್ತರ ನೀಡಲಿದ್ದೇವೆ' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭಾನುವಾರ ಇಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿನ ಬೋಗಾದಿಯಲ್ಲಿ ನಡೆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 'ಜನರೊಂದಿಗೆ ಜನತಾದಳ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ನಾನಿದ್ದಾಗ ಜೆಡಿಎಸ್ 58 ಸೀಟು ಪಡೆದಿತ್ತು. ಈಗ 18 ಸ್ಥಾನಕ್ಕೆ ಇಳಿದಿದ್ದು, ಜೆಡಿಎಸ್ ಮುಗಿಸಿದ್ದೇವೆ ಎಂದು ಕೆಲವರು ಹೇಳುತ್ತಾರೆ. ಹಲವಾರು ಕುತಂತ್ರದ ರಾಜಕಾರಣದಿಂದ ನಾವು 18 ಸೀಟಿಗೆ ಇಳಿದಿರಬಹುದು. ಆದರೆ, ಮುಂಬರುವ ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದ ಮೂಲಕ ಪಕ್ಷಕ್ಕೆ ಪುನಶ್ಚೇತನ ನೀಡುತ್ತಿದ್ದೇವೆ' ಎಂದರು.

'ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್‌ನ ಭದ್ರಕೋಟೆ. 2028ರಲ್ಲೂ ನಾವೇ ಗೆಲ್ಲಲಿದ್ದೇವೆ. ಹಿಂದೆ ಇಲ್ಲಿ ಉಪ ಚುನಾವಣೆಯಲ್ಲಿ ಪಕ್ಷದ ನಾಯಕರು ಎಚ್ಚರ ವಹಿಸಿದ್ದರೆ ಈ ರಾಜ್ಯಕ್ಕೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ನಮ್ಮವರ ತಪ್ಪಿನಿಂದಲೇ ನಮಗೆ ಸೋಲಾಯಿತು' ಎಂದು ಬೇಸರ ವ್ಯಕ್ತಪಡಿಸಿದರು.

'ಈ ಕ್ಷೇತ್ರ ಜೆಡಿಎಸ್ ಭದ್ರಕೋಟೆ ಎಂದು ಮನವರಿಕೆ ಮಾಡಿಕೊಡಲು ಸಮಾವೇಶ ಮಾಡಿದ್ದೇವೆ, ಯಾರನ್ನೋ ವಿರೋಧಿಸಲು ಸಮಾವೇಶ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

ಏತಕ್ಕಾಗಿ ಸಮಾವೇಶ: 'ಇದೇ 19ರಂದು ತುಮಕೂರಿನಲ್ಲಿ ಕಾಂಗ್ರೆಸ್‌ನವರು ಸಾಧನಾ ಸಮಾವೇಶ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ 2 ವರ್ಷದಲ್ಲಿ 713 ಪೊಲೀಸರನ್ನು ಅಮಾನತು ಮಾಡಿದೆ ಎಂದು 'ಪ್ರಜಾವಾಣಿ'ಯಲ್ಲಿ ಸುದ್ದಿ ಓದಿದೆ. ಇಲವಾಲದಲ್ಲಿ ಚಿನ್ನದ ದರೋಡೆ ಮಾಡಿದ, ಪೊಲೀಸ್ ಕಚೇರಿಯಲ್ಲೇ ಅಸಭ್ಯ ವರ್ತನೆ ತೋರಿದ ಅಧಿಕಾರಿಯ ರಕ್ಷಣೆ ಮಾಡಿದೆ. ಇದನ್ನು ಹೇಳಲು ಸಮಾವೇಶ ಮಾಡುತ್ತಿದ್ದೀರಾ' ಎಂದು ವ್ಯಂಗ್ಯವಾಡಿದರು.

> **ಇಂಧನ ದರ ಏರಿಕೆಗೆ ಕೇಂದ್ರದ ಮೇಲೆ ಮುಗಿಬೀಳುತ್ತಿರುವ ಕಾಂಗ್ರೆಸ್ ನಾಯಕರು, 'ಗ್ಯಾರಂಟಿ'ಗಳಿಗಾಗಿ ವಿದ್ಯುತ್, ಬಸ್ ಪ್ರಯಾಣದರ, ಮದ್ಯದ ಬೆಲೆಯನ್ನು ಎಷ್ಟು ಏರಿಸಿದೆ ಎಂಬ ವಿವರ ಪ್ರಕಟಿಸಲಿ**
> **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಪೇಟ ಕಟ್ಟಿದ ಎಚ್‌ಡಿಕೆ: ಅಭಿಮಾನಿಗಳಿಂದ ತಲೆಗೆ ಪೇಟ ಕಟ್ಟಿಸಿಕೊಂಡ ಎಚ್‌ಡಿಕೆ, 'ಕುರುಬ ಸಮಾಜ ಯಾರೊಬ್ಬ ವ್ಯಕ್ತಿಗೆ ಸೀಮಿತವಲ್ಲ. ಆ ಸಮಾಜದ ಜನರೂ ಜೆಡಿಎಸ್ ಜೊತೆಗೆ ಇದ್ದಾರೆ. ಅವರ ಅಭಿಮಾನಕ್ಕೆ ಈ ಕಾರ್ಯಕ್ರಮವೇ ಸಾಕ್ಷಿ. ಹೀಗಾಗಿಯೇ ಪೇಟ ಕಟ್ಟಿಸಿಕೊಂಡಿದ್ದೇನೆ' ಎಂದರು.

ಪಕ್ಷದ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು, 'ಜಿಲ್ಲೆಯ ಎಲ್ಲ 11 ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲುವ ಶಪಥ ಮಾಡಬೇಕು. ಮುಂಬರುವ ಚುನಾವಣೆಯಲ್ಲಿ ಎನ್‌ಡಿಎ ಕೂಟ ಗೆಲ್ಲಲಿದ್ದು, ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಆಗಲೇ ತೀರ್ಮಾನಿಸಲಾಗುತ್ತದೆ' ಎಂದರು.

ರಾಜ್ಯ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್, ಕೋರ್ ಸಮಿತಿ ಅಧ್ಯಕ್ಷ ಕೃಷ್ಣ ರೆಡ್ಡಿ, ಶಾಸಕ ಜಿ.ಡಿ. ಹರೀಶ್ ಗೌಡ, ಮೇಲ್ಮನೆ ಸದಸ್ಯರಾದ ಸಿ.ಎನ್. ಮಂಜೇಗೌಡ, ಕೆ.ವಿವೇಕಾನಂದ, ಇತರೆ ಮುಖಂಡರಿದ್ದರು.



'ಜನರೊಂದಿಗೆ ಜನತಾದಳ' ಸಮಾವೇಶವನ್ನು ಎಚ್‌.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು. ಎಂ.ಅಶ್ವಿನ್‌ಕುಮಾರ್, ಜಿ.ಡಿ.ಹರೀಶ್ ಗೌಡ, ಸಾ.ರಾ.ಮಹೇಶ್, ಕೃಷ್ಣ ನಾಯಕ್, ನಿಖಿಲ್ ಕುಮಾರಸ್ವಾಮಿ, ಸಿ. ಎನ್. ಮಂಜೇಗೌಡ, ಎಸ್‌ಬಿಎಂ ಮಂಜು ಜೊತೆಗಿದ್ದರು —ಪ್ರಜಾವಾಣಿ ಚಿತ್ರ

ಶಾಸಕ ಜಿ.ಟಿ. ದೇವೇಗೌಡ ಗೈರು

ಸಮಾವೇಶಕ್ಕೆ ಕ್ಷೇತ್ರದ ಜೆಡಿಎಸ್ ಶಾಸಕರೂ ಆದ, ಜಿ.ಟಿ. ದೇವೇಗೌಡ ಗೈರಾಗಿದ್ದರು. ಕಾರ್ಯಕ್ರಮದ ಬ್ಯಾನರ್‌ಗಳಲ್ಲಿ ರಾಜ್ಯ- ಸ್ಥಳೀಯ ನಾಯಕರ ಚಿತ್ರಗಳಿದ್ದರೂ ಜಿಟಿಡಿ ಚಿತ್ರ ಇರಲಿಲ್ಲ. ಕಾರ್ಯಕ್ರಮದಲ್ಲು ಯಾರೂ ಅವರ ಹೆಸರು ಪ್ರಸ್ತಾಪಿಸಲಿಲ್ಲ.

ಎಚ್.ಡಿ. ಕುಮಾರಸ್ವಾಮಿ ಅವರು ಭಾಷಣದಲ್ಲಿ ಪರೋಕ್ಷವಾಗಿ, 'ಈ ಕ್ಷೇತ್ರದಲ್ಲಿ ಗೊಂದಲಕ್ಕೆ ಅವಕಾಶ ನೀಡೆವು. ಕಾರ್ಯಕರ್ತರ ಭಾವನೆಗೆ ಬೆಲೆ ಕೊಡುತ್ತೇವೆ. ಒತ್ತಡಗಳಿಗೂ ಮಣಿಯುವುದಿಲ್ಲ. ಕಾರ್ಯಕರ್ತರಿಗೆ ಆದ ಅಗೌರವ ಸರಿಪಡಿಸುತ್ತೇವೆ' ಎಂದರು.

'ಈ ಕ್ಷೇತ್ರದಲ್ಲಿ ಮೂರು ಚುನಾವಣೆಗಳಲ್ಲಿ ಸತತವಾಗಿ ಪಕ್ಷ ಗೆದ್ದಿದೆ. ಗೆಲುವು ಒಬ್ಬ ವ್ಯಕ್ತಿಯದ್ದಲ್ಲ, ಕಾರ್ಯಕರ್ತರದು. ಇದು ಎಂದಿಗೂ ಜೆಡಿಎಸ್ ಭದ್ರಕೋಟೆ. ಮುಂಬರುವ ಚುನಾವಣೆಯಲ್ಲೂ ಇದು ಜೆಡಿಎಸ್ ಪಾಲಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಬಟ್ಟೆ, ಪುಸ್ತಕ ಖರೀದಿಸಿದೆ



ನನ್ನ ತಂದೆ, ತಾಯಿ ಕೃಷಿಕರು. ಶಿಕ್ಷಣಕ್ಕೆ ಹಣಕಾಸಿನ ಅವಶ್ಯಕತೆ ಇತ್ತು. ಸಕಾಲದಲ್ಲಿ 'ಪ್ರಜಾವಾಣಿ'ಯಿಂದ ದೊರೆತ ಆರ್ಥಿಕ ನೆರವಿನಿಂದ ಬಟ್ಟೆ ಮತ್ತು 'ನೀಟ್' ಪರೀಕ್ಷೆ ತಯಾರಿಕೆಗೆ ಪುಸ್ತಕ ಖರೀದಿಸಿದೆ. ವೈದ್ಯಕೀಯ ಶಿಕ್ಷಣ ಪಡೆಯಬೇಕು ಎನ್ನುವುದು ನನ್ನ ಗುರಿ. ಆರ್ಥಿಕ ನೆರವಿನಿಂದ ನನ್ನಂಥವರಿಗೆ ಅನುಕೂಲವಾಗಲಿದೆ

ನಿರ್ಮಲಾ ಕೋಣಚಪ್ಪಳ್ಳಿ, ಅರಕೇರಾ, ರಾಯಚೂರು ಜಿಲ್ಲೆ

ನೀಟ್ ತಯಾರಿಗೆ ಪುಸ್ತಕ ಕೊಂಡೆ



'ಪ್ರಜಾವಾಣಿ' ನೀಡಿದ ಆರ್ಥಿಕ ನೆರವು ಬಡ ಪ್ರತಿಭಾವಂತ ಮಕ್ಕಳಿಗೆ ವಿದ್ಯಾಭ್ಯಾಸ ಮುಂದುವರಿಸಲು ಸಹಾಯಕವಾಗಿದೆ. ನೀಟ್‌ಗೆ ಸಂಬಂಧಿಸಿದ ಪುಸ್ತಕಗಳ ಖರೀದಿಗೆ ನೆರವು ಸಹಾಯವಾಯಿತು. ಮುಂದೆ ಉತ್ತಮವಾಗಿ ಓದಿ ಸಮಾಜಕ್ಕೆ ಸಹಾಯ ಮಾಡಲೂ ಪ್ರೇರಣೆ ಆಯಿತು

ಕಾವೇರಿ ಎಂ.ಬಿ, ದಾವಣಗೆರೆ

ಮಳೆ: ಸಿಡಿಲು ಬಡಿದು ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶನಿವಾರ ರಾತ್ರಿ, ಭಾನುವಾರ ಉತ್ತಮ ಮಳೆಯಾಗಿದ್ದು, ಪ್ರತ್ಯೇಕ ಘಟನೆಗಳಲ್ಲಿ ಸಿಡಿಲು ಬಡಿದು ಇಬ್ಬರು ಮೃತಪಟ್ಟರು.

ಕಿತ್ತೂರು ಕರ್ನಾಟಕದ ಧಾರವಾಡ, ಗದಗ, ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾನುವಾರ ಧಾರಾಕಾರ ಮಳೆ ಸುರಿಯಿತು. ಬಹುತೇಕ ಕಡೆ ಮರಗಳು, ವಿದ್ಯುತ್ ಕಂಬಗಳು ಉರುಳಿವೆ. ರಸ್ತೆಗಳಲ್ಲಿ ಮಳೆ ನೀರು ಆವರಿಸಿ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು.

ಧಾರವಾಡ ಬಳಿ ಕವಲಗೇರಿಯಲ್ಲಿ ಜಮೀನಿನಲ್ಲಿದ್ದ ಹನುಮಂತಪ್ಪ ಶಿರಸಂಗಿ ಹಾಗೂ ಜಯಶ್ರೀ ದಂಪತಿಗೆ ಸಿಡಿಲು ಬಡಿದು, ಜಯಶ್ರೀ (29) ಮೃತಪಟ್ಟರು. ಹನುಮಂತಪ್ಪ ಅವರಿಗೆ ಗಾಯಗಳಾದವು.

ಇನ್ನೊಂದೆಡೆ, ಹೊನ್ನಾವರದ ಅಪ್ಸರಕೊಂಡ ಸಮೀಪದ ನಿವಾಸಿ ವಿನಾಯಕ ಖಾರ್ವಿ (38) ಸಿಡಿಲು ಬಡಿದು ಮೃತಪಟ್ಟರು. ಭಟ್ಕಳ ತಾಲ್ಲೂಕಿನ ಕೋಟೆ ಬಾಗಿಲು ಬಳಿ ವಿದ್ಯುತ್ ಕಂಬ ದ್ವಿಚಕ್ರ ವಾಹನದ ಮೇಲೆ ಬಿದ್ದು, ವೆಂಕಟರಮಣ ಮಾಸ್ತಿ ನಾಯ್ಕ ಗಾಯಗೊಂಡರು.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಭಟ್ಕಳ, ಹೊನ್ನಾವರದಲ್ಲಿ ವ್ಯಾಪಕ ಮಳೆಯಾಯಿತು. ಜಿಲ್ಲೆಯ ವಿವಿಧೆಡೆ ಬಿರುಗಾಳಿಗೆ ಮರಗಳು ಉರುಳಿದ್ದು, ಹಲವೆಡೆ ವಾಹನಗಳು ಜಖಂಗೊಂಡಿವೆ.

ಗದಗ ಜಿಲ್ಲೆಯಲ್ಲಿ ವಿವಿಧೆಡೆ ಮಳೆ ಅರ್ಭಟ ಜೋರಾಗಿತ್ತು. ಗಜೇಂದ್ರಗಡ-ನರೇಗಲ್ ಮಾರ್ಗದಲ್ಲಿ ಪವನ ವಿದ್ಯುತ್ ಕಂಬ ಬಿದ್ದರೆ, ಹಲವೆಡೆ ಜಮೀನು ಜಲಾವೃತವಾಗಿವೆ.



ಹುಬ್ಬಳ್ಳಿಯ ಹೆಗ್ಗೇರಿ ಮುಖ್ಯರಸ್ತೆಯಲ್ಲಿ ನಿಂತ ಮಳೆ ನೀರಿನಲ್ಲೇ ವಾಹನ ಸವಾರರು ಸಾಗಿದರು ಚಿತ್ರ: ಗುರು ಹಬೀಬ

ಕಲ್ಯಾಣದ ವಿವಿಧೆಡೆ ವರುಣನ ಆರ್ಭಟ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ಕೊಪ್ಪಳ, ರಾಯಚೂರು ಜಿಲ್ಲೆಯಲ್ಲಿ ಮಳೆಯಾಗಿದೆ. ಸಿಡಿಲು ಬಡಿದು ರಾಯಚೂರು ಜಿಲ್ಲೆಯ ಕೋಮಲಾಪುರದಲ್ಲಿ ರೈತ ಕರಿಯಪ್ಪ ಅಯ್ಯಪ್ಪ (48) ಮೃತಪಟ್ಟಿದ್ದಾರೆ.

ಕರಿಯಪ್ಪ ಸ್ಥಳದಲ್ಲೆ ಮೃತಪಟ್ಟಿದ್ದು, ಬಸವರಾಜ ಅವರಿಗೆ ಗಾಯವಾಗಿದೆ. ಮುದಗಲ್ ಹೊರವಲಯದಲ್ಲಿ 30ಕ್ಕೂ ಹೆಚ್ಚು ಕಡೆ ಮರಗಳು, ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ. ಜೇವರ್ಗಿಯಲ್ಲಿ ತಾಲ್ಲೂಕು ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿ ಚಾವಣಿ ಕಿತ್ತುಹೋಗಿದೆ. ಅಫಜಲಪುರ ತಾಲ್ಲೂಕಿನ ಮಾಶಾಳ ಗ್ರಾಮದಲ್ಲಿ ಬಾಳೆ ಗಿಡಗಳು ನೆಲಕ್ಕುರುಳಿವೆ.

ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ದಮ್ಮೂರು ಗ್ರಾಮದ ವಿರೂಪಣ್ಣ ಹಳ್ಳಿಕೇರಿ ಅವರ ಎಮ್ಮೆ ಸತ್ತಿದೆ. ಗ್ರಾಮದ ಅನೇಕ ರೈತರ ತೋಟದಲ್ಲಿ ಬೆಳೆ ಹಾನಿಯಾಗಿದೆ.

ಯಾದಗಿರಿ ಜಿಲ್ಲೆ ಕೆಂಭಾವಿಯಲ್ಲಿ ಆಲಿಕಲ್ಲು ಮಳೆಯಾಗಿದೆ. ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ.

ವಲಸೆ ಹಕ್ಕಿಗಳಿಗೆ ಸಂಕಷ್ಟ ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಮಳೆಯಿಂದ ತಾಲ್ಲೂಕಿನ ನಾರಾಯಣದೇವರಕೆರೆ ಬಳಿ ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿ ಸಂತಾನೋತ್ಪತ್ತಿಗೆ ಬಂದಿರುವ ವಲಸೆ ಹಕ್ಕಿಗಳಿಗೆ ಸಂಚಕಾರವಾಗಿದೆ.

ತುಂಗಭದ್ರಾ ಹಿನ್ನೀರಿನ ನೆಲದಲ್ಲಿ ಮೊಟ್ಟೆ ಇಟ್ಟು ಸಂತಾನೋತ್ಪತ್ತಿಯಲ್ಲಿ ತೊಡಗುವ ಕವಲು ಬಾಲದ ಚಿಟುವ, ಸಣ್ಣ ಚಿಟುವ, ಸಣ್ಣ ನದಿ ರೀವ, ಮೆಟ್ಟುಗಾಲು ಹಕ್ಕಿ ಸೇರಿ ಜೌಗು ಹಕ್ಕಿಗಳ ಮೊಟ್ಟೆಗಳು ಭಾರಿ ಗಾಳಿ, ಮಳೆಗೆ ಕೊಚ್ಚಿ ಕೊಂಡು ಕಲ್ಲು ಬಂಡೆಗಳು ಮತ್ತು ಕೊರಕಲು ಪ್ರದೇಶದಲ್ಲಿ ಸಿಕ್ಕಿನಾಶವಾಗಿವೆ.

ಕೇರಳಂನಲ್ಲಿ ಭಾರಿ ಮಳೆ: ಎಚ್ಚರಿಕೆ

ತಿರುವನಂತಪುರ (ಪಿಟಿಐ): ಕೇರಳಂನಲ್ಲಿ ಭಾರಿ ಮಳೆ ಆಗುತ್ತಿರುವ ಕಾರಣ ರಾಜ್ಯದ ಎರಡು ಜಿಲ್ಲೆಗಳಲ್ಲಿ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಭಾನುವಾರ 'ಆರೆಂಜ್ ಅಲರ್ಟ್' ಘೋಷಿಸಿದೆ.

ಪತ್ತನಂತಿಟ್ಟ ಮತ್ತು ಆಲಪ್ಪುಳ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದ್ದು, ಮುಂದಿನ 24 ಗಂಟೆಗಳಲ್ಲಿ 115.6 ಮಿ.ಮೀ.ಯಿಂದ 204.4 ಮಿ.ಮೀವರೆಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಅದು ತಿಳಿಸಿದೆ.

ತಿರುವನಂತಪುರ, ಕೊಲ್ಲಂ, ಕೊಟ್ಟಯಂ, ಎರ್ನಾಕುಳಂ, ಇಡುಕ್ಕಿ, ಕೋಯಿಕ್ಕೋಡ್, ವಯನಾಡ್, ಕಣ್ಣೂರು ಮತ್ತು ಕಾಸರಗೋಡಿನಲ್ಲಿ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದ್ದು, 64.5 ಮಿ.ಮೀನಿಂದ 115.5 ಮಿ.ಮೀವರೆಗೆ ಮಳೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಸಿಡಿಲಿಗೆ ವ್ಯಕ್ತಿಬಲಿ: ಕೋಯಿಕ್ಕೋಡ್ ಜಿಲ್ಲೆಯಲ್ಲಿ ಸಿಡಿಲು ಬಡಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಶಿವಂ' ಪ್ರಕರಣ ಸಿಐಡಿ ತನಿಖೆಗೆ: ಜಾರಕಿಹೊಳಿ

ಪ್ರಜಾವಾಣಿ ವಾರ್ತೆ



ಸತೀಶ ಜಾರಕಿಹೊಳಿ

ಬೆಳಗಾವಿ: 'ಬಹುಕೋಟಿ ರೂಪಾಯಿ ವಂಚನೆ ಆರೋಪವಿರುವ ಶಿವಂ ಅಸೋಸಿಯೇಟ್ಸ್ ಸಂಸ್ಥೆ ಮಾಲೀಕ ಶಿವಾನಂದ ನೀಲಣ್ಣವರ ಪ್ರಕರಣವನ್ನು ಸರ್ಕಾರ ಸಿಐಡಿ ತನಿಖೆಗೆ ವಹಿಸಿದೆ. ವರದಿ ಬಳಿಕವಷ್ಟೇ ಸತ್ಯಾಸತ್ಯತೆ ಮತ್ತು ನಿಖರ ಮಾಹಿತಿ ಲಭ್ಯವಾಗಲಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

'ಶಿವಂ ಅಸೋಸಿಯೇಟ್ಸ್ ಪ್ರಕರಣಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ. ಇದು ಜನರ ಹಣಕಾಸು ವಂಚನೆಗೆ ಸಂಬಂಧಿಸಿದ ವಿಷಯ. ಕಾನೂನು ಬಾಹಿರವಾಗಿ ಹಣ ಸಂಗ್ರಹ ಹಿನ್ನೆಲೆಯಲ್ಲಿ ಪೊಲೀಸರು ಕ್ರಮವಹಿಸಿದ್ದಾರೆ. ಇದರಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪ ಇಲ್ಲ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ಎಸ್‌ಐಆರ್: 30ರಿಂದ ಜನಾಂದೋಲನ

'12ನೇ ಮೇ ಸಾಹಿತ್ಯ ಮೇಳ'ದ ನಿಲುವು ಘೋಷಿಸಿದ ಚಿಂತಕ ಕೆ. ಫಣಿರಾಜ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಎಸ್‌ಐಆರ್' ಮತದಾರರ ಪಟ್ಟಿಯಿಂದ ನಿರ್ದಿಷ್ಟ ವರ್ಗಗಳನ್ನು ಹೊರಗಿಡುವ ವ್ಯವಸ್ಥಿತ ತಂತ್ರ ಆಗಿದ್ದು, ಇದರ ವಿರುದ್ಧ ಮೇ 30ರಿಂದ ಜಿಲ್ಲೆಗಳಲ್ಲಿ ಸಾಹಿತಿಗಳು, ವಿದ್ಯಾರ್ಥಿಗಳ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆಯಬೇಕು' ಎಂಬ ನಿರ್ಣಯವನ್ನು ಮೇ ಸಾಹಿತ್ಯ ಮೇಳದಲ್ಲಿ ಕೈಗೊಳ್ಳಲಾಯಿತು.

ಭಾನುವಾರ ಇಲ್ಲಿ ನಡೆದ '12ನೇ ಮೇ ಸಾಹಿತ್ಯ ಮೇಳ'ದ 'ಎಸ್‌ಐಆರ್: ಸಮಸ್ಯೆ-ಜನಾಂದೋಲನ' ಚರ್ಚಾಗೋಷ್ಠಿಯಲ್ಲಿ ಚಿಂತಕ ಕೆ. ಫಣಿರಾಜ್ ಅವರು ನಿಲುವು ಘೋಷಿಸಿದರು.

'ಎಸ್‌ಐಆರ್ ವಿರುದ್ಧ ರಾಜ್ಯ ಸರ್ಕಾರ ನಿರ್ಣಯ ಕೈಗೊಂಡಿಲ್ಲ. ಕಾಂಗ್ರೆಸ್‌ನ ರಾಜ್ಯ, ಜಿಲ್ಲಾ ಘಟಕಗಳು ನಿರುತ್ಸಾಹ ತೋರುತ್ತಿವೆ. ಅವರ ಬಗ್ಗೆ ನಿರೀಕ್ಷೆ ಇಡದೇ, ನಾವೇ ಹೋರಾಟ ರೂಪಿಸಬೇಕು' ಎಂದರು.

ಕರ್ನಾಟಕ ಜನಶಕ್ತಿ ಸಂಘಟನೆ ಅಧ್ಯಕ್ಷ ನೂರ್ ಶ್ರೀಧರ್ ಮಾತನಾಡಿ, 'ಬಿಹಾರ್ ಮತ್ತು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಸೃಷ್ಟಿಸಿದ ಸಮಸ್ಯೆಯನ್ನು ಮುಂದಿರಿಸಿ ಹೋರಾಟದ ರೂಪರೇಷೆ ಸಿದ್ಧಪಡಿಸಬೇಕು' ಎಂದರು.

'ಎಸ್‌ಐಆರ್ ವಿರೋಧಿ ಕರ್ನಾಟಕ' ವೇದಿಕೆ ರಚಿಸುವ ಕುರಿತು ಚಿಂತನೆ ನಡೆದಿದ್ದು, ಅದಕ್ಕೂ ಮುನ್ನ 'ಸ್ಟಾರ್ಟ್ ಎಸ್‌ಐಆರ್' ಆರಂಭಿಸಬೇಕು. ದಾಖಲೆ ಇಲ್ಲದವರು ಏನು ಮಾಡಬೇಕು ಎನ್ನುವ ಕುರಿತು ಸರ್ಕಾರ, ಚುನಾವಣಾ ಆಯೋಗ ತನ್ನ ನಿಲುವು ಸ್ಪಷ್ಟಪಡಿಸಬೇಕು ಎಂಬ ಷರತ್ತು ಹಾಕಬೇಕು' ಎಂದರು.

> **ಬಿಜೆಪಿಯ ಎಸ್‌ಐಆರ್ ಹುನ್ನಾರವನ್ನು ಸಮರ್ಥವಾಗಿ ಎದುರಿಸಲು ಕಾಂಗ್ರೆಸ್‌ನಿಂದ ಸಾಧ್ಯವಾಗುತ್ತಿಲ್ಲ. ಜನ ಚಳವಳಿಗಳೇ ಈ ಜವಾಬ್ದಾರಿ ನಿರ್ವಹಿಸಬೇಕು**
> **ಮಾವಳ್ಳಿ ಶಂಕರ**
> ಸಂಚಾಲಕ, ದಲಿತ ಸಂಘರ್ಷ ಸಮಿತಿ

> **ರಾಜಕಾರಣದಲ್ಲಿ ಧರ್ಮ ಬೆರೆತರೆ ಕೋಮುವಾದ. ಸಂವಿಧಾನ ಉಳಿಸಲು ಎಲ್ಲ ಧರ್ಮವನ್ನೂ ಸಮಾನವಾಗಿ ಸ್ವೀಕರಿಸುವ ಆಡಳಿತ ಬೇಕು**
> **ಎಚ್. ಎನ್. ನಾಗಮೋಹನ ದಾಸ್,**
> ನಿವೃತ್ತ ನ್ಯಾಯಮೂರ್ತಿ

ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ ದಾಸ್, ಸಿಪಿಐ ರಾಜ್ಯ ಘಟಕದ ಕಾರ್ಯದರ್ಶಿ ಸಾತಿ ಸುಂದರೇಶ, ಸಿಪಿಎಂ ರಾಜ್ಯ ಘಟಕದ ಕಾರ್ಯದರ್ಶಿ ಕೆ.ಪ್ರಕಾಶ್, ಬಸವರಾಜ ಸೂಳಿಭಾವಿ, ಮಂಜುನಾಥ ಡೊಳ್ಳಿನ, ಮಾಲತಿ ಪಟ್ಟಣಶೆಟ್ಟಿ, ಬಸವರಾಜ ಹೂಗಾರ ಹಾಗೂ ಇತರರು ಪಾಲ್ಗೊಂಡಿದ್ದರು.

ಪುತ್ರಿ ಮದುವೆಗೆ ವಿರೋಧ: ಕೊಲೆ



ಮೇಘನಾ



ತಿಮ್ಮರಾಯಪ್ಪ

ಶಿರಾ: ತಾಲ್ಲೂಕಿನ ನಿಂಬೆಮರದಹಳ್ಳಿಯಲ್ಲಿ ತಂದೆ ಮಗಳನ್ನು ಕೊಲೆ ಮಾಡಿದ್ದು, ತಿಂಗಳ ನಂತರ ಕೃತ್ಯ ಗೊತ್ತಾಗಿದೆ. ಗ್ರಾಮದ ಎನ್. ಟಿ.ಮೇಘನಾ (17) ಮೃತರು. ಆರೋಪಿ ತಿಮ್ಮರಾಯಪ್ಪ (48) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಮೇಘನಾ ತನ್ನ ಸಂಬಂಧಿಕ ಹುಡುಗನನ್ನು ಪ್ರೀತಿಸುತ್ತಿದ್ದರು. 18 ವರ್ಷ ತುಂಬಿದ ನಂತರ ಮದುವೆ ಮಾಡಿಕೊಳ್ಳಲು ನಿರ್ಧರಿಸಿದ್ದರು. ಇದಕ್ಕೆ ಮೇಘನಾ ತಾಯಿ ಒಪ್ಪಿದ್ದರು. ಆದರೆ, ತಂದೆ ತಿಮ್ಮರಾಯಪ್ಪಗೆ ಇಷ್ಟವಿರಲಿಲ್ಲ. ಮದುವೆ ತಡೆಯಲು ಮಗಳನ್ನು ಕೊಲೆ ಮಾಡುವ ನಿರ್ಧಾರಕ್ಕೆ ಅವರು ಬಂದಿದ್ದರು.

ಏ.16ರಂದು ಸಂಜೆ ತಿಮ್ಮರಾಯಪ್ಪ ಮಗಳನ್ನು ಕರೆದುಕೊಂಡು ಹೋಗಿ ತೋಟದ ಬಾವಿಗೆ ತಳ್ಳಿ, ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದರು. ಬಳಿಕ ಗುಂಡಿ ತೆಗೆದು ಹೂತಿದ್ದರು. ಇದಾದ ಬಳಿಕ ಮೂರು-ನಾಲ್ಕು ದಿನ ಮಗಳನ್ನು ಹುಡುಕಾಡುತ್ತಿರುವಂತೆ ನಾಟಕವನ್ನೂ ಮಾಡಿದ್ದರು.

ಏ.19ರಂದು ಮೇಘನಾ ತಾಯಿ ನಿರ್ಮಲಾ ಮಗಳು ನಾಪತ್ತೆ ಆಗಿದ್ದಾರೆ ಎಂದು ಕಳ್ಳಂಬೆಳ್ಳ ಠಾಣೆಗೆ ದೂರು ನೀಡಿದ್ದರು. ವಾರದ ಬಳಿಕ ತಿಮ್ಮರಾಯಪ್ಪ ಸಹ ನಾಪತ್ತೆಯಾಗಿದ್ದರು. 'ಪತಿಯೂ ಕಾಣಿಸುತ್ತಿಲ್ಲ. ಅವರ ಮೊಬೈಲ್ ಸ್ವಿಚ್ಡ್ ಆಫ್ ಆಗಿದೆ. ಹುಡುಕಿಕೊಡಿ' ಎಂದು ನಿರ್ಮಲಾ ಮತ್ತೊಂದು ದೂರು ಸಲ್ಲಿಸಿದ್ದರು.

ಕಾರ್ಯಪ್ರವೃತ್ತರಾದ ಪೊಲೀಸರು ಶನಿವಾರ ತಿಮ್ಮರಾಯಪ್ಪ ಅವರನ್ನು ಪತ್ತೆ ಹಚ್ಚಿದ್ದಾರೆ. ನಂತರ ಠಾಣೆಗೆ ಕರೆ ತಂದು ವಿಚಾರಣೆ ನಡೆಸಿದಾಗ ಮಗಳ ಕೊಲೆ ವಿಚಾರ ಬಾಯಿ ಬಿಟ್ಟರು ಎಂದು ಪೊಲೀಸರು ತಿಳಿಸಿದರು.

ಇಂದು ಶವ ಹೊರಕ್ಕೆ: 'ತಹಶೀಲ್ದಾರ್ ಸಮ್ಮುಖದಲ್ಲಿ ಸೋಮವಾರ ಮೃತದೇಹ ತೆಗೆಯಲಾಗುತ್ತದೆ. ನಂತರ ಮರಣೋತ್ತರ ಪರೀಕ್ಷೆ ನಡೆಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ.

ದೂರವಾಣಿ: 08426-281027.ಇ-ಮೇಲ್: dam_division@rediffmail.com

ಸಂ:ಕೃಭಾಜನಿನಿ/ಆವಿ/ಪಿಬಿ/ಟೆಂಡರ್/2026-27/267 ದಿನಾಂಕ:14.05.2026

ಕೋಟೇಶನ್ ದರವನ್ನು ಪಡೆಯುವ ಕುರಿತು

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಆಲಮಟ್ಟಿ ಆಣೆಕಟ್ಟೆಗೆ ಸಂಬಂಧಿಸಿದಂತೆ ಕಾಮಗಾರಿಗೆ ಹೆಚ್ಚುವರಿ ಆರ್ಥಿಕ ಪ್ರಸ್ತಾವಣೆಯನ್ನು ತಯಾರಿಸಲು ಈ ಕೆಳಕಂಡ ಪರಿಮಾಣಗಳಿಗೆ ಕೋಟೆಶನ್ ದರಗಳ ಅವಶ್ಯಕತೆ ಇರುತ್ತದೆ.

Sl No	Name of Work	Unit	Rate per unit quantity (Excluding GST)
1	**Data Collection for Dam Inspection using Digital and Automated Defect Mapping Technology (above water concrete structures):** Deployment of drone-based high resolution optical, thermal and acoustic inspection systems for detailed condition assessment of above water concrete structures like dam, spillway, piers, and accessible dam surfaces including all Site Preparation/Set up Cost/Admin/ Logistics, Mobilization & De-mobilization, Complete Above Water Concrete Structure Data Collection including: 1) Dam Body: i) Optical Data (up to 3mm/pixel), ii) Thermal Data, iii) Acoustic Data (up to 200mm depth) 2) Embankment: i) Optical Data (up to 10mm/pixel) including cost of all materials, machinery, labor, transportation, etc. complete with all leads and lifts as directed by Engineer in charge.	Job	
2	**Creation of Digital Baseline and Monitoring Frame work:** Establishing a digital baseline model of the structure, Preparation of high-resolution 3D model and 2D raster, crack and defect mapping, surface profiling, anomaly detection and cloud-based visualization platform including data processing, analytics, and reporting including Cloud Platform Access, Data Transferring on cloud platform for visual defect mapping, Reports (Spreadsheet & CAD files), Repeatable automated inspections, integration of inspection datasets on cloud platform, comparative assessment, defect progression monitoring, and engineering analysis including Comparison Mode (2nd survey onwards) and Change Layer Detection (2nd survey onwards) and Training to Engineers including cost of all materials, machinery, labor, transportation, etc. complete with all leads and lifts as directed by Engineer in charge.	Job	

ಮೇಲೆ ಹೇಳಿರುವ ಕೆಲಸಗಳ ವಿವರವಾದ ಮಾಹಿತಿಗಾಗಿ ಹಾಗೂ ಇನ್ನಿತರ ಮಾಹಿತಿಗಾಗಿ ಖುದ್ದಾಗಿ ಈ ಕಚೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ. ದರಪಟ್ಟಿಯನ್ನು ನೀಡುವದಕ್ಕಿಂತ ಮೊದಲು ಸ್ಥಳ ಪರಿಶೀಲಿಸಲು ವಿನಂತಿಸಲಾಗಿದೆ. ದರಪಟ್ಟಿ ಕವರಗಳ ಮೇಲೆ ಸ್ಪಷ್ಟವಾಗಿ ದರಪಟ್ಟಿ ಎಂದು ಮೋಹರಬಂದ ಆಗಿರಬೇಕು. ಯಾವುದೇ ದರಪಟ್ಟಿ ಸ್ವೀಕರಿಸುವ ಮತ್ತು ರದ್ದುಪಡಿಸುವ ಹಕ್ಕು ಈ ಕಚೇರಿಗೆ ಇರುತ್ತದೆ. ನಿಮ್ಮ ಶಿಲ್ಡ್ ಕೋಟೇಶನ್‌ಗಳನ್ನು ಪಡೆಯುವ ಕೊನೆಯ ದಿನಾಂಕ: 22.05.2026

ಸಂಪರ್ಕಿಸುವ e-mail ವಿಳಾಸ: dam_division@rediffmail.com, aeegates26@gmail.com

ಸಂಪರ್ಕಿಸುವ ದೂರವಾಣಿ ಸಂಖ್ಯೆ: Sri.Vithal Jadhav,A.E. Ph.No. 9480165309.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ.

ವಾಸಾಸಂಇ/ವಿಜಯಪುರ/103/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಜಲ ಸಂಪನ್ಮೂಲ ಇಲಾಖೆ

ತುಂಗಭದ್ರಾ ಯೋಜನೆ ಕಾಡಾ ವಿಭಾಗ, ಮುನಿರಾಬಾದ್, ಜಿಲ್ಲೆ ಕೊಪ್ಪಳ- 583 233

e-mail: cadatbpee@gmail.com

ಸಂ. EE/CADA/MCAD/TP-Dn/2026-27/71 ದಿನಾಂಕ: 15-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (K-PP Portal ಪದ್ಧತಿಯಲ್ಲಿ ಮಾತ್ರ)

ಕರ್ನಾಟಕ ಸರ್ಕಾರದ ಪರವಾಗಿ ಈ ಕೆಳಕಂಡ ಕಾಮಗಾರಿಗೆ LUMPSUM TURN-KEY ಆಧಾರದಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ **Karnataka Public Procurement (KPP) Portal**ನಲ್ಲಿ ಅರ್ಹ KPWD/CPWD-1ನೇ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

1) ಕಾಮಗಾರಿಯ ವಿವರ: Selection of Irrigation Service Provider (ISP)/Contractor for the development of Pressurized Piped Irrigation Network (PPIN) and provision of irrigation services to 2600.00 Ha in Distributary 54 9R of Tungabhadra Left Bank Canal; Taluk: Sindhanoor, District: Raichur , State: Karnataka under Modernization of Command Area Development & Water Management (M-CADWM) scheme comprising Supply, Installation, Testing and Commissioning of Pressurized Piped Irrigation Network including Construction of Intake structure, Sump cum Pump house, Pumping machineries, Terminal Bay, Electrical substation, Electrical power line, SCADA & Automation, Solar Power Plant including power evacuation arrangements and other appurtenant works (Assisting in Non-structural activities) including Operation and Maintenance for the period of 5 years etc., complete on Lumpsum Turn-key basis. **(INDENT No: TCADA/2026-27/IW/Work_Indent No:137) 2) ಯೋಜನೆಯ ಹೆಸರು:** ಕೇಂದ್ರ ಪುರಸ್ಕೃತ M-CADWM (SAMRIDHI) ಯೋಜನೆ **3) ಟೆಂಡರಿಗಿಟ್ಟ ಮೊತ್ತ:** Rs.4982.08 Lakhs. **4) ಟೆಂಡರ್ ಪ್ರಕ್ರಿಯೆಯ ಶುಲ್ಕ:** Karnataka Public Procurement (KPP) Portal ನಲ್ಲಿ ಇರುವಂತೆ **5) ಇ.ಎಂ.ಡಿ.ಮೊತ್ತ:** ರೂ. 50.00 ಲಕ್ಷಗಳು **6) ಗುತ್ತಿಗೆ ಅವಧಿ:** ನಿರ್ಮಾಣ ಅವಧಿ 30ನೇ ಸೆಪ್ಟಂಬರ್ 2026 ರ ವರೆಗೆ ಮತ್ತು ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ 05 ವರ್ಷಗಳವರೆಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ ಇರುತ್ತದೆ. **7) ಟೆಂಡರ್ ದಾಸ್ತಾವೇಜುಗಳ ಲಭ್ಯತೆ: 18-05-2026** ರಿಂದ website : https://kppp.karnataka.gov.inರಲ್ಲಿ **8) ಟೆಂಡರ್ ಪೂರ್ವಭಾವಿ ಸಭೆಯ ಸ್ಥಳ ಮತ್ತು ದಿನಾಂಕ: 27-05-2026** ಬೆಳಿಗ್ಗೆ 11:00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ ಕಾಡಾ ಟಿಬಿಪಿ ವಿಭಾಗ ಮುನಿರಾಬಾದ **9) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 03-06-2026** ರಂದು 17:00 ಗಂಟೆಯವರೆಗೆ **10) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05-06-2026** ರಂದು 11:00 ಗಂಟೆಗೆ **11) ಟೆಂಡರ್ ಆರ್ಥಿಕ ಬಿಡ್‌ಗಳನ್ನು ತೆರೆಯುವ ಬಗ್ಗೆ:** ಅನುಮೋದನೆಗೊಂಡ ತಾಂತ್ರಿಕ ಬಿಡ್ ಗಳ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು.

ಟೆಂಡರ್‌ಗಳ ಕಾರ್ಯಕ್ರಮಗಳ ಕ್ಯಾಲೆಂಡರ್/ಸೇರ್ಪಡೆಗಳು (Addendums)/ ತಿದ್ದುಪಡಿಗಳು (Corrigendum) ಯಲ್ಲಿನ ಯಾವುದೇ ಬದಲಾವಣೆಯನ್ನು ಸುದ್ದಿಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಮತ್ತು ಅದನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು ಕಾಡಾ ಟಿಬಿಪಿ ವಿಭಾಗ ಮುನಿರಾಬಾದ್

ವಾ.ಸಾ.ಸಂ.ಇ/ಕೊಪ್ಪಳ/87/ದೇಶಪಾಂಡೆಪಬ್ಲಿಸಿಟಿ/2026-27

ಸಾರಿಗೆ ಇಲಾಖೆ
TRANSPORT DEPARTMENT



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಸಾರಿಗೆ ಇಲಾಖೆ
ಮೂರು ವರ್ಷಗಳ ಸಾಧನೆಯ ಮೈಲಿಗಲ್ಲು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ರೂ. 70.12 ಕೋಟಿ ವೆಚ್ಚದಲ್ಲಿ **15** ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳ ನಿರ್ಮಾಣ | **ರೂ. 39.25** ಕೋಟಿ ವೆಚ್ಚದಲ್ಲಿ **6** ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳ ನಿರ್ಮಾಣ ಪ್ರಗತಿ

ಸ್ವಯಂಚಾಲಿತ/ಗಣಿಕೀಕೃತ ಪರೀಕ್ಷಾ ಪಥ (ADTS)

ರೂ. 266.00 ಕೋಟಿ ವೆಚ್ಚದಲ್ಲಿ ರಾಜ್ಯದ ವಿವಿಧ **45** ಸ್ಥಳಗಳಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ಸ್ಥಾಪನೆ

ಸ್ವಯಂಚಾಲಿತ ವಾಹನ ತಪಾಸಣಾ ಕೇಂದ್ರ

ಪಿ.ಪಿ.ಪಿ. ಯೋಜನೆಯಡಿ DBFOT ಮಾದರಿಯಲ್ಲಿ **12** ಹಾಗೂ BOO ಮಾದರಿಯಲ್ಲಿ **20** ಸ್ಥಳಗಳಲ್ಲಿ ಸ್ವಯಂಚಾಲಿತ ವಾಹನ ತಪಾಸಣಾ ಕೇಂದ್ರಗಳ ನಿರ್ಮಾಣಕ್ಕೆ ಕ್ರಮ

ಭಾರಿ ವಾಹನ ಚಾಲಕರ ತರಬೇತಿ ಕೇಂದ್ರ

ಬೆಂಗಳೂರು, ಧಾರವಾಡ, ಕಲಬುರಗಿ ಮತ್ತು ಮಂಗಳೂರುಗಳಲ್ಲಿ **ರೂ. 46.00** ಕೋಟಿಗಳ ವೆಚ್ಚದಲ್ಲಿ, ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ನಿರ್ಮಾಣ | ಬಳ್ಳಾರಿ, ವಿಜಯಪುರ, ನಾಗಮಂಗಲ ಮತ್ತು ಶಿವಮೊಗ್ಗಗಳಲ್ಲಿ **ರೂ. 21.00** ಕೋಟಿ ವೆಚ್ಚದಲ್ಲಿ ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ನಿರ್ಮಾಣಕ್ಕೆ ಕ್ರಮ

ಸೀಝಿಂಗ್ ಯಾರ್ಡ್

ಬೆಂಗಳೂರಿನ ಚಂದಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ ವತಿಯಿಂದ **ರೂ. 1.48** ಕೋಟಿ ವೆಚ್ಚದಲ್ಲಿ ಸೀಝಿಂಗ್ ಯಾರ್ಡ್ ನಿರ್ಮಾಣ | ಬೆಂಗಳೂರಿನ ದೇವನಹಳ್ಳಿ ಮತ್ತು ಮಂಗಳೂರಿನಲ್ಲಿ **ರೂ. 7.58** ಕೋಟಿಗಳ ವೆಚ್ಚದಲ್ಲಿ ಸೀಝಿಂಗ್ ಯಾರ್ಡ್ ನಿರ್ಮಾಣಕ್ಕೆ ಕ್ರಮ

ಅತಿ ಸುರಕ್ಷಿತ ನೋಂದಣಿ ಫಲಕ (HSRP)

ಕರ್ನಾಟಕ ರಾಜ್ಯದಲ್ಲಿ ಒಟ್ಟು **59** ಲಕ್ಷಕ್ಕೂ ಅಧಿಕ ಸಂಖ್ಯೆಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳ ಅಳವಡಿಕೆ

ಸ್ಮಾರ್ಟ್ ಎನ್‌ಫೋರ್ಸ್‌ಮೆಂಟ್

ರೂ. 5.65 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿರುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳ **7** ಟೋಲ್ ಪ್ಲಾಜಾಗಳಲ್ಲಿ ಮತ್ತು **80** ವಿವಿಧ ಸ್ಥಳಗಳಲ್ಲಿ **ರೂ. 70.00** ಕೋಟಿ ವೆಚ್ಚದಲ್ಲಿ AI ಆಧಾರಿತ ಕ್ಯಾಮರಾ ಅಳವಡಿಸಲು ಕ್ರಮ

ಸಂಪರ್ಕ ರಹಿತ / ಆನ್ ಲೈನ್ ಸೇವೆಗಳು

ಸಾರಥಿ - **15** ಕಾಂಟ್ಯಾಕ್ಟ್‌ಲೆಸ್ ಸೇವೆಗಳು
ಸಾರಥಿ - **16** ನಾನ್ ಕಾಂಟ್ಯಾಕ್ಟ್‌ಲೆಸ್ ಸೇವೆಗಳು
ವಾಹನ್ - **9** ಕಾಂಟ್ಯಾಕ್ಟ್‌ಲೆಸ್ ಸೇವೆಗಳು
ವಾಹನ್ - **12** ನಾನ್ ಕಾಂಟ್ಯಾಕ್ಟ್‌ಲೆಸ್ ಸೇವೆ

ಜಿಯೋ ಫೆನ್ಸಿಂಗ್

ಜಿಯೋ ಫೆನ್ಸಿಂಗ್ ಆಧಾರಿತ m-Vahan Fitness App ಅನ್ನು **66** ಆರ್‌ಟಿಒಗಳಲ್ಲಿ ಜಾರಿ | ಪರಿಶೀಲನೆ ಬಳಿಕವೇ ವಾಹನಗಳ ಅರ್ಹತಾ ಪ್ರಮಾಣ ಪತ್ರ ನೀಡಿಕೆ

ಕೇಂದ್ರೀಕೃತ ಮುದ್ರಣ ಸೌಲಭ್ಯ (CPF)

ಮೈಕ್ರೋಚಿಪ್ ಆಧಾರಿತ RC & DL Smart card ವ್ಯವಸ್ಥೆ | ಕೇಂದ್ರೀಕೃತ ಮುದ್ರಣ ಸೌಲಭ್ಯ | ಈ ಯೋಜನೆಯನ್ನು ಜಾರಿಗೆ ತರುವಲ್ಲಿ ರಾಜ್ಯವು **4ನೇ** ಸ್ಥಾನದಲ್ಲಿದೆ

ರೆಟ್ರೋರಿಫ್ಲೆಕ್ಟೀವ್ ಟೇಪ್

ಅಪಘಾತಗಳನ್ನು ನಿಯಂತ್ರಿಸಲು ವಾಹನಗಳಿಗೆ **Retro Reflective Tape & rear marking plate** ಅಳವಡಿಕೆ

ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಮಂಡಳಿ

ಮೋಟಾರು ಸಾರಿಗೆ ಸಂಬಂಧಿತ ಕಾರ್ಮಿಕರ ಮಂಡಳಿಯು ಪ್ರಸ್ತುತ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ/ ಸಾರಿಗೆ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಂಬಂಧ ಸಂಪುಟ ಅನುಮೋದನೆ ದೊರಕಿದೆ/ ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಒಪ್ಪಿಗೆ ಪಡೆದು ಸಾರಿಗೆ ಇಲಾಖೆಯ ವ್ಯಾಪ್ತಿಗೆ ತರಲಾಗುವುದು | ಸದರಿ ಮಂಡಳಿಯಡಿಯಲ್ಲಿ ವಿದ್ಯಾರ್ಥಿ ವೇತನ, ಅಪಘಾತ ಪರಿಹಾರ, ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯ ಸಂಸ್ಕಾರ ವೆಚ್ಚ, ವಿವಾಹ ವೆಚ್ಚ, ಫಲಾನುಭವಿ/ಫಲಾನುಭವಿಯ ಪತ್ನಿಗೆ ಹೆರಿಗೆ ಭತ್ಯೆ, ಮಕ್ಕಳಿಗೆ ಶೈಕ್ಷಣಿಕ ಸಹಾಯ, ಭವಿಷ್ಯ ನಿಧಿ, ವಸತಿ ಹಾಗೂ ವೃದ್ಧಾಶ್ರಮ ಸೌಲಭ್ಯ ಒದಗಿಸಲಾಗುವುದು

ನೋಂದಾಯಿತ ವಾಹನಗಳ ನಿಷ್ಕ್ರಿಯಪಡಿಸುವ ನೀತಿ (RVSF)

ಹಳೆಯ ಮಾಲಿನ್ಯಕಾರಕ ವಾಹನಗಳನ್ನು ಸ್ಕ್ರ್ಯಾಪ್ ಮಾಡುವ RVSF ಯೋಜನೆ | ಇದುವರೆಗೂ **11,368** ವಾಹನಗಳ ನಿಷ್ಕ್ರಿಯಗೊಳಿಸಲಾಗಿದೆ

ಹೊಗೆ ತಪಾಸಣೆ ಪ್ರಮಾಣ ಪತ್ರಕ್ಕೆ ಹೊಸ ತಂತ್ರಾಂಶ ಅಭಿವೃದ್ಧಿ

5,95,000 ವಾಹನಗಳ ತಪಾಸಣೆ ಹಾಗೂ ಪ್ರಮಾಣ ಪತ್ರಗಳ ನೀಡಿಕೆ

ಡ್ರೈವರ್ ಡ್ರೋಜಿನೆಸ್ & ಅಟೆನ್ಷನ್ ವಾರ್ನಿಂಗ್ ಸಿಸ್ಟಮ್ (DD & AWS)

300 ಕೆ ಎಸ್ ಆರ್ ಟಿ ಸಿ ಬಸ್ಸುಗಳಲ್ಲಿ **ರೂ. 2.50** ಕೋಟಿಗಳ ವೆಚ್ಚದಲ್ಲಿ Driver Drowsiness & Attention Warning ಸಾಧನಗಳ ಅಳವಡಿಕೆ

Vehicle Location Tracking Device & Emergency Button ಅಳವಡಿಸುವ ಯೋಜನೆ

ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ **2,25,560** ಸಾರ್ವಜನಿಕ ಸೇವಾ ವಾಹನಗಳಲ್ಲಿ VLTD and Panic Button ಅಳವಡಿಕೆ | ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ - ಯೋಜನೆಯ ಭಾಗವಾಗಿ **ರೂ. 22.00** ಕೋಟಿಗಳ ವೆಚ್ಚದಲ್ಲಿ ಸಾರಿಗೆ ಆಯುಕ್ತರ ಕಛೇರಿಯಲ್ಲಿ Command and Control Centre ಸ್ಥಾಪನೆ



ಮಾನ್ಯ ಸಾರಿಗೆ ಹಾಗೂ ಮುಜರಾಯಿ ಇಲಾಖೆ ಸಚಿವರಾದ **ಶ್ರೀ ರಾಮಲಿಂಗಾ ರೆಡ್ಡಿ** ಅವರು ರಸ್ತೆ ಸುರಕ್ಷತಾ ಅಭಿಯಾನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ
1ನೇ ಮಹಡಿ, ಟಿಟಿಎಂಸಿ ಕಟ್ಟಡ, 'ಎ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027
ವೆಬ್ ಸೈಟ್: www.transport.karnataka.gov.in ಇ-ಮೇಲ್: transcom@nic.in ದೂ.ಸಂ.: 080-22214900

ಮರ ವಿನ್ಯಾಸ ಕೌಶಲ ನಿಮ್ಮದಾಗಬೇಕೆ?



ವೃತ್ತಿಪರ ಶಿಕ್ಷಣ ಕ್ಷೇತ್ರದಲ್ಲಿ ಮರಗೆಲಸಕ್ಕೆ ಸಂಬಂಧಿಸಿದ ಕೋರ್ಸ್‌ಗಳು ವಿರಳವಾಗುತ್ತಿರುವ ಸಂದರ್ಭದಲ್ಲಿ, ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯು 'ಆಧುನಿಕ ಮರಗೆಲಸ'ವನ್ನು ಕಲಿಸಲು ಮುಂದಾಗಿದೆ. ಜೊತೆಗೆ, ಉದ್ಯೋಗ ಸೃಷ್ಟಿಗೂ ಮಾರ್ಗದರ್ಶನ ನೀಡುತ್ತಿದೆ.



• ಗಾಣಧಾಳು ಶ್ರೀಕಂಠ

ಒಳಾಂಗಣ ವಿನ್ಯಾಸ ಕಲಿತು ಕಂಪನಿಗಳಲ್ಲಿ ಉದ್ಯೋಗ ಪಡೆಯುವ ಕನಸು ಕಟ್ಟಿಕೊಂಡಿರುವವರಿಗೆ, ಮರಗೆಲಸದ ವೃತ್ತಿಯನ್ನು ಇನ್ನಷ್ಟು ಸುಧಾರಣೆ ಮಾಡಿಕೊಳ್ಳುವ ಮನಸ್ಸಿರುವವರಿಗೆ, ಆಧುನಿಕ ಉಪಕರಣಗಳು, ಕಂಪ್ಯೂಟರ್ ತಂತ್ರಾಂಶದೊಂದಿಗೆ ಮರ ವಿನ್ಯಾಸ ಕೌಶಲ ಸಿದ್ಧಿಸಿಕೊಳ್ಳ ಬಯಸುವ ಆಸಕ್ತರಿಗಾಗಿ ಬೆಂಗಳೂರಿನ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯು (ಐಡಬ್ಲ್ಯುಎಸ್‌ಟಿ) ವಿವಿಧ ಕೋರ್ಸ್‌ಗಳನ್ನು ನಡೆಸುತ್ತಿದೆ. ಆಧುನಿಕ ಮರಗೆಲಸ ತರಬೇತಿ ಕೇಂದ್ರದ (ಅಡ್ವಾನ್ಸ್ಡ್ ವುಡ್‌ವರ್ಕಿಂಗ್ ಟ್ರೇನಿಂಗ್ ಸೆಂಟರ್– ಎಡಬ್ಲ್ಯುಟಿಸಿ) ಮೂಲಕ ಈ ಕೋರ್ಸ್‌ಗಳನ್ನು ಆಯೋಜಿಸಲಾಗುತ್ತಿದೆ.

ಇಲ್ಲಿ ನಾಲ್ಕು ವಾರಗಳ ಅಲ್ಪಾವಧಿಯ ಸರ್ಟಿಫಿಕೆಟ್ ಕೋರ್ಸ್, 1 ವರ್ಷದ ಡಿಪ್ಲೊಮಾ, ಪಿ.ಜಿ ಡಿಪ್ಲೊಮಾ ಕೋರ್ಸ್‌ಗಳಿವೆ. ಪ್ರತಿ ಕೋರ್ಸ್‌ನಲ್ಲೂ ತರಗತಿಯ ಕಲಿಕೆ ಜೊತೆಗೆ ಪ್ರಾಯೋಗಿಕ ತರಬೇತಿಯನ್ನೂ ನೀಡಲಾಗುತ್ತಿದೆ. ಮರ ವಿನ್ಯಾಸ, ಮರ ಆಧಾರಿತ ಉತ್ಪನ್ನಗಳ ತಯಾರಿಕೆಗೆ ಅಗತ್ಯವಾದ ಅತ್ಯಾಧುನಿಕ ಉಪಕರಣಗಳ ಬಳಕೆ, ಸಿಎನ್‌ಸಿ ಯಂತ್ರ, ಸಿಎಡಿ (ಕ್ಯಾಡ್), ಸಿಎಎಂ (ಕ್ಯಾಮ್) ಕಂಪ್ಯೂಟರ್ ತಂತ್ರಾಂಶಗಳ ಬಳಕೆ, ಅವುಗಳ ಮೂಲಕ 2ಡಿ, 3ಡಿ ವಿನ್ಯಾಸ ಮಾಡುವ ಕುರಿತೂ ತರಬೇತಿ ನೀಡಲಾಗುತ್ತದೆ.

ಸುಸಜ್ಜಿತ ಪ್ರಯೋಗಾಲಯದಲ್ಲಿ ಆಧುನಿಕ ಕಾರ್ಪೆಂಟರಿ ಕಲಿಕೆಗೆ ಅಗತ್ಯವಾದ ಎಲ್ಲ ರೀತಿಯ ಯಂತ್ರಗಳಿವೆ. ವೃತ್ತಿಪರರು ಇರುವ ಬೋಧನಾ ತಂಡವಿದೆ. ಕೋರ್ಸ್ ಕಲಿತವರು ಸ್ಟಾರ್ಟ್‌ಅಪ್ ಆರಂಭಿಸಲು 'ಇನ್‌ಕ್ಯುಬೇಷನ್' ಕೇಂದ್ರವೂ ಇದೆ.

ಒಂದು ವರ್ಷದ ಡಿಪ್ಲೊಮಾ ಇನ್ ಅಡ್ವಾನ್ಸ್ಡ್ ವುಡ್ ವರ್ಕಿಂಗ್ ಕೋರ್ಸ್‌ನಲ್ಲಿ ಅಭ್ಯರ್ಥಿಗಳು 6 ತಿಂಗಳು ತರಗತಿಯಲ್ಲಿ ಕಲಿತರೆ, ಉಳಿದ ಆರು ತಿಂಗಳು ಕೈಗಾರಿಕೆಗಳಲ್ಲಿ ಇಂಟರ್ನ್‌ಶಿಪ್ ಮೂಲಕ ಕೆಲಸ ಮಾಡುತ್ತಾ ಕಲಿಯುತ್ತಾರೆ.

'ಪ್ರಸ್ತುತ ಹಾಗೂ ಭವಿಷ್ಯದ ಕೈಗಾರಿಕೋದ್ಯಮಗಳಿಗೆ ಅಗತ್ಯವಾದ ಕೌಶಲಯುಕ್ತ ಮಾನವ ಸಂಪನ್ಮೂಲ ಒದಗಿಸುವುದು ಈ ಕೋರ್ಸ್‌ಗಳ ಉದ್ದೇಶ' ಎನ್ನುತ್ತಾರೆ ಐಡಬ್ಲ್ಯುಎಸ್‌ಟಿ ನಿರ್ದೇಶಕ ಡಾ. ಶಕ್ತಿ ಚೌಹಾಣ್.

ಎಂಟು ಮಾಡ್ಯೂಲ್‌ಗಳಲ್ಲಿ ಕೋರ್ಸ್ ಇರುತ್ತದೆ. ಮರ ಹಾಗೂ ಮರಗೆಲಸದ ಪ್ರಾಥಮಿಕ ಜ್ಞಾನ, ಮರ ಮತ್ತು ಎಂಡಿಎಫ್/ ಎಂಜಿನಿಯರಿಂಗ್ ವುಡ್‌ನಿಂದ ಪ್ಯಾನಲ್ ತಯಾರಿಕೆಯವರೆಗೂ ಕಲಿಸಲಾಗುತ್ತದೆ. ಮರ ಉತ್ಪನ್ನದ 2ಡಿ ಮತ್ತು 3ಡಿ ರೇಖಾಚಿತ್ರ ರಚನೆ, ಇದನ್ನು ಬಳಸಿಕೊಂಡು ಸಿಎನ್‌ಸಿ ಯಂತ್ರದ ಮೂಲಕ ಉತ್ಪನ್ನ ತಯಾರಿಸುವುದನ್ನು ಕಲಿಸಲಾಗುತ್ತದೆ. ಅಭ್ಯರ್ಥಿಗಳು ಕಿರು ಪ್ರಾಜೆಕ್ಟ್‌ಗಳನ್ನು ಸಿದ್ಧಪಡಿಸುತ್ತಾರೆ ಎನ್ನುತ್ತಾರೆ ತರಬೇತಿ ಕೇಂದ್ರದ ಮುಖ್ಯಸ್ಥರು.

'ಒಂದು ವರ್ಷದ ಡಿಪ್ಲೊಮಾ ಕೋರ್ಸ್‌ನಲ್ಲಿ ಕಾರ್ಪೆಂಟರಿಯ ಪ್ರಾಯೋಗಿಕ ತರಬೇತಿ ಪಡೆದು, ಆಧುನಿಕ ಯಂತ್ರಗಳ ಬಳಕೆ ಕಲಿತೆ. ಸ್ವತಂತ್ರ ಉದ್ಯಮಿಯಾಗಲು ನೆರವಾಯಿತು' ಎಂದು ಹೆಮ್ಮೆಯಿಂದ ಹೇಳುತ್ತಾರೆ ಕೆ.ಎಂ.ಸಾಕ್ಷಿ ಮಿಶ್ರಾ.

ಸೀಮಿತ ಸಂಖ್ಯೆ: ಈ ಕೋರ್ಸ್‌ಗೆ 30 ಅಭ್ಯರ್ಥಿಗಳಿಗೆ ಅವಕಾಶ. ಪಿಯುಸಿ/ಎಸ್‌ಎಸ್‌ಸಿ/10 + 2 (ಯಾವುದೇ ತರಗತಿಯಲ್ಲಿ) ಪಾಸಾದವರು ಕೋರ್ಸ್‌ಗೆ ಸೇರಲು ಅರ್ಹರು. ವಯೋಮಿತಿ 18 ವರ್ಷ ಮೇಲ್ಪಟ್ಟು. ಅರ್ಜಿ ಸಲ್ಲಿಸುವವರಿಗೆ ಪ್ರಾಥಮಿಕ ಕಂಪ್ಯೂಟರ್ ಜ್ಞಾನ ಇರಬೇಕು.

ಏನು ಲಾಭ?

ಒಂದು ವರ್ಷದ ಡಿಪ್ಲೊಮಾ/ಪಿ.ಜಿ ಡಿಪ್ಲೊಮಾ ಕೋರ್ಸ್ ಪೂರ್ಯೆಸಿದವರಿಗೆ ಕಂಪನಿಗಳಲ್ಲಿ ಉದ್ಯೋಗ ಪಡೆಯಲು ನೆರವು ನೀಡಲಾಗುತ್ತದೆ. ಅಲ್ಪಾವಧಿ ಕೋರ್ಸ್ ಪೂರ್ಣಗೊಳಿಸಿದವರಿಗೆ ಸ್ವತಂತ್ರ ಉದ್ಯಮ ಆರಂಭಕ್ಕೆ ಅಗತ್ಯ ಮಾರ್ಗದರ್ಶನ ನೀಡಲಾಗುತ್ತದೆ.

ಪಿ.ಜಿ. ಡಿಪ್ಲೊಮಾ

ವುಡ್ ಆ್ಯಂಡ್ ಪ್ಯಾನಲ್ ಪ್ರಾಡಕ್ಟ್ ಟೆಕ್ನಾಲಜಿ (ಡಬ್ಲ್ಯುಪಿಪಿಟಿ): ಇದು ಒಂದು ವರ್ಷದ ಸ್ನಾತಕೋತ್ತರ ಪದವಿ ಡಿಪ್ಲೊಮಾ ಕೋರ್ಸ್. ಪ್ಲೈವುಡ್, ಪಾರ್ಟಿಕಲ್/ ಫೈಬರ್ ಬೋರ್ಡ್, ಫ್ಲಷ್ ಡೋರ್‌ನಂಥ ಪ್ಯಾನಲ್ ಉತ್ಪನ್ನಗಳನ್ನು ತಯಾರಿಸುವ ತಂತ್ರಜ್ಞಾನವನ್ನು ಹೇಳಿಕೊಡಲಾಗುತ್ತದೆ.

ಶ್ರವ್ಯ ಮತ್ತು ದೃಶ್ಯ ಮಾಧ್ಯಮ, ಕೈಗಾರಿಕೆಗಳಲ್ಲಿ ಬಳಸುವ 'ಸಿಮ್ಯುಲೇಷನ್' ತಂತ್ರಜ್ಞಾನದ ಮೂಲಕವೂ ತರಬೇತಿ ನೀಡಲಾಗುತ್ತದೆ. ಕೈಗಾರಿಕೆಗಳಿಗೆ ಅಧ್ಯಯನ ಪ್ರವಾಸ ಇರುತ್ತದೆ. 'ಈವರೆಗೆ ಕೋರ್ಸ್ ಮುಗಿಸಿದ ಎಲ್ಲ ಅಭ್ಯರ್ಥಿಗಳಿಗೂ ಕ್ಯಾಂಪಸ್ ಆಯ್ಕೆಯ ಮೂಲಕ ಉದ್ಯೋಗ ದೊರಕಿದೆ' ಎನ್ನುತ್ತಾರೆ ಸಂಸ್ಥೆಯ ನಿರ್ದೇಶಕರು.

ವಿದ್ಯಾರ್ಹತೆ: ಸರ್ಕಾರದ ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದಿಂದ ವಿಜ್ಞಾನ ಪದವಿ (ಬಿ.ಎಸ್ಸಿಯಲ್ಲಿ ಪಿಸಿಎಂ, ಕೃಷಿ, ಅರಣ್ಯ ಪದವಿ, ಬಿಇ, ಬಿ.ಟೆಕ್) ಪಡೆದವರು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದು.

3 ಸರ್ಟಿಫಿಕೆಟ್ ಕೋರ್ಸ್

ಈ ಎಲ್ಲ ಕೋರ್ಸ್‌ಗಳಲ್ಲಿ ಸಾಮಾನ್ಯವಾಗಿ ಸಿಎನ್‌ಸಿಯಂತಹ ಆಧುನಿಕ ಯಂತ್ರಗಳ ಬಳಕೆಯನ್ನು ಕಲಿಸಲಾಗುತ್ತದೆ. 'ಬಿಐಇಎಸ್‌ಎಸ್‌ಇ ವರ್ಕ್ಸ್ (BIESSE Works) ಮತ್ತು ಸಾಲಿಡ್ ತಂತ್ರಾಂಶದಲ್ಲಿ 2ಡಿ ಹಾಗೂ 3ಡಿ ಡ್ರಾಯಿಂಗ್, ಸಾಂಪ್ರದಾಯಿಕ ಮರಗೆಲಸವನ್ನು ಹೇಳಿಕೊಡಲಾಗುತ್ತದೆ. ಕೋರ್ಸ್‌ಗಳು ಹೀಗಿವೆ:

1. ಪ್ರಾಡಕ್ಟ್ ಡಿಸೈನಿಂಗ್ ಆ್ಯಂಡ್ ಡೆವಲಪ್‌ಮೆಂಟ್ ಕೋರ್ಸ್ (3 ತಿಂಗಳು, ಗರಿಷ್ಠ 15 ಮಂದಿಗೆ ಅವಕಾಶ)
2. ಕನ್ವೆನ್ಷನಲ್ ವುಡ್ ವರ್ಕಿಂಗ್ ಆ್ಯಂಡ್ ಫಿನಿಷಿಂಗ್ (4 ವಾರ, ಗರಿಷ್ಠ 20 ಮಂದಿಗೆ ಅವಕಾಶ)
3. ಪ್ರಾಡಕ್ಟ್ ಡಿಸೈನಿಂಗ್ ಆ್ಯಂಡ್ ಡೆವಲಪ್‌ಮೆಂಟ್ ಆನ್ ಸಿಎನ್‌ಸಿ ರೌಟರ್ (4 ವಾರ, ಗರಿಷ್ಠ 10 ಮಂದಿಗೆ ಅವಕಾಶ)

ಐಟಿಐ ಪಾಸಾದವರು, ಕಾರ್ಪೆಂಟರ್‌ಗಳು, ಕೌಶಲ ಉನ್ನತೀಕರಿಸಿಕೊಳ್ಳಲು ಆಸಕ್ತಿಯಿರುವವರು ಈ ಕೋರ್ಸ್‌ಗಳನ್ನು ಮಾಡಬಹುದು. 3ನೇ ಕೋರ್ಸ್‌ಗೆ ಪ್ರವೇಶ ಪಡೆಯ ಬಯಸುವವರು 2ನೇ ಕೋರ್ಸ್ ಅನ್ನು ಪೂರ್ಣಗೊಳಿಸಿರಬೇಕು. ಜತೆಗೆ ಸಾಂಪ್ರದಾಯಿಕ ಮರಗೆಲಸ ಹಾಗೂ ಅದಕ್ಕೆ ಉಪಯೋಗಿಸುವ ಪರಿಕರಗಳ ಬಳಕೆಯ ಅನುಭವ ಇರಬೇಕು. 'ಆಧುನಿಕ ಮರಗೆಲಸದ ನಾಲ್ಕು ವಾರಗಳ ತರಬೇತಿ ತೃಪ್ತಿಕೊಟ್ಟಿದೆ. ಆಧುನಿಕ ಯಂತ್ರಗಳ ಬಳಕೆಯನ್ನು ಕಲಿತಿದ್ದೇನೆ' ಎನ್ನುತ್ತಾರೆ ಬೆಂಗಳೂರಿನ ಆರ್ಕಿಟೆಕ್ಟ್ ಪದವೀಧರ ನಿಶಾಂತ್.

ನಿಗದಿತ ಶುಲ್ಕ

ಆಯಾ ಕೋರ್ಸ್‌ಗೆ ನಿಗದಿತ ಶುಲ್ಕ ಮತ್ತು ಭದ್ರತಾ ಠೇವಣಿಯನ್ನು ಪಾವತಿಸಬೇಕು. ಠೇವಣಿ ಹಣವನ್ನು ಕೋರ್ಸ್ ಮುಗಿದ ನಂತರ ವಾಪಸ್ ನೀಡಲಾಗುತ್ತದೆ. ಕೋರ್ಸ್‌ಗಳ ವಿವರ, ಶುಲ್ಕ ಹಾಗೂ ಹೆಚ್ಚಿನ ಮಾಹಿತಿಗಾಗಿ http://iwst.icfre.gov.in/awwtc/awwtc.htm ಜಾಲತಾಣಕ್ಕೆ ಭೇಟಿ ನೀಡಬಹುದು. ಶಿವಪ್ರಸಾದ್, ತಾಂತ್ರಿಕ ತರಬೇತಿ ಸಿಬ್ಬಂದಿ, 8296889618, ಶಶಿಕುಮಾರ್– 9845482778, ವಿಜಯ ಕೇಶವ–9980143580 ಸಂಪರ್ಕಿಸಬಹುದು.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್

ಕಾನೂನು/ನ್ಯಾಯಶಾಸ್ತ್ರ

ಕ್ರಿಯೇಟರ್ ಶಾಲಾ: ಕಾನೂನು/ ನ್ಯಾಯಶಾಸ್ತ್ರ ಕ್ಷೇತ್ರಕ್ಕೆ ಸಂಬಂಧಿಸಿದ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಇಂಗ್ಲಿಷ್‌ನಲ್ಲಿ ಬರೆಯುವ ಮತ್ತು ಮಾತನಾಡುವ ಸಾಮರ್ಥ್ಯ ಇರುವವರು, ಎಂಎಸ್ ಆಫೀಸ್ ಹಾಗೂ ಎಂಎಸ್ ವರ್ಡ್ ಬಗ್ಗೆ ಜ್ಞಾನ ಉಳ್ಳವರು ಜೂನ್ 7ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 10,000–20,000. ಸಂಪರ್ಕ: internshala.com/i/5c64a0.

ಬಿಲ್ಲಿಂಗ್ ಆಪರೇಷನ್ಸ್

ಫ್ರೆಜುನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್: ಬಿಲ್ಲಿಂಗ್ ಆಪರೇಷನ್ಸ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಅಕೌಂಟಿಂಗ್, ಫೈನಾನ್ಸ್, ಗೂಗಲ್ ಶೀಟ್ಸ್, ಎಂಎಸ್ ಎಕ್ಸೆಲ್, ಅಟೆನ್ಷನ್ ಟು ಡೀಟೇಲ್ ಮತ್ತು ಆಪರೇಷನ್ಸ್ ಬಗ್ಗೆ ಜ್ಞಾನ ಇರುವ ಹಾಗೂ ಪರಿಣಾಮಕಾರಿ ಸಂವಹನ ಕೌಶಲ ಇರುವ ವಿದ್ಯಾರ್ಥಿಗಳು ಜೂನ್ 7ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 10,000–15,000. ಸಂಪರ್ಕ: internshala.com/i/8dabce.

ಬೆಂಗಳೂರು ಕೇಂದ್ರಿತ ಇಂಟರ್ನ್‌ಶಿಪ್

ಡೇಟಾ ರಿಸರ್ಚ್ ಎಕ್ಸಿಕ್ಯುಟಿವ್

ಟ್ರೇಡ್‌ಪಾಸ್: ಡೇಟಾ ರಿಸರ್ಚ್ ಎಕ್ಸಿಕ್ಯುಟಿವ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಹಬ್‌ಸ್ಪಾಟ್ ಮತ್ತು ಎಂಎಸ್ ಎಕ್ಸೆಲ್ ಬಗ್ಗೆ ಅರಿವಿರುವ, ಪರಿಣಾಮಕಾರಿ ಸಂವಹನ ಕೌಶಲ ಹೊಂದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆಗೆ ಜೂನ್ 7 ಕಡೇ ದಿನ. ಸ್ಟೈಪೆಂಡ್– ₹ 10,000–12,000. ಸಂಪರ್ಕ: internshala.com/i/1260a8.

ಕ್ರಿಯೇಟಿವ್ ಡಿಸೈನ್

ಟೆಸ್ಟ್‌ಲೈನ್: ಕ್ರಿಯೇಟಿವ್ ಡಿಸೈನ್ ಇಂಟರ್ನಿಗಳ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳಿಗೆ ಗ್ರಾಫಿಕ್ ಡಿಸೈನ್, ಇನ್‌ಫ್ಲುಯೆನ್ಸರ್ ಮಾರ್ಕೆಟಿಂಗ್, ಮಾರ್ಕೆಟಿಂಗ್ ಕ್ಯಾಂಪೇನ್ಸ್ ಮತ್ತು ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್‌ನಲ್ಲಿ ಅನುಭವ ಇರಬೇಕು. ಜೂನ್ 5ರ ಒಳಗೆ ಅರ್ಜಿ ಸಲ್ಲಿಸಬೇಕು. ತಿಂಗಳಿಗೆ ಸ್ಟೈಪೆಂಡ್– ₹ 15,000–30,000. ಸಂಪರ್ಕ– internshala.com/i/5cf6f9.

ಕಲಿತು ಸಾಧಿಸು, ಗೊಂದಲ ನೀಗಿಸು



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• **ಪಿಯುಸಿ ವಿಜ್ಞಾನ ವಿಭಾಗದಲ್ಲಿ ಮೊದಲು ನಪಾಸಾದೆ. ಮರುವರ್ಷ ಓದಿ ಪಾಸಾದೆ. ನನಗೇನೋ ಚೆನ್ನಾಗಿ ಓದಬೇಕು, ಒಳ್ಳೆಯ ನೌಕರಿ ಹಿಡಿಯಬೇಕು ಅಂತ ಅನ್ನಿಸುತ್ತದೆ. ಆದರೆ ಮುಂದಿನ ಓದಿನಲ್ಲಿ ನನಗೆ ಆಸಕ್ತಿ ಉಳಿದಿಲ್ಲ. ಬೇರೆ ಯಾವ ಕೆಲಸ ಮಾಡಲು ಸಹ ಬರುವುದಿಲ್ಲ. ಸೋಷಿಯಲ್ ಮೀಡಿಯಾಗಳಲ್ಲಿ ಸಕ್ಸಸ್ ಆದವರ ಬಗ್ಗೆ ನೋಡುವಾಗ ನನಗೂ ಹಾಗೆಯೇ ಏನಾದರೂ ಮಾಡಬೇಕು, ಸಕ್ಸಸ್ ಆಗಬೇಕು ಅನ್ನಿಸುತ್ತದೆ. ಚಿಕ್ಕದಾಗಿ ಒಂದು ಟೀ ಅಂಗಡಿ ಇಟ್ಟು, ನಂತರ ಅದರದ್ದೇ ಚೇನ್ ಮಾಡಬಹುದೇ ಅಂತನ್ನಿಸುತ್ತದೆ. ಒಂದು ವ್ಯಾನ್ ಖರೀದಿಸಿ ಬಾಡಿಗೆಗೆ ಓಡಿಸಿ, ಮುಂದೆ ನೂರಾರು ಲಾರಿಗಳನ್ನು ಇಟ್ಟುಕೊಂಡು ಲಾಜಿಸ್ಟಿಕ್ಸ್ ಬಿಸಿನೆಸ್ ಮಾಡಬಹುದೇ ಅಂತೆಲ್ಲ ಅನ್ನಿಸುತ್ತದೆ. ಆದರೆ ಮನೆಯಲ್ಲಿ ಪಾಲಕರು ನನ್ನ ಯಾವ ಐಡಿಯಾಗಳಿಗೂ ಪ್ರೋತ್ಸಾಹ ಕೊಡುವುದಿಲ್ಲ. ಓದು, ನೌಕರಿ ಮಾಡು ಎನ್ನುತ್ತಾರೆ. ಏನು ಮಾಡಬೇಕೋ ತಿಳಿಯುತ್ತಿಲ್ಲ. ನನ್ನ ಗೆಳೆಯರೂ ನನ್ನನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಗೊಂದಲವಾಗಿದೆ, ದಾರಿ ತೋರಿಸಿ.**

ಗಿಣಿದಯಾ ಕಾಂತೇಶ, ಹುಬ್ಬಳ್ಳಿ

ಕೆಲವು ಸಲ ಪರೀಕ್ಷೆಗಳಲ್ಲಿ ನಪಾಸಾಗುವುದರಿಂದ ಅಥವಾ ಬೇರೇನೋ ಕಾರಣಗಳಿಂದ ಜೀವನದ ಗತಿ ಬದಲಾಗುತ್ತದೆ. ಅಷ್ಟಕ್ಕೇ ಎದೆಗುಂದಬಾರದು. ನಾವು ಅಂದುಕೊಂಡಿದ್ದನ್ನು ಸಾಧಿಸಲು, ಗೆದ್ದು ನಿಲ್ಲಲು ಅಪರಿಮಿತವಾದ ಶ್ರಮ, ಸಹನೆ ಹಾಗೂ ನಿರಂತರ ಪ್ರಯತ್ನ ಬೇಕಾಗುತ್ತದೆ. ನಿನ್ನ ಪಾಲಕರಾಗಲಿ, ಗೆಳೆಯರಾಗಲಿ ನಿನ್ನ ಆಸೆಯ ಬಗ್ಗೆ, ಕನಸಿನ ಬಗ್ಗೆ ಹೇಳಿದಾಗ ಅದನ್ನು ಕೇಳುತ್ತಾರಾದರೂ, ನಿನಗೆ ಪ್ರೋತ್ಸಾಹ ಕೊಡುವುದಿಲ್ಲ. ಆಗ ನಿನಗೆ ಬೇಸರವಾಗುತ್ತದೆ. ಒಳಗೊಳಗೇ ಕುಸಿದಂತೆ ಆಗುತ್ತದೆ. ವಿನಾಕಾರಣ ಕೋಪ ಬರುತ್ತದೆ. ಇದೆಲ್ಲ ಸಹಜ.

ಬೇರೆ ಬೇರೆ ಕ್ಷೇತ್ರಗಳಲ್ಲಿ ಯಶಸ್ಸು ಪಡೆದವರನ್ನು ನೋಡುವಾಗ, ಯಶಸ್ವಿ ವ್ಯಕ್ತಿಯಾಗುವುದು ಎಷ್ಟೊಂದು ಸುಲಭ ಎಂದನ್ನಿಸುತ್ತದೆ. ಆದರೆ ಯಾವುದೇ ಕೆಲಸದಲ್ಲಿ ಯಶಸ್ಸು ಸಿಗಬೇಕಾದರೆ ಪ್ರಾಮಾಣಿಕವಾಗಿ ಬಹಳ ಶ್ರಮಪಡಬೇಕು. ನಿನ್ನ ಮನಸ್ಸಿಗೆ ಬಹಳ ಇಷ್ಟವಾಗುವ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು. ಒಂದೇ ಒಂದು ಲಾರಿಯಿಂದ ಲಾಜಿಸ್ಟಿಕ್ ಬಿಸಿನೆಸ್ ಪ್ರಾರಂಭಿಸಿ, ಮುಂದಿನ ಮೂವತ್ತು ವರ್ಷಗಳಲ್ಲಿ ಸಾವಿರಾರು ಲಾರಿಗಳ ಮಾಲೀಕರಾದವರಲ್ಲಿ, ನಮ್ಮವರೇ ಆಗಿರುವ ವಿಜಯ ಸಂಕೇಶ್ವರ ಇದ್ದಾರೆ. ಅದೇ ಬಿಸಿನೆಸ್ ಅನ್ನು ಪ್ರಾರಂಭಿಸಿದವರು ಅನೇಕರು ಇದ್ದಾರಾದರೂ ಸತತ ಪರಿಶ್ರಮದಿಂದ ಸಂಕೇಶ್ವರ ಅವರಷ್ಟು ಸಾಧನೆ ಮಾಡಿದವರು ವಿರಳ.

ಇವತ್ತಿನ ಸೋಷಿಯಲ್ ಮೀಡಿಯಾಗಳ ಪ್ರಭಾವದಿಂದ ಬಹಳಷ್ಟು ಯುವಕರು ಬಣ್ಣದ ಕನಸುಗಳ ಅಮಲಿನಲ್ಲಿ ತೇಲುವುದನ್ನು ರೂಢಿಸಿಕೊಂಡಿದ್ದಾರೆ. ಇನ್ನು ಕೆಲವರು ಏನೇನೂ ಅನುಭವ ಇಲ್ಲದೆ ಏನೇನನ್ನೋ ಮಾಡಲು ಮುಂದಾಗಿ ಮುಗ್ಗರಿಸಿದ್ದಾರೆ. ಹಾಗಾಗಿ, ಯಾವುದನ್ನೇ ಆಗಲಿ ಶುರುಮಾಡುವುದಕ್ಕೆ ಮೊದಲು ನಿಧಾನವಾಗಿ ಆಲೋಚಿಸಬೇಕು. ಕೆಲಸವನ್ನು ಕಲಿತುಕೊಳ್ಳಬೇಕು. ಯಾವುದನ್ನೂ ಕಲಿತುಕೊಳ್ಳದೆ ಯಾರಿಂದಲೂ ಏನನ್ನೂ ಸಾಧಿಸಲು ಸಾಧ್ಯವಿಲ್ಲ.

ನೀನೂ ಅಷ್ಟೆ, ಈಗಿನ ಕಾಲಕ್ಕೆ ಅಗತ್ಯ ಇರುವಂತೆ ಮೊದಲು ಚೆನ್ನಾಗಿ ಓದಿ, ಒಂದು ಪದವಿ ಗಳಿಸು. ಜೊತೆಗೆ ಬೇರೆ ಯಾವುದಾದರೂ ವಿಷಯವನ್ನು ಕಲಿತುಕೊಳ್ಳಲು ಪ್ರಯತ್ನಿಸು. ಅವಕಾಶ ಸಿಕ್ಕಾಗ ಬೇರೆ ಬೇರೆ ಊರುಗಳಿಗೆ ಹೋಗು. ಅಷ್ಟಾಗುವಷ್ಟರಲ್ಲಿ ನಿನಗೆ ಜನಜೀವನದ ಬಗ್ಗೆ ಇನ್ನೂ ಒಂದಿಷ್ಟು ವಿಷಯಗಳು ತಿಳಿಯುತ್ತವೆ. ನೌಕರಿ ಮಾಡುವುದೋ ಬಿಸಿನೆಸ್ ಪ್ರಾರಂಭಿಸುವುದೋ ಎನ್ನುವುದನ್ನು ನಿರ್ಧರಿಸಲು ಸುಲಭವಾಗುತ್ತದೆ. ಯಾವುದಕ್ಕೂ ಅವಸರ, ಆತಂಕ ಬೇಡ. ಮನಸ್ಸನ್ನು ಶಾಂತವಾಗಿಸಿಕೊಳ್ಳಬೇಕು. ಪ್ರತಿದಿನ ಸಮತೋಲಿತ ಆಹಾರ ಸೇವಿಸುವುದರ ಜೊತೆಗೆ ಸಾಕಷ್ಟು ವ್ಯಾಯಾಮ ಮಾಡುವುದನ್ನು ರೂಢಿಸಿಕೊಳ್ಳಬೇಕು.

ವಿದ್ಯಾರ್ಥಿ ವೇತನ ಕೈಪಿಡಿ

ಕುಶಲಕರ್ಮಿಗಳ ಮಕ್ಕಳಿಗಾಗಿ ಮಿಂತ್ರಾ ಕೇರ್ಸ್

ಮಿನ್ ವಿದ್ಯಾ: ಮಿಂತ್ರಾ ಕೇರ್ಸ್ ವಿದ್ಯಾರ್ಥಿವೇತನವನ್ನು ಗಾರ್ಮೆಂಟ್ಸ್ ಕಾರ್ಮಿಕರು ಹಾಗೂ ಕುಶಲಕರ್ಮಿಗಳ ಕುಟುಂಬದ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಎನ್‌ಎಸ್‌ಡಿಸಿ ಪ್ರಮಾಣಿತ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮ ಒಳಗೊಂಡಂತೆ, ರಾಜ್ಯ ಮತ್ತು ಕೇಂದ್ರ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣವನ್ನು ಮುಂದುವರಿಸಲು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಈ ನೆರವು ದೊರೆಯುತ್ತದೆ.

ಅರ್ಹತೆ: ಅರ್ಜಿದಾರರು ಯಾವುದೇ ವಿಭಾಗದಲ್ಲಿ 12ನೇ ತರಗತಿಯನ್ನು ಕನಿಷ್ಠ ಶೇ 60ರಷ್ಟು ಅಂಕಗಳೊಂದಿಗೆ ಪೂರ್ಣಗೊಳಿಸಿರಬೇಕು. ಮಾನ್ಯತೆ ಪಡೆದ ರಾಜ್ಯ/ಕೇಂದ್ರ ವಿಶ್ವವಿದ್ಯಾಲಯದಲ್ಲಿ ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿಬಿಎ, ಬಿಸಿಎ ಇತ್ಯಾದಿ ಯಾವುದಾದರೂ ಕೋರ್ಸ್‌ಗೆ ದಾಖಲಾಗಿರಬೇಕು.

ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ₹ 5 ಲಕ್ಷಕ್ಕಿಂತ ಕಡಿಮೆ ಇರಬೇಕು. ಎನ್‌ಎಸ್‌ಡಿಸಿ ಉದ್ಯೋಗ ಕೌಶಲದಡಿ ಅರ್ಜಿ ಸಲ್ಲಿಸುವವರು 14ರಿಂದ 30 ವರ್ಷದೊಳಗಿನವರು ಆಗಿರಬೇಕು. 10ನೇ ತರಗತಿಯನ್ನು ಪೂರ್ಣಗೊಳಿಸಿರಬೇಕು (ಕನಿಷ್ಠ ಅಂಕಗಳ ಮಿತಿ ಇಲ್ಲ). ಎನ್‌ಎಸ್‌ಡಿಸಿ ಪ್ರಮಾಣೀಕೃತ ತರಬೇತಿ ಕೋರ್ಸ್, ಎನ್‌ಎಚ್‌ಡಿಪಿ, ಸಮರ್ಥ್ ಅಥವಾ ಐಟಿಐಎಚ್‌ಟಿ ಕಾರ್ಯಕ್ರಮಗಳ ಅಡಿಯಲ್ಲಿ ದಾಖಲಾಗಿರಬೇಕು.

ಆರ್ಥಿಕ ನೆರವು: ಆಯ್ಕೆಯಾದ ವಿದ್ಯಾರ್ಥಿಗಳು 3 ವರ್ಷಗಳವರೆಗೆ ಪ್ರತಿವರ್ಷ ₹ 20,000 ವಿದ್ಯಾರ್ಥಿವೇತನ ಪಡೆಯುತ್ತಾರೆ.

ಅರ್ಜಿ ಸಲ್ಲಿಕೆಗೆ ಕೊನೇ ದಿನ: 19-05-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/MVMCSP1

ಎಸ್ಸೆಸ್ಸೆಲ್ಸಿ ದಿಕ್ಸೂಚಿ | ಪಿಯುಸಿ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ (ಇತಿಹಾಸ)

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

17) ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದವರು ಯಾರು?

ಉತ್ತರ:– ಫ್ರೆಂಚರು

18) ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಆತನ ರಕ್ಷಣೆಗೆ ಫ್ರೆಂಚರು ಯಾರನ್ನು ನೇಮಿಸಿದ್ದರು?

ಉತ್ತರ:– ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ 'ಬುಸ್ಸಿ' ಎಂಬ ಅಧಿಕಾರಿಯನ್ನು ನೇಮಿಸಿದ್ದರು.

19) ಎರಡನೆಯ ಕಾರ್ನಾಟಿಕ್ ಯುದ್ಧವು ಯಾವ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು?

ಉತ್ತರ:– ಎರಡನೆಯ ಕಾರ್ನಾಟಿಕ್ ಯುದ್ಧವು ಪಾಂಡಿಚೇರಿ ಒಪ್ಪಂದದೊಂದಿಗೆ ಮುಕ್ತಾಯವಾಯಿತು.

20) ಎರಡನೆಯ ಕಾರ್ನಾಟಿಕ್ ಯುದ್ಧ ಕುರಿತು ಬರೆಯಿರಿ

ಉತ್ತರ:– ಫ್ರೆಂಚರು ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದರು. ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ 'ಬುಸ್ಸಿ' ಎಂಬ ಅಧಿಕಾರಿಯನ್ನು ನೇಮಿಸಿದ್ದರು. ಮತ್ತೊಂದು ಕಡೆ ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾಗಿದ್ದನು ಆದರೆ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿ ರಾಬರ್ಟ್ ಕ್ಲೈವನು ಕಾರ್ನಾಟಿಕದ ರಾಜಧಾನಿ ಆರ್ಕಾಟಿನ ಮೇಲೆ ಆಕ್ರಮಣ ಮಾಡಿ ಫ್ರೆಂಚರು ಮತ್ತು ಚಂದಾಸಾಹೇಬನನ್ನು ಸೋಲಿಸಿದನು. ಅಂತಿಮವಾಗಿ ಈ ಯುದ್ಧದಲ್ಲಿ ಚಂದಾಸಾಹೇಬನನ್ನು ಬಂಧಿಸಿ ಹತ್ಯೆ ಮಾಡಲಾಯಿತು. ಅವನ ಸ್ಥಾನಕ್ಕೆ ಬ್ರಿಟಿಷರು ಅನ್ವರುದ್ದೀನನ ಮಗನಾದ ಮಹಮ್ಮದ್ ಅಲಿಯನ್ನು ನವಾಬನಾಗಿ ನೇಮಕ ಮಾಡಿದರು. ಕೊನೆಗೆ ಎರಡನೆಯ ಕಾರ್ನಾಟಿಕ್ ಯುದ್ಧವು ಪಾಂಡಿಚೇರಿ ಒಪ್ಪಂದದೊಂದಿಗೆ ಮುಕ್ತಾಯವಾಯಿತು. ಫ್ರೆಂಚರು ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡರು. ಈ ಯುದ್ಧವು ಫ್ರೆಂಚರಿಗೆ ರಾಜಕೀಯ ಹಿನ್ನಡೆಯನ್ನು, ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು.

21) ಮೂರನೆಯ ಕಾರ್ನಾಟಿಕ್ ಯುದ್ಧ ಬಗ್ಗೆ ಬರೆಯಿರಿ

ಉತ್ತರ: ಫ್ರೆಂಚರ 'ಕೌಂಟ್ ಡಿ ಲಾಲಿ'ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು. ಈ ನಿರ್ಣಾಯಕ ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೇನಾಧಿಕಾರಿ ಸರ್. ಐರ್ ಕೂಟನು ಫ್ರೆಂಚರನ್ನು ಸೋಲಿಸಿದನಲ್ಲದೆ, ಬುಸ್ಸಿಯನ್ನು ಸೆರೆಹಿಡಿದನು. ಲಾಲಿಯು ತಪ್ಪಿಸಿಕೊಂಡು ಪಾಂಡಿಚೇರಿಯಲ್ಲಿ ತಲೆಮರೆಸಿಕೊಂಡನು. ಅಂತಿಮವಾಗಿ ಐರ್‌ಕೂಟನು ಪಾಂಡಿಚೇರಿಗೂ ಮುತ್ತಿಗೆ ಹಾಕಿದಾಗ ಲಾಲಿಯು 1761ರಲ್ಲಿ ಬೇಷರತ್ತಾಗಿ ಶರಣಾದನು. ಕಾರ್ನಾಟಿಕ್ ಯುದ್ಧಗಳ ಪರಿಣಾಮವಾಗಿ ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲ ನೆಲೆಗಳನ್ನು ಕಳೆದುಕೊಂಡರು. ಅದಾಗ್ಯೂ 1763ರಲ್ಲಿ ನಡೆದ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು. ಈ ಬೆಳವಣಿಗೆಗಳೊಂದಿಗೆ ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು. ಹೀಗೆ ಬ್ರಿಟಿಷರು ತಮ್ಮ ಇತರ ಯುರೋಪಿಯನ್ ಪ್ರತಿಸ್ಪರ್ಧಿಗಳನ್ನು ದಮನ ಮಾಡಿ ದಕ್ಷಿಣ ಭಾರತವನ್ನು ಗೆಲ್ಲುವ ಕಾರ್ಯದಲ್ಲಿ ಮಗ್ನರಾದರು.

22) ರಾಬರ್ಟ್ ಕ್ಲೈವ್ ಬಗ್ಗೆ ಬರೆಯಿರಿ

ಉತ್ತರ:– ಭಾರತದಲ್ಲಿ ಬ್ರಿಟಿಷ್ ಅಧಿಕಾರವನ್ನು ಕಟ್ಟಿದ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರಕೂನನಾಗಿ ಸೇವೆಗೆ ಸೇರಿದ್ದನು. ಕಾರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ ಆರ್ಕಾಟ್‌ನ ಮುತ್ತಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿ, ಬ್ರಿಟಿಷರ ವಿಜಯಕ್ಕೆ ಕಾರಣನಾದನು. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಅಸ್ತಿತ್ವ ರೂಪಿಸುವಲ್ಲಿ ಸಫಲನಾದ ಈತ ಬಂಗಾಳದ ವಿಜಯಕ್ಕೂ ಕಾರಣನಾದನು. 1757ರ ಪ್ಲಾಸಿ ಕದನದ ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೆ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು. ಅಪಾರ ಸಂಪತ್ತಿನಿಂದ ಇಂಗ್ಲೆಂಡಿಗೆ ಹಿಂದಿರುಗಿದ ಕ್ಲೈವನು ಸಂಸತ್ತಿನ ಸದಸ್ಯನಾಗಿ ಸಹ ನೇಮಕಗೊಂಡನು. ರಾಬರ್ಟ್ ಕ್ಲೈವನು ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸತೊಡಗಿತು. ಅವನ ಮೇಲೆ ಆಪಾದನೆಗಳು ಇದ್ದಾಗ್ಯೂ ಸಹ ಅನಿವಾರ್ಯತೆಯಲ್ಲಿ ಸರ್ಕಾರವು ಮತ್ತೆ ಕ್ಲೈವ್‌ನನ್ನು ಬ್ರಿಟಿಷರ ಘನತೆ ಮತ್ತು ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಭಾರತಕ್ಕೆ ಸೇನಾಪತಿಯಾಗಿ ಕಳುಹಿಸಿಕೊಟ್ಟಿತು.

ಬಕ್ಸಾರ್ ಕದನದಲ್ಲಿ ಮತ್ತೆ ವಿಜಯಿಯಾಗಿ ಬ್ರಿಟಿಷರಿಗೆ ಘನತೆಯನ್ನು ತಂದುಕೊಟ್ಟ ಕ್ಲೈವನು ಬಂಗಾಳ, ಬಿಹಾರ, ಒಡಿಶಾ ಪ್ರಾಂತ್ಯಗಳ ಮೇಲೆ ದಿವಾನಿ ಹಕ್ಕನ್ನು ಕಂಪನಿಗೆ ತಂದುಕೊಟ್ಟನು. ಇದರಿಂದ ಮತ್ತೆ ಸಂಪತ್ತನ್ನು ತನಗೂ ಮತ್ತು ಈಸ್ಟ್ ಇಂಡಿಯಾ ಕಂಪನಿಗೆ ದೊರಕಿಸಿಕೊಂಡು 1767ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದನು.

23) ಡೂಪ್ಲೆ ಬಗ್ಗೆ ಬರೆಯಿರಿ

ಉತ್ತರ:– ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗವರ್ನರ್ ಜನರಲ್ ಆಗಿ 1742ರಲ್ಲಿ ನೇಮಕಗೊಂಡನು. ಭಾರತದ ಮೇಲೆ ರಾಜಕೀಯ ಅಧಿಪತ್ಯ ಸ್ಥಾಪನೆಯ ಕನಸನ್ನು ಕಾಣುತ್ತಿದ್ದ ಡೂಪ್ಲೆ ಇಲ್ಲಿನ ದೇಶೀಯ ರಾಜರುಗಳ ಜೊತೆ ಒಪ್ಪಂದಗಳನ್ನು ಮಾಡಿಕೊಂಡಿದ್ದನು. ಡೂಪ್ಲೆ ಕಟ್ಟಿದ ದೇಶಿ ಸೇನೆಯಿಂದಲೇ ಹೈದರಾಲಿಯು ಸಹ ತರಬೇತಿ ಪಡೆದಿದ್ದನು. ಬ್ರಿಟಿಷರಿಗೆ ಡೂಪ್ಲೆಯು ತಮ್ಮ ಅಧಿಪತ್ಯ ಸ್ಥಾಪನೆಗೆ ಸವಾಲಾಗಿ ಪರಿಣಮಿಸಿದ. ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ಬ್ರಿಟಿಷರ ನಡುವಿನ ಸಂಘರ್ಷವು 1754ರವರೆಗೆ ನಡೆಯಿತು. ತದನಂತರದಲ್ಲಿ ಫ್ರಾನ್ಸಿನ ಸರ್ಕಾರವೇ ಶಾಂತಿಯನ್ನು ಬಯಸಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡಿತು.

24) ದಸ್ತಕ್ ಎಂದರೇನು?

ಉತ್ತರ: ಯಾವುದೇ ತೆರಿಗೆ ಇಲ್ಲದೇ ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಾಣೆ ಮಾಡಲು ಬೇಕಾದ ಪರವಾನಿಗೆ ಪತ್ರ

25) 1717ರಲ್ಲಿ ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪರವಾನಿಗೆ(ದಸ್ತಕ) ನೀಡಿದವರು ಯಾರು?

ಉತ್ತರ:– ಮೊಗಲ್ ಫಾರೂಕ್ ಷಿಯಾರ

26) ದಸ್ತಕ್ ಅನ್ನು ಯಾರು ದುರುಪಯೋಗ ಪಡಿಸಿಕೊಳ್ಳತೊಡಗಿದರು?

ಉತ್ತರ:– ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ನೌಕರರು ತಮ್ಮ ಖಾಸಗಿ ವ್ಯಾಪಾರ–ವ್ಯವಹಾರಕ್ಕಾಗಿ ದುರುಪಯೋಗ ಪಡಿಸಿಕೊಳ್ಳತೊಡಗಿದರು

27) ದಸ್ತಕ್ ಅನ್ನು ದುರುಪಯೋಗಪಡಿಸಿಕೊಂಡ ಪರಿಣಾಮ ಯಾವ ಯುದ್ಧಗಳು ನಡೆದವು?

(ಮುಂದುವರಿಯುವುದು)

PHYSICS

Chapter – 1

ELECTRIC CHARGES AND FIELDS

27) A bird perches on a bare high power line and nothing happens to the bird. A man standing on the ground touches the same line and gets a fatal shock. Why?

Ans:- When a bird perches on a bare high power line, the circuit does not get completed between the bird and the earth and therefore nothing happens to the bird, but when a man standing on the ground touches the same line, the circuit between the man and the earth gets completed. As a result, he gets a fatal shock.

28) What is the importance of the Coulomb's law in vector form?

Ans:- The importance of the Coulomb's law in vector form, is that it directly follows that the forces exerted by the two charges on each other are equal and opposite. Further, the force, which one charge exerts on the other, acts along the line joining the two charges that is., electrostatic force is a central force.

29) Why can one ignore quantisation of electric charge when dealing with macroscopic i.e., large scale charges?

Ans:- At macroscopic level, the quantization of charge has no practical importance because the charge at this level is very large as compared to elementary charge 'e' i.e., 1.6×10^{-19} C.

Eg:- A small charge of $1 \mu C$ has about 10^{13} electronic charges. In such cases the charge may be treated as continuous and not quantized.

30) What are electric field lines?

Ans:- Electric field lines are a way of pictorially mapping the electric field around a configuration of charges. An electric field line is, in general, a curve drawn in such a way that the tangent to it at each point is in the direction of the net field at that point. An arrow on the curve specifies the direction of the electric field from the two possible directions indicated by a tangent to the curve. A field line is a space curve, i.e., a curve in three dimensions.

31) An electrostatic field line is a continuous curve. That is, a field line cannot have sudden breaks. Why not?

Ans:- An electrostatic field line starts from a positive charge and ends at a negative charge, tangent to this line at any point represents the direction of the field at that point since electric field is continuous so the line has to be continuous.

32) Mention the general properties followed by the electric field lines.

Ans:- The general properties followed by the electric field lines are –

a) The field lines start from positive charges and end at negative charges. If there is a single charge, they may start or end at infinity.

b) In a charge-free region, electric field lines can be taken to be continuous curves without any breaks.

c) Two field lines can never cross each other.

d)Electrostatic field lines do not form any closed loops.

33) No two electric field lines can intersect each other. Why?

Ans:- There would be two directions of electric field intensity at the same point i.e., at the point of intersection if two electric lines of force intersect each other, which is not possible. Hence, no two electric field lines can intersect each other.

34) State the principle of superposition of electric fields.

Ans:- Net electric field strength at a point due to a group of charges is equal to the vector sum of all the electric field strength produced due to individual charges at that point.

35) Does a dipole experience a force when placed in the non-uniform electric field?

Ans:- Dipole experiences a net force, because both of its charges experience unequal forces and in different direction.

MULTIPLE CHOICE QUESTIONS:-

1. The direction of electric field vector at a point on the equatorial line of a dipole is

(A) in the same direction of dipole moment
(B) in the opposite direction to the dipole moment
(C) towards negative charge
(D)towards positive charge

Ans:- B

2. Dipole moment is a vector quantity, which is pointing from

(A) –q to +q along the axis of an electric dipole.
(B) +q to – q along the axis of an electric dipole.
(C) infinity to +q (D) +q to infinity.

Ans:- A

3. Name the physical quantity which has the dimensional formula[LTA]

(A) line charge density (B) capacitance
(C) dipole moment (D) charge

Ans:-C

4. ____________ placed in an electric field experiences a force in the direction opposite to the electric field.

(A) An electron (B) A positive charge
(C) A neutron (D) A proton.

Ans:- A

5. When a free electric dipole placed in a non-uniform electric field, the dipole will experience

(A) both force and torque
(B) only force but not torque
(C) only torque but not force
(D) neither torque nor force

Ans:- A

6. A point positive charge is brought near an isolated conducting sphere as in the figures given below. The electric field is best given by A point positive charge is brought near an *(Contd...)*

ಆಹಾರ: ಕೃತಕ ಬಣ್ಣಕ್ಕೆ ಇಲ್ಲ ಕಡಿವಾಣ

ನಿಯಮ ಬಾಹಿರ ಬಣ್ಣ ಬಳಸುತ್ತಿರುವುದು ಆಹಾರ ಸುರಕ್ಷತೆ ಇಲಾಖೆಯ ಪರಿಶೀಲನೆಯಲ್ಲಿ ದೃಢ •ಮೊಕದ್ದಮೆ ದಾಖಲು

• ವರುಣ ಹೆಗಡೆ



ಆಹಾರ ಹಾಗೂ ಪಾನೀಯಗಳು ಸುರಕ್ಷಿತವಾಗಿರಬೇಕು. ಈ ನಿಟ್ಟಿನಲ್ಲಿ ಬೀದಿ ಬದಿಯ ಹಾಗೂ ಹೋಟೆಲ್‌ಗಳಲ್ಲಿನ ಆಹಾರ ಪದಾರ್ಥಗಳನ್ನು ನಿಯಮಿತವಾಗಿ ತಪಾಸಣೆ ಮಾಡಲಾಗುತ್ತಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಬೆಂಗಳೂರು: ಬೀದಿ ಬದಿ ಹಾಗೂ ಹೋಟೆಲ್‌ಗಳಲ್ಲಿ ಸಿಗುವ ವಿವಿಧ ತಿನಿಸುಗಳು ಮತ್ತು ಆಹಾರ ಪದಾರ್ಥಗಳಲ್ಲಿ ಅಸುರಕ್ಷಿತ ಕೃತಕ ಬಣ್ಣಗಳನ್ನು ನಿಯಮಬಾಹಿರವಾಗಿ ಬಳಸುತ್ತಿರುವುದು ಆಹಾರ ಸುರಕ್ಷತೆ ಇಲಾಖೆ ನಡೆಸಿದ ವಿಶ್ಲೇಷಣೆಯಿಂದ ದೃಢಪಟ್ಟಿದೆ.

ಇಲಾಖೆಯ ಅಧಿಕಾರಿಗಳು ಆಹಾರದ ಗುಣಮಟ್ಟ ಪರಿಶೀಲನೆಗೆ ವಿಶೇಷ ಅಭಿಯಾನಗಳನ್ನು ಕೈಗೊಂಡು, ಕೆಲ ಹೋಟೆಲ್ ಹಾಗೂ ಬೀದಿ ಬದಿ ಮಳಿಗೆಗಳಿಂದ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಪರಿಶೀಲನೆಗೆ ಒಳಪಡಿಸುತ್ತಿದ್ದಾರೆ. ಆಹಾರ ಸುರಕ್ಷತೆ, ಗುಣಮಟ್ಟ ಮತ್ತು ನೈರ್ಮಲ್ಯಕ್ಕೆ ಆದ್ಯತೆ ನೀಡದವರ ಮೇಲೆ ದಂಡ ಸೇರಿ ಕಾನೂನಿನಡಿ ವಿವಿಧ ಕ್ರಮಗಳನ್ನು ಕೈಗೊಳ್ಳುವ ಜತೆಗೆ, ಅಸುರಕ್ಷಿತ ಹಾಗೂ ನಿಷೇಧಿತ ಕೃತಕ ಬಣ್ಣಗಳನ್ನು ಬಳಕೆ ಮಾಡದಂತೆ ಜಾಗೃತಿ ಮೂಡಿಸುತ್ತಿದ್ದಾರೆ. ಇಷ್ಟಾಗಿಯೂ ಕೆಲ ಹೋಟೆಲ್ ಮತ್ತು ಬೀದಿ ಬದಿ ಮಳಿಗೆಗಳಲ್ಲಿ ನಿಯಮಬಾಹಿರವಾಗಿ ಕೃತಕ ಬಣ್ಣ ಬಳಸಲಾಗುತ್ತಿದ್ದು, 72

ಕೃತಕ ಬಣ್ಣ ಬಳಕೆಗೆ ಅಧಿಕ ಪ್ರಕರಣ ದಾಖಲಾದ ಜಿಲ್ಲೆಗಳು	
ಜಿಲ್ಲೆ	ಪ್ರಕರಣ
ಬೆಳಗಾವಿ	12
ಬೆಂಗಳೂರು	10
ಬೀದರ್	07
ರಾಮನಗರ	07

ಮಾರಾಟಗಾರರ ಮೇಲೆ ಪ್ರಕರಣಗಳನ್ನು ದಾಖಲಿಸಲಾಗಿದೆ. ವಿಶ್ಲೇಷಣಾ ವರದಿ ಆಧರಿಸಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನೂ ದಾಖಲಿಸಲಾಗಿದೆ.

ಬೀದಿ ಬದಿ ಮಾರಾಟ ಮಾಡುವ ಪಾನಿಪುರಿ, ಮಸಾಲಪುರಿ ಸೇರಿ ವಿವಿಧ ಚಾಟ್ಸ್‌ಗಳು, ಜಿಲೇಬಿ, ಕೇಕ್, ಜಾಮೂನು ಸೇರಿ ವಿವಿಧ ಸಿಹಿ ತಿನಿಸುಗಳು, ಹೋಟೆಲ್‌ಗಳಲ್ಲಿ ಚಟ್ನಿ, ಸಾಸ್‌ಗಳ ಜತೆಗೆ ಗೋಬಿ ಮಂಚೂರಿ, ಕಬಾಬ್ ಸೇರಿ ವಿವಿಧ ಆಹಾರ



ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಎರಡು ವರ್ಷಗಳ ಅವಧಿಯಲ್ಲಿ 3,505 ಆಹಾರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಅವುಗಳ ವಿಶ್ಲೇಷಣೆ ಬಳಿಕ ಕೆಲವು ಮಾದರಿಗಳು ಅಸುರಕ್ಷಿತವೆಂಬ ವರದಿಗಳು ಬಂದಿವೆ. ರಾಜ್ಯದಾದ್ಯಂತ 3,757 ಬೀದಿ ಬದಿ ಘಟಕಗಳನ್ನು ಪರೀಕ್ಷಿಸಿ, ಲೋಪವಿರುವ 849 ಘಟಕಗಳಿಗೆ ನೋಟಿಸ್ ನೀಡಲಾಗಿದೆ.

ಬಣ್ಣ ಬಳಕೆಗೆ ನಿರ್ಬಂಧ: ಗೋಬಿ ಮಂಚೂರಿ ಮತ್ತು ಕಬಾಬ್‌ಗಳಲ್ಲಿ ಕೃತಕ ಬಣ್ಣಗಳ ಬಳಕೆಯನ್ನು ನಿರ್ಬಂಧಿಸಿ ಇಲಾಖೆಯು 2024ರಲ್ಲಿ ಆದೇಶ ಹೊರಡಿಸಿದೆ. ಬಾಂಬೆ ಮಿಠಾಯಿಗೆ (ಕಾಟನ್ ಕ್ಯಾಂಡಿ) ನಿಷೇಧಿತ ಹಾಗೂ ಕ್ಯಾನ್ಸರ್ ಕಾರಕ 'ರೊಡಮೈನ್ ಬಿ' ಬಣ್ಣ ಬಳಕೆ ಮಾಡುತ್ತಿರುವುದು ಪ್ರಯೋಗಾಲಯದ ವಿಶ್ಲೇಷಣೆಯಿಂದ ದೃಢಪಟ್ಟಿತ್ತು. ಆದ್ದರಿಂದ ಅವುಗಳಿಗೂ ಕೃತಕ ಬಣ್ಣ ಬಳಕೆ ನಿರ್ಬಂಧಿಸಿ ಈ ಹಿಂದೆ ಆದೇಶ ಹೊರಡಿಸಲಾಗಿದೆ. ಬೀದಿ ಬದಿ ಮಳಿಗೆಗಳು ಹಾಗೂ ಹೋಟೆಲ್‌ಗಳಲ್ಲಿ ಅಲ್ಲಿಯೇ ಆಹಾರ ಪದಾರ್ಥಗಳನ್ನು ಸಿದ್ಧಪಡಿಸುವುದರಿಂದ ಬಣ್ಣ ಬಳಕೆಗೆ ಅವಕಾಶವಿಲ್ಲ. ಆದಾದ ಮೇಲೂ ಬಳಸುತ್ತಿದ್ದವರ ಮೇಲೆ ದಾಖಲಿಸಲಾದ ಪ್ರಕರಣಗಳಲ್ಲಿ ಒಟ್ಟು ₹2.22 ಲಕ್ಷ ದಂಡ ವಿಧಿಸಲಾಗಿದೆ.

'ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2005ರ ಅಡಿ ರಾಜ್ಯದಾದ್ಯಂತ ಬೀದಿ ಬದಿ ಆಹಾರ ಮಳಿಗೆ ಹಾಗೂ ಹೋಟೆಲ್‌ಗಳಲ್ಲಿ ಪರಿಶೀಲನೆ ನಡೆಸಲಾಗಿದೆ. ನಿಗದಿತ ಮಾನದಂಡ ಪಾಲಿಸದ ಮಳಿಗೆಗಳಿಗೆ ನೋಟಿಸ್ ನೀಡಿದ್ದು, ಕೆಲವರಿಗೆ ದಂಡ ವಿಧಿಸಲಾಗಿದೆ. ಆಹಾರ ಪದಾರ್ಥಗಳ ಬಳಕೆಗೆ ಅನುಮೋದನೆ ನೀಡಿರದ ಬಣ್ಣ ಬಳಸಿದಲ್ಲಿ ಅಥವಾ ಅನುಮೋದಿತ ಕೃತಕ ಬಣ್ಣಗಳನ್ನು ನಿಗದಿತ ಪ್ರಮಾಣಕ್ಕಿಂತ ಅಧಿಕ ಬಳಸಿದಲ್ಲಿ, ಅಂತಹ ಆಹಾರ ಮಾದರಿಗಳನ್ನು ಪ್ರಯೋಗಾಲಯದ ವಿಶ್ಲೇಷಣೆ ಅನುಸಾರ ಅಸುರಕ್ಷಿತವೆಂದು ಪರಿಗಣಿಸಲಾಗುತ್ತಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಬಳಸಿದ ಅಡುಗೆ ಎಣ್ಣೆ ಸಂಗ್ರಹ

ಬಳಸಿದ ಎಣ್ಣೆಯನ್ನು ಮರುಬಳಕೆ ತಡೆಯಲು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು ಕ್ರಮವಹಿಸಿದ್ದು, ಕಳೆದ ಎರಡು ವರ್ಷಗಳು ನಡೆಸಿದ ವಿಶೇಷ ಅಭಿಯಾನದಡಿ ಅಡುಗೆ ಉದ್ದಿಮೆದಾರರಿಂದ 62.05 ಲಕ್ಷ ಲೀಟರ್ ಬಳಸಿದ ಅಡುಗೆ ಎಣ್ಣೆಯನ್ನು ಸಂಗ್ರಹಿಸಿದೆ. ಇದನ್ನು ಜೈವಿಕ ಇಂಧನವನ್ನಾಗಿ ಪರಿವರ್ತಿಸಲು ನಿಗದಿತ ಏಜೆನ್ಸಿಗೆ ಒದಗಿಸಲು ಕ್ರಮವಹಿಸಿದೆ.

ಆಹಾರ ನೈರ್ಮಲ್ಯ ಮತ್ತು ಸುರಕ್ಷತೆಯನ್ನು ಮತ್ತಷ್ಟು ಹೆಚ್ಚಿಸಲು ಇಲಾಖೆಯು ಹೋಟೆಲ್ ಹಾಗೂ ಕ್ಯಾಟರಿಂಗ್ ಉದ್ದಿಮೆದಾರರಿಗೆ ತರಬೇತಿಯನ್ನು ನೀಡುತ್ತಿದೆ. 2024ರಿಂದ ಈವರೆಗೆ 33 ಸಾವಿರ ಮಂದಿಗೆ ಈ ತರಬೇತಿ ಒದಗಿಸಲಾಗಿದೆ. ಇವರಲ್ಲಿ 3,716 ಮಂದಿ ಬೀದಿ ಬದಿ ವ್ಯಾಪಾರಿಗಳು ಸೇರಿದ್ದಾರೆ. ಅವರ ಕೌಶಲ ವೃದ್ಧಿಸುವ ಜತೆಗೆ, ಸ್ವಚ್ಛತೆ ಬಗ್ಗೆ ಅರಿವು ಮೂಡಿಸಲಾಗಿದೆ.

ಎಸ್‌ಐಆರ್: ಕಾನೂನು ಹೋರಾಟ

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ

ಪ್ರಜಾವಾಣಿ ವಾರ್ತೆ



ಪ್ರಿಯಾಂಕ್ ಖರ್ಗೆ

ಬೆಂಗಳೂರು: 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ಪಕ್ಷ ಹಾಗೂ ಸರ್ಕಾರದ ಕಡೆಯಿಂದ ಕಾನೂನು ಹೋರಾಟ ಮಾಡುತ್ತೇವೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಎಸ್‌ಐಆರ್ ಎನ್ನುವುದು ಬಿಜೆಪಿಯನ್ನು ಗೆಲ್ಲಿಸಲೆಂದೇ ಮಾಡಿರುವ ವಿನ್ಯಾಸ' ಎಂದು ಆರೋಪಿಸಿದರು.

'ಹೊಸ ನಿಯಮ ತಂದು ಯಾರನ್ನು ಬೇಕಾದರೂ ಮತದಾರರ ಪಟ್ಟಿಯಿಂದ ತೆಗೆಯಬಹುದು ಎಂದಾದರೆ, ಅದನ್ನು ಸಂವಿಧಾನದ ಪ್ರಕಾರ ನಡೆಯುತ್ತಿದೆ ಎಂದು ಹೇಳಲು ಆಗುತ್ತದೆಯೇ? ಇದು ಸಂಪೂರ್ಣ ಅಸಾಂವಿಧಾನಾತ್ಮಕ' ಎಂದು ವಾಗ್ದಾಳಿ ನಡೆಸಿದರು.

'ಎಸ್‌ಐಆರ್ ಮಾಡಬೇಡಿ ಎಂದು ನಾವು ಹೇಳುವುದಿಲ್ಲ. ಆದರೆ, ಕಾನೂನಾತ್ಮಕವಾಗಿ ಮಾಡಿ ಎನ್ನುವುದು ನಮ್ಮ ಬೇಡಿಕೆ. ಪ್ರತಿಯೊಬ್ಬ ನಾಗರಿಕನಿಗೂ ತೊಂದರೆ ಆಗದಂತೆ ಸಂವಿಧಾನದ ಹಕ್ಕು ಕೊಡಬೇಕು' ಎಂದರು.

'ಸಾರ್ವಜನಿಕರಿಂದ ಬಂದಿರುವ ದೂರುಗಳನ್ನು ಮೊದಲು ಚುನಾವಣಾ ಆಯೋಗ ಸರಿಪಡಿಸಬೇಕು. ಪಾರದರ್ಶಕವಾಗಿ ತಿದ್ದಿದ ಬಳಿಕವೇ ಎಸ್‌ಐಆರ್ ಪ್ರಕ್ರಿಯೆ ನಡೆಸಬೇಕು' ಎಂದೂ ಆಗ್ರಹಿಸಿದರು.

ಬಿಜೆಪಿಯವರದ್ದು ನಾಟಕ: ಪ್ರಧಾನಿ ಮೋದಿ ಅವರ ಇಂಧನ ಮಿತವ್ಯಯ ಕರೆಗೆ ಸ್ಪಂದಿಸಿದ ರಾಜ್ಯ ಬಿಜೆಪಿ ನಾಯಕರ ನಡೆಗೆ ವ್ಯಂಗ್ಯವಾಡಿದ ಪ್ರಿಯಾಂಕ್, 'ಬಿಜೆಪಿ ನಾಯಕರ ಮೆಟ್ರೊ ಮತ್ತು ಬೈಕ್ ಪ್ರಯಾಣ ಬರೀ ನಾಟಕ' ಎಂದಿದ್ದಾರೆ.

'ಒಂದು ದಿನ ಒಬ್ಬ ಮೆಟ್ರೊ ಹತ್ತುವುದು, ಮತ್ತೊಬ್ಬ ಬೈಕ್ ಹತ್ತುವುದು ಜನರಿಗಾಗಿ ಮಾಡಿದ ಕೆಲಸ ಅಲ್ಲ. ನಿಜವಾಗಿಯೂ ಜನರ ಕಷ್ಟ ಗೊತ್ತಾಗಬೇಕೆಂದರೆ ಪ್ರತಿದಿನ ಬಿಎಂಟಿಸಿ ಬಸ್ ಹತ್ತಲಿ. ನಮ್ಮ ಶಕ್ತಿ ಯೋಜನೆ ಉಪಯೋಗ ಪಡೆದುಕೊಳ್ಳಲಿ' ಎಂದು ಸವಾಲು ಹಾಕಿದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಮೆಟ್ರೊ ಹತ್ತುವಂತೆ ಮಾಡಿದವರು ಯಾರು. ಆ ಪರಿಸ್ಥಿತಿ ಯಾಕೆ ಬಂತು. ಅದಕ್ಕೂ ಉತ್ತರ ಬೇಕಲ್ಲವೇ' ಎಂದೂ ಪ್ರಶ್ನಿಸಿದರು.

'ಬೆಂಗಾವಲು ವಾಹನ ಕಡಿತ: 21ರಂದು ಚರ್ಚೆ'

'ಸರ್ಕಾರದ ಮಟ್ಟದಲ್ಲಿ ಬೆಂಗಾವಲು ವಾಹನಗಳನ್ನು ಕಡಿತ ಮಾಡುವ ವಿಚಾರದ ಕುರಿತು 21ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡುತ್ತೇವೆ' ಎಂದು ಪ್ರಿಯಾಂಕ್ ಹೇಳಿದರು.

'ಇಂಧನ ಕೊರತೆ ಇದೆ ಎಂದು ಪ್ರಧಾನಿ ಮೋದಿ ಹೇಳಿದರೆ, ಇಂಧನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ವಾಗಿಲ್ಲ ಎಂದು ಕೇಂದ್ರ ಇಂಧನ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳುತ್ತಾರೆ. ನಾವು ಯಾರ ಮಾತು ನಂಬಬೇಕು' ಎಂದೂ ಪ್ರಶ್ನಿಸಿದರು.

ಯಾವಾಗ ಹೇಳಿದ್ದಾರೆ ?

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಸದ್ಯಕ್ಕೆ ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಯಾವಾಗ ಹೇಳಿದ್ದಾರೆ' ಎಂದು ಮರುಪ್ರಶ್ನಿಸಿದರು.

'ಅವರು ಹಾಗೇ ಹೇಳಿಲ್ಲ. ಏನು ಮಾಡಬೇಕೆಂದು ನನಗೆ ಗೊತ್ತಿದೆ ಅಂದಿದ್ದಾರೆ ಅಷ್ಟೆ' ಎಂದರು.

'ಹಾಗಿದ್ದರೆ ಮುಖ್ಯಮಂತ್ರಿ ಬದಲಾವಣೆ ವಿಷಯ ಜೀವಂತವಾಗಿದೆಯೇ' ಎಂಬ ಪ್ರಶ್ನೆಗೆ, 'ಅದನ್ನು ಎಐಸಿಸಿ ಅಧ್ಯಕ್ಷರನ್ನೇ ಕೇಳಿ' ಎಂದರು.

ಚಿಟಿಕೆ ಸುದ್ದಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಇಂದಿನಿಂದ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಸೋಮವಾರದಿಂದ ರಾಜ್ಯದ 358 ಕೇಂದ್ರಗಳಲ್ಲಿ ಆರಂಭವಾಗಲಿದ್ದು, ಒಟ್ಟು 1,15,112 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ.

2025–26ನೇ ಸಾಲಿನಲ್ಲಿ ಹಾಜರಾತಿ ಕೊರತೆಯಿಂದ ಪರೀಕ್ಷೆ–1ಕ್ಕೆ ಹಾಜರಾಗಲು ಸಾಧ್ಯವಾಗದ 7,658 ವಿದ್ಯಾರ್ಥಿಗಳು ಪರೀಕ್ಷೆ–2ಕ್ಕೆ ಖಾಸಗಿ ವಿದ್ಯಾರ್ಥಿಗಳಾಗಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಫಲಿತಾಂಶ ಉತ್ತಮಪಡಿಸಿಕೊಳ್ಳಲು 11,881 ವಿದ್ಯಾರ್ಥಿಗಳು ಮತ್ತೊಮ್ಮೆ ಪರೀಕ್ಷೆ ಬರೆಯುತ್ತಿದ್ದಾರೆ.

ಪರೀಕ್ಷೆ–2 ಕ್ಕೆ 76,673 ಬಾಲಕರು, 38,439 ಬಾಲಕಿಯರು ಸೇರಿದಂತೆ ಒಟ್ಟು 1,15,112 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ ಸರ್ಕಾರಿ ಶಾಲೆಗಳ 55,403, ಅನುದಾನಿತ ಶಾಲೆಗಳ 31,436 ಮತ್ತು ಅನುದಾನರಹಿತ ಶಾಲೆಗಳ 28,273 ವಿದ್ಯಾರ್ಥಿಗಳು ಸೇರಿದ್ದಾರೆ.

'ನೀಟ್' ಸೋರಿಕೆ: 21ರಂದು ಪ್ರತಿಭಟನೆ'

ಬೆಂಗಳೂರು: 'ನೀಟ್–ಯುಜಿ' ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಖಂಡಿಸಿ ಇದೇ 21ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ರಾಜ್ಯ ಯುವ ಕಾಂಗ್ರೆಸ್ (ಕೆಪಿವೈಸಿಸಿ) ಅಧ್ಯಕ್ಷ ಎಚ್.ಎಸ್. ಮಂಜುನಾಥ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ದೇಶದಲ್ಲಿ ಇಷ್ಟು ದಿನ ಇಂಡಿಯನ್ ಪ್ರೀಮಿಯರ್ ಲೀಗ್ ನಡೆಯುತ್ತಿತ್ತು. ಈಗ ಇಂಡಿಯನ್ ಪೇಪರ್ ಲೀಕ್ ಬಂದಿದೆ. ಈ ಪ್ರಕರಣದ ಹಿಂದೆ ರಾಜಸ್ಥಾನದ ಶಿಕ್ಷಣ ಸಚಿವರ ಆಪ್ತರಿದ್ದಾರೆ' ಎಂದು ಆರೋಪಿಸಿದರು.

'ದೇಶದಲ್ಲಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಉದ್ಯೋಗದ ಸೃಷ್ಟಿಸುವ ಬದಲು ದಾಖಲೆಯ ನಿರುದ್ಯೋಗ ಸೃಷ್ಟಿಸಿ ಯುವಜನರ ಭವಿಷ್ಯವನ್ನು ಹಾಳು ಮಾಡುತ್ತಿದೆ' ಎಂದು ದೂರಿದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಕಾರಣಕ್ಕೆ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದವರನ್ನು ಗುಂಡಿಟ್ಟು ಕೊಲ್ಲಬೇಕು

ನಿಗಂ ಭಂಡಾರಿ, ಅಧ್ಯಕ್ಷ, ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಲಕ್ಕುಂಡಿಯನ್ನು ಜಾಗತಿಕ ಪಾರಂಪರಿಕ ತಾಣವಾಗಿಸಲು ಸರ್ಕಾರ ನಿರ್ಧಾರ


ವಾರದಲ್ಲಿ 1,500 ಪ್ರಾಚ್ಯಾವಶೇಷ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಇತಿಹಾಸದಲ್ಲಿ ಮಹತ್ವದ ಸ್ಥಾನವಿರುವ ಲಕ್ಕುಂಡಿಯನ್ನು ಜಾಗತಿಕ ಪಾರಂಪರಿಕ ತಾಣವನ್ನಾಗಿಸಲು ಸರ್ಕಾರ ನಿರ್ಧರಿಸಿದೆ. ಇದರ ಭಾಗವಾಗಿ ಮೇ ತಿಂಗಳ ಮೊದಲ ವಾರದಲ್ಲಿ ನಡೆಸಿದ ಅಭಿಯಾನದಲ್ಲಿ 1,500ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಗಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಲ್ಯಾಣ ಚಾಲುಕ್ಯರು, ಬಾದಾಮಿ ಚಾಲುಕ್ಯರು ಮತ್ತು ಹೊಯ್ಸಳರ ಆಳ್ವಿಕೆಯ ಅವಧಿಯ ವಾಸ್ತುಶಿಲ್ಪ ಶೈಲಿಯ ಕುರುಹುಗಳು ಲಕ್ಕುಂಡಿಯಲ್ಲಿ ಯಥೇಚ್ಛವಾಗಿ ಸಿಕ್ಕಿವೆ. ಮೂರೂ ವಾಸ್ತುಶಿಲ್ಪ ಶೈಲಿಗಳ ಮಧ್ಯೆ ಇರುವ ಸಾಮ್ಯತೆ, ವ್ಯತ್ಯಾಸ ಮತ್ತು ಶೈಲಿ ಬದಲಾದ ಬಗೆಯನ್ನು ಇಲ್ಲಿನ ಪ್ರಾಚ್ಯಾವಶೇಷಗಳಲ್ಲಿ ಕಾಣಬಹುದಾಗಿದೆ' ಎಂದರು.

'2024ರ ನವೆಂಬರ್‌ನಲ್ಲಿ ಲಕ್ಕುಂಡಿಯಲ್ಲಿ ಪಲ್ಲಕ್ಕಿ ಉತ್ಸವ ನಡೆಸಲಾಗಿತ್ತು. ನಂತರ ಅಭಿಯಾನ



ಲಕ್ಕುಂಡಿಯಲ್ಲಿ ಈಚೆಗೆ ಕೈಗೊಳ್ಳಲಾಗಿದ್ದ ವಿಶೇಷ ಅಭಿಯಾನದ ವೇಳೆ ಸಂಗ್ರಹವಾದ ಪ್ರಾಚ್ಯವಸ್ತುಗಳು

ನಡೆಸಿ, ಸಾರ್ವಜನಿಕರ ಬಳಿ ಇದ್ದ ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಯಿತು. ಒಂದು ವರ್ಷದ ಅವಧಿಯಲ್ಲಿ 3,000 ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಯಿತು. ನಂತರ ಇದನ್ನು ಜನಾಂದೋಲನವನ್ನಾಗಿ ಪರಿವರ್ತಿಸಿ, ಸಂಗ್ರಹ ಮತ್ತು ಸಂರಕ್ಷಣೆ ಕಾರ್ಯದಲ್ಲಿ ಜನರನ್ನೂ ಒಳಗೊಳ್ಳಲಾಯಿತು' ಎಂದು ಅವರು ವಿವರಿಸಿದರು.

' 2026ರ ಮೇ ಮೊದಲ ವಾರದಲ್ಲಿ ನಡೆದ ಅಭಿಯಾನದಲ್ಲಿ ಲಕ್ಕುಂಡಿ ವ್ಯಾಪ್ತಿಯಲ್ಲಿ ಐದು ಪುರಾತನ ದೇವಾಲಯ ಮತ್ತು ಐದು ಪುರಾತನ ಬಾವಿಗಳನ್ನು ಅನಾವರಣ ಮಾಡಲಾಯಿತು. ಗಿಡಗಂಟಿಗಳು, ಪೊದೆಗಳಲ್ಲಿ ಮರೆಯಾಗಿದ್ದ ಈ ಅವಶೇಷಗಳ ಸುತ್ತಲಿನ ಸ್ಥಳವನ್ನು ಸ್ವಚ್ಛಗೊಳಿಸಿ, ಅವುಗಳು ಕಾಣುವಂತೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ 100 ದೇವಾಲಯ ಮತ್ತು ಬಾವಿಗಳನ್ನು ಹೀಗೆ ಅನಾವರಣ ಮಾಡುವ ಕಾರ್ಯಕ್ರಮ ಯೋಜಿಸಲಾಗಿದೆ. ಜತೆಗೆ ಅವುಗಳ ಸಂರಕ್ಷಣೆಗೂ ಚಿಂತನೆ ನಡೆಸಲಾಗಿದೆ' ಎಂದರು.

'ಅತ್ಯಂತ ಕಡಿಮೆ ಅವಧಿಯಲ್ಲಿ 1,500 ಪ್ರಾಚ್ಯಾವಶೇಷಗಳನ್ನು ಒಂದೇ ಸ್ಥಳದಲ್ಲಿ ಸಂಗ್ರಹಿಸಿರುವುದು ಅತ್ಯಪರೂಪ. ಹಂಪಿಯ ವ್ಯಾಪ್ತಿಯಲ್ಲಿ ಆರಂಭದಿಂದ ಈವರೆಗೆ ಸುಮಾರು 6,000 ಪ್ರಾಚ್ಯವಸ್ತುಗಳನ್ನಷ್ಟೇ ಸಂಗ್ರಹಿಸಲಾಗಿದೆ. ಆಂಧ್ರಪ್ರದೇಶದ ವಾರಂಗಲ್‌ನಲ್ಲಿ ಒಟ್ಟಾರೆಯಾಗಿ 1,200 ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಗಿದೆ. ಈ ಅಭಿಯಾನ ಮುಂದುವರೆದರೆ ಲಕ್ಕುಂಡಿಯಲ್ಲಿ ಇನ್ನೂ ಹೆಚ್ಚಿನ ಪ್ರಾಚ್ಯಾವಶೇಷಗಳು ದೊರೆಯಬಹುದು' ಎಂದರು.

ದೆಹಲಿಯಿಂದ ಪ್ರಾಚ್ಯವಸ್ತುಗಳ ವಾಪಸ್‌ಗೆ ಕ್ರಮ

ಲಕ್ಕುಂಡಿಯಲ್ಲಿ ಸಂಗ್ರಹಿಸಲಾಗಿದ್ದ ಹಲವು ಪ್ರಾಚ್ಯವಸ್ತುಗಳನ್ನು 50 ವರ್ಷಗಳ ಹಿಂದೆಯೇ ದೆಹಲಿಗೆ ಕೊಂಡೊಯ್ಯಲಾಗಿದೆ. ಅವುಗಳನ್ನು ದೆಹಲಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ. ಅವುಗಳನ್ನು ಲಕ್ಕುಂಡಿಗೆ ವಾಪಸ್ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್.ಕೆ.ಪಾಟೀಲ ಅವರು ತಿಳಿಸಿದರು.

ಈಚೆಗೆ ದೆಹಲಿಯ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದ ಅವರು, ಅಲ್ಲಿರುವ ಲಕ್ಕುಂಡಿಯ ಪ್ರಾಚ್ಯಾವಶೇಷಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದರು. ಜತೆಗೆ ಅವುಗಳನ್ನು ಲಕ್ಕುಂಡಿಗೆ ವಾಪಸ್ ತರುವ ಪ್ರಕ್ರಿಯೆಯ ಬಗ್ಗೆಯೂ ವಿವರಣೆ ಪಡೆದುಕೊಂಡಿದ್ದರು.

'7,000 ಕಿ.ಮೀ. ಬುಲೆಟ್ ರೈಲು ಜಾಲ'


ಒಂದನೇ ಪುಟದಿಂದ...

ವಾರಕ್ಕೆ ಎರಡು ಬಾರಿ ಸಂಚರಿಸಲಿರುವ ಎಕ್ಸ್‌ಪ್ರೆಸ್ ರೈಲು ಆರಂಭವಾಗಿದೆ. ಬೆಂಗಳೂರು ಮತ್ತು ಮುಂಬೈ ನಡುವೆ ವಂದೇ ಭಾರತ್ ಸ್ಲೀಪರ್ ರೈಲು ಸಂಚರಿಸಲಿದೆ. ಆಗ ದಕ್ಷಿಣ ಹಾಗೂ ಉತ್ತರ ಕರ್ನಾಟಕದ ಬಹುಕಾಲದ ಬೇಡಿಕೆ ಈಡೇರಲಿದೆ ಎಂದರು.

ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಕರ್ನಾಟಕದ 61 ರೈಲು ನಿಲ್ದಾಣಗಳನ್ನು ₹2,160 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಲ್ಲಿ 9 ನಿಲ್ದಾಣಗಳ ಕಾಮಗಾರಿ ಪೂರ್ಣಗೊಂಡಿದೆ. ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣವನ್ನು ₹485 ಕೋಟಿ ಹಾಗೂ ಯಶವಂತಪುರ ನಿಲ್ದಾಣವನ್ನು ₹367 ಕೋಟಿ ವೆಚ್ಚದಲ್ಲಿ ನವೀಕರಿಸಲಾಗುತ್ತಿದೆ ಎಂದು ತಿಳಿಸಿದರು.

ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಮಾತನಾಡಿ, 'ಬೆಂಗಳೂರು–ಮುಂಬೈ ಹೊಸ ರೈಲು ಆರಂಭವಾಗಿರುವುದರಿಂದ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ಅಲ್ಲದೇ ಕರ್ನಾಟಕದ ಅಭಿವೃದ್ಧಿಗೂ ಸಹಕಾರಿಯಾಗಲಿದೆ' ಎಂದು ಹೇಳಿದರು.

ಥಣಿಸಂದ್ರದಲ್ಲಿ ₹270 ಕೋಟಿ ವೆಚ್ಚದಲ್ಲಿ ವಂದೇ ಭಾರತ್ ಸ್ಲೀಪರ್ ನಿರ್ವಹಣಾ ಡಿಪೊ ಮತ್ತು ಎಸ್‌ಎಂವಿಟಿಯಲ್ಲಿ ₹52.73 ಕೋಟಿ ವೆಚ್ಚದಲ್ಲಿ ಚೇರ್ ಕಾರ್ ನಿರ್ವಹಣಾ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.



ಎಸ್‌ಎಂವಿಟಿ ಬೆಂಗಳೂರು–ಎಲ್‌ಟಿಟಿ ಮುಂಬೈ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಎಸ್‌ಎಂವಿಟಿ ನಿಲ್ದಾಣದಲ್ಲಿ ಆಶುತೋಷ್ ಕುಮಾರ್ ಸಿಂಗ್, ವಿ. ಸೋಮಣ್ಣ, ಪಿ.ಸಿ. ಮೋಹನ್, ಲಹರ್ ಸಿಂಗ್ ಸಿರೋಯ ಭಾಗವಹಿಸಿದ್ದರು

ಕೆಇಎ ಪರೀಕ್ಷೆಯಲ್ಲೂ ಅಕ್ರಮ: ಅಶೋಕ

ಬೆಂಗಳೂರು: 'ಕೃಷಿ ವಿಜ್ಞಾನ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಮೇ 10ರಂದು ನಡೆಸಿದ್ದ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಕೆಲ ಪೋಷಕರು ಆರೋಪಿಸುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. 'ಮೇ 10 ರಂದು ರಾಜ್ಯದ 17 ಕೇಂದ್ರಗಳಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆದಿತ್ತು. ಚಿತ್ರದುರ್ಗದ ಹಿರಿಯೂರಿನ ಕೇಂದ್ರವೊಂದರಲ್ಲಿ 74 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರೆಲ್ಲರಿಗೂ 200ಕ್ಕೆ 200ರಷ್ಟು ಪೂರ್ಣ ಅಂಕ ಬಂದಿದೆ. ಇದು ಹೇಗೆ ಸಾಧ್ಯ' ಎಂದು ಅವರು ಪ್ರಶ್ನಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ಬಡ ಗ್ರಾಮೀಣ ವಿದ್ಯಾರ್ಥಿಗಳ ಭವಿಷ್ಯದ ಜತೆಗೆ ಆಟವಾಡಬೇಡಿ. ಕೃಷಿ ಮಂತ್ರಿ ಎನ್.ಚಲುವರಾಯಸ್ವಾಮಿ ಅವರೇ ಈ ಪರೀಕ್ಷೆಯನ್ನು ರದ್ದುಗೊಳಿಸಿ. ತನಿಖೆಗೆ ಆದೇಶಿಸಿ. ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿ' ಎಂದು ಆಗ್ರಹಿಸಿದ್ದಾರೆ.

ಉಳುವ ಯೋಗಿಯ ನೋಡಲ್ಲಿ...

ಪ್ರಜಾವಾಣಿ ಚಿತ್ರ: **ಭರತ್ ಕಂದಕೂರ**



ದಟ್ಟವಾಗಿ ಮೇಳೈಸಿರುವ ಕಾರ್ಮೋಡಗಳ ನಡುವೆ ಕೊಪ್ಪಳ ತಾಲ್ಲೂಕಿನ ಲೇಬಗೇರಿ ಬಳಿಯ ಹೊಲವೊಂದರಲ್ಲಿ ಮಣ್ಣು ಹದಗೊಳಿಸುವಿಕೆಯಲ್ಲಿ ರೈತರೊಬ್ಬರು ತೊಡಗಿದ್ದರು

ರಸ್ತೆ ಅಪಘಾತ: 4ನೇ ಸ್ಥಾನದಲ್ಲಿ ರಾಜ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರತಿ ವರ್ಷ ಸಂಭವಿಸುವ ರಸ್ತೆ ಅಪಘಾತಗಳು ಮತ್ತು ಅವುಗಳಿಂದಾಗುವ ಸಾವಿನ ಸಂಖ್ಯೆಯಲ್ಲಿ ಏರಿಕೆಯಾಗುತ್ತಲೇ ಇದೆ. 2024ರಲ್ಲಿ ಅತಿಹೆಚ್ಚು ರಸ್ತೆ ಅಪಘಾತಗಳು ಸಂಭವಿಸಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು ನಾಲ್ಕನೇ ಸ್ಥಾನದಲ್ಲಿದೆ.

ರಾಜ್ಯದಲ್ಲಿ, 2024ರ ಅವಧಿಯಲ್ಲಿ ಒಟ್ಟು 43,062 ರಸ್ತೆ ಅಪಘಾತಗಳು ಸಂಭವಿಸಿದ್ದು, ಒಟ್ಟು 12,339 ಮಂದಿ ಜೀವ ಕಳೆದುಕೊಂಡಿದ್ದಾರೆ. 2020ಕ್ಕೆ ಹೋಲಿಸಿದರೆ ನಂತರದ ನಾಲ್ಕೂ ವರ್ಷಗಳಲ್ಲಿ ರಸ್ತೆ ಅಪಘಾತದಲ್ಲಿನ ಸಾವಿನ ಸಂಖ್ಯೆ ಏರುಗತಿಯಲ್ಲಿಯೇ ಇದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಈಚೆಗೆ ಬಿಡುಗಡೆ ಮಾಡಿರುವ 'ಭಾರತದಲ್ಲಿ ಅಪಘಾತ ಮತ್ತು ಆತ್ಮಹತ್ಯಾ ಸಾವುಗಳು–2024' ವರದಿಯಲ್ಲಿ ಈ ಮಾಹಿತಿ ಇದೆ.

2024ರಲ್ಲಿ ದೇಶದಾದ್ಯಂತ ಒಟ್ಟು 4.67 ಲಕ್ಷ ರಸ್ತೆ ಅಪಘಾತಗಳು ಸಂಭವಿಸಿವೆ. ತಮಿಳುನಾಡಿನಲ್ಲಿ 67,526, ಮಧ್ಯಪ್ರದೇಶದಲ್ಲಿ 55,711, ಕೇರಳದಲ್ಲಿ 46,591 ಅತಿಹೆಚ್ಚು ಅಪಘಾತಗಳು ನಡೆದಿವೆ. ಕರ್ನಾಟಕವು ನಂತರದ ಸ್ಥಾನದಲ್ಲಿದೆ.

ರಾಜ್ಯದಲ್ಲಿ, ಅತಿವೇಗದಿಂದ ಸಂಭವಿಸಿದ ಅಪಘಾತಗಳಲ್ಲೇ 10,614 ಮಂದಿ ಮೃತಪಟ್ಟಿದ್ದಾರೆ ಎಂಬ ಅಂಶ ಈ ವರದಿಯಲ್ಲಿ ಇದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಅಪಘಾತಗಳಿಗೆ 4,145 ಮಂದಿ, ಎಕ್ಸ್‌ಪ್ರೆಸ್‌ವೇಗಳಲ್ಲಿನ ಅಪಘಾತಗಳಿಗೆ 108 ಮಂದಿ ಬಲಿಯಾಗಿದ್ದಾರೆ.

ಅಪಘಾತ: ಸಾವು–ನೋವು

ವರ್ಷ	ರಸ್ತೆ ಅಪಘಾತಗಳು	ರಸ್ತೆ ಅಪಘಾತಗಳಲ್ಲಿ ಸಾವು
2020	34,178	9,760
2021	34,647	10,038
2022	39,765	11,705
2023	43,440	12,323

ನಿವೃತ್ತ ನ್ಯಾಯಾಧೀಶ, ಪುತ್ರನ ವಿರುದ್ಧ ವರದಕ್ಷಿಣೆ ಪ್ರಕರಣ

ಭೋಪಾಲ್ (ಪಿಟಿಐ): ನಿವೃತ್ತ ನ್ಯಾಯಾಧೀಶರು ಮತ್ತು ಅವರ ಪುತ್ರನ ವಿರುದ್ಧದ ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆ ನಡೆಸಲು ಆರು ಮಂದಿಯ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ ಎಂದು ಭೋಪಾಲ್ ಪೊಲೀಸರು ತಿಳಿಸಿದರು.

ನಿವೃತ್ತ ನ್ಯಾಯಧೀಶರಾದ ಗಿರಿಬಾಲಾ ಸಿಂಗ್ ಅವರ ಪುತ್ರ, ವಕೀಲರಾದ ಸಮರ್ಥ್ ಸಿಂಗ್ ಅವರ ಪತ್ನಿ ತ್ವಿಶಾ ಶರ್ಮಾ (33) ಮೃತದೇಹವು ಇಲ್ಲಿನ ಕತಾರ ಹಿಲ್ಸ್ ಪ್ರದೇಶದಲ್ಲಿರುವ ಅವರ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮೇ 12ರಂದು ಪತ್ತೆಯಾಯಿತು.

ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಲಾಗಿದೆ. ಗಿರಿಬಾಲಾ ಹಾಗೂ ಸಮರ್ಥ್ ಅವರನ್ನು ಪತ್ತೆಹಚ್ಚಲು, ಬಂಧಿಸಲು ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ ಎಂದು ಎಸ್‌ಐಟಿ ಮುಖ್ಯಸ್ಥರಾಗಿರುವ ಸಹಾಯಕ ಪೊಲೀಸ್ ಆಯುಕ್ತ ರಜನೀಶ್ ಕಶ್ಯಪ್ ತಿಳಿಸಿದರು.

ಸಿಬಿಎಸ್‌ಇ: ಮರು ಮೌಲ್ಯಮಾಪನ ಶುಲ್ಕ ₹100ಕ್ಕೆ ಇಳಿಕೆ

ನವದೆಹಲಿ(ಪಿಟಿಐ): ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳ ಮರುಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆ ಪರಿಶೀಲನಾ ಶುಲ್ಕವನ್ನು ಪ್ರತಿ ಪತ್ರಿಕೆಗೆ ₹100ಕ್ಕೆ ಇಳಿಸಲಾಗಿದೆ ಎಂದು ಶಿಕ್ಷಣ ಸಚಿವಾಲಯ ಪ್ರಕಟಿಸಿದೆ.

ಅಲ್ಲದೆ, ಆನ್–ಸ್ಕ್ರೀನ್ ಮಾರ್ಕಿಂಗ್ (ಒಎಸ್‌ಎಂ) ವ್ಯವಸ್ಥೆ ಅಳವಡಿಸಿರುವುದರಿಂದ ವಿದ್ಯಾರ್ಥಿಗಳ ಅಂಕಗಳ ಮೇಲೆ ಪರಿಣಾಮ ಬೀರುತ್ತದೆ ಎಂಬ ವಿದ್ಯಾರ್ಥಿಗಳ ಕಳವಳವನ್ನು ಕೂಡ ಸಚಿವಾಲಯ ತಳ್ಳಿಹಾಕಿದೆ.

ಒಎಸ್‌ಎಂ ಎಂದರೆ ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ ಕಂಪ್ಯೂಟರ್ ಪರದೆಯ ಮೇಲೆ ಡಿಜಿಟಲ್ ರೂಪದಲ್ಲಿ ಮೌಲ್ಯಮಾಪನ ಮಾಡುವ ವಿಧಾನ. ಇದರಲ್ಲಿ ಮೌಲ್ಯಮಾಪಕರು ಕಂಪ್ಯೂಟರ್ ಬಳಸಿ ಅಂಕಗಳನ್ನು ನೀಡುತ್ತಾರೆ.

ಒಎಸ್‌ಎಂ ವ್ಯವಸ್ಥೆಯಿಂದ ಅಂಕಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ವಿದ್ಯಾರ್ಥಿಗಳು ಆತಂಕಪಟ್ಟಿದ್ದರು. ವಿದ್ಯಾರ್ಥಿಗಳ ಆತಂಕವನ್ನು ಕಡಿಮೆ ಮಾಡಲು ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮರುಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆ ಪರಿಶೀಲನಾ ಶುಲ್ಕ ಕಡಿಮೆ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯಪ್ರದೇಶದ ರತ್ಲಾಮ್‌ನಲ್ಲಿ ನಡೆದ ಘಟನೆ; ರೈಲ್ವೆ ಇಲಾಖೆಯ ಐದು ಮಂದಿಗೆ ಗಾಯ

ದೆಹಲಿಗೆ ತೆರಳುತ್ತಿದ್ದ ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ

ರತ್ಲಾಮ್/ಕೋಟಾ(ಪಿಟಿಐ): ಕೇರಳದ ರಾಜಧಾನಿ ತಿರುವನಂತಪುರದಿಂದ ನವದೆಹಲಿಯ ಹಜರತ್ ನಿಜಾಮುದ್ದೀನ್‌ಗೆ ತೆರಳುತ್ತಿದ್ದ ರಾಜಧಾನಿ ಎಕ್ಸ್‌ಪ್ರೆಸ್ (12431) ರೈಲಿನ ಎ.ಸಿ. ಕೋಚ್‌ನಲ್ಲಿ ಭಾನುವಾರ ಬೆಳಿಗ್ಗೆ 5.15ರ ಸುಮಾರಿಗೆ ವೇಳೆ ಬೆಂಕಿ ಕಾಣಿಸಿಕೊಂಡಿದೆ.

ಮಧ್ಯಪ್ರದೇಶದ ರತ್ಲಾಮ್‌ನಲ್ಲಿ ಈ ಅವಘಡ ಸಂಭವಿಸಿದ್ದು, ಕೋಚ್‌ನಲ್ಲಿ 65 ಮಂದಿ ಪ್ರಯಾಣಿಕರಿದ್ದರು. ಬೆಂಕಿ ಕಾಣಿಸಿಕೊಂಡ ತಕ್ಷಣವೇ, 15 ನಿಮಿಷಗಳಲ್ಲಿ ಎಲ್ಲ ಪ್ರಯಾಣಿಕರನ್ನು ತೆರವುಗೊಳಿಸಲಾಯಿತು. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ದುರಂತದಿಂದ ಹಲವು ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

'ಬೆಳಿಗ್ಗೆ 5.15ರ ವೇಳೆಗೆ ಬಿ–1 ಕೋಚ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು. ರತ್ಲಾಮ್ ಜಂಕ್ಷನ್‌ನಿಂದ 3.45ರ ಸುಮಾರಿಗೆ ಹೊರಟಿತ್ತು. ರಾಜಸ್ಥಾನದ ಕೋಟಾ ವಿಭಾಗದಲ್ಲಿರುವ ವಿಕ್ರಮಗಢ ಹಾಗೂ ಲುನಿ ರಿಚಾ ನಿಲ್ದಾಣಗಳ ಮಧ್ಯೆ ಬೆಂಕಿ ಕಾಣಿಸಿಕೊಂಡಿತು' ಎಂದು ಪಶ್ಚಿಮ ಮಧ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಹರ್ಷಿತ್ ಶ್ರೀ ವಾತ್ಸವ ತಿಳಿಸಿದ್ದಾರೆ.

'ಬೆಂಕಿ ಕಾಣಿಸಿಕೊಂಡ 15 ನಿಮಿಷದಲ್ಲಿಯೇ ಎಲ್ಲ ಪ್ರಯಾಣಿಕರನ್ನು ಸುರಕ್ಷಿತವಾಗಿ ಕೆಳಗಿಳಿಸಲಾಯಿತು. ಬಿ–1 ಕೋಚ್‌ಗೆ ಹೊಂದಿಕೊಂಡಿದ್ದ ಲಗೇಜ್ ಕಮ್ ಗಾರ್ಡ್ ವ್ಯಾನ್‌ಗೆ ಹಾನಿಯುಂಟಾಗಿದೆ' ಎಂದಿದ್ದಾರೆ.

'ಅನಾಹುತ ಸಂಭವಿಸಿದ ತಕ್ಷಣ ರೈಲ್ವೆ ಅಧಿಕಾರಿಗಳು ಓವರ್‌ಹೆಡ್ ಎಲೆಕ್ಟ್ರಿಕ್ ವಿದ್ಯುತ್ ಸಂಚಾರವನ್ನು ಕಡಿತಗೊಳಿಸಿ, ಬೆಂಕಿಯನ್ನು ನಿಯಂತ್ರಿಸಿದರು. ಹಾನಿಗೊಳಗಾದ ಕೋಚ್ ಹಾಗೂ ಲಗೇಜ್ ವ್ಯಾನ್ ಅನ್ನು ಪ್ರತ್ಯೇಕಿಸಿ ಬೆಳಿಗ್ಗೆ 9.45ರ ಸುಮಾರಿಗೆ ಪ್ರಯಾಣ ಮುಂದುವರಿಸಿದೆ' ಎಂದು ಮಾಹಿತಿ ನೀಡಿದ್ದಾರೆ.

'ಪೂರ್ವ ನಿಗದಿಯಂತೆ ರೈಲು ಬೆಳಿಗ್ಗೆ 8.45ರ ಸುಮಾರಿಗೆ ಕೋಟಾ ನಿಲ್ದಾಣ ತಲುಪಬೇಕಿತ್ತು. ಆದರೆ, 11 ಗಂಟೆಗೆ ಕೋಟಾಗೆ ತಲುಪಿದೆ. ನಿಲ್ದಾಣದಲ್ಲಿ ಹೆಚ್ಚುವರಿ ಬೋಗಿ ಅಳವಡಿಸಿದ ನಂತರ, ಎಲ್ಲ ಪ್ರಯಾಣಿಕರಿಗೂ ಅನುಕೂಲ ಮಾಡಿಕೊಡಲಾಯಿತು' ಎಂದು ಶ್ರೀವಾತ್ಸವ ತಿಳಿಸಿದ್ದಾರೆ.

'ಎಲ್ಲ ಪ್ರಯಾಣಿಕರನ್ನು ಸುರಕ್ಷಿತವಾಗಿ ಕೆಳಗಿಳಿಸಲಾಯಿತು. ಕೋಟಾದಿಂದ ಎಲ್ಲ ಪ್ರಯಾಣಿಕರಿಗೂ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಕೋಟಾ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ರವೀಂದ್ರ ಲಖಾರಾ ತಿಳಿಸಿದ್ದಾರೆ.

ಅಗ್ನಿ ಅವಘಡದಿಂದ ದೆಹಲಿ–ಮುಂಬೈ ನಡುವೆ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದರಿಂದ ಐದರಿಂದ 6 ರೈಲುಗಳ ಸಂಚಾರಕ್ಕೂ ತೊಂದರೆ ಉಂಟಾಯಿತು. ಕೆಲವು ರೈಲುಗಳನ್ನು ಹಿಂದಿನ ನಿಲ್ದಾಣದಲ್ಲಿಯೇ ನಿಲ್ಲಿಸಲಾಯಿತು. ರೈಲು ಸಂಚಾರದ ಕುರಿತಂತೆ ಪ್ರಯಾಣಿಕರಿಗೆ ಸಹಾಯವಾಣಿಯ ಮೂಲಕ ಮಾಹಿತಿ ರವಾನಿಸಲಾಯಿತು.

ರತ್ಲಾಮ್ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಜಯ್ ಕುಮಾರ್ ಪರಿಸ್ಥಿತಿಯನ್ನು ಮೇಲ್ವಿಚಾರಣೆ ನಡೆಸಿದರು. ರೈಲು ಸಂಚಾರವನ್ನು ಪುನರ್ ಸ್ಥಾಪಿಸುವ ನಿಟ್ಟಿನಲ್ಲಿ ಹೆಚ್ಚುವರಿ ಸಿಬ್ಬಂದಿ ಜೊತೆಗೆ ಟವರ್ ವ್ಯಾಗನ್ ಕಳುಹಿಸಿಕೊಡಲಾಯಿತು.

ಬೆಂಕಿಯ ಕಾರಣದ ಕುರಿತಂತೆ ತನಿಖೆ ಮುಂದುವರಿದಿದೆ.



ತಿರುವನಂತಪುರದಿಂದ ನವದೆಹಲಿಯ ಹಜರತ್ ನಿಜಾಮುದ್ದೀನ್‌ಗೆ ತೆರಳುತ್ತಿದ್ದ ರೈಲು ಮಧ್ಯಪ್ರದೇಶದ ರತ್ಲಾಮ್‌ನಲ್ಲಿ ಬೆಂಕಿ ಹತ್ತಿಕೊಂಡ ದೃಶ್ಯ–ಪಿಟಿಐ ಚಿತ್ರ

ರಿಪೇರಿಗೆ ಬಂದ ಐದು ಮಂದಿಗೆ ಗಾಯ

ಬೆಂಕಿ ಕಾಣಿಸಿಕೊಂಡ ರೈಲು ರಿಪೇರಿಗೆ ಉಪಕರಣಗಳನ್ನು ಹೊತ್ತು ತರುತ್ತಿದ್ದ ವ್ಯಾನ್ ಪಲ್ಟಿ ಹೊಡೆದು, ರೈಲ್ವೆ ಇಲಾಖೆಯ ಐದು ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ ಒಬ್ಬರ ಸ್ಥಿತಿ ಗಂಭೀರವಾಗಿದೆ. ವ್ಯಾನ್ ಬರುತ್ತಿದ್ದ ರಸ್ತೆ ಮಾರ್ಗದಲ್ಲಿ ಹಸುವೊಂದು ಅಡ್ಡ ಬಂದಿದ್ದು, ಈ ವೇಳೆ ವಾಹನ ಮಗುಚಿಬಿದ್ದಿದೆ. ಇದರಿಂದ ವಾಹನದಲ್ಲಿದ್ದ ಐದು ಮಂದಿ ಗಾಯಗೊಂಡಿದ್ದು, ಕೂಡಲೇ ಅವರನ್ನು ಕೋಟಾದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಿಪಿಎಂ ಪಾಲಿಟ್ ಬ್ಯೂರೊದಲ್ಲಿ ಒಡಕು

ಪ್ರಜಾವಾಣಿ ವಾರ್ತೆ



ಪಿಣರಾಯಿ ವಿಜಯನ್

ನವದೆಹಲಿ: ಪಿಣರಾಯಿ ವಿಜಯನ್ ಅವರನ್ನು ಕೇರಳಂ ವಿಧಾನಸಭೆಯ ವಿರೋಧ ಪಕ್ಷದ ನಾಯಕನಾಗಿ ಆಯ್ಕೆ ಮಾಡಿರುವುದು ಸಿಪಿಎಂ ಪಾಲಿಟ್ ಬ್ಯೂರೊದಲ್ಲಿ ಒಡಕು ಮೂಡಿಸಿದೆ. ಹೊಸ ಮತ್ತು ಯುವ ನಾಯಕನೊಬ್ಬ ಆ ಜವಾಬ್ದಾರಿ ವಹಿಸಿಕೊಂಡಿದ್ದರೆ ಪಕ್ಷಕ್ಕೆ ಪ್ರಯೋಜನ ಆಗುತ್ತಿತ್ತು ಎಂದು ಪಾಲಿಟ್ ಬ್ಯೂರೊದ ಕೆಲವರು ನಂಬಿರುವುದಾಗಿ ಮೂಲಗಳು ತಿಳಿಸಿವೆ.

ಸಿಪಿಎಂ ಕೇರಳಂ ರಾಜ್ಯ ಸಮಿತಿಯು ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ 81 ವರ್ಷದ ಪಿಣರಾಯಿ ಅವರ ಹೆಸರನ್ನು ಕಳೆದ ಗುರುವಾರ ಸೂಚಿಸಿತ್ತು. ಆ ಬಳಿಕ ಸಿಪಿಎಂ ಪಾಲಿಟ್ ಬ್ಯೂರೊದ ಆನ್‌ಲೈನ್ ಸಭೆ ಕರೆಯಲಾಗಿತ್ತು. ಕೇರಳಂನಲ್ಲಿ ಹೊಸ ನಾಯಕತ್ವ ಹೊರಹೊಮ್ಮಬೇಕು ಎಂದು ಪಾಲಿಟ್ ಬ್ಯೂರೊ ಈ ಹಿಂದೆ ಅಭಿಪ್ರಾಯಪಟ್ಟಿತ್ತು.

ಚುನಾವಣಾ ಫಲಿತಾಂಶದ ಪರಾಮರ್ಶೆ ನಡೆಸಲು ಕೇರಳಂ ರಾಜ್ಯ ಸಮಿತಿಯು ಕಳೆದ ವಾರ ಸಭೆ ನಡೆಸಿತ್ತು. ವಿರೋಧ ಪಕ್ಷದ ನಾಯಕ ಯಾರಾಗಬೇಕು ಎಂಬ ಬಗ್ಗೆಯೂ ಚರ್ಚೆ ನಡೆದಿತ್ತು. ಸಿಪಿಎಂ ಕೇಂದ್ರ ಸಮಿತಿ ಸದಸ್ಯ ಮತ್ತು ಮಾಜಿ ಹಣಕಾಸು ಸಚಿವ ಕೆ.ಎನ್.ಬಾಲಗೋಪಾಲ್ ಅವರ ಹೆಸರು ಮುಂಚೂಣಿಗೆ ಬಂದಿತ್ತು.

ರಾಜ್ಯ ಸಮಿತಿ ಸಭೆಯಲ್ಲಿ ನಡೆದ ಚರ್ಚೆಯ ವೇಳೆ ವಿಜಯನ್ ನೇತೃತ್ವದ ಸರ್ಕಾರ ಮತ್ತು ಪಕ್ಷದ ನಾಯಕತ್ವದ ಬಗ್ಗೆ ಟೀಕೆಗಳು ಕೇಳಿಬಂದಿದ್ದವು. ಆದರೂ, ಸಮಿತಿಯು ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ವಿಜಯನ್ ಅವರ ಹೆಸರನ್ನು ಮಾತ್ರ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಕೇರಳಂ ರಾಜ್ಯ ಸಮಿತಿ ಮುಂದಿಟ್ಟ ಪ್ರಸ್ತಾವದ ಬಗ್ಗೆ ಚರ್ಚಿಸಲು ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಅವರು ಪಾಲಿಟ್ ಬ್ಯೂರೊದ ಸಭೆ ಕರೆದಿದ್ದಾರೆ. ಸಭೆಯಲ್ಲಿ ಬೇಬಿ, ಮೊಹಮ್ಮದ್ ಸಲೀಮ್, ತಪನ್ ಸೇನ್ ಮತ್ತು ಕೇರಳ ಸಿಪಿಎಂ ಕಾರ್ಯದರ್ಶಿ ಎಂ.ವಿ. ಗೋವಿಂದನ್ ಸೇರಿದಂತೆ ಹತ್ತು ಸದಸ್ಯರು ವಿಜಯನ್ ಅವರನ್ನು ಬೆಂಬಲಿಸಿದ್ದಾರೆ. ಬಿ.ವಿ. ರಾಘವುಲು, ಅಶೋಕ್ ಧವ್ಳೆ ಮತ್ತು ವಿಜೂ ಕೃಷ್ಣನ್ ಸೇರಿದಂತೆ ಏಳು ನಾಯಕರು ಈ ಪ್ರಸ್ತಾವವನ್ನು ವಿರೋಧಿಸಿದರು ಎಂದು ಮೂಲಗಳು ಹೇಳಿವೆ.

ವಿಜಯನ್ ಅವರು ಈ ಬಾರಿ ಕೇರಳಂ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸದೇ ಇದ್ದಿದ್ದರೆ ಉತ್ತಮವಾಗಿರುತ್ತಿತ್ತು ಎಂದು ಈ ಹಿಂದೆ ನಡೆದ ಪಾಲಿಟ್ ಬ್ಯೂರೊ ಸಭೆಯಲ್ಲಿ ಕೆಲವು ನಾಯಕರು ಅಭಿಪ್ರಾಯಪಟ್ಟಿದ್ದರು. ಅವರು ಮುಖ್ಯಮಂತ್ರಿ ಹುದ್ದೆಯ ಸ್ಪರ್ಧೆಯಲ್ಲಿ ಇರದಿದ್ದಲ್ಲಿ, ಆಡಳಿತ ವಿರೋಧಿ ಅಲೆಯನ್ನು ಅಲ್ಪ ತಗ್ಗಿಸಬಹುದಿತ್ತು ಎಂದು ಹೇಳಿದರು.

'ಒಡಕು ಎನ್ನಲಾಗದು'

ಪಾಲಿಟ್ ಬ್ಯೂರೊ ಸಭೆಯಲ್ಲಿ ವಿಜಯನ್ ಕುರಿತು ನಡೆದ ಚರ್ಚೆಯ ಬಗ್ಗೆ ಪ್ರಶ್ನಿಸಿದಾಗ ಸಿಪಿಎಂನ ಹಿರಿಯ ನಾಯಕರೊಬ್ಬರು, 'ಇದನ್ನು ಒಡಕು ಎನ್ನಲಾಗದು. ಇವು ನಾಯಕರು ವ್ಯಕ್ತಪಡಿಸಿದ ಪ್ರಾಮಾಣಿಕ ಅಭಿಪ್ರಾಯಗಳಾಗಿವೆ. ಕೆಲವರು ವಿಜಯನ್ ಅವರೇ ಸೂಕ್ತ ಎಂದು ಭಾವಿಸಿದರೆ, ಇತರರು ಆ ಅಭಿಪ್ರಾಯವನ್ನು ಒಪ್ಪಿಕೊಂಡಿಲ್ಲ. ಬಹುಮತದ ಅಭಿಪ್ರಾಯಕ್ಕೆ ಮನ್ನಣೆ ಸಿಗುತ್ತದೆ' ಎಂದು ಹೇಳಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಧರ್ಮದ ಬೇರು ದಯೆ, ಸತ್ಫಲ, ಸರ್ವ ಭ್ರಾತೃತ್ವ.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಜನಸಾಮಾನ್ಯರ ಬದುಕಿಗೆ ಹೊರೆ

ಇಂಧನ ಬಳಕೆ ಕಡಿಮೆ ಮಾಡುವುದು ಸೇರಿದಂತೆ ಮಿತವ್ಯಯದ ವಿವಿಧ ಕ್ರಮಗಳನ್ನು ಪಾಲಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶವಾಸಿಗಳಿಗೆ ಕರೆ ನೀಡಿದ ಕೆಲವೇ ದಿನಗಳಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಸಿಎನ್‌ಜಿ ಬೆಲೆ ಹೆಚ್ಚಿಸಲಾಗಿದೆ. ಪೆಟ್ರೋಲ್ ಹಾಗೂ ಡೀಸೆಲ್‌ನ ಮಾರಾಟ ಬೆಲೆಯಲ್ಲಿ ಲೀಟರ್‌ಗೆ ತಲಾ ₹3ರಷ್ಟು ಹೆಚ್ಚಳವಾಗಿದೆ. ಇದರೊಂದಿಗೆ, ನಾಲ್ಕು ವರ್ಷಗಳ ನಂತರದಲ್ಲಿ ಇದೇ ಮೊದಲ ಬಾರಿಗೆ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿ ಆಗಿದೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಶುರುವಾದ ನಂತರದಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಆಗಿರುವ ಹೆಚ್ಚಳದ ಹೊರೆಯನ್ನು ಸರಿದೂಗಿಸಿಕೊಳ್ಳಲು ದೇಶದ ಮಾರುಕಟ್ಟೆಯಲ್ಲಿ ಈ ಏರಿಕೆ ಮಾಡಲಾಗಿದೆ. ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಕಚ್ಚಾತೈಲದ ಬೆಲೆ ಏರಿಕೆಯಿಂದ ಆಗುವ ನಷ್ಟವನ್ನು ತುಸುಮಟ್ಟಿಗೆ ತಗ್ಗಿಸುವ ಉದ್ದೇಶದಿಂದ ಪೆಟ್ರೋಲ್, ಡೀಸೆಲ್ ಮೇಲಿನ ವಿಶೇಷ ಅಬಕಾರಿ ಸುಂಕವನ್ನು ಕೇಂದ್ರ ಸರ್ಕಾರವು ಮಾರ್ಚ್‌ನಲ್ಲಿ ₹10ರಷ್ಟು ತಗ್ಗಿಸಿದೆ. ಈ ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸುವುದು ಅನಿವಾರ್ಯವಾಗಿತ್ತು ಎನ್ನುವಂತೆ ಕಾಣಿಸುತ್ತಿದ್ದರೂ, ಪಶ್ಚಿಮ ಬಂಗಾಳ ಹಾಗೂ ಇತರ ಕೆಲವು ವಿಧಾನಸಭೆಗಳಿಗೆ ನಡೆದ ಚುನಾವಣೆಯು ಬೆಲೆ ಹೆಚ್ಚಳವನ್ನು ಮುಂದೂಡುವಂತೆ ಮಾಡಿತ್ತು ಎನ್ನುವುದನ್ನು ಗಮನಿಸಬೇಕು. ಅಂದರೆ, ಬೆಲೆ ಏರಿಕೆಯು ಹಣಕಾಸಿಗೆ ಎಷ್ಟರಮಟ್ಟಿಗೆ ಸಂಬಂಧಿಸಿದೆಯೋ ಅಷ್ಟೇ ಪ್ರಮಾಣದಲ್ಲಿ ರಾಜಕಾರಣದ ಜೊತೆಗೂ ಬೆಸೆದುಕೊಂಡಿದೆ. ಇಂಧನ ಬೆಲೆ ಏರಿಕೆಯಿಂದ ಆಗುವ ಆರ್ಥಿಕ ಆಘಾತದ ಪರಿಣಾಮ ಕಡಿಮೆ ಇರಬೇಕು ಎಂದಾದರೆ, ಬೆಲೆ ಹೆಚ್ಚಳವು ಸರಿಯಾದ ಸಮಯಕ್ಕೆ ಆಗಬೇಕು; ನಿರ್ಧಾರಗಳು ಪಾರದರ್ಶಕವಾಗಿ ಆಗಬೇಕು.



ನಾಲ್ಕು ವರ್ಷಗಳ ನಂತರ ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆಯಾಗಿದೆ. ಇದರ ನೇರ ಪರಿಣಾಮ ಜನಸಾಮಾನ್ಯರ ಬದುಕಿನ ಮೇಲಾಗಲಿದೆ.

ಕಂಪನಿಗಳಿಗೆ ಆಗುತ್ತಿರುವ ನಷ್ಟವು ಬೆಲೆ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಲಾಗಿದೆ. ಕಚ್ಚಾತೈಲದ ಬೆಲೆಯು ಬ್ಯಾರಲ್ ಒಂದಕ್ಕೆ 100 ಡಾಲರ್ ಮಟ್ಟದಲ್ಲಿ ಇದ್ದಾಗ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಪ್ರತಿನಿತ್ಯ ಒಟ್ಟು ₹1,000 ಕೋಟಿ ನಷ್ಟ ಅನುಭವಿಸುತ್ತಿದ್ದವು ಎಂದು ಅಂದಾಜಿಸಲಾಗಿತ್ತು. ಈಗ ಆಗಿರುವ ಏರಿಕೆಯು ಕಂಪನಿಗಳಿಗೆ ಆಗುತ್ತಿರುವ ನಷ್ಟವನ್ನು ಪೂರ್ತಿಯಾಗಿ ಭರಿಸುವುದಿಲ್ಲ ಎನ್ನಲಾಗಿದೆ. ಅಂದರೆ, ಮುಂದಿನ ದಿನಗಳಲ್ಲಿ ಇಂಧನ ಬೆಲೆಯಲ್ಲಿ ಇನ್ನಷ್ಟು ಏರಿಕೆ ಆಗಲೂಬಹುದು. ಯುದ್ಧವು ತಕ್ಷಣಕ್ಕೆ ಕೊನೆಗೊಂಡರೂ, ಜಾಗತಿಕ ಮಟ್ಟದಲ್ಲಿ ಕಚ್ಚಾತೈಲ ಪೂರೈಕೆ ವ್ಯವಸ್ಥೆಯು ಮುಂದಿನ ಕೆಲವು ತಿಂಗಳುಗಳವರೆಗೆ ಅಸ್ಥಿರವಾಗಿರುವ ಸಾಧ್ಯತೆ ಇದೆ. ಹೀಗಾಗಿ ಇಂಧನ ಬೆಲೆಯು ಈ ವರ್ಷದುದ್ದಕ್ಕೂ ಹೆಚ್ಚಿನ ಮಟ್ಟದಲ್ಲಿ ಉಳಿಯಬಹುದು. ರಷ್ಯಾದಿಂದ ಭಾರತವು ಇಂಧನ ಆಮದು ಮಾಡಿಕೊಳ್ಳುವ ಸಾಧ್ಯತೆ ಈಗ ಅಮೆರಿಕ ರೂಪಿಸುವ ನೀತಿಗಳು, ಅದು ಹೇರುವ ಒತ್ತಡವನ್ನು ಆಧರಿಸಿದೆ. ಹಾಗಾಗಿ, ಅಲ್ಲಿಂದ ಇಂಧನ ಸಿಗುವ ಬಗ್ಗೆ ಖಾತರಿ ಇಲ್ಲ.

ಇಂಧನ ಬೆಲೆ ಏರಿಕೆಯ ಪರಿಣಾಮವು ದೇಶದ ಅರ್ಥ ವ್ಯವಸ್ಥೆಯ ಎಲ್ಲ ಕ್ಷೇತ್ರಗಳನ್ನೂ ಪ್ರಭಾವಿಸಲಿದೆ, ಇದುವರೆಗೆ ನಿಯಂತ್ರಣದಲ್ಲಿ ಇದ್ದ ಹಣದುಬ್ಬರ ಪ್ರಮಾಣ ಹೆಚ್ಚಾಗುವುದಕ್ಕೆ ಕಾರಣವಾಗಲಿದೆ. ಹಾಗೆ ನೋಡಿದರೆ, ಇಂಧನ ಬೆಲೆ ಏರಿಕೆಯ ಪರಿಣಾಮವು ಈಗಾಗಲೇ ಕಾಣಿಸಿಕೊಂಡಿದೆ. ಎಲ್ಲ ವಲಯಗಳಲ್ಲಿಯೂ ತಯಾರಿಕಾ ವೆಚ್ಚವು ಜಾಸ್ತಿ ಆಗಿದೆ. ವಿವಿಧೆಡೆ ಸಾರಿಗೆ ಕ್ಷೇತ್ರಗಳ ಕಂಪನಿಗಳು ಪ್ರಯಾಣ ವೆಚ್ಚವನ್ನು ಹೆಚ್ಚು ಮಾಡಿವೆ. ಹಲವು ಉದ್ಯಮಗಳು ಬೆಲೆ ಹೆಚ್ಚಳದ ಪರಿಣಾಮವನ್ನು ಗ್ರಾಹಕರ ಮೇಲೆ ವರ್ಗಾಯಿಸಲು ಆರಂಭಿಸಿವೆ. ಗ್ರಾಹಕ ಬೆಲೆ ಸೂಚ್ಯಂಕ ಆಧರಿಸಿದ ಚಿಲ್ಲರೆ ಹಣದುಬ್ಬರ ಲೆಕ್ಕ ಹಾಕುವಾಗ ಇಂಧನಕ್ಕೆ ಗಣನೀಯ ಪ್ರಾತಿನಿಧ್ಯ ಇರುತ್ತದೆಯಾದ ಕಾರಣದಿಂದಾಗಿ, ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಜಾಸ್ತಿ ಆಗಬಹುದು. ವಾರ್ಷಿಕ ಹಣದುಬ್ಬರ ಪ್ರಮಾಣವು ಇಂಧನ ಬೆಲೆ ಏರಿಕೆಯ ಕಾರಣದಿಂದಾಗಿ ಶೇ 0.25ರಷ್ಟು ಹೆಚ್ಚಾಗಬಹುದೆಂದು ಅಂದಾಜು ಮಾಡಲಾಗಿದೆ. ಆ ರೀತಿ ಆದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಟ್ಟಕ್ಕಿಂತ ಜಾಸ್ತಿ ಆಗಬಹುದು. ಆಗ ಆರ್‌ಬಿಐ ಬಡ್ಡಿ ದರವನ್ನು ಹೆಚ್ಚಿಸಲೂಬಹುದು. ಅಂಕಿ–ಅಂಶಗಳನ್ನು ಬದಿಗಿರಿಸಿ ನೋಡಿದರೂ, ಬೆಲೆ ಏರಿಕೆಯು ಜನಸಾಮಾನ್ಯರ ನಿತ್ಯದ ವೆಚ್ಚಗಳ ಮೇಲೆ ಪರಿಣಾಮ ಬೀರುವುದು ಖಚಿತ.

ಜಾಲಪಟ

ದಂಪತಿಗೆ ಬೆಂಬಲಿಸಿ



ಗಂಡ–ಹೆಂಡತಿಯಲ್ಲಿ ಯಾರೊಬ್ಬರಾದರೂ ಕರ್ನಾಟಕದಲ್ಲಿಯೇ ಹುಟ್ಟಿದವರಾಗಿದ್ದು, ಅಂಥ ದಂಪತಿ ಮೂರನೇ ಮಗುವನ್ನು ಹಡೆದರೆ ಪ್ರೋತ್ಸಾಹ ನೀಡುವ, ಆರ್ಥಿಕ ನೆರವು ನೀಡುವ ವ್ಯವಸ್ಥೆ ಬರಲಿ. ಈಗಾಗಲೇ, ನಮ್ಮ ಫಲವತ್ತತೆಯ ದರ 1.6ರ ಸಮೀಪವಿದೆ.

ಜಿ. ಆನಂದ್, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ



ಯುದ್ಧದ ಕನಸು ಯಾರಿಗಾದರೂ ಮೊದಲೇ ಬಿದ್ದಿತ್ತೆ? ಯುದ್ಧದ ಕಾರಣಕ್ಕೆ ಕಚ್ಚಾತೈಲದ ಬೆಲೆ ಏರಿಕೆಯಾಗಿದೆ. ಕಾಂಗ್ರೆಸ್ ನಾಯಕರೇ ಈ ಸ್ಥಾನದಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದರು? ಗ್ಯಾರಂಟಿಗಾಗಿ ಜನರಿಗೆ ತೆರಿಗೆ ಹೊರಿಸಿರುವ 'ಕೈ' ನಾಯಕರಿಗೆ ಕೇಂದ್ರವನ್ನು ಪ್ರಶ್ನಿಸುವ ನೈತಿಕತೆ ಇಲ್ಲ.

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಬೃಹತ್ ಕೈಗಾರಿಕೆ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 18-5-2001

• ಆಂಧ್ರ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ

ಬೆಂಗಳೂರು, ಮೇ 17– ಕೃಷ್ಣಾ ನದಿ ನೀರಿನ ಹಂಚಿಕೆ ಬಗ್ಗೆ ಬಚಾವತ್ ನ್ಯಾಯಮಂಡಳಿಯ ತೀರ್ಪಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶವನ್ನು ಆಂಧ್ರ ಪ್ರದೇಶ ಸರ್ಕಾರ ಉಲ್ಲಂಘಿಸಿರುವುದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಮೊಕದ್ದಮೆ ಹೂಡಲು ಇಲ್ಲಿ ಇಂದು ನಡೆದ ಸರ್ವ ಪಕ್ಷಗಳ ಸಭೆಯು ಸರ್ವಾನುಮತದ ನಿರ್ಣಯ ತೆಗೆದುಕೊಂಡಿತು.

ತುಮಕೂರು ಜಿಲ್ಲೆಯ ಶಿರಾ ಮತ್ತು ಮಧುಗಿರಿ ತಾಲ್ಲೂಕುಗಳ ಸಮೀಪ ಬಚಾವತ್ ನ್ಯಾಯಮಂಡಳಿ ತೀರ್ಪನ್ನು ಉಲ್ಲಂಘಿಸಿ ಆಂಧ್ರಪ್ರದೇಶ ಸರ್ಕಾರ ಕೈಗೆತ್ತಿಕೊಂಡಿರುವ ಅಕ್ರಮ ಕಾಮಗಾರಿ ಕುರಿತು ಸುಪ್ರೀಂ ಕೋರ್ಟಿನಲ್ಲಿ ತಕರಾರು ಅರ್ಜಿ ಸಲ್ಲಿಸಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

• ಕೇರಳ: ಆಂಟನಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ

ತಿರುವನಂತಪುರ, ಮೇ 17– ಕಾಂಗ್ರೆಸ್ ಪಕ್ಷದ ನಾಯಕ ಎ.ಕೆ. ಆಂಟನಿ ಅವರು ಕೇರಳದ ಮುಖ್ಯಮಂತ್ರಿಯಾಗಿ ಇಂದು ಅಧಿಕಾರ ಸ್ವೀಕರಿಸಿದರು.

ರಾಜ್ಯಪಾಲರಾದ ಎಸ್.ಎಸ್. ಕಾಂಗಾ ಅವರು ಪ್ರಮಾಣ ವಚನ ಬೋಧಿಸಿದರು.

ಅವರ ಜೊತೆ ಮುಸ್ಲಿಂ ಲೀಗ್ ನಾಯಕ ಪಿ.ಕೆ. ಕುಂಞಾಲಿಕುಟ್ಟಿ, ಕೇರಳ ಕಾಂಗ್ರೆಸ್ (ಎಂ) ನಾಯಕ ಕೆ.ಎಂ. ಮಣಿ, ಕೇರಳ ಕಾಂಗ್ರೆಸ್ (ಜಾಕೋಬ್ ಬಣ) ನಾಯಕ ಟಿ.ಎಂ. ಜಾಕೋಬ್, ಕೇರಳ ಕಾಂಗ್ರೆಸ್‌ನ (ಬಿ) ಮುಖ್ಯ ಸಚೇತಕ ಹಾಗೂ ಚಿತ್ರನಟ ಕೆ.ಬಿ. ಗಣೇಶ ಕುಮಾರ್, ಜೆಎಸ್‌ಎಸ್ ನಾಯಕರಾದ ಕೆ.ಆರ್. ಗೌರಿ, ಸಿಎಂಪಿ ನಾಯಕರಾದ ಎಂ.ವಿ. ರಾಘವನ್, ಆರ್‌ಎಸ್‌ಪಿ ನಾಯಕ ಬಾಬು ದಿವಾಕರ ಅವರು ಸಚಿವರಾಗಿ ಅಧಿಕಾರ ಸ್ವೀಕರಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 18-5-1951

• ಕಾಂಗ್ರೆಸ್ಸಿಗೆ ಆಚಾರ್ಯ ಕೃಪಲಾನಿ ರಾಜೀನಾಮೆ

ಮದರಾಸ್, ಮೇ 17– ಕೆಲವು ದಿವಸಗಳ ಹಿಂದೆ ರದ್ದು ಮಾಡಲ್ಪಟ್ಟ ಕಾಂಗ್ರೆಸ್ ಡೆಮೋಕ್ರಾಟಿಕ್ ಪಕ್ಷದ ನಾಯಕ ಆಚಾರ್ಯ ಜೆ.ಬಿ. ಕೃಪಲಾನಿ ಯವರು ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ್ ಟಂಡನ್‌ರವರಿಗೆ ಪತ್ರವೊಂದನ್ನು ಬರೆದು ಕಾಂಗ್ರೆಸ್ಸಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು.

ತಮ್ಮ ರಾಜೀನಾಮೆ ವಿವರಗಳನ್ನು ಪ್ರಕಟಿಸುವುದಕ್ಕೆ ಮುಂಚೆ ಕೃಪಲಾನಿಯವರು ಮದರಾಸಿಗೆ ದೆಹಲಿಯಿಂದ ಬಂದಿದ್ದ ರಫಿ ಅಹಮದ್ ಕಿದ್ವಾಯಿಯವರೊಡನೆ ದೀರ್ಘಕಾಲದ ಚರ್ಚೆ ನಡೆಸಿದರು. ಕಾಂಗ್ರೆಸ್‌ಗೆ ರಾಜೀನಾಮೆ ಸಲ್ಲಿಸಿ, ಪಕ್ಷದ ಅಧ್ಯಕ್ಷರಿಗೆ ಬರೆದ ಪತ್ರವನ್ನು ಬಹಿರಂಗಪಡಿಸಿದರು.

ವಂಚನೆಯ ಚುನಾವಣಾ ಯುಗ



ವಿಶ್ಲೇಷಣೆ

ಯೋಗೇಂದ್ರ ಯಾದವ್

> ಅಪ್ರಾಮಾಣಿಕತೆಯೇ ಸಹಜಸ್ಥಿತಿ ಎನ್ನುವ ಹಂತ ತಲಪಿರುವ ಚುನಾವಣಾ ವ್ಯವಸ್ಥೆ ಇದೇ ರೀತಿ ಮುಂದುವರಿದರೆ ಪ್ರಜಾಪ್ರಭುತ್ವ ವ್ಯವಸ್ಥೆ ಬುಡಮೇಲಾಗುವುದು ಖಚಿತ. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿನ ಚುನಾವಣೆಗಳು, ಅಧಃಪತನದ ದಾರಿಯಲ್ಲಿಯೇ ಇನ್ನೂ ಮುಂದುವರಿಯುವುದರ ಗುರಿ ಪ್ರಪಾತವಷ್ಟೇ ಆಗಿರಲಿದೆ ಎನ್ನುವುದರ ಸಂಕೇತದಂತಿವೆ.

ವಿಜ್ಞಾನಿಗಳು ಇದನ್ನು ಪರಿವರ್ತನೆ ಅಥವಾ ಪಲ್ಲಟದ ಹಂತ ಎಂದು ಕರೆಯುತ್ತಾರೆ. ಒಂದು ವಸ್ತುವು ಒಂದು ನಿರ್ದಿಷ್ಟ ಸಂದರ್ಭದಲ್ಲಿ ದಿಢೀರ್ ತನ್ನ ಸ್ಥಿತಿಯನ್ನು ಬದಲಾಯಿಸಿಕೊಳ್ಳುವುದನ್ನು ಅವರು ಹೀಗೆ ಹೇಳುತ್ತಾರೆ. ಉದಾಹರಣೆಗೆ, ನೀರು ಮಂಜುಗಡ್ಡೆಯಾಗುವುದು ಅಥವಾ ಕುದಿಯುವ ನೀರು ಆವಿಯಾಗಿ ಪರಿವರ್ತನೆಯಾಗುವುದು. ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ವಿಧಾನಸಭೆಯ ಚುನಾವಣೆಗಳು ಇದೇ ರೀತಿಯಲ್ಲಿ, ಸಂದೇಹಾಸ್ಪದ ಹಂತದಲ್ಲಿ ಇದ್ದವುಗಳು ಒಮ್ಮಿಂದೊಮ್ಮೆಗೇ ಪಲ್ಲಟದ ರೂಪದಲ್ಲಿ ಅಪ್ರಾಮಾಣಿಕ ಚುನಾವಣೆಯಾಗಿ ಕೊನೆಗೊಂಡಿವೆ.

ನಮ್ಮ ವ್ಯವಸ್ಥೆಯಲ್ಲಿ ಚುನಾವಣಾ ಅಕ್ರಮಗಳ ಕುರಿತ ದೂರುಗಳು ನಮ್ಮ ಚುನಾವಣೆಗಳಷ್ಟೇ ಹಳೆಯವು. ಆದರೆ, ಯಾವುದೇ ಸಕ್ರಿಯ ಪ್ರಜಾಪ್ರಭುತ್ವದಲ್ಲಿ ಎದ್ದು ಕಾಣುವ ಈ ಅಸಮಾಧಾನದ ನಿತ್ಯದ ಅಪಸ್ವರದಲ್ಲಿ ಮೂಲಭೂತ ಪಲ್ಲಟವಾಗಿದ್ದು, ಚುನಾವಣಾ ಪದ್ಧತಿಯ ಬಗ್ಗೆಯೇ ನಮಗೆ ಅಸಮ್ಮತಿ ಇದೆ ಎಂಬ ಸ್ವರೂಪ ಪಡೆದುಕೊಂಡಿದೆ. ಆರಂಭದಲ್ಲಿ, 'ವೆಸ್ಟ್‌ಮಿನ್‌ಸ್ಟರ್ ಶೈಲಿ'ಯ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ವರೂಪವನ್ನು ಪ್ರಶ್ನಿಸಿದೆವು. ನಂತರ ಚುನಾವಣಾ ವ್ಯವಸ್ಥೆಯ ಮಾದರಿಯನ್ನು ಅಂದರೆ, ಸರಳ ಬಹುಮತ ವ್ಯವಸ್ಥೆಯನ್ನು ಪ್ರಶ್ನಿಸಿದೆವು. ಅಲ್ಲಿಂದ, ಇನ್ನೂ ಹೆಚ್ಚು ಆವೇಶದಿಂದ ಚರ್ಚೆಯನ್ನು ಇನ್ನಷ್ಟು ಸೀಮಿತಗೊಳಿಸಿ ಅಭ್ಯರ್ಥಿಗಳು ಮತ್ತು ಚುನಾವಣಾ ಪ್ರಚಾರದ ಸ್ವರೂಪವನ್ನು ಪ್ರಶ್ನಿಸಿದೆವು. ಕಳೆದ ಕೆಲವು ವರ್ಷಗಳಲ್ಲಿ ನಮ್ಮ ಚರ್ಚೆಯು ತಳಮಟ್ಟ ಮುಟ್ಟಿದೆ. ಚುನಾವಣೆಯಲ್ಲಿ ಪ್ರಾಮಾಣಿಕತೆ, ಮತದಾನ ಮತ್ತು ಮತ ಎಣಿಕೆಯ ಅಕ್ರಮಗಳ ಸುತ್ತ ಅದು ಸುತ್ತುತ್ತಿದೆ.

ಮತದಾನ ಮತ್ತು ಮತ ಎಣಿಕೆಯಲ್ಲಿ ಅಕ್ರಮಗಳ ಆರೋಪ ಈ ಹಿಂದೆ ಕೇಳದೇ ಇರುವುದೇನೂ ಅಲ್ಲ. ಅವು ಹಗರಣಗಳೇ ಆಗಿದ್ದರೂ ವ್ಯವಸ್ಥೆಯಲ್ಲಿ ಅಪವಾದದ ರೀತಿಯಲ್ಲಿಯಷ್ಟೇ ಇದ್ದ ಕಾರಣ ಅವುಗಳನ್ನು ಗಮನಿಸಿ ಆ ಕುರಿತು ಚರ್ಚೆ ಮಾಡುತ್ತಿದ್ದೆವು. ಬಹುತೇಕ ಎಲ್ಲ ಚುನಾವಣೆಗಳೂ ಕನಿಷ್ಠ ಪ್ರಾಮಾಣಿಕತೆಯ ಹೊಸ್ತಿಲು ದಾಟುತ್ತಿದ್ದ ಕಾರಣ ವಸಾಹತೋತ್ತರ ದೇಶಗಳ ಚುನಾವಣಾ ಪ್ರಜಾಪ್ರಭುತ್ವಗಳಲ್ಲಿ ಭಾರತದ ಚುನಾವಣೆಗಳು ಮಾದರಿ ಎನಿಸಿಕೊಂಡಿದ್ದವು. ಒಟ್ಟಾರೆಯಾಗಿ, ಚುನಾವಣಾ ಫಲಿತಾಂಶಗಳು ಜನರ ಇಚ್ಛೆಯನ್ನು ಪ್ರತಿಫಲಿಸುತ್ತಿದ್ದವು. 1992ರ ಪಂಜಾಬ್, 1987ರ ಜಮ್ಮು–ಕಾಶ್ಮೀರ, 1983ರ ಅಸ್ಸಾಂ ಮತ್ತು 1972ರ ಪಶ್ಚಿಮ ಬಂಗಾಳ ಚುನಾವಣೆಗಳಷ್ಟೇ ಇದಕ್ಕೆ ಅಪವಾದವಾಗಿದ್ದವು. ಜಮ್ಮು–ಕಾಶ್ಮೀರ ಮತ್ತು ನಾಗಾಲ್ಯಾಂಡ್‌ನ ಇನ್ನೂ ಕೆಲವು ಚುನಾವಣೆಗಳನ್ನು ಈ ಪಟ್ಟಿಗೆ ಸೇರಿಸಲೂಬಹುದು. ಆದರೆ, ಇವು ಅಪವಾದಗಳಾಗಿದ್ದವೇ ಹೊರತು ಅವೇ ವ್ಯವಸ್ಥೆ ಎನಿಸಿಕೊಂಡಿರಲಿಲ್ಲ.

ಈ ವ್ಯವಸ್ಥೆಯಲ್ಲಿ ಪಲ್ಲಟವೊಂದನ್ನು ನಾವು ಕಾಣುತ್ತಿದ್ದೇವೆ. ಇಲ್ಲಿ ನಮಗೆ 'ಪರಿವರ್ತನೆ ಹಂತ' ಎಂಬ ಪರಿಕಲ್ಪನೆಯು ಪ್ರಸ್ತುತ ಎನಿಸುತ್ತದೆ. ಇದೇ ಮೊದಲ ಬಾರಿಗೆ, ಹಲವು ಚುನಾವಣೆಗಳ ಒಟ್ಟಾರೆ ಫಲಿತಾಂಶವು ಜನಮತವನ್ನು ಪ್ರತಿಫಲಿಸುತ್ತಿದೆಯೇ ಎಂಬ ಪ್ರಶ್ನೆಯನ್ನು ಎದುರುಗೊಂಡಿದ್ದೇವೆ. ನಾಲ್ಕು ದಶಕಗಳಿಗೂ ಹೆಚ್ಚಿನ ಅವಧಿಯಿಂದ ಚುನಾವಣೆಗಳನ್ನು ಗಮನಿಸುತ್ತಿರುವ ನನಗೆ, 2023ರ ಮಧ್ಯಪ್ರದೇಶ, 2024ರ ಹರಿಯಾಣ ಮತ್ತು ಮಹಾರಾಷ್ಟ್ರ ವಿಧಾನಸಭೆಗಳ ಚುನಾವಣೆಗಳ ಫಲಿತಾಂಶವನ್ನು ಅರ್ಥ ಮಾಡಿಕೊಳ್ಳಲೇ ಸಾಧ್ಯವಾಗುತ್ತಿಲ್ಲ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಈವರೆಗೆ ಯಾರ ಬಳಿಯಲ್ಲಿಯೂ ಸಮರ್ಥವಾದ ಪುರಾವೆ ಇಲ್ಲ. ಮೇಲ್ನೋಟಕ್ಕೆ ಯಾವುದೇ ಸುಳಿವು ಇಲ್ಲದ ಕಾರಣ ಎಲ್ಲಿ ಮತ್ತು ಹೇಗೆ ಹುಡುಕಬೇಕು ಎಂಬುದು ನಮಗೆ ತಿಳಿಯುತ್ತಿಲ್ಲ. ಈ ಚುನಾವಣೆಗಳು ಸಂದೇಹಾಸ್ಪದವಾಗಿಯೇ ಉಳಿಯುತ್ತವೆ.

ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳು ಇದನ್ನು ಬದಲಿಸಿವೆ. ನಿಜ ಹೇಳಬೇಕೆಂದರೆ, ಈ ಎರಡು ರಾಜ್ಯಗಳಲ್ಲಿ ಮಮತಾ ಬ್ಯಾನರ್ಜಿ ಮತ್ತು ರಾಹುಲ್ ಗಾಂಧಿ ಮಾಡಿರುವ 'ಮತ ಕಳವು' ಆರೋಪವು ಇನ್ನೂ ಪುರಾವೆ ಇಲ್ಲದ ಆರೋಪ ಮಾತ್ರ. ಅಸ್ಸಾಂನಲ್ಲಿ ಯಾವುದೇ ಅಕ್ರಮ ನಡೆಯದೇ ಇದ್ದರೂ ಕಾಂಗ್ರೆಸ್ ಸೋಲುತ್ತಿತ್ತು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ, ಟಿಎಂಸಿ ಸರ್ಕಾರದ ಬಗ್ಗೆ ಜನರಿಗೆ ಬಹಳ ಅಸಮಾಧಾನ ಇತ್ತು ಎಂಬುದನ್ನು ನಿರಾಕರಿಸಲಾಗದಿದ್ದರೂ, ಪಶ್ಚಿಮ ಬಂಗಾಳದ ಕುರಿತು ಹಾಗೆ ಹೇಳುವುದು ಕಷ್ಟಕರ. ಜನಮತವನ್ನು ಬುಡಮೇಲುಗೊಳಿಸಲಾಗಿದೆ ಎಂಬುದಕ್ಕೆ ನಿರಾಕರಿಸಲಾಗದ ಸಾಕ್ಷ್ಯ ಈಗಲೂ ನಮ್ಮ ಬಳಿ ಇಲ್ಲ. ಈಗ ನಮ್ಮಲ್ಲಿ ಇರುವುದು ಏನೆಂದರೆ, ಗುರುತಿಸಿ ದಾಖಲಿಸಬಹುದಾದ ಚುನಾವಣೆಯನ್ನು ತಿರುಚಿರುವುದರ ಸಾಕ್ಷ್ಯಗಳು. ಈ ತಿರುಚುವಿಕೆಯ ಪ್ರಮಾಣ ಮತ್ತು ಪರಿಣಾಮಗಳ ಕುರಿತು ನಾವು ಚರ್ಚಿಸುತ್ತಲೇ ಇರಬಹುದು. ಆದರೆ, ನಾವು 'ಅಪ್ರಾಮಾಣಿಕ' ಎಂಬ ವಲಯದಲ್ಲಿ ಇದ್ದೇವೆ ಎಂಬುದನ್ನು ನಿರಾಕರಿಸಲು ಆಗದು. ಇಲ್ಲಿಯೇ ನಾವು ಲಕ್ಷ್ಮಣರೇಖೆ ಎಳೆಯದೇ ಇದ್ದರೆ, ನಮಗೆಲ್ಲ ತಿಳಿದಿರುವಂತೆ ಚುನಾವಣಾ ಪ್ರಜಾಪ್ರಭುತ್ವಕ್ಕೆ ನಾವು ವಿದಾಯ ಹೇಳಬೇಕಾಗುತ್ತದೆ.

ಅಸ್ಸಾಂನಲ್ಲಿ ನಡೆದ ಕ್ಷೇತ್ರ ಮರುವಿಂಗಡಣೆಯಲ್ಲಿ ನಡೆದಿರುವುದು ಹಸ್ತಕ್ಷೇಪವಷ್ಟೇ ಅಲ್ಲ; ಚುನಾವಣಾ ಕಣವು ಬಿಜೆಪಿಯ ಪರವಾಗಿ ಇರುವಂತೆ ನೋಡಿಕೊಳ್ಳುವುದಕ್ಕಾಗಿ ನಿರ್ಲಜ್ಜ ಪಕ್ಷಪಾತದಿಂದ ಕೋಮುವಾದಿ ನೆಲೆಯಲ್ಲಿ ಚುನಾವಣಾ ಆಯೋಗವು ಮರುವಿಂಗಡಣೆ ನಡೆಸಿದೆ. ಚುನಾವಣೆ ನಡೆಯುವುದಕ್ಕೂ ಮೊದಲೇ 20ರಿಂದ 30 ಕ್ಷೇತ್ರಗಳಲ್ಲಿ ಬಿಜೆಪಿಗೆ ಅನುಕೂಲಕರ ಸ್ಥಿತಿ ನಿರ್ಮಾಣವಾಗಿತ್ತು: ಮುಸ್ಲಿಂ ಅಥವಾ ಅಹೋಮ್ ಮತದಾರರು ನಿರ್ಣಾಯಕವಾಗಿದ್ದ 20 ಕ್ಷೇತ್ರಗಳನ್ನು ಬದಲಿಸಲಾಯಿತು; ಬಂಗಾಳಿ ಹಿಂದೂಗಳು ಅಥವಾ ಬೋಡೊಗಳು ನಿರ್ಣಾಯಕವಾಗಿರುವ 10 ಕ್ಷೇತ್ರಗಳನ್ನು ಸೃಷ್ಟಿಸಲಾಯಿತು. ಅಸ್ಸಾಂನಲ್ಲಿ ಮಾಡಿದ ವ್ಯವಸ್ಥಿತ ತಿರುಚುವಿಕೆಯನ್ನು ಈ ಹಿಂದೆ ಜಮ್ಮು–ಕಾಶ್ಮೀರದಲ್ಲಿಯೂ ಮಾಡಲಾಗಿತ್ತು. ಮುಂದೆ ರಾಷ್ಟ್ರಮಟ್ಟದ ಮರುವಿಂಗಡಣೆಗೆ ಇದು ಮಾದರಿಯಾಗಬಹುದು ಎಂಬ ಕಳವಳ ಸೃಷ್ಟಿಯಾಗಿದೆ.

ಪಶ್ಚಿಮ ಬಂಗಾಳವು ಚುನಾವಣಾ ಪ್ರಾಮಾಣಿಕತೆಯ ಬಹುಅಂಗಾಂಗ ವೈಫಲ್ಯಕ್ಕೆ ಉದಾಹರಣೆಯಾಗಿದೆ. ಎಸ್‌ಐಆರ್ ಮೇಲೆ ಅತಿಯಾದ ಗಮನ ಕೇಂದ್ರೀಕರಿಸುವಿಕೆಯು ಈ ವೈಫಲ್ಯವನ್ನು ಮಸುಕಾಗಿಸಿದೆ. ಚುನಾವಣಾ ಸುಧಾರಣೆಗಳ ಚರ್ಚೆಯು ಸಂಕುಚಿತಗೊಳ್ಳುತ್ತಾ ಹೋದಂತೆಯೇ ಎಸ್‌ಐಆರ್ ಚರ್ಚೆಯೂ ಆಗಿದೆ. ತಪ್ಪಾಗಿ ಹೆಸರುಗಳನ್ನು ಅಳಿಸಲಾಗಿದೆ ಎಂಬ ಚರ್ಚೆಯು ಬಳಿಕ ಉದ್ದೇಶಪೂರ್ವಕವಾಗಿಯೇ ಹೆಸರು ಅಳಿಸಲಾಗಿದೆ ಎಂಬಲ್ಲಿಗೆ ಬಂತು. ಈಗ, ಉದ್ದೇಶಪೂರ್ವಕವಾಗಿ ಅಳಿಸಲಾದ ಸಂಖ್ಯೆಯು ಗೆಲುವಿನ ಅಂತರಕ್ಕಿಂತ ಹೆಚ್ಚು ಎಂಬಲ್ಲಿಗೆ ಬಂದು ನಿಂತಿದೆ. ಈ ಕೊನೆಯ ಅಂಶವನ್ನು ನಾವು ದೃಢಪಡಿಸಿಕೊಳ್ಳಬಹುದು. ಅಳಿಸಿ ಹಾಕಲಾದ ಎಲ್ಲ 91 ಲಕ್ಷ ಹೆಸರುಗಳು ಸಂದೇಹಾಸ್ಪದ ಎಂದು ಪರಿಗಣಿಸಿದ್ದರೆ ಬಿಜೆಪಿ ಸೋಲಬಹುದಿತ್ತು. ಈ ರೀತಿ ಯೋಚಿಸಿದರೆ, 158 ಕ್ಷೇತ್ರಗಳನ್ನು ಅನುಮಾನದಿಂದ ನೋಡಬೇಕಾಗುತ್ತದೆ. ಅವುಗಳಲ್ಲಿ 105ರಲ್ಲಿ ಬಿಜೆಪಿ ಗೆದ್ದಿದೆ. ಈತನಕ, ಈಗ ಲಭ್ಯವಿರುವ ಸಾಕ್ಷ್ಯಗಳ ಆಧಾರದಲ್ಲಿ ಹೇಳುವುದಾದರೆ, 27 ಲಕ್ಷ ಮತದಾರರ ಹೆಸರುಗಳನ್ನು ಸಂದೇಹಾಸ್ಪದವಾಗಿ ಅಳಿಸಿಹಾಕಲಾದ ಕ್ಷೇತ್ರಗಳ ಪೈಕಿ 26ರಲ್ಲಿ ಬಿಜೆಪಿ ಗೆದ್ದಿದೆ.

ಇದು ಫಲಿತಾಂಶದ ಮೇಲೆ ಅತಿ ಹೆಚ್ಚು ಪರಿಣಾಮ ಬೀರುವಂತಹ ವಿಚಾರ ಅಲ್ಲ. ಚುನಾವಣಾ ಪ್ರಾಮಾಣಿಕತೆಯ ಕುರಿತು ಕಾಳಜಿ ಇರುವವರ ಮುಂದೆ ಇರುವ ನಿಜವಾದ ಸಮಸ್ಯೆ ಏನೆಂದರೆ, ಪಕ್ಷಗಳ ನಡುವಣ ಸ್ಪರ್ಧಾತ್ಮಕತೆಯ ಸ್ವರೂಪವನ್ನೇ ಬದಲಿಸುವ ಪ್ರಮಾಣದಲ್ಲಿ ಪಕ್ಷಪಾತಿಯಾಗಿ ಮತದಾರರ ಪಟ್ಟಿಯನ್ನು ರೂಪಿಸಲು ಪಶ್ಚಿಮ ಬಂಗಾಳ ಮಾದರಿಯಾಗಬಹುದೇ ಎಂಬುದಾಗಿದೆ. ಪಾರದರ್ಶಕತೆಯ ಕುರಿತು ಅಲ್ಪವಾದರೂ ಕಾಳಜಿಯುಳ್ಳವರ ಮುಂದೆ ಇರುವ ನಿಜವಾದ ವಿಚಾರ ಏನೆಂದರೆ, ಇಂತಹ ರೂಪಿಸುವಿಕೆಯ ಮೂಲಭೂತ ಮಾಹಿತಿಯನ್ನು ಹೇಗೆ ಪಡೆಯಬಹುದು ಎಂಬುದಾಗಿದೆ. ಮಾದರಿ ನೀತಿ ಸಂಹಿತೆಯು ಇನ್ನೂ ನೆನಪಿನಲ್ಲಿ ಇರುವವರ ಮುಂದಿರುವ ಪ್ರಶ್ನೆ ಏನೆಂದರೆ, ದ್ವೇಷವನ್ನು ಕಾರ್ಯತಂತ್ರವಾಗಿ ಮುಕ್ತವಾಗಿ ಬಳಸುವುದಕ್ಕಾಗಿ ಆಡಳಿತ ಪಕ್ಷವು ನೀತಿ ಸಂಹಿತೆ ಮತ್ತು ನೆಲದ ಕಾನೂನನ್ನು ಉಲ್ಲಂಘಿಸಬಹುದೇ ಎಂಬುದಾಗಿದೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಎಂಬ ಕಲ್ಪನೆಯಲ್ಲಿ ನಂಬಿಕೆ ಇಟ್ಟವರ ಮುಂದಿರುವ ನಿಜವಾದ ಪ್ರಶ್ನೆ ಏನೆಂದರೆ, ಚುನಾವಣಾ ಆಯೋಗವು ಆಡಳಿತ ಪಕ್ಷದ ಒಂದು ಶಾಖೆಯಂತೆ ವರ್ತಿಸಬಹುದೇ ಮತ್ತು ನಿನ್ನೆ ಅಂಪೈರ್ ಆಗಿದ್ದವರು ದಿನ ಬೆಳಗಾಗುವುದರೊಳಗೆ ಗೆದ್ದ ತಂಡದ ಆಟಗಾರನಾಗಬಹುದೇ ಎಂಬುದಾಗಿದೆ.

ಪರಿಹಾರಕ್ಕಾಗಿ ಎಲ್ಲಿ ಹುಡುಕಬೇಕು ಎಂಬುದು ನಮಗೆ ತಿಳಿದಿಲ್ಲ. ಚುನಾವಣಾ ಆಯೋಗವು ರಾಜಿಯಾಗಿದೆ. ಸುಪ್ರೀಂ ಕೋರ್ಟ್ ಈ ತನಕ ಮೂಕಪ್ರೇಕ್ಷಕ ಮಾತ್ರ. ಬಹುಶಃ ಸತ್ಯವನ್ನು ಹೊರತರಲು 'ಜನರ ಆಯೋಗ'ವೊಂದು ಬೇಕಾಗಬಹುದು. ಅದು ಕೆಲಸ ಮಾಡಬಹುದೇ ಎಂಬುದೂ ನಮಗೆ ತಿಳಿದಿಲ್ಲ. ಈ ಇಳಿಜಾರಿನಲ್ಲಿ ಇನ್ನೂ ನಡೆಯುತ್ತಲೇ ಇರಲು ಸಾಧ್ಯವಾಗದು ಎಂಬುದಷ್ಟೇ ನಮಗೆ ತಿಳಿದಿದೆ.

ಈಗಾಗಲೇ ಬಹಳ ತಡವಾಗಿದೆ. ಆದರೆ, ಪರಿವರ್ತನೆಯ ಈ ಹಂತವನ್ನು ನಾವು ಕಳೆದುಕೊಂಡರೆ, ಮತ್ತೆ ಚೇತರಿಸಿಕೊಳ್ಳಲು ಏನೂ ಉಳಿಯದಿರಬಹುದು.



ವಾಚಕರ ವಾಣಿ

ಸ್ವಿಫ್ಟ್ ಸಿಟಿ: ರೈತರ ಪಾಲಿಗೆ ಮರಣಶಾಸನ

'ಸ್ವಿಫ್ಟ್ ಸಿಟಿ' ಯೋಜನೆಯಿಂದಾಗಿ ಆನೇಕಲ್ ತಾಲ್ಲೂಕಿನ ರೈತರು ಭೂಮಿ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಈ ಯೋಜನೆಯು ರೈತರ ಪಾಲಿಗೆ ಮರಣಶಾಸನ ಆಗಿದೆ. ಉಳ್ಳವರಿಗೆ ಮಣೆ ಹಾಕುವ ಇರಾದೆ ಇದರ ಹಿಂದಿದೆ. ಎಷ್ಟು ಸಾಧ್ಯವೋ ಅಷ್ಟನ್ನು ನುಂಗಲು ಅಧಿಕಾರಿಗಳು ತುದಿಗಾಲಿನಲ್ಲಿ ನಿಂತಿದ್ದಾರೆ. ಉಳಿದ ಭೂಮಿ ಕಬಳಿಸಲು ರಿಯಲ್ ಎಸ್ಟೇಟ್ ಕುಳಗಳು ಕಾಯುತ್ತಿದ್ದಾರೆ. ಹಳ್ಳಿಗಳ ಸಂಸಾರಗಳನ್ನು ಬೀದಿಪಾಲು ಮಾಡುತ್ತಿರುವ ಮಧ್ಯವರ್ತಿಗಳು ಈ ಕುಳಗಳೊಂದಿಗೆ ಕೈಜೋಡಿಸಿದ್ದಾರೆ. ಇವರೆಲ್ಲರಿಗೆ ರಾಜಕಾರಣಿಗಳು ಶ್ರೀರಕ್ಷೆಯಾಗಿದ್ದಾರೆ. ಭೂಮಿಯ ಉಳಿವಿಗಾಗಿ ವರ್ಷದಿಂದಲೂ ಹೋರಾಡುತ್ತಿರುವ ರೈತರ ನೋವಿಗೆ ಬೆಲೆ ಇಲ್ಲದಂತಾಗಿದೆ.

ಎಚ್.ಎಸ್. ಸನತ್ ಕುಮಾರ್, ಚಂದಾಪುರ

ಬೆಳಗಾವಿ: ಹಗ್ಗ ಕೊಟ್ಟು ಕೈಕಟ್ಟಿಸಿಕೊಳ್ಳದಿರಿ

ಬೆಳಗಾವಿ ಕರ್ನಾಟಕದ್ದೇ ಆಗಿದೆ. ಭವಿಷ್ಯತ್ತಿನಲ್ಲೂ ಅದು ಕನ್ನಡದ ನೆಲವೇ ಆಗಿರುತ್ತದೆ. ಕರ್ನಾಟಕದ ಒಂದಿಂಚು ನೆಲವನ್ನೂ ಯಾರಿಗೂ ಬಿಟ್ಟುಕೊಡುವುದಿಲ್ಲವೆಂದು ಹಿಂದಿನ ಎಲ್ಲಾ ಮುಖ್ಯಮಂತ್ರಿಗಳು ಹೇಳುತ್ತಾ ಬಂದಿದ್ದಾರೆ; ಅದರಲ್ಲಿ ರಾಜಿಯಿಲ್ಲ. ಹಾಗೆಯೇ ಬೆಳಗಾವಿಯಲ್ಲಿ ನಾವು ಕನ್ನಡಿಗರು, ಮರಾಠಿಗರು ಅನ್ಯೋನ್ಯವಾಗಿ ಬದುಕುತ್ತಿದ್ದೇವೆ. ಅಗತ್ಯವಿದ್ದಲ್ಲಿ, ಗಡಿಭಾಗದಲ್ಲಿ ಕನ್ನಡವನ್ನು ಬೆಳೆಸಲು ವಿವಿಧ ಕಾರ್ಯಕ್ರಮಗಳನ್ನು ಸರ್ಕಾರ ಯೋಜಿಸಲಿ. ಇಲ್ಲಿಯ ಕನ್ನಡ ಶಾಲೆಗಳನ್ನು ಉನ್ನತೀಕರಿಸಲಿ. ಅಗತ್ಯ ಶಿಕ್ಷಕರನ್ನು ನೇಮಿಸಲಿ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ಏನು ಸಾಧ್ಯವೋ ಅದೆಲ್ಲವನ್ನೂ ಅನುಷ್ಠಾನಕ್ಕೆ ತರಲಿ. ಕನ್ನಡದ ಬಗ್ಗೆ ಜನಸಾಮಾನ್ಯರಲ್ಲಿ ಒಲವು ಬೆಳೆಯಲು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡಲಿ. ಆದರೆ ಯಾರೇ ಆಗಿರಲಿ, ಸತ್ತು ಹೋಗಿರುವ ಎಂಇಎಸ್‌ನ ಭಾಷಿಕ ಹೋರಾಟವನ್ನು ಕೆದಕಿ ಜೀವಂತಗೊಳಿಸದಿರಲಿ.

ಸತ್ತ ಹೆಣಕ್ಕೆ ಜೀವ ತುಂಬಿ ಅದು ದೆವ್ವವಾಗಿ ಕಾಡುವಂತೆ ಮಾಡುವುದು ಕೂಡದು. ಸ್ವತಃ ಕೋಳ ಕೊಟ್ಟು ಬಂಧಿಸಿಕೊಳ್ಳುವುದು ಯಾಕೆ? ಬೆಳಗಾವಿ ರಾಜ್ಯದ ಅವಿಭಾಜ್ಯ ಅಂಗ ಎಂಬ ಠರಾವು ಮಾಡಿಸುವುದರಿಂದ ತಪ್ಪುಸಂದೇಶ ರವಾನೆ ಆಗುವ ಸಾಧ್ಯತೆಯಿದೆ. ಇದುವರೆಗೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಆಗಿರಲಿಲ್ಲವೇ ಎಂಬ ಅಭಿಪ್ರಾಯ ರೂಪಗೊಳ್ಳುತ್ತದೆ. ಅಂಥ ಅಭಿಪ್ರಾಯ ಸೃಷ್ಟಿಸುವವರಿದ್ದಾರೆ. ಅದಕ್ಕೆ ಅವಕಾಶವನ್ನು ನಾವೇ ಸೃಷ್ಟಿಸಿಕೊಡಬಾರದು.

ಡಿ.ಎಸ್. ಚೌಗಲೆ, ಬೆಳಗಾವಿ

ಅಧಿಕಾರದ ಗುಂಗು ಮತ್ತು ವ್ಯಾಮೋಹ

ಕಾಂಗ್ರೆಸ್‌ನ ಉಳಿಕೆ ಮತಗಳ ಬೆಂಬಲದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಸದಸ್ಯತ್ವದ ಅವಧಿಯು ಜೂನ್‌ಗೆ ಅಂತ್ಯವಾಗಲಿದೆ. ಭಗೀರಥನು ತನ್ನ ಪೂರ್ವಜರ ಉದ್ಧಾರಕ್ಕಾಗಿ ಸಿಂಹಾಸನ ತೊರೆದು, ಹಿಮಾಲಯದಲ್ಲಿ ಶಿವನಿಗಾಗಿ ಕಠಿಣ ತಪಗೈದರೆ, ಗೌಡರು ತಮ್ಮ ಕುಟುಂಬದ ಉದ್ಧಾರಕ್ಕಾಗಿ 92ರ ಹರೆಯದಲ್ಲೂ ಮತ್ತೊಂದು ಅವಧಿಗೆ ರಾಜ್ಯಸಭೆ ಪ್ರವೇಶಿಸಲು ತಪಗೈಯುತ್ತಿದ್ದಾರೆ. ಆದರೆ, ಜೆಡಿಎಸ್‌ಗೆ ಸಂಖ್ಯಾಬಲ ಇಲ್ಲ. ಬಿಜೆಪಿ ಬಳಿ ಇರುವ ಸಂಖ್ಯಾಬಲದಿಂದಲಾದರೂ ರಾಜ್ಯಸಭೆಗೆ ಆಯ್ಕೆ ಮಾಡಲು ಕಮಲ ಪಾಳಯದ ವರಿಷ್ಠರನ್ನು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರು ಓಲೈಸುತ್ತಿದ್ದಾರೆ. ಅವರ 'ಭಗೀರಥ ನಡೆ'ಯಲ್ಲಿ ಗೌಡರ ಮನೆತನದ ಪಾರಂಪರಿಕ ಸ್ವಾರ್ಥ ಸಾಧಕತನವು ಕಣ್ಣಿಗೆ ರಾಚುತ್ತಿದೆ. ತಮಗಾಗಿ– ತಮ್ಮ ಕುಟುಂಬಕ್ಕಾಗಿ– ತಮ್ಮ ಪಕ್ಷಕ್ಕಾಗಿ ಹಗಲಿರುಳು ದುಡಿದವರಿಗೆ ಅವಕಾಶ ಮಾಡಿಕೊಡಬೇಕಾಗಿದ್ದ 'ಗೌಡರು', ಅಧಿಕಾರಕ್ಕಾಗಿ ಹಪಹಪಿಸುವುದು ಅವರ ಹಿರಿತನ–ಗೌರವಕ್ಕೆ ಚ್ಯುತಿ ತರುವುದಿಲ್ಲವೇ?

ಸಿದ್ಧಲಿಂಗಸ್ವಾಮಿ ಹಿರೇಮಠ, ತುಮಕೂರು

ಬಸ್: ಅಂಕೆ ಮೀರಿದ ಮೊಬೈಲ್ ಬಳಕೆ

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಈ ಹಿಂದೆ ಬೀಡಿ, ಸಿಗರೇಟ್ ಸೇದುವ ಪರಿಪಾಠ ಇತ್ತು. ದಂಡ ಹಾಕಲು ಶುರು ಮಾಡಿದ ಮೇಲೆ ಆ ಪರಿಪಾಠ ನಿಂತಿದೆ. ಈಗ ಹೊಸದೊಂದು ಸಮಸ್ಯೆ ಶುರುವಾಗಿದೆ. ಅದೇಂದರೆ, ಮೊಬೈಲ್ ಎಂಬ ದೆವ್ವದ ಕಾಟ. ಬಸ್‌ಗಳಲ್ಲಿ ಮೊಬೈಲ್ ಸ್ಪೀಕರ್ ಉಪಯೋಗಿಸಬಾರದೆಂಬ ನಿಯಮ ಜಾರಿಗೊಳಿಸಿ ಹಲವು ವರ್ಷಗಳೇ ಕಳೆದಿವೆ. ಆದರೂ, ಮೊಬೈಲ್ ಸದ್ದು ಸಹ ಪ್ರಯಾಣಿಕರಿಗೆ ಕಿರಿಕಿರಿ ಮಾಡುತ್ತದೆ. ಕೆಲವರು ಜೋರಾಗಿ ಹಾಡುಗಳನ್ನು ಹಾಕಿಕೊಂಡು ಕೇಳುತ್ತಾರೆ. ರೀಲ್ಸ್, ಸಿನಿಮಾ ನೋಡುತ್ತಾರೆ. ಸರ್ಕಾರವು ಈ ಮೊಬೈಲ್ ಶೂರರಿಗೆ ಹೆಚ್ಚಿನ ದಂಡ ವಿಧಿಸಿ ಸಹ ಪ್ರಯಾಣಿಕರ ಮನಃಶಾಂತಿ ಕಾಪಾಡಲಿ.

ರಾಜಶೇಖರ ಮೂರ್ತಿ, ಎಚ್.ಡಿ. ಕೋಟೆ

ಹು–ಧಾ ಇಬ್ಭಾಗವಾಗುವುದು ಅಪೇಕ್ಷಿತ

ಗ್ರೇಟರ್ ಬೆಂಗಳೂರಿನ ನಕ್ಷೆ ಬದಲಾಗಿದೆ. ಐದು ಪಾಲಿಕೆಗಳನ್ನಾಗಿ ಮಾಡಲಾಗಿದೆ. ಆಡಳಿತವು ಸರಾಗವಾಗಿ ನಡೆಯಲಿ ಎಂಬ ಸದುದ್ದೇಶ ಇದರ ಹಿಂದೆ ಅಡಗಿದೆ. ಅದೇ ರೀತಿ ಹುಬ್ಬಳ್ಳಿ– ಧಾರವಾಡ ಎರಡು ವಿಭಾಗವಾಗಲಿ; ಜನಸಾಮಾನ್ಯರ ಜೊತೆ ಸಮಂಜಸ ಸಂವಹನದಿಂದ ಮತ್ತೆ ಉತ್ತಮ ಕ್ರಿಯಾಶೀಲತೆ ಪ್ರದರ್ಶಿಸಲಿ.

ಅನಿಲಕುಮಾರ ಮುಗಳಿ, ಧಾರವಾಡ

ಜಗತ್ತಿಗೆ ಬೇಕಾದುದು ಯುದ್ಧವಲ್ಲ, ಬುದ್ಧ!

ಕೊಲ್ಲಿ ಯುದ್ಧದ ಪರಿಣಾಮವು ದೇಶದ ಜನಸಾಮಾನ್ಯರಿಗೆ ತಟ್ಟಿದೆ. ಎಮ್ಮೆಗೆ ಜ್ವರ ಬಂದರೆ ಕೋಣನಿಗೆ ಬರೆ ಹಾಕಿದಂತಾಗಿದೆ. ದಿನಬಳಕೆಯ ವಸ್ತುಗಳು, ಚಿನ್ನ–ಬೆಳ್ಳಿ, ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆಯಾಗಿದೆ. ದರ ಏರಿಕೆಯು ನಾಗರಿಕರ ಜೇಬಿಗೆ ಅಕ್ಷರಶಃ ಹೊರೆಯಾಗುತ್ತಿದೆ. ಯುದ್ಧ ಹೀಗೆಯೇ ಮುಂದುವರಿದರೆ ಚಿಲ್ಲರೆ ಹಣದುಬ್ಬರ ಹೆಚ್ಚಲಿದೆ. ರೂಪಾಯಿ ಮೌಲ್ಯ ಮತ್ತಷ್ಟು ಕುಸಿಯಲಿದೆ. ಇದು ದೇಶದ ಆರ್ಥಿಕತೆಯ ಬೆಳವಣಿಗೆಗೆ ಅಡ್ಡಿಯಾಗಲಿದೆ. ಕೇಂದ್ರ ಸರ್ಕಾರವು 2047ರ ಹೊತ್ತಿಗೆ 'ವಿಕಸಿತ ಭಾರತ'ದ ಕನಸು ಹೊತ್ತಿದೆ. ಜಾಗತಿಕ ಬಿಕ್ಕಟ್ಟುಗಳು ತಹಬಂದಿಗೆ ಬರದಿದ್ದರೆ ಈ ಕನಸು ಈಡೇರುವುದು ದೂರದ ಮಾತು. ಯುದ್ಧಕ್ಕಿಂತ ಈಗ ಜಗತ್ತಿಗೆ ಬುದ್ಧನ ಅವಶ್ಯಕತೆ ಹೆಚ್ಚಿದೆ.

ಅಜಯ್ ಎನ್.ಎಸ್., ಹಾವೇರಿ

ಚುರುಮುರಿ



ಎಸ್‌ಐಆರ್ ಗುಮ್ಮ

• ಸುಮಂಗಲಾ

ಬೆಕ್ಕಣ್ಣ ಬೆಳಗ್ಗೆಯಿಂದ ಮೊಬೈಲು ಹಿಡಿದು ಭಾರೀ ಬಿಜಿಯಾಗಿತ್ತು.

'ನೀ ಹುಟ್ಟಿ ಎಷ್ಟ್ ವರ್ಸಾತು? ನಾಕೈದು ಅಂತೀಯಲ್ಲ... ನಿನಗೇ ಸರಿ ಗೊತ್ತಿಲ್ಲೇನ್? ನಿನ್ನ ಜನ್ಮ ಪ್ರಮಾಣಪತ್ರ ಎಲ್ಲೈತಿ ನೋಡು... ಇಲ್ಲಂದ್ರ ಬ್ಯಾರೆ ಏನರೆ ದಾಖಲೆ ನೋಡಕ್ಕೆ ನಿಮ್ ಮಾಲಕರಿಗೆ ಹೇಳು'.

'ಯಾರಿಗೆ ಉಪದೇಶ ನೀಡಾಕೆ ಹತ್ತೀ?' ಎಂದೆ ಅಚ್ಚರಿಯಿಂದ.

'ಅಬ್ಬಾ ಸಣ್ಣನ ಮನ್ಯಾಗಿರೂ ಬೆಕ್ಕಮ್ಮನಿಗೆ ಹೇಳತಿದ್ದೆ. ಮತ್ತ ನನ್ ಬರ್ತ್ ಸರ್ಟಿಫಿಕೇಟ್ ಎಲ್ಲಿಟ್ಟಿದ್ದಿ ನೀ? ಈಗೇ ಹುಡುಕಿಡು' ಎಂದು ವರಾತ ಹಚ್ಚಿತು.

ಮರುಕ್ಷಣ ಊರಲ್ಲಿದ್ದ ನನ್ನಮ್ಮನಿಗೆ ಫೋನು ಹಚ್ಚಿತು.

'ಅಜ್ಜೀ... ನಿನ್ನ ಬರ್ತ್ ಸರ್ಟಿಫಿಕೇಟ್ ಹುಡುಕಿ ಇಟ್ಕ. ಹಂಗೇ ಮನ್ಯಾಗಿರ ಬೆಕ್ಕು, ಎಮ್ಮೆ, ದನ, ಕರು ಎಲ್ಲಾದ್ರಿದ್ದೂ ಬರ್ತ್ ಸರ್ಟಿಫಿಕೇಟ್ ಮಾಡಿಸೀಯೇನ್? ಅವಕ್ಕೂ ಓಟ್ ಏನರೆ ದಾಖಲೆ ಮಾಡಿಸು' ಎಂದು ಜೋರು ಮಾಡಿತು.

'ಮುಂಜಾನಿಂದ ಬರ್ತ್ ಸರ್ಟಿಫಿಕೇಟ್ ಭಜನೀ ಮಾಡಾಕೆ ಹತ್ತೀ... ಈಗೆದಕ್ಕೆ ಬೇಕು?' ನಾನು ತಲೆ ಕೆರೆದುಕೊಂಡೆ.

'ಗೊತ್ತೈತಿಲ್ಲೋ... ಎಸ್‌ಐಆರ್ ಗುಮ್ಮ ಇಲ್ಲೂ ವಕ್ಕರಿಸೈತಿ! ನಮ್ಮತ್ರ ಬರ್ತ್ ಸರ್ಟಿಫಿಕೇಟ್ ಇಲ್ಲ ಅಂತ್ಹೇಳಿ ದೇಶದಿಂದ ಹೊರಗೆ ದಬ್ಬಿದ್ರೆ...' ಬೆಕ್ಕಣ್ಣ ರಾಗವೆಳೆಯಿತು.

'ಮಂಗ್ಯಾನಂಥವ್ನೆ... ಎಸ್‌ಐಆರ್ ಮನುಷ್ಯಾರಿಗೆ ಮಾತ್ರ. ಪ್ರಾಣಿ, ಪಕ್ಷಿಗೆಲ್ಲ ಅಗತ್ಯ ಇಲ್ಲಲೇ' ಎಂದು ನಕ್ಕೆ.

'ಯಾರಿಗ್ಗೊತ್ತು... ಇಲ್ಲೇ ಹುಟ್ಟಿ ಬೆಳದೀರಂತ ಪ್ರೂವ್ ಮಾಡ್ರಿ ಅಂತ್ಹೇಳಿ ನಮಗೂ ಕೇಳಿದ್ರ ಏನ್ ಮಾಡೂದು?' ಎಂದಿತು.

'ಮಾಡೂದೇನು... ನೀವು ಬೆಕ್ಕುಗಳು ಮೋದಿಮಾಮಾರ ಮನಿವಳಗ ಹೆಗ್ಗಣ ಹಿಡಿತೀವಿ ಅಂತ್ಹೇಳಿ ದೆಹಲಿಗೆ ಹೋಗ್ರಿ' ಎಂದು ನಕ್ಕೆ.

'ನೀ ಎಲ್ಲಾದಕ್ಕೆ ಕಿಸಿಕಿಸಿ ನಗಬ್ಯಾಡ. ಮೋದಿಮಾಮಾರು ದೇಶದ ಹಿತಕ್ಕೇ ಇದ್ನೆಲ್ಲ ಹೇಳ್ಯಾರೆ! ಈಗ ಪೆನ್ನು, ಪೇಪರು ತಗ. ಮೋದಿಮಾಮಾರ ಥರ ಸರಳ ಜೀವನ ನಡಸೂದು ಹೆಂಗ ಅಂತ ಪಾಯಿಂಟ್ಸ್ ಹೇಳತೀನಿ, ಬರಕೋ!' ಎಂದು ಅಪ್ಪಣೆ ಮಾಡಿತು.

ಸಂಗತ

ಮಲೆನಾಡಿನ ಮಣ್ಣಿಗೆ 'ಹಿಂಡುವ ಕೃಷಿ' ಕುತ್ತು

'ಸಂಚಾರಿ ಗುತ್ತಿಗೆ ಕೃಷಿ' ಪದ್ಧತಿಯಲ್ಲಿ ಅಳತೆಮೀರಿ ಒಳಸುರಿಗಳ ಬಳಕೆ ಆಗುತ್ತಿದೆ. ಇದರ ಫಲವಾಗಿ ಮಣ್ಣಿನ ಜೀವಂತಿಕೆ ನಷ್ಟವಾಗುತ್ತಿದೆ, ಪರಿಸರ ಗಾಸಿಗೊಳ್ಳುತ್ತಿದೆ.

• ಪ್ರೊ. ಎ.ಎನ್. ಗಣೇಶಮೂರ್ತಿ

ನೈರುತ್ಯ ಮುಂಗಾರು ಕರ್ನಾಟಕದಲ್ಲಿ ಕೃಷಿ ಚಟುವಟಿಕೆಗಳಿಗೆ ಪುನಶ್ಚೇತನ ನೀಡುವ ಕಾಲ. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಮಲೆನಾಡು ಸೇರಿದಂತೆ ದಕ್ಷಿಣ ಭಾರತದ ಹಲವೆಡೆ ಇದೇ ಅವಧಿಯಲ್ಲಿ 'ಸಂಚಾರಿ ಗುತ್ತಿಗೆ ಕೃಷಿ' ಎಂಬ ಆತಂಕಕಾರಿ ವಿದ್ಯಮಾನ ಆರಂಭವಾಗುತ್ತಿದೆ. ಸಣ್ಣ ಹಿಡುವಳಿದಾರರಿಂದ ಭೂಮಿಯನ್ನು ಅಲ್ಪಾವಧಿಗೆ ಗುತ್ತಿಗೆ ಪಡೆಯುವ ಕೆಲವು ಕೃಷಿಕರು, ಅತಿ ಕಡಿಮೆ ಸಮಯದಲ್ಲಿ ಹೆಚ್ಚಿನ ಲಾಭ ಗಳಿಸಲು ಮಣ್ಣಿಗೆ ವಿಪರೀತ ರಾಸಾಯನಿಕಗಳನ್ನು ಸುರಿದು ಅಕ್ಷರಶಃ ಆಕ್ರಮಣ ನಡೆಸುತ್ತಿದ್ದಾರೆ. ಇದು ಯಾವುದೋ ಒಂದು ಊರಿನ ವಿದ್ಯಮಾನ ಅಥವಾ ಸಣ್ಣ ಸಮಸ್ಯೆ ಅಲ್ಲ. ಮಣ್ಣಿನ ಸತ್ತ್ವವನ್ನೇ ಹೀರುವ 'ಹಿಂಡುವ ಕೃಷಿ'ಯ (Extractive Agriculture) ಹೊಸ ಮಾದರಿ. ಕಟಾವಿನ ನಂತರ ಗುತ್ತಿಗೆದಾರರು ಬಿಟ್ಟು ಹೋಗುವ ಭೂಮಿಗೆ ಸತ್ತ್ವವೇ ಇರುವುದಿಲ್ಲ. ಮಾಲೀಕರ ಭವಿಷ್ಯವೇ ಅನಿಶ್ಚಿತವಾಗಿರುತ್ತದೆ.

ಅಲ್ಪಾವಧಿ ಗುತ್ತಿಗೆ ಕೃಷಿಯ ಈ ಮಾದರಿಯಲ್ಲಿ ಶುಂಠಿ, ಅರಿಸಿನ ಹಾಗೂ ತರಕಾರಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಉದಾಹರಣೆಗೆ, ಶುಂಠಿ ಬೆಳೆಗೆ ಹೆಕ್ಟೇರ್‌ಗೆ 10ರಿಂದ 12 ಲಕ್ಷ ರೂಪಾಯಿ ಹೂಡಿಕೆ ಬೇಕಾಗುತ್ತದೆ. ಈ ಬಂಡವಾಳದ ಮೇಲೆ ಖಚಿತ ಲಾಭ ಪಡೆಯಲು ಗುತ್ತಿಗೆದಾರರು ಮಿತಿ ಮೀರಿದ ಗೊಬ್ಬರ, ಕೀಟನಾಶಕ ಮತ್ತು ಶಿಲೀಂಧ್ರನಾಶಕಗಳನ್ನು ಬಳಸುತ್ತಾರೆ. ಮಣ್ಣಿನ ಆರೋಗ್ಯ ಕಾಪಾಡುವ ಕಾಳಜಿಯು ಅವರ ಆದ್ಯತೆ ಆಗಿರುವುದಿಲ್ಲ. ಬೆಳೆ ಕೊಯ್ಲು ಮುಗಿಸಿದ ಮೇಲೆ ಲಾಭದೊಂದಿಗೆ ಇವರು ನಿರ್ಗಮಿಸಿದಾಗ, ನಿಸ್ತೇಜ ಮಣ್ಣು ಹಿಂದೆ ಉಳಿಯುತ್ತದೆ. ಅತಿಯಾದ ರಾಸಾಯನಿಕ ಬಳಕೆಯಿಂದ ಮಣ್ಣಿನಲ್ಲಿರುವ ಸಾವಯವ ಅಂಶ ಕುಸಿಯುತ್ತದೆ, ಸೂಕ್ಷ್ಮಾಣುಗಳು ನಾಶ ಆಗುತ್ತವೆ ಮತ್ತು ಮಣ್ಣಿನ ಪಿಎಚ್ ಸಾರ ಅಸ್ತವ್ಯಸ್ತಗೊಳ್ಳುತ್ತದೆ. ಪಶ್ಚಿಮ ಘಟ್ಟಗಳಂತಹ ಅಧಿಕ ಮಳೆಯ ಪ್ರದೇಶಗಳಲ್ಲಿ ಈ ರಾಸಾಯನಿಕಗಳು ಜಲಮೂಲಗಳನ್ನು ಸೇರಿ ಪರಿಸರ ಮಾಲಿನ್ಯಕ್ಕೂ ಕಾರಣವಾಗುತ್ತಿವೆ.



ಗುತ್ತಿಗೆದಾರರು ಹೋದ ಮೇಲೆ ಆ ಭೂಮಿಯಲ್ಲಿ ಮತ್ತೆ ಕೃಷಿ ಮಾಡಲು ಸಾಧ್ಯವಾಗದಷ್ಟು ಪ್ರಮಾಣದಲ್ಲಿ ಮಣ್ಣು ಬಂಜರಾಗಿರುತ್ತದೆ. ರೈತರಿಗೆ ಸಿಗುವ ತಕ್ಷಣದ ನಗದು ಹಣದ ಆಸೆ ಭೂಮಿಯ ದೀರ್ಘಕಾಲದ ಅವನತಿಗೆ ದಾರಿ ಆಗುತ್ತಿದೆ. ಅಲ್ಲದೆ, ಇಂತಹ ಪದ್ಧತಿಯಲ್ಲಿ ಬೆಳೆದ ಆಹಾರ ಪದಾರ್ಥಗಳಲ್ಲಿ ಅಪಾಯಕಾರಿ ರಾಸಾಯನಿಕ ಅವಶೇಷಗಳು ಉಳಿಯುತ್ತಿರುವುದು ಬಳಕೆದಾರರ ಆರೋಗ್ಯದ ದೃಷ್ಟಿಯಿಂದಲೂ ಆತಂಕಕಾರಿ.

ಭೂಮಿಯ ಶೋಷಣೆಗೆ ಬರೀ ರೈತರನ್ನು ದೂಷಿಸಿ ಪ್ರಯೋಜನವಿಲ್ಲ. ಕೃಷಿ ವಿಸ್ತರಣಾ ಸೇವೆಗಳ ಕೊರತೆ ಮತ್ತು ಮಾರುಕಟ್ಟೆಯ ತಂತ್ರಗಳು ರೈತರನ್ನು ಇತ್ತ ತಳ್ಳುತ್ತಿವೆ.

ವಾಸ್ತವವಾಗಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮಣ್ಣಿನ ಪುನಶ್ಚೇತನಕ್ಕೆ ಪೂರಕವಾದ ಜೈವಿಕ ವಿಧಾನಗಳನ್ನು ಅಭಿವೃದ್ಧಿಪಡಿಸಿದೆ. ಆದರೆ, ಇವುಗಳ ಬಗ್ಗೆ ಅರಿವಿನ ಕೊರತೆ ಎದ್ದು ಕಾಣುತ್ತಿದೆ. ಈ ಗಂಭೀರ ಸಮಸ್ಯೆಯ ನಿಯಂತ್ರಣಕ್ಕೆ ಸರ್ಕಾರ ಮತ್ತು ನೀತಿ ನಿರೂಪಕರು ತುರ್ತಾಗಿ ಗಮನ ಹರಿಸಬೇಕಿದೆ.

ಭೂಮಿಯನ್ನು 'ಹಿಂಡುವ ಕೃಷಿ'ಗೆ ಸಂಬಂಧಿಸಿದಂತೆ ಕೆಲವು ಪರಿಹಾರದ ಹಾದಿಗಳೂ ಇವೆ. ಕೃಷಿ ಭೂಮಿಯ ಗುತ್ತಿಗೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಕಡ್ಡಾಯ ನೋಂದಣಿ ವ್ಯವಸ್ಥೆ ಜಾರಿಗೆ ಬರಬೇಕಾಗಿದೆ. ಗುತ್ತಿಗೆ ಅವಧಿ ಮುಗಿದ ನಂತರ ಮಣ್ಣಿನ ಸ್ಥಿತಿಯನ್ನು ಆಧರಿಸಿ ಹಿಂತಿರುಗಿಸುವ 'ಠೇವಣಿ ವ್ಯವಸ್ಥೆ' ಅಥವಾ ಕಡ್ಡಾಯ ಮಣ್ಣು ಪರೀಕ್ಷೆಯ ನಿಯಮ ರೂಪಿಸಬೇಕು. ಈ ನಿಟ್ಟಿನಲ್ಲಿ ನೀತಿ ನಿರೂಪಕರು (ಸಚಿವಾಲಯ, ಅಧಿಕಾರಿಗಳು ಮತ್ತು ಸಂಶೋಧನಾ ಸಂಸ್ಥೆಗಳು) ಸಕ್ರಿಯ ಪಾತ್ರ ನಿರ್ವಹಿಸಬೇಕು.

ಅವಶೇಷಗಳ ಮೇಲ್ವಿಚಾರಣೆ ಅತ್ಯಗತ್ಯ. ಗುತ್ತಿಗೆ ಭೂಮಿಯಲ್ಲಿ ಬೆಳೆದ ಬೆಳೆಗಳ ಗುಣಮಟ್ಟ ಮತ್ತು ರಾಸಾಯನಿಕ ಅಂಶಗಳ ತಪಾಸಣೆ ಕಟ್ಟುನಿಟ್ಟಾಗಿ ನಡೆಯಬೇಕು. ಬೆಳೆಗೆ ಬಳಕೆಯಾಗುವ ಒಳಸುರಿಗಳ ನಿಯಂತ್ರಣದ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು. ಸಣ್ಣ ರೈತರಿಗೆ ತಾತ್ಕಾಲಿಕ ಲಾಭಕ್ಕಿಂತ ಮಣ್ಣಿನ ಸುಸ್ಥಿರತೆ ಅತ್ಯಂತ ಮುಖ್ಯ ಎಂಬುದನ್ನು ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಮನವರಿಕೆ ಮಾಡಿಕೊಡುವ ಪ್ರಯತ್ನಗಳು ವ್ಯಾಪಕ ಆಗಬೇಕು.

ಗುತ್ತಿಗೆಗೆ ಭೂಮಿ ಪಡೆದವರು ಬೆಳೆಗಳಿಗೆ ಬಳಸುವ ಗೊಬ್ಬರ, ಕೀಟನಾಶಕಗಳ ವಿಚಾರದಲ್ಲಿ ಸರಿಯಾದ ಮೇಲ್ವಿಚಾರಣೆ ಬೇಕು. ಮಣ್ಣು ಎನ್ನುವುದು ಜಡ ವಸ್ತುವಲ್ಲ; ಅದೊಂದು ಜೀವಂತ ವ್ಯವಸ್ಥೆ. ಒಮ್ಮೆ ಅದರ ಫಲವತ್ತತೆ ನಾಶವಾದರೆ, ಮರಳಿ ಪಡೆಯುವುದು ದುಬಾರಿ ಮತ್ತು ಕಷ್ಟಸಾಧ್ಯ. ತಾತ್ಕಾಲಿಕ ಆರ್ಥಿಕ ಲಾಭಕ್ಕಾಗಿ ಮಣ್ಣನ್ನು ಬಲಿಕೊಡುವುದು ಆಹಾರ ಭದ್ರತೆಗೆ ಮಾಡುವ ದ್ರೋಹ.

ಮಳೆಗಾಲವು ಮಣ್ಣಿಗೆ ಹೊಸ ಜೀವ ನೀಡುವ ಅಮೃತ ಕಾಲ. ಈ ಸಮಯದಲ್ಲಿ ಭೂಮಿಗೆ ಜೀವಂತಿಕೆ ಊಡಿಸಬೇಕೇ ಹೊರತು ವಿಷ ಉಣಿಸುವಂತಾಗಬಾರದು. ತಾತ್ಕಾಲಿಕ ಲಾಭಗಳು ಶಾಶ್ವತ ನಷ್ಟಗಳಿಗೆ ಮುನ್ನುಡಿ ಆಗಬಾರದು. ಅಂಥ ಭೀಕರ ಪರಿಸ್ಥಿತಿ ತಲೆದೋರುವ ಮೊದಲು ನಮ್ಮ ಕೃಷಿ ವ್ಯವಸ್ಥೆಯು ಎಚ್ಚತ್ತುಕೊಳ್ಳಬೇಕು. ಇಲ್ಲದಿದ್ದರೆ ಸುಸ್ಥಿರ ಕೃಷಿ ಎಂಬುದು ಬರೀ ಕನಸಾಗಿಯೇ ಉಳಿಯಬಹುದು.

ಅಲ್ಪಾವಧಿ ಗುತ್ತಿಗೆ ಕೃಷಿ ಕರ್ನಾಟಕ ಮಾತ್ರವಲ್ಲದೆ ದೇಶದ ಉಳಿದ ಭಾಗಗಳಲ್ಲೂ ಇರಬಹುದು. ಇಂಥ ಲಾಭಕೋರ ಮನಃಸ್ಥಿತಿಯ ಕೃಷಿಯನ್ನು ನಿಯಂತ್ರಿಸಲು ಸಮರ್ಪಕ ನಿಯಮಗಳು ರೂಪುಗೊಳ್ಳಬೇಕು.

ಲೇಖಕ: ಫೆಲೊ, ರಾಷ್ಟ್ರೀಯ ಕೃಷಿ ವಿಜ್ಞಾನ ಮತ್ತು ಭಾರತೀಯ ಮಣ್ಣು ವಿಜ್ಞಾನ ಮಂಡಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ-ಯುಎಇ ಒಪ್ಪಂದ ಇಂಧನ ಭದ್ರತೆ ಖಾತರಿಯೇ?

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಜತೆಗೆ ಬಹಳ ಹಿಂದಿನಿಂದಲೂ ಹೊಂದಿರುವ ನಂಟನ್ನು ಮತ್ತಷ್ಟು ವಿಸ್ತರಿಸಲು ಭಾರತ ಪ್ರಯತ್ನಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಇತ್ತೀಚಿನ ಯುಎಇ ಭೇಟಿ ಸಂದರ್ಭದಲ್ಲಿ ಎರಡೂ ರಾಷ್ಟ್ರಗಳು ತೈಲ, ರಕ್ಷಣೆ, ಸರಕು ಸಾಗಣೆಗೆ ಸಂಬಂಧಿಸಿದ ಪ್ರಮುಖ ಒಪ್ಪಂದಗಳನ್ನು ಮಾಡಿಕೊಂಡಿವೆ. ಎಲ್‌ಪಿಜಿ, ಎಲ್‌ಎನ್‌ಜಿ, ಕಚ್ಚಾ ತೈಲ ಸಂಗ್ರಹ ಸಾಮರ್ಥ್ಯ ವೃದ್ಧಿ ಸಂಬಂಧ ನಿರ್ಣಯ ಕೈಗೊಳ್ಳಲಾಗಿದೆ. ಇವು ಭವಿಷ್ಯದಲ್ಲಿ ಭಾರತದ ಪೆಟ್ರೋಲ್, ಎಲ್‌ಪಿಜಿ, ಎಲ್‌ಎನ್‌ಜಿ ಪೂರೈಕೆ ವ್ಯವಸ್ಥೆಯನ್ನು ಬಲಪಡಿಸಿ, ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶಕ್ಕೆ ನೆರವಾಗಲಿವೆ ಎನ್ನಲಾಗುತ್ತಿದೆ. ಪಶ್ಚಿಮ ಏಷ್ಯಾ ಯುದ್ಧದ ಕಾರಣದಿಂದ ಉಂಟಾಗಿರುವ ಇಂಧನ ಬಿಕ್ಕಟ್ಟಿನ ನಡುವೆಯೇ ಈ ಒಪ್ಪಂದ ನಡೆದಿರುವುದು ಮಹತ್ವ ಪಡೆದಿದೆ. ಒಪ್ಪಂದಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ

ಆಧಾರ: ಪಿಟಿಐ, ರಾಯಿಟರ್ಸ್, ಪಿಐಬಿ, ಹಣಕಾಸು ಸಚಿವಾಲಯದ ದತ್ತಾಂಶಗಳು, ಮಾಧ್ಯಮ ವರದಿಗಳು

ಪ್ರಜಾವಾಣಿ ವಾರ್ತೆ

ಭಾರತ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನಡುವೆ ಉತ್ತಮ ದ್ವಿಪಕ್ಷೀಯ ಸಂಬಂಧ ಇದ್ದು, ಇದಕ್ಕೆ ಶತಮಾನಗಳ ನಂಟಿನ ಇತಿಹಾಸ ಇದೆ. ಎರಡೂ ರಾಷ್ಟ್ರಗಳ ನಡುವೆ ಆಮದು ರಫ್ತು ಇದ್ದು, ಪ್ರಮುಖವಾಗಿ ಇಂಧನ, ಮುತ್ತು, ಖರ್ಜೂರ, ಜವಳಿ ಮತ್ತು ಮೀನು ವ್ಯಾಪಾರವು ನಡೆಯುತ್ತಿದೆ. ಭಾರತೀಯರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಅರಸಿ ಹೋಗುವ ದೇಶಗಳಲ್ಲಿ ಯುಎಇ ಕೂಡ ಒಂದಾಗಿದೆ. 1972ರಲ್ಲಿ ಅಬುಧಾಬಿ ಮತ್ತು ದೆಹಲಿಯಲ್ಲಿ ರಾಜತಾಂತ್ರಿಕ ಕಚೇರಿಗಳು ಆರಂಭಗೊಂಡ ನಂತರದಲ್ಲಿ ದ್ವಿಪಕ್ಷೀಯ ಸಂಬಂಧ ಬಲವರ್ಧನೆ ಆಯಿತು.

2015ರಲ್ಲಿ ಪ್ರಧಾನಿ ಮೋದಿ ಅವರ ಭೇಟಿಯೊಂದಿಗೆ ಭಾರತ–ಯುಎಇ ಸಂಬಂಧಕ್ಕೆ ಹೊಸ ಆಯಾಮ ಸಿಕ್ಕಿತ್ತು. ಭಾರತದ ಪ್ರಧಾನಿಯೊಬ್ಬರು 34 ವರ್ಷಗಳ ನಂತರ ಅಬುಧಾಬಿಗೆ ನೀಡಿದ ಭೇಟಿ ಅದಾಗಿತ್ತು. ಮೋದಿ ಅವರು ಪ್ರಧಾನಿ ಆದ ನಂತರ ಯುಎಇಗೆ ಏಳು ಬಾರಿ ಭೇಟಿ ನೀಡಿದರೆ, ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಭಾರತಕ್ಕೆ ಐದು ಬಾರಿ ಭೇಟಿ ನೀಡಿದ್ದಾರೆ. ಯುಎಇ ಈಗ ಭಾರತದ ಅತ್ಯಂತ ಮುಖ್ಯ ತೈಲ ಪೂರೈಕೆ ರಾಷ್ಟ್ರವಾಗಿದ್ದು, ಮೂಲಸೌಕರ್ಯ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ದೊಡ್ಡ ಹೂಡಿಕೆದಾರನಾಗಿದೆ.

ಪ್ರಸ್ತುತ, ಐದು ರಾಷ್ಟ್ರಗಳ ಪ್ರವಾಸ ಯೋಜನೆಯ ಭಾಗವಾಗಿ ಮೋದಿ ಅವರು ಮೊದಲಿಗೆ (ಮೇ 15ರಂದು) ಯುಎಇಗೆ ಭೇಟಿ ನೀಡಿದ್ದರು. ಈ ವೇಳೆ ಅವರು ಇಂಧನ, ರಕ್ಷಣೆ, ಆರ್ಥಿಕತೆ, ತಾಂತ್ರಿಕತೆ, ಸಾಮಾಜಿಕ ವಲಯಗಳಿಗೆ ಸಂಬಂಧಿಸಿದ ಹಲವು ಮಹತ್ವದ ವಿಷಯಗಳ ಬಗ್ಗೆ ಮಾತುಕತೆ ನಡೆಸಿದರು. ಎರಡೂ ರಾಷ್ಟ್ರಗಳ ನಡುವೆ ಹಲವು ಒಪ್ಪಂದಗಳು ಏರ್ಪಟ್ಟಿದ್ದು, ಎಂಒಯುಗೆ ಸಹಿ ಹಾಕಲಾಗಿದೆ.

ಅಮೆರಿಕ–ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಯುದ್ಧ ಸಾರಿದ ನಂತರ ಉಂಟಾಗಿರುವ ಜಾಗತಿಕ ಇಂಧನ ಬಿಕ್ಕಟ್ಟು ಹಾಗೂ ಒಪೆಕ್ ಮತ್ತು ಒಪೆಕ್ + ರಾಷ್ಟ್ರಗಳ ಸಮೂಹದಿಂದ ಯುಎಇ ಹೊರ ಬಂದ ಬಳಿಕ ಭಾರತ ಮತ್ತು ಯುಎಇ ನಡುವೆ ಈ ಒಪ್ಪಂದಗಳು ಏರ್ಪಟ್ಟಿರುವುದು ತುಂಬಾ ಮಹತ್ವ ಪಡೆದಿದೆ. ಕಚ್ಚಾ ತೈಲ, ಎಲ್‌ಪಿಜಿ, ಎಲ್‌ಎನ್‌ಜಿ ಉತ್ಪಾದಿಸುವ ಪ್ರಮುಖ ರಾಷ್ಟ್ರಗಳಲ್ಲಿ ಯುಎಇ ಕೂಡ ಒಂದಾಗಿದ್ದು, ಭಾರತಕ್ಕೆ ತನ್ನ ಇಂಧನ ಭದ್ರತೆಯನ್ನು ಖಾತರಿಪಡಿಸಿಕೊಳ್ಳಲು ಈ ಒಪ್ಪಂದಗಳು ನೆರವಾಗಲಿವೆ ಎನ್ನಲಾಗುತ್ತಿದೆ.

1. ತೈಲ ಸಂಗ್ರಹದಲ್ಲಿ ಸಹಭಾಗಿತ್ವ

ಅಮೆರಿಕ, ಚೀನಾ ಮುಂತಾದ ದೇಶಗಳಿಗೆ ಹೋಲಿಸಿದರೆ, ಭಾರತದ ಕಚ್ಚಾ ತೈಲ ಸಂಗ್ರಹ ಸಾಮರ್ಥ್ಯ ಕಡಿಮೆ. ಸದ್ಯ 4 ಕೋಟಿ ಬ್ಯಾರಲ್‌ಗಳಷ್ಟು ಕಚ್ಚಾ ತೈಲ ಸಂಗ್ರಹಿಸುವ ಸಾಮರ್ಥ್ಯವನ್ನಷ್ಟೇ ಭಾರತ ಹೊಂದಿದೆ. ದೇಶದ ಇಂಧನ ಭದ್ರತೆಯ ದೃಷ್ಟಿಯಿಂದ ಕಚ್ಚಾ ತೈಲ ಸಂಗ್ರಹ ವ್ಯವಸ್ಥೆಯನ್ನು ಉತ್ತಮಪಡಿಸಲು ಇಂಡಿಯನ್ ಸ್ಟ್ರಾಟಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್ (ಐಎಸ್‌ಪಿಆರ್‌ಎಲ್) ಮತ್ತು ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ (ಎಡಿಎನ್‌ಒಸಿ) ನಡುವೆ ಸಹಕಾರಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಒಪ್ಪಂದದ ಪ್ರಕಾರ, ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿರುವ ತೈಲ ಸಂಗ್ರಹಾಗಾರ ಮತ್ತು ಒಡಿಶಾದ ಚಂಡಿಖೋಲ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಸಂಗ್ರಹಾಗಾರಗಳಲ್ಲಿ ಯುಎಇಯ ಎಡಿಎನ್‌ಒಸಿ ಸುಮಾರು 3 ಕೋಟಿ ಬ್ಯಾರಲ್ ತೈಲ ಸಂಗ್ರಹಿಸಲು ಒಪ್ಪಂದಕ್ಕೆ ಬರಲಾಗಿದೆ. ಜತೆಗೆ, ಯುಎಇಯ ಫುಜೈರಾದಲ್ಲಿ ಭಾರತಕ್ಕಾಗಿ ಕಚ್ಚಾ ತೈಲವನ್ನು ಸಂಗ್ರಹಿಸುವ ಬಗ್ಗೆಯೂ ಮಾತುಕತೆ ನಡೆದಿದೆ. ಜತೆಗೆ, ಮತ್ತು ಭಾರತದಲ್ಲಿ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಮತ್ತು ಎಲ್‌ಪಿಜಿ ಸಂಗ್ರಹ ವ್ಯವಸ್ಥೆಯಲ್ಲಿ ಸಹಕಾರ ನೀಡುವ ಬಗ್ಗೆಯೂ ಒಪ್ಪಂದವಾಗಿದೆ.


ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಪಿಟಿಐ ಚಿತ್ರ

2. ಎಲ್‌ಪಿಜಿ ಪೂರೈಕೆಗೆ ಒಪ್ಪಂದ

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ಮತ್ತು ಯುಎಇಯ ಸರ್ಕಾರಿ ಸ್ವಾಮ್ಯದ ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ (ಎಡಿಎನ್‌ಇಸಿ) ನಡುವೆ ನಿರಂತರವಾಗಿ ಎಲ್‌ಪಿಜಿ ಪೂರೈಕೆಗೆ ಸಂಬಂಧಿಸಿದಂತೆ ಈ ಒಪ್ಪಂದ ನಡೆದಿದೆ. ಭಾರತವು ಅತಿ ಹೆಚ್ಚು ಪ್ರಮಾಣದ ಎಲ್‌ಪಿಜಿಯನ್ನು ಯುಎಇಯಿಂದ ಆಮದು ಮಾಡಿಕೊಳ್ಳುತ್ತಿದೆ. ಭಾರತದ ಬೇಡಿಕೆಯ ಶೇ 40ರಷ್ಟನ್ನು ಅದು ಪೂರೈಸುತ್ತಿದೆ. ಈ ಒಪ್ಪಂದವು ಎಲ್‌ಪಿಜಿ ವ್ಯಾಪಾರವನ್ನು ಇನ್ನಷ್ಟು ವಿಸ್ತರಿಸಲಿದ್ದು, ಭವಿಷ್ಯದಲ್ಲಿ ದೇಶದ ಬೇಡಿಕೆಗೆ ತಕ್ಕಂತೆ ದೀರ್ಘಾವಧಿಗೆ ಎಲ್‌ಪಿಜಿ ಪೂರೈಕೆಯಾಗಲಿದ್ದು, ಎಲ್‌ಪಿಜಿ ಭದ್ರತೆಯನ್ನು ಇದು ಖಚಿತಪಡಿಸಲಿದೆ ಎಂದು ಸರ್ಕಾರ ಹೇಳಿದೆ.

3. ರಕ್ಷಣಾ ಪಾಲುದಾರಿಕೆಯ ಚೌಕಟ್ಟು

ರಕ್ಷಣಾ ಕೈಗಾರಿಕಾ ಕ್ಷೇತ್ರಗಳಲ್ಲಿ ಎರಡೂ ರಾಷ್ಟ್ರಗಳ ನಡುವಿನ ಸಹಕಾರವನ್ನು ಇನ್ನಷ್ಟು ಬಲಪಡಿಸಲು ಈ ಚೌಕಟ್ಟು ನೆರವಾಗಲಿದೆ. ರಕ್ಷಣಾ ಕ್ಷೇತ್ರದಲ್ಲಿ ಜಂಟಿ ಅಭಿವೃದ್ಧಿ, ಜಂಟಿ ಪಾಲುದಾರಿಕೆಗೆ ಇದು ಉತ್ತೇಜನ ನೀಡಲಿದ್ದು, ಕಾರ್ಯತಂತ್ರದ ದೃಷ್ಟಿಯಿಂದ ಮಹತ್ವವಾದ ವಲಯಗಳಲ್ಲಿ ತಂತ್ರಜ್ಞಾನ ಮತ್ತು ಹೊಸ ಆವಿಷ್ಕಾರಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪರಸ್ಪರ ಹಂಚಿಕೊಳ್ಳಲು ಇದು ನೆರವಾಗಲಿದೆ. ರಾಷ್ಟ್ರೀಯ ಮತ್ತು ಪ್ರಾದೇಶಿಕ ಭದ್ರತೆಗೂ ಇದರಿಂದ ಅನುಕೂಲವಾಗಲಿದೆ.

4. ಹಡಗು ದುರಸ್ತಿ ಕ್ಲಸ್ಟರ್ ಸ್ಥಾಪನೆ

ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ (ಸಿಎಸ್‌ಎಲ್) ಮತ್ತು ಯುಎಇಯ ಡ್ರೈಡಾಕ್ಸ್ ವರ್ಲ್ಡ್ (ಡಿಡಿಎಬ್ಲ್ಯು) ನಡುವೆ ಈ ಒಪ್ಪಂದ ಏರ್ಪಟ್ಟಿದ್ದು, ಇದರ ಅಡಿಯಲ್ಲಿ ಗುಜರಾತ್‌ನ ವಾಡೀನಾರ್‌ನಲ್ಲಿ ಅತ್ಯಾಧುನಿಕ ಹಡಗು ದುರಸ್ತಿ ಕೇಂದ್ರ ನಿರ್ಮಾಣವಾಗಲಿದೆ. ಇದು ಹಡಗುಗಳ ಮೂಲಕ ಸರಕು ಸಾಗಣೆ, ಬಂದರು ಮತ್ತು ಕರಾವಳಿ ಮೂಲಸೌಕರ್ಯ ಅಭಿವೃದ್ಧಿಗೆ ನೆರವಾಗಲಿದೆ ಎಂದು ನಿರೀಕ್ಷಿಸಲಾಗಿದೆ

5. ಹಡಗು ದುರಸ್ತಿ ಕೌಶಲ ಅಭಿವೃದ್ಧಿ

ಹಡಗುಗಳ ದುರಸ್ತಿಯ ಕೌಶಲವನ್ನು ಅಭಿವೃದ್ಧಿಪಡಿಸುವ ಉದ್ದೇಶದೊಂದಿಗೆ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಡೆಟ್, ಡ್ರೈಡಾಕ್ಸ್ ವರ್ಲ್ಡ್ ಮತ್ತು ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಮಾರಿಟೈಮ್ ಆ್ಯಂಡ್ ಶಿಪ್‌ಬಿಲ್ಡಿಂಗ್ ನಡುವೆ ಒಪ್ಪಂದ ನಡೆದಿದೆ. ಇದರ ಅಡಿಯಲ್ಲಿ, ಹಡಗುಗಳ ನಿರ್ಮಾಣ, ದುರಸ್ತಿ ಮಾಡುವ ಬಗ್ಗೆ ತಾಂತ್ರಿಕ ತರಬೇತಿ, ಕೌಶಲದ ತರಬೇತಿ ಸಿಗಲಿದೆ.


6. ಎಕ್ಸಾಫ್ಲಾಪ್ ಸೂಪರ್ ಕಂಪ್ಯೂಟಿಂಗ್ ಕ್ಲಸ್ಟರ್ ಸ್ಥಾಪನೆ

ಭಾರತದಲ್ಲಿ ಎಂಟು ಎಕ್ಸಾಫ್ಲಾಪ್ ಸೂಪರ್ ಕಂಪ್ಯೂಟಿಂಗ್ ಕ್ಲಸ್ಟರ್ ಸ್ಥಾಪನೆ ಮಾಡುವ ಸಂಬಂಧ ಭಾರತದ ಸೆಂಟರ್ ಫಾರ್ ಡೆವೆಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿಡಿಎಸಿ) ಮತ್ತು ಅಬುಧಾಬಿಯ ತಂತ್ರಜ್ಞಾನ ಕಂಪನಿ ಜಿ42 ನಡುವೆ ಒಪ್ಪಂದ ನಡೆದಿದ್ದು, ಇದು ಭಾರತದ್ದೇ ಆದ ಎಐ ಮತ್ತು ಹೆಚ್ಚು ಕಾರ್ಯಕ್ಷಮತೆ ಹೊಂದಿರುವ ಕಂಪ್ಯೂಟಿಂಗ್ ವ್ಯವಸ್ಥೆ ಹೊಂದುವ ಯತ್ನಕ್ಕೆ ಶಕ್ತಿ ನೀಡಲಿದೆ. ದೇಶದ ಸೂಪರ್ ಕಂಪ್ಯೂಟಿಂಗ್ ಮೂಲಸೌಕರ್ಯಕ್ಕೆ ನೆರವಾಗಲಿದೆ ಎಂದು ಹೇಳಲಾಗಿದೆ.

7. ಐನೂರು ಕೋಟಿ ಡಾಲರ್ ಬಂಡವಾಳ ಹೂಡಿಕೆ


ಭಾರತದ ಮೂಲಸೌಕರ್ಯ ಮತ್ತು ಹಣಕಾಸು ಸಂಸ್ಥೆಗಳಲ್ಲಿ 500 ಕೋಟಿ ಡಾಲರ್‌ನಷ್ಟು (ಸುಮಾರು ₹48 ಸಾವಿರ ಕೋಟಿ) ಹೂಡಿಕೆ ಸಂಬಂಧ ಮಾತುಕತೆ ನಡೆದಿದೆ. ಎಮಿರೇಟ್ಸ್ ಎನ್‌ಬಿಡಿ ಬ್ಯಾಂಕ್ ಭಾರತದ ಆರ್‌ಬಿಎಲ್ ಬ್ಯಾಂಕ್‌ನಲ್ಲಿ, ಅಬುಧಾಬಿ ಇನ್‌ವೆಸ್ಟ್‌ಮೆಂಟ್ ಅಥಾರಿಟಿ ಭಾರತದ ನ್ಯಾಷನಲ್ ಇನ್‌ಫ್ರಾಸ್ಟ್ರಕ್ಚರ್ ಇನ್‌ವೆಸ್ಟ್‌ಮೆಂಟ್ ಫಂಡ್‌ನಲ್ಲಿ ಮತ್ತು ಇಂಟರ್‌ನ್ಯಾಷನಲ್ ಹೋಲ್ಡಿಂಗ್ ಕಂಪನಿಯು ಸಮ್ಮಾನ್ ಕ್ಯಾಪಿಟಲ್ ಆಫ್ ಇಂಡಿಯಾದಲ್ಲಿ ಹೂಡಿಕೆ ಮಾಡುವ ನಿರ್ಣಯ ಕೈಗೊಳ್ಳಲಾಗಿದೆ.

ಭಾರತ ಮತ್ತು ಯುಎಇ ಸರಕು ವ್ಯಾಪಾರ (ಲಕ್ಷ ಕೋಟಿಗಳಲ್ಲಿ)



ಭಾರತ ಮತ್ತು ಯುಎಇ ಸಂಬಂಧ

- ಯುಎಇ ಭಾರತದ ಮೂರನೇ ಅತಿ ಡೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರ. ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಏಳನೇ ಅತಿದೊಡ್ಡ ಪಾಲುದಾರ
- ಕಚ್ಚಾ ತೈಲ, ಎಲ್‌ಪಿಜಿ, ಎಲ್‌ಎನ್‌ಜಿ ಸೇರಿದಂತೆ ತನ್ನ ಇಂಧನ ಭದ್ರತೆಗಾಗಿ ಭಾರತವು ಯುಎಇಯನ್ನು ಅವಲಂಬಿಸಿದೆ. ರಫ್ತು ಮಾಡುವುದಕ್ಕಿಂತಲೂ ಹೆಚ್ಚು, ಅಲ್ಲಿಂದ ಆಮದು ಮಾಡಿಕೊಳ್ಳುತ್ತಿರುವುದರಿಂದ, ಅದರೊಂದಿಗೆ ಭಾರತದ ವ್ಯಾಪಾರ ಕೊರತೆ ಹೆಚ್ಚಿದೆ
- ವರ್ಷದಿಂದ ವರ್ಷಕ್ಕೆ ದ್ವಿಪಕ್ಷೀಯ ವ್ಯಾಪಾರದಲ್ಲಿ ಗಣನೀಯ ಏರಿಕೆ ಕಂಡುಬರುತ್ತಿದ್ದು, 2025–26ರಲ್ಲಿ ದ್ವಿಪಕ್ಷೀಯ ವ್ಯಾಪಾರದ ಮೌಲ್ಯ 10,125 ಕೋಟಿ ಡಾಲರ್ (₹9.72 ಲಕ್ಷ ಕೋಟಿ) ದಾಟಿದ್ದು, 2032ರ ವೇಳೆಗೆ 20 ಸಾವಿರ ಕೋಟಿ ಡಾಲರ್ (₹19.44 ಲಕ್ಷ ಕೋಟಿ) ತಲುಪಿಸುವ ಗುರಿ ಹೊಂದಲಾಗಿದೆ
- 2000 ಏಪ್ರಿಲ್‌ನಿಂದ 2025ರ ನಡುವೆ ಯುಎಇ ಭಾರತದಲ್ಲಿ ಹೂಡಿಕೆ ಮಾಡಿರುವ ಮೊತ್ತ 2,519 ಕೋಟಿ ಡಾಲರ್ (₹2.41 ಲಕ್ಷ ಕೋಟಿ)
- ಕಚ್ಚಾ ತೈಲ ಪೂರೈಸುವ (ಪ್ರತಿ ದಿನ 2.5 ಲಕ್ಷದಿಂದ 3 ಲಕ್ಷ ಬ್ಯಾರಲ್) ನಾಲ್ಕನೇ, ಎಲ್‌ಎನ್‌ಜಿ ಪೂರೈಸುವ (ವಾರ್ಷಿಕವಾಗಿ 31 ಲಕ್ಷದಿಂದ 35 ಲಕ್ಷ ಟನ್) ಮೂರನೇ ರಾಷ್ಟ್ರವಾಗಿದ್ದರೆ, ಭಾರತಕ್ಕೆ ಗರಿಷ್ಠ ಪ್ರಮಾಣದ ಎಲ್‌ಪಿಜಿ (ಶೇ 40ರಷ್ಟು) ಯುಎಇಯಿಂದಲೇ ಬರುತ್ತದೆ
- ಭಾರತದ 45 ಲಕ್ಷ ಜನರು ಯುಎಇಯಲ್ಲಿ ನೆಲಸಿದ್ದಾರೆ



ತಪ್ಪಲಿದೆಯೆ ಹೊರ್ಮುಜ್ ಅವಲಂಬನೆ?

ಇತರ ಅರಬ್ ರಾಷ್ಟ್ರಗಳಂತೆ ಯುಎಇ ಕೂಡ ಪೆಟ್ರೋಲಿಯಂ, ಎಲ್‌ಪಿಜಿ ಸೇರಿದಂತೆ ಇನ್ನಿತರ ಉತ್ಪನ್ನಗಳನ್ನು ರಫ್ತು ಮಾಡಲು ಹೊರ್ಮುಜ್ ಜಲಸಂಧಿಯನ್ನೇ ಅವಲಂಬಿಸಿದೆ. ಏಷ್ಯಾದ ಪೂರ್ವ ದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡಲು ಅದಕ್ಕೆ ಈ ಜಲಸಂಧಿಯನ್ನು ಅವಲಂಬಿಸಿದೇ ಇರಲು ಸಾಧ್ಯವಿದೆ. ಯಾಕೆಂದರೆ ಯುಎಇಯ ಪೂರ್ವ ಭಾಗದಲ್ಲಿನ ಸ್ವಲ್ಪ ಭೂಪ್ರದೇಶ ಹೊರ್ಮುಜ್ ಜಲಸಂಧಿಗೆ ಹೊಂದಿಕೊಂಡಿಲ್ಲ. ಅಲ್ಲಿನ ಬಂದರು ನಗರಿ ಫುಜೈರಾವು ಈ ಜಲಸಂಧಿಯಿಂದ ದೂರ ಇದೆ. ಈ ಬಂದರಿನ ಮೂಲಕ ಯುಎಇಯು ಭಾರತ ಸೇರಿದಂತೆ ಏಷ್ಯಾದ ಪೂರ್ವಕ್ಕಿರುವ ರಾಷ್ಟ್ರಗಳಿಗೆ ನೇರವಾಗಿ ರಫ್ತು ಮಾಡಬಹುದು.

ಯುಎಇಯು ಈಗಾಗಲೇ ತನ್ನ ಪಶ್ಚಿಮ ಭಾಗದಿಂದ ಪೂರ್ವ ಭಾಗದಲ್ಲಿರುವ ಫುಜೈರಾ ಬಂದರಿಗೆ ತೈಲ ಪೂರೈಸುವ ಪೈಪ್‌ಲೈನ್ ಹೊಂದಿದೆ. ಪ್ರತಿ ದಿನ 18 ಲಕ್ಷ ಬ್ಯಾರಲ್‌ನಷ್ಟು ತೈಲ ಸಾಗಿಸುವ ಸಾಮರ್ಥ್ಯವನ್ನು ಇದು ಹೊಂದಿದೆ. ಹೊರ್ಮುಜ್ ಜಲಸಂಧಿಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಪೈಪ್‌ಲೈನ್ ಸಾಮರ್ಥ್ಯವನ್ನು ದುಪ್ಪಟ್ಟುಗೊಳಿಸಲು ಯುಎಇ ಆಡಳಿತ ನಿರ್ಧರಿಸಿದ್ದು, ಕಾಮಗಾರಿಯನ್ನು ಆರಂಭಿಸಿದೆ 2027ರ ವೇಳೆಗೆ ಹೊಸ ಪೈಪ್‌ಲೈನ್ ಬಳಕೆಗೆ ಮುಕ್ತವಾಗಲಿದೆ. ಈ ಯೋಜನೆ ಅನುಷ್ಠಾನವಾದರೆ, ಭಾರತಕ್ಕೂ ಅನುಕೂಲವಾಗಲಿದೆ. ಹೊರ್ಮುಜ್‌ನಲ್ಲಿ ಮತ್ತೆ ಬಿಕ್ಕಟ್ಟು ಸೃಷ್ಟಿಯಾದರೂ, ಫುಜೈರಾ ಬಂದರಿನ ಮೂಲಕ ಭಾರತಕ್ಕೆ ಕಚ್ಚಾ ತೈಲ ಪೂರೈಸಬಹುದು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತಮಿಳುನಾಡು ಮುಖ್ಯಮಂತ್ರಿಯಾಗಿ ನಟ, ಟಿವಿಕೆ ನಾಯಕ ಜೋಸೆಫ್ ವಿಜಯ್ ಅವರು ಪ್ರಮಾಣ ವಚನ ಸ್ವೀಕಾರ ಮಾಡಿದ ಸಮಾರಂಭದಲ್ಲಿ ಅವರು ಕಾಂಗ್ರೆಸ್ ಮುಖಂಡ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಕಾಲು ಮುಟ್ಟಿ ನಮಸ್ಕಾರ ಮಾಡಿದ್ದಾರೆ ಎನ್ನಲಾದ ಚಿತ್ರವನ್ನು ದಿನೇಶ್ ಗೋಯಲ್ ಎಂಬ ಫೇಸ್‌ಬುಕ್ ಬಳಕೆದಾರ ಪೋಸ್ಟ್ ಮಾಡಿದ್ದು, ಇದನ್ನು ಹಲವರು ಹಂಚಿಕೊಂಡಿದ್ದಾರೆ. ‘ಪ್ರಮಾಣ ವಚನ ಸ್ವೀಕಾರದ ನಂತರ ವಿಜಯ್ ಅವರು ರಾಹುಲ್ ಗಾಂಧಿ ಅವರ ಕಾಲು ಮುಟ್ಟಿ ಆಶೀರ್ವಾದ ಪಡೆದರು’ ಎಂದು ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗಿದೆ. ಆದರೆ ಇದು ಸುಳ್ಳು.



ಪೋಸ್ಟ್‌ನಲ್ಲಿ ಹೇಳಲಾದ ಸಂಗತಿ ನಿಜವೇ ಎಂಬುದನ್ನು ಪರಿಶೀಲಿಸುವುದಕ್ಕಾಗಿ ಗೂಗಲ್‌ನಲ್ಲಿ ನಿರ್ದಿಷ್ಟ ಪದಗಳನ್ನು ಹಾಕಿ ಹುಡುಕಲಾಯಿತು. ಆದರೆ, ಯಾವುದೇ ವಿಶ್ವಾಸಾರ್ಹ ಸುದ್ದಿ ಸಿಗಲಿಲ್ಲ. ಒಂದುವೇಳೆ ಇದು ನಿಜವೇ ಆಗಿದ್ದರೆ, ಖಂಡಿತವಾಗಿಯೂ ವರದಿಯಾಗುತ್ತಿತ್ತು. ಇನ್ನಷ್ಟು ಹುಡುಕಾಡಿದಾಗ, ರಾಹುಲ್ ಗಾಂಧಿ ಅವರ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದ್ದ, ಪ್ರಮಾಣ ವಚನ ಸ್ವೀಕಾರ ಸಮಾರಂಭದ ನೇರಪ್ರಸಾರದ ವಿಡಿಯೊ ಮತ್ತು ಸಮಾರಂಭದ ಹಲವು ಚಿತ್ರಗಳು ಸಿಕ್ಕಿದವು. ಅದರಲ್ಲಿ ಒಂದು ಫೋಟೊದ ಹಿನ್ನೆಲೆಯು ಈಗ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವ ಚಿತ್ರದಲ್ಲಿರುವ ಹಿನ್ನೆಲೆಯನ್ನೇ ಹೋಲುತ್ತಿತ್ತು. ಹೀಗಾಗಿ, ಇದು ತಿರುಚಿದ ಚಿತ್ರ ಆಗಿರಬಹುದು ಎಂಬ ಅನುಮಾನ ಬಂತು. ಚಿತ್ರವನ್ನು ಹೈವ್ ಮಾಡರೇಷನ್ ಮತ್ತು ಸೈಟ್‌ಎಂಜಿನ್ ಎಂಬ ಎಐ ಪತ್ತೆ ಟೂಲ್‌ಗಳ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ, ಅದು ಎಐ ಸೃಷ್ಟಿ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ನಮ್ಮ ಬಾಳು ನಮ್ಮದೇ ಹೊಣೆ

ದಾದಾಪೀರ್ ನವಿಲೇಹಾಳ್



‘ರೀ, ನಾನು ನನ್ನ ಫ್ರೆಂಡ್ ಜೊತೆ ಹೊರಗೆ ಹೋಗಿ ಬರ್ತೀನಿ’ ಎಂದು ಹೆಂಡತಿ ಹೇಳಿದಳು. ಗಂಡ ‘ಆಯ್ತು ಹೋಗಿ ಬಾ, ಹುಷಾರು’ ಎಂದ. ಯಾಕೆ, ಯಾವ ಫ್ರೆಂಡು, ಹೋಗಲೇಬೇಕಾ.. ಹೀಗೆ ಏನೇನಾದರೂ ಕೇಳಿ ಸಿಡುಕುತ್ತಿದ್ದ ಗಂಡ ಇವತ್ತು ಏನು ಹೀಗೆ ಅಂತ ಅವಳಿಗನಿಸಿತು. ಸ್ವಲ್ಪ ಹೊತ್ತಿನಲ್ಲಿ ಹದಿಹರೆಯದ ಮಗ ಮುಖ ಸಪ್ಪಗೆ ಮಾಡಿಕೊಂಡು ‘ಅಪ್ಪಾ, ನಾನು ಮತ್ತೆ ಫೇಲಾಗಿದ್ದೇನೆ’ ಎಂದ. ಮೊಬೈಲ್‌ನಲ್ಲಿ ಏನನ್ನೋ ನೋಡುತ್ತಿದ್ದ ಅಪ್ಪ ಮುಖ ಎತ್ತದೆ ‘ಪರ್ವಾಗಿಲ್ಲ, ಮುಂದಿನ ಸಲ ಚೆನ್ನಾಗಿ ಓದು’ ಎಂದರು. ಬಯ್ಸಿಕೊಳ್ಳಲು ತಯಾರಾಗೇ ಬಂದಿದ್ದ ಅವನಿಗೆ ಅಪ್ಪನ ತಣ್ಣನೆಯ ಪ್ರತಿಕ್ರಿಯೆಯಿಂದ ನಿರಾಸೆಯಾಯ್ತು.

ಮರುದಿನ ಮಗಳು ಅಪ್ಪನ ಎದುರಿಗೆ ಬಂದು ‘ನಮ್ಮ ಕಾರನ್ನು ಇನ್ನೊಂದು ಕಾರಿಗೆ ಗುದ್ದಿಸಿದೆ, ಮುಂಭಾಗ ಡ್ಯಾಮೇಜ್ ಆಗಿದೆ’ ಎಂದಳು. ಅಪ್ಪ ಸಿಟ್ಟಾಗುತ್ತಾರೆ ಎಂದು ಭಾವಿಸಿದ್ದ ಮಗಳಿಗೆ ಅಚ್ಚರಿ ಕಾದಿತ್ತು. ‘ಇರಲಿ ಬಿಡು ಮಗಳೇ, ನಾಳೆ ನಾನೇ ಗ್ಯಾರೇಜಿಗೆ ಬಿಡ್ತೀನಿ, ಸದ್ಯ ನಿನಗೇನೂ ಆಗಿಲ್ಲವಲ್ಲಾ?’ ಎಂದುಬಿಟ್ಟರು.

ಮರುದಿನ ತಾಯಿ, ಮಗ, ಮಗಳು ಒಟ್ಟಿಗೆ ಸೇರಿ ‘ನೀವು ಮೊದಲಿನಂತಿಲ್ಲ, ಏನಾದರೂ ಎಡವಟ್ಟಾಯ್ತಾ? ಎಲ್ಲ ಸರಿ ಇದೆ ತಾನೇ?’ ಎಂದು ಕೇಳಿದರು. ‘ಎಲ್ಲ ಸರಿ ಇದೆ. ನನಗೇನೂ ಆಗಿಲ್ಲ. ಆದರೆ ನಾನು ಬದುಕಿನಲ್ಲಿ ಮಹತ್ತರವಾದುದನ್ನು ಕಲಿತಿದ್ದೇನೆ, ಅದರಿಂದ ನನಗೆ ನೆಮ್ಮದಿಯಿದೆ. ಇಷ್ಟು ದಿನ ನಿಮ್ಮ ಮೇಲೆ ಸಣ್ಣಪುಟ್ಟದಕ್ಕೂ ರೇಗಾಡಿ ನಿಮ್ಮನ್ನು ನನ್ನ ನಿಯಂತ್ರಣದಲ್ಲಿಡಲು ಪ್ರಯತ್ನಿಸುತ್ತಿದ್ದೆ. ನನ್ನ ಇಚ್ಛೆ, ಅಭಿಪ್ರಾಯ, ಆಲೋಚನೆಗಳನ್ನು ನಿಮ್ಮ ಮೇಲೆ ಹೇರುತ್ತಿದ್ದೆ. ಅದರಿಂದ ನಿಮ್ಮ ಬದುಕಿನ ರೀತಿಯಲ್ಲಿ ಏನಾದರೂ ಬದಲಾವಣೆ ಆಗಿದೆಯಾ ಅಂತ ಯೋಚಿಸಿದೆ. ಏನೂ ಇಲ್ಲ. ನೀವು ನನಗೆ ಹೆದರುತ್ತಿದ್ದಿರಿ ಅಷ್ಟೇ. ನನ್ನ ಕೆಲಸ ಹೆದರಿಸುವುದಲ್ಲ. ನಿಮ್ಮನ್ನು ನನ್ನ ದಾರಿಗೆ ತರುವುದೂ ಅಲ್ಲ. ನಿಮಗೆ ನಿಮ್ಮದೇ ಆದ ಬದುಕಿದೆ. ನಿಮ್ಮದೇ ಆಸೆ ಆಲೋಚನೆಗಳು ಇರುತ್ತವೆ. ಅದರಂತೆ ಬದುಕುವುದು ನಿಮ್ಮ ಜವಾಬ್ದಾರಿ. ನಿಮ್ಮಿಂದ ಆದ ತಪ್ಪುಗಳನ್ನು ನಾನು ಸಿಟ್ಟು, ಅಸಹನೆಯಿಂದ ಸರಿಪಡಿಸಲು ಪ್ರಯತ್ನಿಸಿ ನೋಡಿದೆ. ಪ್ರತಿಯೊಂದು ಸನ್ನಿವೇಶವನ್ನು ಎದುರಿಸಿ ನೀವು ತೆಗೆದುಕೊಳ್ಳುವ ನಿರ್ಧಾರವನ್ನು ನಾನು ಹಗುರವಾಗಿ ಕಂಡೆ. ನಿಮ್ಮ ನಿರ್ಣಯಗಳನ್ನು ನಾನು ಗೌರವಿಸಬೇಕಿತ್ತು. ಅದರಿಂದ ಆಗುವ ತಪ್ಪು ಒಪ್ಪುಗಳಿಗೆ ನೀವೇ ಪಾಲುದಾರರು ಮತ್ತು ಫಲಾನುಭವಿಗಳು. ಅದು ನಿಮ್ಮ ಬದುಕು. ಅದರ ನಿಯಂತ್ರಕರು ನೀವು ಮಾತ್ರ. ನಿಮಗಾಗಿ ನಿಮ್ಮ ಬದುಕನ್ನು ನಾನು ಜೀವಿಸಲಾಗದು. ಯಾವುದು ನನ್ನ ನಿಯಂತ್ರಣದಲ್ಲಿ ಇಲ್ಲವೋ ಅದನ್ನು ನಿಯಂತ್ರಿಸಲು ಪ್ರಯತ್ನಿಸಬಾರದು. ನಿಮ್ಮ ಬದುಕಿನಲ್ಲಿ ಏನೇನು ಆಗುತ್ತಿದೆಯೋ ಅದರ ಅರಿವು ನಿಮಗಾಗಬೇಕು. ಅಸ್ವಸ್ಥನಾಗಿರುವವನು ಯಾವಾಗಲೂ ತಳಮಳದಲ್ಲಿರುತ್ತಾನೆ. ಅದರಿಂದೇನು ಪ್ರಯೋಜನ? ಪ್ರಸನ್ನವೂ ಆಹ್ಲಾದಕರವೂ ಆದ ಶಾಂತಗುಣವೇ ನೆಮ್ಮದಿಯ ಮೂಲ’ ಎಂದರು.

ಈಗೀಗ ಹೆಂಡತಿ ಇಡೀ ಕುಟುಂಬದ ನೊಗ ಹೊತ್ತವಳಂತೆ ಗಂಡ, ಮಕ್ಕಳ ಬೇಕು ಬೇಡಗಳನ್ನು ಅರಿತು ನಗುನಗುತ್ತಾ ಎಲ್ಲವನ್ನೂ ನಿಭಾಯಿಸುತ್ತಾಳೆ. ಮಗ ಹೆಚ್ಚು ಶ್ರದ್ಧೆಯಿಂದ ಓದಲಾರಂಭಿಸಿ ಪಾಸಾಗುವ ವಿಶ್ವಾಸದಲ್ಲಿದ್ದಾನೆ. ಮಗಳು ಕಾರನ್ನು ಗ್ಯಾರೇಜಿಗೆ ಬಿಟ್ಟು ರಿಪೇರಿ ಮಾಡಿಸಿ ನಿಧಾನವಾಗಿ ಹೋಗಿ ಬರುವುದು ಮಾಡುತ್ತಿದ್ದಾಳೆ. ಎಲ್ಲರೂ ಕುಳಿತು ಉಣ್ಣುವ ಸಡಗರವನ್ನು ಸಂಭ್ರಮಿಸುತ್ತಿದ್ದಾರೆ. ಇಷ್ಟು ದಿನ ಎಲ್ಲರಿಗೂ ಎಲ್ಲವೂ ಸಿಡಿ ಸಿಡಿ, ಹೊರೆ ಅನಿಸಿದ್ದು ಇದೀಗ ಸಲೀಸು ಸರಾಗ ಅನಿಸುತ್ತಿದೆ. ಕುಟುಂಬದಲ್ಲಿ ಒಬ್ಬರೇ ಒಬ್ಬರು ತಮ್ಮ ಕೋಪತಾಪಗಳನ್ನು ತೊರೆದು ಶಾಂತವಾಗಿರಲು ಶುರುಮಾಡಿದರೆ ಸಾಕು ಉಳಿದವರಲ್ಲೂ ಅದು ಅನು ರಣಿಸುತ್ತಾ ಬದುಕನ್ನು ಸಹನೀಯಗೊಳಿಸುತ್ತದೆ.

ಪದಬಂಧ 6406


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರತೀ ವಾಹನದ ಹತ್ತಿರವೇ ನೆರೆ ಬಂದೆಯಲ್ಲಾ! (3)
4.ಚಾರ ತಂದಿರುವ ಸುದ್ದಿ (4)
6.ಇಡೀ ಜಗತ್ತಿಗೆ ಸಂಬಂಧಿಸಿದ್ದು (4)
8.ಖನಿಯಲ್ಲಿ ಸಿಕ್ಕಿದುದು (3)
10.ಮಾಗಿದ ಕಾಯಿ (2)
11.ಉತ್ಕೃಷ್ಟವಾದುದನ್ನು ಹೀಗೆ ಹೇಳಿ (2)
12.ಹೀಗೆ ಪರ್ಯಾಲೋಚಿಸು (3)
14.ಭೇದಿಯಾಗಲು ಕೊಡುವ ಔಷಧ (4)
18.ಕಾಸು ನೀಡಿ ಖರೀದಿಸಿರುವ ತೋಟಾ (4)
19.ಮುಚ್ಚಿಡಬೇಕಾದ್ದು ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ಪ್ರಜ್ಞೆಯಲ್ಲೇ ಮಾಡಿದ ಶಪಥ! (3)
2.ನಗುವಿನಿಂದ ಕೂಡಿದ ವದನ (4)
3.ಸಂಗಾತಿ ತಿಳಿಸಿರುವ ವಿಷಯ (3)
5.ಜಾಗರ ನೋಡಲು ದೊರೆತ ಸೂಟಿ (2)
7.ಮಾಡಬೇಕಾದ ಕೆಲಸ (3)
9.ಮಜದಲ್ಲಿರುವ ಮನುಷ್ಯ ತಿರುಗಿದ್ದಾನಲ್ಲಾ! (3)
10.ಶಿವನ ಬಳಿಯಿರಿಸಿದ ಮಣ್ಣಿನ ಬಾನಿ (3)
13.ದೇವತೆ ಹಾಗೂ ರಾಕ್ಷಸರು ಒಟ್ಟಿಗಿದ್ದಾರೆ (4)
15.ಗೋಳದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಎಳೆದಿರುವ ಗೆರೆ (3)
16.ಉತ್ತರದವರ ಚಿಕ್ಕಪ್ಪ ಉಲ್ಟಾ ನಿಂತಿದ್ದಾನೆ (2)
17.ಆಲದ ಹತ್ತಿರವಿರುವವನ ಸೋಮಾರಿತನ (3)



6405ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿಶ್ವವಿದ್ಯಾಲಯ 4.3ಮಿಂಗಿಲ 5.ಸಮಾಸ 8.ದರುಕು 11.ತಳಿರು 13.ಚುಕ್ಕಾಣಿ 14.ಮದಜಲ 16.ಲೋಕವ್ಯವಹಾರ

ಮೇಲಿಂದ ಕೆಳಕ್ಕೆ: 1.ವಿಧ್ವಂಸಕ 2.ಯತಿ 3.ಕುಲಪತಿ 6.ಸಮುಚಿತ 7.ಚಂಡಮಾರುತ 9.ಕುಡಿಮಿಂಚು 10.ಆಕ್ರಮಣ 12.ಮಣಿಸರ 15.ಲಲೋ

ಸುಡೊಕು 6789

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9				5		8	4	
			3		9		2	1
	4			1				7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

6788 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

18 ಮೇ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ಬಿದಿಗೆ ಗಂ. 17-54 ನಕ್ಷತ್ರ : ರೋಹಿಣಿ ಗಂ. 11-32 ಯೋಗ : ಸುಕರ್ಮ ಗಂ. 21-48 ಕರಣ : ಬಾಲವ ಗಂ. 07-47, ವೃಷಭ ಮಾಸದ 03 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-08 ಸೂರ್ಯಾಸ್ತ : 06-46, ಮುಸ್ಲಿಂ ದಿನಾಂಕ : 01 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 3, 11

ಮೇಷ: ಜನ ಸಂಪರ್ಕ ಮತ್ತು ಆರ್ಥಿಕ ಪ್ರಭಾವದಿಂದ ವಿನೂತನ ಅವಕಾಶಗಳು ದೊರೆಯಲಿವೆ. ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದರೂ, ಸುಲಭವಾಗಿ ಬಿಡುವುದಿಲ್ಲ.

ವೃಷಭ: ಎಷ್ಟೇ ಪರಿಶ್ರಮವಿದ್ದರೂ ರಾಜಕೀಯ ಭವಿಷ್ಯಕ್ಕೆ ತೊಂದರೆಯಾಗುವ ಲಕ್ಷಣವಿದೆ. ಯಶಸ್ಸನ್ನು ಹೊಂದಲು ಅನುಸರಿಸುತ್ತಿರುವ ಹಳೆ ದಾರಿ ಬಿಟ್ಟು ಹೊಸ ಮಾರ್ಗ ಕಂಡುಹಿಡಿದುಕೊಳ್ಳಬೇಕು.

ಮಿಥುನ: ಸಂತೋಷದಲ್ಲಿ ಮೈಮರೆಯುವಿಕೆಯಿಂದ ಗಮನ ಕಡಿಮೆಯಾಗಿ ಎಡವಟ್ಟುಗಳು ಆಗಬಹುದು. ಉದ್ಯೋಗದಲ್ಲಿ ಬದಲಾವಣೆ ಸಂಭವವಿದೆ. ದುರ್ಗಾದೇವಿಗೆ ಶರಣಾಗುವುದರಿಂದ ಶುಭ ಸಂತೋಷ ಪ್ರಾಪ್ತಿ.

ಕರ್ಕಾಟಕ: ಮಕ್ಕಳ ವ್ಯಾಸಂಗದ ಬಗ್ಗೆ ಸಂಬಂಧಿಕರಲ್ಲಿ ಚರ್ಚೆ ನಡೆಸುವುದು ಒಳಿತು. ಕೆಲವು ಮುಖ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಸೂಕ್ತ ದಿನ.

ಸಿಂಹ: ವಿವಾದ ಗೊಡವೆಗಳಿಂದ ದೂರ ಉಳಿಯುವುದರಿಂದ ಗೌರವವನ್ನು ಕಾಪಾಡಿಕೊಳ್ಳಬಹುದು. ಬೇಗ ಗುರಿ ತಲುಪಬೇಕೆನ್ನುವ ಹಂಬಲವು ಫಲಿತಾಂಶಕ್ಕೆ ಅಡ್ಡಿ ಮಾಡಬಹುದು.

ಕನ್ಯಾ: ಕಾರ್ಯದೊತ್ತಡ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳ ಉಂಟಾಗಲಿದೆ. ಬೆಳ್ಳಿ ವಸ್ತುಗಳ ಮಾರಾಟ ಮಾಡುವವರು ಆದಾಯವನ್ನು ಗಳಿಸುವಿರಿ.

ತುಲಾ: ಮಕ್ಕಳು ಆಡುವ ತಿರಸ್ಕಾರದ ಮಾತುಗಳು ಬಹಳವಾಗಿ ಬೇಸರಕ್ಕೆ ಒಳಗಾಗುವಂತೆ ಮಾಡಲಿದೆ. ಸಂದಿಗ್ಧ ಪರಿಸ್ಥಿತಿಯನ್ನು ಮಾರ್ಗದರ್ಶಕರ ಸಲಹೆ ಪಡೆದು ನಿಭಾಯಿಸಿ.

ವೃಶ್ಚಿಕ: ಅನವಶ್ಯಕ ಪ್ರಯಾಣ ಖರ್ಚು-ವೆಚ್ಚಗಳನ್ನು ಹೆಚ್ಚು ಮಾಡಲಿದ್ದು, ಆರ್ಥಿಕ ಬಿಕ್ಕಟ್ಟು ಉಂಟಾಗಲಿದೆ. ವಸ್ತ್ರ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಇರಲಿದೆ.

ಧನು: ಸಮೀಪವರ್ತಿಗಳ ಸಲಹೆ ಸಹಕಾರದಿಂದ ವ್ಯಾಪಾರ ವಹಿವಾಟುಗಳಲ್ಲಿನ ಆದಾಯದಲ್ಲಿ ಗಣನೀಯ ಏರಿಕೆ ಉಂಟಾಗಲಿದೆ. ಹೊಸ ಕಟ್ಟಡ ನಿರ್ಮಾಣ ಕಾರ್ಯಗಳ ಒಪ್ಪಂದ ಏರ್ಪಡಲಿದೆ.

ಮಕರ: ಅಧಿಕಾರಸ್ಥರು ಹಾಗೂ ಹಿರಿಯ ನೌಕರರ ಜತೆ ಸ್ನೇಹ ಸಂಬಂಧ ಹೆಚ್ಚಾಗಿ ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ. ಹೊಣೆಗಾರಿಕೆಯನ್ನು ಹೊರಲು ಸಿದ್ಧರಾಗಿರುವಿರಿ.

ಕುಂಭ: ಧಾರ್ಮಿಕವಾಗಿ ಇರುವವರಿಗೆ, ವೇದಾಧ್ಯಯನದಲ್ಲಿರುವವರಿಗೆ ಮಂತ್ರಸಿದ್ಧಿ ಆಗಬಹುದು. ಜೀವನಶೈಲಿಯಲ್ಲಿ ಧಾರ್ಮಿಕತೆ ಅಳವಡಿಸಿಕೊಳ್ಳುವಿರಿ. ಇತರರ ಸಹಾಯದಿಂದ ಎಲ್ಲವನ್ನೂ ಸಂಪಾದಿಸಿಕೊಳ್ಳಬೇಕಾಗುತ್ತದೆ.

ಮೀನ: ಆರೋಗ್ಯದ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದರೆ ಉತ್ತಮ. ದೇವಿ ಕೃಪಾಕಟಾಕ್ಷ ನಿಮ್ಮಲ್ಲಿ ಇರುವುದರಿಂದ ಕಾರ್ಯದಲ್ಲಿ ತೊಂದರೆ ಇರುವುದಿಲ್ಲ.

ಗುಂಡಣ್ಣ



ಕಿಟ್‌ಕ್ಯಾಟ್‌ಗೆ ಭಾರತ ದೊಡ್ಡ ಮಾರುಕಟ್ಟೆ

ನವದೆಹಲಿ (ಪಿಟಿಐ): ನೆಸ್ಲೆ ಕಂಪನಿ ತಯಾರಿಸುವ 'ಕಿಟ್‌ಕ್ಯಾಟ್' ಚಾಕಲೇಟ್ ಪಾಲಿಗೆ ಭಾರತವು ಜಗತ್ತಿನ ಅತಿದೊಡ್ಡ ಮಾರುಕಟ್ಟೆಯಾಗಿ ಬೆಳೆದಿದೆ.

ಗ್ರಾಹಕರಿಗೆ ಇದು ಇಷ್ಟವಾಗಿರುವುದು, ಈ ಉತ್ಪನ್ನದ ಮಾರಾಟಕ್ಕಾಗಿ ಬಹಳ ಹಣ ಹೂಡಿಕೆ ಮಾಡಿರುವುದು ಇದನ್ನು ಸಾಧ್ಯವಾಗಿಸಿದೆ ಎಂದು ಕಂಪನಿ ಹೇಳಿದೆ.

Nestlé Good Food, Good Life

ಕಿಟ್‌ಕ್ಯಾಟ್ ಚಾಕಲೇಟ್ ಪಾಲಿಗೆ ಭಾರತವು ಕಳೆದ ಎರಡು-ಮೂರು ವರ್ಷಗಳಿಂದ ಎರಡನೆಯ ಅತಿದೊಡ್ಡ ಮಾರುಕಟ್ಟೆಯಾಗಿತ್ತು. ಈಗ ಅದು ಮೊದಲ ಸ್ಥಾನಕ್ಕೆ ಬಂದಿದೆ. ಈ ಚಾಕಲೇಟ್ ಅನ್ನು ಕಂಪನಿಯು 85ಕ್ಕೂ ಹೆಚ್ಚಿನ ದೇಶಗಳಲ್ಲಿ ಮಾರಾಟ ಮಾಡುತ್ತಿದೆ.

'ಕಿಟ್‌ಕ್ಯಾಟ್ ಬ್ರ್ಯಾಂಡ್ ತನ್ನ ಮಾರುಕಟ್ಟೆ ಪಾಲನ್ನು ಹೆಚ್ಚಿಸಿಕೊಳ್ಳುವುದು ಕಳೆದ ಕೆಲವು ವರ್ಷಗಳಲ್ಲಿ ಇನ್ನಷ್ಟು ವೇಗ ಪಡೆದುಕೊಂಡಿದೆ' ಎಂದು ನೆಸ್ಲೆ ಇಂಡಿಯಾ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಮನೀಶ್ ತಿವಾರಿ ಹೇಳಿದ್ದಾರೆ.

ನೆಸ್ಲೆ ಕಂಪನಿಯ ಮ್ಯಾಗಿ ಉತ್ಪನ್ನದ ಪಾಲಿಗೆ ಕೂಡ ಭಾರತವು ಅತಿದೊಡ್ಡ ಮಾರುಕಟ್ಟೆಯಾಗಿದೆ. ಒಂದು ದಶಕದ ಹಿಂದೆ ಕಿಟ್‌ಕ್ಯಾಟ್ ಪಾಲಿಗೆ ಭಾರತವು ಹತ್ತನೆಯ ಅತಿದೊಡ್ಡ ಮಾರುಕಟ್ಟೆ ಆಗಿತ್ತು.

ಜಪಾನ್, ಬ್ರೆಜಿಲ್ ಮತ್ತು ಯುರೋಪಿನಲ್ಲಿಯೂ ಕಿಟ್‌ಕ್ಯಾಟ್‌ಗೆ ದೊಡ್ಡ ಮಾರುಕಟ್ಟೆ ಇದೆ. ಬ್ರಿಟಿಷ್ ಕಂಪನಿಯಾದ ರೌನ್‌ಟ್ರೀಸ್ 1930ರ ದಶಕದಲ್ಲಿ ಕಿಟ್‌ಕ್ಯಾಟ್ ತಯಾರಿಸಿತು. 1988ರಲ್ಲಿ ನೆಸ್ಲೆ ಕಂಪನಿಯು ಈ ಕಂಪನಿಯನ್ನು ಖರೀದಿಸುವ ಮೂಲಕ ಕಿಟ್‌ಕ್ಯಾಟ್ ಬ್ರ್ಯಾಂಡ್‌ಅನ್ನು ತನ್ನದಾಗಿಸಿಕೊಂಡಿತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಆಭರಣ ರಫ್ತು ಶೇ 9ರಷ್ಟು ಇಳಿಕೆ

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶದ ರತ್ನ ಮತ್ತು ಆಭರಣಗಳ ರಫ್ತು ಏಪ್ರಿಲ್ ತಿಂಗಳಿನಲ್ಲಿ ಶೇ 9ರಷ್ಟು ಇಳಿಕೆ ಆಗಿದೆ ಎಂದು ರತ್ನ ಮತ್ತು ಆಭರಣ ರಫ್ತು ಉತ್ತೇಜನಾ ಮಂಡಳಿ (ಜಿಜೆಇಪಿಸಿ) ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ದೇಶದಿಂದ ಒಟ್ಟು ₹20,952 ಕೋಟಿ ಮೌಲ್ಯದ ರತ್ನ ಮತ್ತು ಚಿನ್ನಾಭರಣ ರಫ್ತಾಗಿತ್ತು. ಅದು ಈ ಬಾರಿ ₹20,825 ಕೋಟಿಗೆ ಇಳಿದಿದೆ ಎಂದು ಮಂಡಳಿಯ ಅಧ್ಯಕ್ಷ ಕಿರೀಟ್ ಭನ್ಸಾಲಿ ತಿಳಿಸಿದ್ದಾರೆ.

ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರಗಳ ರಫ್ತಿನಲ್ಲಿ ಶೇ 19ರಷ್ಟು ಕಡಿಮೆಯಾಗಿದ್ದು, ₹8,550 ಕೋಟಿ ಆಗಿದೆ. ಪ್ರಯೋಗಾಲಯಗಳಲ್ಲಿ ಅಭಿವೃದ್ಧಿಪಡಿಸಿದ ವಜ್ರಗಳ ರಫ್ತು ಶೇ 15ರಷ್ಟು ಮತ್ತು ಚಿನ್ನಾಭರಣಗಳ ರಫ್ತು ಶೇ 21ರಷ್ಟು ಇಳಿದಿದೆ.

ಆದರೆ ಬೆಳ್ಳಿ ಆಭರಣಗಳ ರಫ್ತಿನಲ್ಲಿ ಶೇ 444ರಷ್ಟು ಏರಿಕೆ ಆಗಿದ್ದು, ₹2,575 ಕೋಟಿಯಷ್ಟಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಇದು ₹473 ಕೋಟಿ ಆಗಿತ್ತು ಎಂದು ತಿಳಿಸಿದೆ.

'ಎಬೋಲಾ ಸೋಂಕು: ಆರೋಗ್ಯ ತುರ್ತು'

ಅಬುಜಾ (ನೈಜೀರಿಯಾ) (ಪಿಟಿಐ): ಕಾಂಗೊ ಮತ್ತು ನೆರೆಯ ಉಗಾಂಡದಲ್ಲಿ ಹರಡುತ್ತಿರುವ ಎಬೋಲಾ ವೈರಾಣು ಸೋಂಕು ಸಾರ್ವಜನಿಕ ಆರೋಗ್ಯ ತುರ್ತು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮಹಾನಿರ್ದೇಶಕ ಟೆಡ್ರೊಸ್ ಅಧಾನೋಮ್ ಘೆಬ್ರೆಯಿಸೆಸ್ ಅವರು ಘೋಷಿಸಿದ್ದಾರೆ.

ಎಬೋಲಾ ವೈರಾಣು ಸೋಂಕಿಗೆ ಇಲ್ಲಿವರೆಗೆ 88 ಸಾವು ಮತ್ತು 300 ಶಂಕಿತ ಪ್ರಕರಣಗಳು ದಾಖಲಾಗಿವೆ.

'ಸದ್ಯ ಕೋವಿಡ್ ಸಾಂಕ್ರಾಮಿಕದಂತಹ ಪರಿಸ್ಥಿತಿ ತಲೆದೋರಿಲ್ಲ. ಅಂತರರಾಷ್ಟ್ರೀಯ ಗಡಿ ಮುಚ್ಚದಂತೆ ಸಲಹೆ ನೀಡಲಾಗಿದೆ' ಎಂದು ಡಬ್ಲ್ಯುಎಚ್‌ಒ 'ಎಕ್ಸ್'ನಲ್ಲಿ ತಿಳಿಸಿದೆ.

16ನೇ ವರ್ಷದ ಚಿರಸ್ಮರಣೆ



ಶ್ರೀ ಎಂ. ಅನಿಲ್ ಕುಮಾರ್
ಮಾಜಿ ನಿರ್ದೇಶಕರು, ಬೆಂಗಳೂರು ಡೈರಿ
ನೀವು ನಮ್ಮನ್ನಗಲಿ ಇಂದಿಗೆ ಹದಿನಾರು ವರ್ಷ ಕಳೆದರೂ ನಿಮ್ಮ ಸೌಜನ್ಯ ಮತ್ತು ನಿಮ್ಮ ಆದರ್ಶಗಳೊಂದಿಗೆ ಸದಾ ನಿಮ್ಮ ನೆನಪಿನಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುವ
ದುಃಖತಪ್ತರು : ಕುಟುಂಬ ವರ್ಗದವರು ಮತ್ತು ಪದ್ಮ ಬಾರ್ & ರೆಸ್ಟೋರೆಂಟ್, ಪದ್ಮಶ್ರೀ ಸರ್ವೀಸ್ ಸ್ಟೇಷನ್, ಬೊಳಾರೆ

2nd Year Death Anniversary
SMT. R LAKSHMAMMA
18.05.2024
W/o. Y. Venugopal Reddy
A.G.N. Group, Arakere, Banneghata Road, Bluru-76



Today we honor her life, her strength, and her endless devotion. forever cherished, never forgotten.
Fondly Remembered by:
Y. Venugopal Reddy, Children, Daughter in Law, Sons in Law, Grandchildren, Relatives & Friends

With profound grief, we regret to inform the sad demise of



23.07.1993 17.05.2026
SHRI. RAJESH L REDDY
LRIS Director
Preethiya Theru Movie Second Hero
Passed away on 17.05.2026, 8:30 pm
Funeral at SCTIT [LRIS School] campus on 18.05.2026, 3pm onwards
Vignan Nagar,Kaggadasapura
Deeply mourned by:
Family members
S Lokesha Reddy & Family
9880021222, 9900000222

ಚಿನ್ನದ ಹೂಡಿಕೆಗೆ ಇಜಿಆರ್ ಹೊಸ ಮಾದರಿ

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಭಾರತೀಯರಿಗೆ ಚಿನ್ನವು ಕೇವಲ ಲೋಹವಲ್ಲ; ಅದು ಐಶ್ವರ್ಯ ಮತ್ತು ಭದ್ರತೆಯ ಸಂಕೇತ. ಶತಮಾನಗಳಿಂದಲೂ ನಾವು ಭೌತಿಕವಾಗಿ ಚಿನ್ನವನ್ನು ಖರೀದಿಸಿ ಸಂಗ್ರಹಿಸುವುದನ್ನೇ ರೂಢಿಸಿಕೊಂಡಿದ್ದೇವೆ. ಆದರೆ, ಬದಲಾಗುತ್ತಿರುವ ಕಾಲದಲ್ಲಿ, ಬಂಗಾರವನ್ನು ಖರೀದಿಸುವ ಮತ್ತು ಇರಿಸಿಕೊಳ್ಳುವ ವಿಧಾನವೂ ಬದಲಾಗಿದೆ. ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಇದೇ ಮೇ 4ರಂದು ಪೂರ್ಣ ಪ್ರಮಾಣದಲ್ಲಿ ಚಾಲನೆ ನೀಡಿದ ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್ (ಇಜಿಆರ್) ಈಗ ಹೂಡಿಕೆದಾರರ ನೆಚ್ಚಿನ ಆಯ್ಕೆಯಾಗಿದೆ.

ಏನಿದು ಇಜಿಆರ್: ಸರಳವಾಗಿ ಹೇಳುವುದಾದರೆ, ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್ ಎಂಬುದು ಡಿಜಿಟಲ್ ಬಂಗಾರ. ನೀವು ಷೇರು ಮಾರುಕಟ್ಟೆಯಲ್ಲಿ ಕಂಪನಿಯ ಷೇರುಗಳನ್ನು ಖರೀದಿಸಿ ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಹೇಗೆ ಇರಿಸುತ್ತೀರೋ, ಹಾಗೆಯೇ ಚಿನ್ನವನ್ನು ಡಿಜಿಟಲ್ ರೂಪದಲ್ಲಿ ಇರಿಸುವುದೇ ಈ ಬಂಗಾರದ ರಸೀದಿ ಅಥವಾ ಇಜಿಆರ್. ಇಲ್ಲಿ ಖರೀದಿಸುವ ಪ್ರತಿ ರಸೀದಿಯು ಅಸಲಿ ಚಿನ್ನಕ್ಕೆ ಸಮನಾಗಿರುತ್ತದೆ. ಈ ಚಿನ್ನವನ್ನು ಸೆಬಿ ಅನುಮೋದಿತ ಅತ್ಯಂತ ಸುರಕ್ಷಿತವಾದ ವಾಲ್ಟ್ ಅಥವಾ ಸರ್ಕಾರಿ ಲಾಕರ್‌ಗಳಲ್ಲಿ ಇರಿಸಲಾಗಿರುತ್ತದೆ.

ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್ ವ್ಯವಸ್ಥೆಯು ಮೂರು ಹಂತಗಳಲ್ಲಿ ಕಾರ್ಯನಿರ್ವಹಿಸುತ್ತದೆ.

ಇಜಿಆರ್ ಇತರೆ ಚಿನ್ನದ ಹೂಡಿಕೆಗಳಿಗಿಂತ ಹೇಗೆ ಭಿನ್ನ?			
ವೈಶಿಷ್ಟ್ಯ	ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್	ಚಿನ್ನದ ಇಟಿಎಫ್	ಚಿನ್ನದ ಮ್ಯೂಚುವಲ್ ಫಂಡ್
ಅಸಲಿ ಚಿನ್ನ ಪಡೆಯಬಹುದೇ?	ಹೌದು, ಭೌತಿಕ ಚಿನ್ನ ಪಡೆಯಲು ಸಾಧ್ಯ	ಇಲ್ಲ, ನಗದನ್ನು ಮಾತ್ರ ಪಡೆಯಬಹುದು	ಇಲ್ಲ, ನಗದು ರೂಪದಲ್ಲಿ ಮಾತ್ರ ಸಿಗುತ್ತದೆ
ನಿರ್ವಹಣಾ ವೆಚ್ಚ	ಕಡಿಮೆ (ಬ್ರೋಕರೇಜ್ ಮತ್ತು ವಾಲ್ಟ್ ಶುಲ್ಕ ಮಾತ್ರ)	ಸಾಧಾರಣ ವೆಚ್ಚ ಇರುತ್ತದೆ	ಹೆಚ್ಚು ವೆಚ್ಚ ಇರುತ್ತದೆ
ಶುದ್ಧತೆ	995 ಅಥವಾ 999 ಶುದ್ಧತೆ ಖಾತರಿ	ನಿರ್ದಿಷ್ಟ ಮಾನದಂಡ ಇರುತ್ತದೆ	ಇಟಿಎಫ್ ಮೇಲೆ ಅವಲಂಬಿತ

1. ಚಿನ್ನದ ಠೇವಣಿ: ಮಾನ್ಯತೆ ಪಡೆದ ಚಿನ್ನದ ಶುದ್ಧೀಕರಣ ಘಟಕಗಳು ಅಥವಾ ಬ್ಯಾಂಕುಗಳು ಭೌತಿಕ ಚಿನ್ನವನ್ನು ಅಧಿಕೃತ ವಾಲ್ಟ್ ವ್ಯವಸ್ಥಾಪಕರಿಗೆ ಒಪ್ಪಿಸುತ್ತವೆ. ಚಿನ್ನದ ಶುದ್ಧತೆಯನ್ನು ಪರಿಶೀಲಿಸಿದ ನಂತರ, ಅದಕ್ಕೆ ಸಮನಾದ ಡಿಜಿಟಲ್ ರಸೀದಿಯನ್ನು ಸೃಷ್ಟಿಸಲಾಗುತ್ತದೆ.

2. ವ್ಯಾಪಾರ: ಸೃಷ್ಟಿಯಾದ ಈ ರಸೀದಿಗಳು ಎನ್‌ಎಸ್‌ಇಯಲ್ಲಿ ಲಭ್ಯವಿರುತ್ತವೆ. ಹೂಡಿಕೆದಾರರು ತಮ್ಮ ಡಿಮ್ಯಾಟ್ ಖಾತೆಯ ಮೂಲಕ ಇವುಗಳನ್ನು ಖರೀದಿಸಬಹುದು ಅಥವಾ ಮಾರಾಟ ಮಾಡಬಹುದು.

3. ಭೌತಿಕವಾಗಿ ಚಿನ್ನ ಪಡೆಯಬಹುದು: ಇದು ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್‌ನ ಅತ್ಯಂತ ಪ್ರಮುಖ ವೈಶಿಷ್ಟ್ಯ. ನಿಮ್ಮ ಬಳಿ ನಿಗದಿತ ಪ್ರಮಾಣದ ರಸೀದಿಗಳು ಜಮೆಯಾದಾಗ (ಉದಾಹರಣೆಗೆ 10 ಗ್ರಾಂ ಅಥವಾ 100 ಗ್ರಾಂ), ನೀವು ಆ ಡಿಜಿಟಲ್ ರಸೀದಿಯನ್ನು ನೀಡಿ, ವಾಲ್ಟ್‌ನಿಂದ ಅಸಲಿ ಚಿನ್ನದ ನಾಣ್ಯ ಅಥವಾ ಬಿಲ್ಲೆಗಳನ್ನು ಭೌತಿಕವಾಗಿ ಪಡೆದುಕೊಳ್ಳಬಹುದು.

ಯಾರು ಹೂಡಿಕೆ ಮಾಡಬಹುದು ಮತ್ತು ಅರ್ಹತೆಗಳೇನು?: ಭಾರತದ ಪ್ರಜೆ ವೈಯಕ್ತಿಕವಾಗಿ ಅಥವಾ ಹಿಂದೂ ಅವಿಭಕ್ತ ಕುಟುಂಬದ ಹೆಸರಿನಲ್ಲಿ ಈ ಯೋಜನೆಯಲ್ಲಿ ಹಣ ಹೂಡಿಕೆ ಮಾಡಬಹುದು. ಇಷ್ಟೇ ಅಲ್ಲದೆ, ನೋಂದಾಯಿತ ಟ್ರಸ್ಟ್‌ಗಳು ಮತ್ತು ಕಾರ್ಪೊರೇಟ್ ಕಂಪನಿಗಳಿಗೂ ಇದರಲ್ಲಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಹೂಡಿಕೆದಾರರು ಹೊಂದಿರಬೇಕಾದ ಪ್ರಮುಖ ಅರ್ಹತೆಯೆಂದರೆ, ಅವರ ಹೆಸರಿನಲ್ಲಿ ಒಂದು ಡಿಮ್ಯಾಟ್ ಖಾತೆ ಇರಬೇಕು ಹಾಗೂ ಸೆಬಿ ಅಡಿಯಲ್ಲಿ ನೋಂದಾಯಿತವಾಗಿರುವ ಯಾವುದೇ ಬ್ರೋಕರ್ ಬಳಿ ಟ್ರೇಡಿಂಗ್ ಖಾತೆಯನ್ನು ಹೊಂದಿರಬೇಕು. ಸಣ್ಣ ಉಳಿತಾಯ ಮಾಡುವವರಿಗೂ ಇದು ಪೂರಕವಾಗಿದ್ದು, ಇಲ್ಲಿ ಯಾವುದೇ ದೊಡ್ಡ ಮೊತ್ತದ ಹೂಡಿಕೆಯ ಅವಶ್ಯಕತೆಯಿಲ್ಲ. ಕೇವಲ 1 ಗ್ರಾಂ ಅಥವಾ ಅದಕ್ಕಿಂತ ಕಡಿಮೆ ತೂಕದ ಚಿನ್ನದ ಯೂನಿಟ್‌ಗಳನ್ನು ಅನುಕೂಲಕ್ಕೆ ತಕ್ಕಂತೆ ಖರೀದಿಸಬಹುದು.

ಇತರ ಹೂಡಿಕೆಗಳಿಗಿಂತ ಇದು ಹೇಗೆ ಭಿನ್ನ?: ಬಹಳಷ್ಟು ಜನರಿಗೆ ಚಿನ್ನದ ಇಟಿಎಫ್ ಮತ್ತು ಮ್ಯೂಚುವಲ್ ಫಂಡ್‌ಗಳಿಗೂ ಇದಕ್ಕೂ ಇರುವ ವ್ಯತ್ಯಾಸ ತಿಳಿಯುವುದಿಲ್ಲ. ಇವು ಹೇಗೆ ಒಂದಕ್ಕಿಂತ ಒಂದು ವಿಭಿನ್ನ ತಿಳಿಯುವುದು ಅಗತ್ಯ. (ಪಟ್ಟಿ ನೋಡಿ)

ಹೂಡಿಕೆದಾರರಿಗೆ ಆಗುವ ಲಾಭಗಳೇನು?

1. ಸುರಕ್ಷತೆ: ಮನೆಯಲ್ಲಿ ಅಥವಾ ಬ್ಯಾಂಕ್ ಲಾಕರ್‌ನಲ್ಲಿ ಚಿನ್ನ ಇಟ್ಟರೆ ಕಳ್ಳತನದ ಭಯವಿರುತ್ತದೆ. ಆದರೆ ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್‌ನಲ್ಲಿ ಚಿನ್ನವು ವಿಮೆ ಇರುವ ವಾಲ್ಟ್‌ಗಳಲ್ಲಿ ಇರುವುದರಿಂದ ಪೂರ್ಣ ಸುರಕ್ಷತೆ ಇರುತ್ತದೆ.

2. ಪಾರದರ್ಶಕ ಬೆಲೆ: ಚಿನ್ನಾಭರಣ ಅಂಗಡಿಗಳಲ್ಲಿ ದಿನಕ್ಕೊಂದು ಬೆಲೆ ಇರುತ್ತದೆ. ಆದರೆ ಎನ್‌ಎಸ್‌ಇಯಲ್ಲಿ ಇಡೀ ದೇಶಕ್ಕೆ ಒಂದೇ ಬೆಲೆ ಇರುವುದರಿಂದ ಪಾರದರ್ಶಕತೆ ಇರುತ್ತದೆ.

3. ಯಾವುದೇ ಮೇಕಿಂಗ್ ಶುಲ್ಕ ಇಲ್ಲ: ಆಭರಣ ಖರೀದಿಸುವಾಗ ನೀಡುವ ತಯಾರಿಕಾ ವೆಚ್ಚ ಇಲ್ಲಿ ಇರುವುದಿಲ್ಲ. ಕೇವಲ ಚಿನ್ನದ ಮೌಲ್ಯಕ್ಕೆ ಮಾತ್ರ ಹಣ ನೀಡುತ್ತೀರಿ.

4. ನಗದೀಕರಣ ಸುಲಭ: ಹಣದ ತುರ್ತು ಅಗತ್ಯವಿದ್ದಾಗ ಮಾರುಕಟ್ಟೆಯಲ್ಲಿ ತಕ್ಷಣವೇ ಇವುಗಳನ್ನು ಮಾರಾಟ ಮಾಡಿ ಹಣವನ್ನು ನಿಮ್ಮ ಬ್ಯಾಂಕ್ ಖಾತೆಗೆ ಪಡೆಯಬಹುದು.

ತೆರಿಗೆ ನಿಯಮಗಳು: ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್‌ಗಳನ್ನು ಲಿಸ್ಟೆಡ್ ಸೆಕ್ಯೂರಿಟೀಸ್ ಎಂದು ಪರಿಗಣಿಸಲಾಗುತ್ತದೆ. ನೀವು ಇವುಗಳನ್ನು ಒಂದು ವರ್ಷಕ್ಕಿಂತ ಹೆಚ್ಚು ಕಾಲ ಇಟ್ಟುಕೊಂಡರೆ ಅದು ದೀರ್ಘಾವಧಿ ಬಂಡವಾಳ ಲಾಭ (ಎಲ್‌ಟಿಸಿಜಿ) ಎಂದು ಪರಿಗಣಿಸಲ್ಪಡುತ್ತದೆ ಮತ್ತು ಅದಕ್ಕೆ ತಕ್ಕಂತೆ ರಿಯಾಯಿತಿ ದರದ ತೆರಿಗೆ ಅನ್ವಯವಾಗುತ್ತದೆ. ಒಂದು ವರ್ಷದ ಒಳಗೆ ಮಾರಾಟ ಮಾಡಿದರೆ ನಿಮ್ಮ ಆದಾಯದ ಸ್ಲ್ಯಾಬ್ ಪ್ರಕಾರ ತೆರಿಗೆ ಅನ್ವಯಿಸುತ್ತದೆ. ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್ ಖರೀದಿ ಅಥವಾ ಮಾರಾಟದ ಮೇಲೆ ಜಿಎಸ್‌ಟಿ ಅನ್ವಯಿಸುವುದಿಲ್ಲ. ಆದರೆ ಇಜಿಆರ್ ಬದಲಿಗೆ ಅಸಲಿ ಚಿನ್ನ ಪಡೆದಾಗ ಜಿಎಸ್‌ಟಿ ಅನ್ವಯಿಸುತ್ತದೆ.

ಅಸ್ಥಿರತೆ: ಹೈಬ್ರಿಡ್ ಫಂಡ್‌ಗಳತ್ತ ಒಲವು

ಚಿನ್ನದ ಮೇಲೆಯೂ ಹಣ ತೊಡಗಿಸಿದ ಹೈಬ್ರಿಡ್ ಫಂಡ್‌ಗಳಿಗೆ ಆಗಿದೆ ಹೆಚ್ಚಿನ ಪ್ರಯೋಜನ

ಮುಖ್ಯಾಂಶಗಳು
- 2025-26ರಲ್ಲಿ ಹೈಬ್ರಿಡ್ ಎಂ.ಎಫ್.ನಲ್ಲಿ ₹1.55 ಲಕ್ಷ ಕೋಟಿ ಹೂಡಿಕೆ
- ಈ ಫಂಡ್‌ಗಳಲ್ಲಿನ ಖಾತೆಗಳ ಸಂಖ್ಯೆ 1.9 ಕೋಟಿಗೆ ಹೆಚ್ಚಳ
- ಜನಪ್ರಿಯತೆ ಗಳಿಸಿದ ಮಲ್ಟಿ ಅಸೆಟ್ ಫಂಡ್‌ಗಳು



ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಒಟ್ಟು ₹1.55 ಲಕ್ಷ ಕೋಟಿಯಷ್ಟು ಹೂಡಿಕೆ ಆಗಿದೆ. ಇದು ಹಿಂದಿನ ಹಣಕಾಸು ವರ್ಷದಲ್ಲಿ ಈ ಬಗೆಯ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಿದ್ದ ಹೂಡಿಕೆ ಮೊತ್ತಕ್ಕೆ ಹೋಲಿಸಿದರೆ ಶೇ 29ರಷ್ಟು ಹೆಚ್ಚು.

ಷೇರುಪೇಟೆಯಲ್ಲಿ ಕಂಡುಬಂದಿರುವ ಅಸ್ಥಿರತೆಯು ಹೂಡಿಕೆದಾರರು ಹೆಚ್ಚಿನ ವೈವಿಧ್ಯ ಇರುವ ಹೂಡಿಕೆಗಳತ್ತ ಗಮನ ಹರಿಸುವಂತೆ ಮಾಡಿದೆ.

'2025-26ನೆಯ ಹಣಕಾಸು ವರ್ಷದಲ್ಲಿ ಹೂಡಿಕೆದಾರರು ಹೆಚ್ಚು ಸಮತೋಲನದ ಹೂಡಿಕೆ ಆಯ್ಕೆಗಳನ್ನು ಅರಸಿದ್ದಾರೆ. ಹೀಗಾಗಿ ಹೈಬ್ರಿಡ್ ಫಂಡ್‌ಗಳಿಗೆ ಹೆಚ್ಚಿನ ಹೂಡಿಕೆ ಹರಿದುಬಂದಿದೆ. ಅದರಲ್ಲೂ ಮುಖ್ಯವಾಗಿ ಮಲ್ಟಿ ಅಸೆಟ್ ಫಂಡ್‌ಗಳು ಹೆಚ್ಚಿನ ಜನಪ್ರಿಯತೆ ಗಳಿಸಿವೆ' ಎಂದು ಎಡೆಲ್ವೈಸ್ ಮ್ಯೂಚುವಲ್ ಫಂಡ್‌ನ ಸಿಇಒ ಹಾಗೂ ಎಂ.ಡಿ ರಾಧಿಕಾ ಗುಪ್ತಾ ಅವರು ಹೇಳಿದ್ದಾರೆ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಬಳಿ ಇರುವ ಮಾಹಿತಿ ಪ್ರಕಾರ, ಹೈಬ್ರಿಡ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಪೋಲಿಯೊಗಳ (ಖಾತೆ) ಸಂಖ್ಯೆಯು ಮಾರ್ಚ್‌ನಲ್ಲಿ 1.9 ಕೋಟಿಗೆ ಹೆಚ್ಚಳ ಕಂಡಿದೆ. ಇದು ಹಿಂದಿನ ವರ್ಷದ ಮಾರ್ಚ್‌ನಲ್ಲಿ 1.56 ಕೋಟಿ ಆಗಿತ್ತು. ಅಂದರೆ ಹೂಡಿಕೆದಾರರ ಖಾತೆಗಳ ಸಂಖ್ಯೆಯು 34 ಲಕ್ಷದಷ್ಟು ಜಾಸ್ತಿ ಆಗಿದೆ.

ಹೈಬ್ರಿಡ್ ಫಂಡ್‌ಗಳಲ್ಲಿ ಹೂಡಿಕೆ ಆಗಿರುವ ಒಟ್ಟು ಮೊತ್ತವು 2025ರ ಮಾರ್ಚ್‌ನಲ್ಲಿ ₹8.83 ಲಕ್ಷ ಕೋಟಿ ಇದ್ದದ್ದು 2026ರ ಮಾರ್ಚ್ ಹೊತ್ತಿಗೆ ₹10.35 ಲಕ್ಷ ಕೋಟಿಗೆ ತಲುಪಿದೆ. ಅಂದರೆ ಹೂಡಿಕೆ ಮೊತ್ತದ ಲೆಕ್ಕದಲ್ಲಿ ಶೇ 17ರಷ್ಟು ಹೆಚ್ಚಳ ಆಗಿದೆ.

ದೇಶದ ಬಂಡವಾಳ ಮಾರುಕಟ್ಟೆಗಳು 2025-26ನೆಯ ಹಣಕಾಸು ವರ್ಷದುದ್ದಕ್ಕೂ ಅಸ್ಥಿರತೆಯನ್ನು ಕಂಡಿವೆ. ಅಮೆರಿಕವು ವಿಧಿಸಿದ ಭಾರಿ ಪ್ರಮಾಣದ ಸುಂಕ, ರಷ್ಯಾ ಮತ್ತು ಉಕ್ರೇನ್ ನಡುವಿನ ಸಮರ, ಪಶ್ಚಿಮ ಏಷ್ಯಾದಲ್ಲಿನ ಸಮರ ಈ ಅಸ್ಥಿರತೆಗೆ ಕೊಡುಗೆ ನೀಡಿವೆ.

2025-26ರಲ್ಲಿ ಚಿನ್ನದ ಮೇಲಿನ ಹೂಡಿಕೆಯು ಈಕ್ವಿಟಿಗಳ ಮೇಲಿನ ಹೂಡಿಕೆಗಿಂತ ಹೆಚ್ಚಿನ ಪ್ರಮಾಣದ ಲಾಭ ತಂದುಕೊಟ್ಟಿತು. ಹೀಗಾಗಿ, ಚಿನ್ನದ ಮೇಲೆ ಕೂಡ ಹಣ ತೊಡಗಿಸಿದ ಹೈಬ್ರಿಡ್ ಫಂಡ್‌ಗಳಿಗೆ ಹೆಚ್ಚು ಪ್ರಯೋಜನ ಆಯಿತು.

'ಚಿನ್ನದ ಮೇಲಿನ ಹೂಡಿಕೆಯು ಹೆಚ್ಚಿನ ಗಳಿಕೆ ತಂದುಕೊಟ್ಟ ಪರಿಣಾಮವಾಗಿ, ಹಲವಾರು ಹೈಬ್ರಿಡ್ ಫಂಡ್‌ಗಳು ಸ್ಥಿರವಾದ ಹಾಗೂ ಹೆಚ್ಚಿನ ಮಟ್ಟದ ಗಳಿಕೆಯನ್ನು ತಂದುಕೊಟ್ಟವು' ಎಂದು ಆನಂದ ರಾಠಿ ವೆಲ್ತ್ ಲಿಮಿಟೆಡ್‌ನ ಜಂಟಿ ಸಿಇಒ ಫಿರೋಜ್ ಅಜೀಜ್ ಹೇಳಿದ್ದಾರೆ.

ಮದ್ಯ: ಪರಿಷ್ಕೃತ ಬೆಲೆಪಟ್ಟಿ ಬಿಡುಗಡೆ

ಒಂದನೇ ಪುಟದಿಂದ...

ಜಾನಿ ವಾಕರ್ ಬ್ಲ್ಯಾಕ್ ಲೇಬಲ್ ಸ್ಕಾಚ್ ವಿಸ್ಕಿ ₹1,105 (180/200 ಎಂಎಲ್) ಮತ್ತು ₹4,005 (700/750 ಎಂಎಲ್), ಜಾಕ್ ಡೇನಿಯಲ್ಸ್ ಟೆನ್ನೆಸ್ಸೀ ವಿಸ್ಕಿ ₹1,085 (180/200 ಎಂಎಲ್) ಮತ್ತು ₹3,570 (700/750 ಎಂಎಲ್).

ಬಿಯರ್: ಬಡ್‌ವೈಸರ್ ಮ್ಯಾಗ್ನಮ್ ₹250 (650 ಎಂಎಲ್), ಕಿಂಗ್‌ಫಿಶರ್ ಪ್ರೀಮಿಯಂ ಲಾರ್ಜ್ ₹110 (650 ಎಂಎಲ್), ಕಿಂಗ್‌ಫಿಶರ್ ಸ್ಟ್ರಾಂಗ್ ಪ್ರೀಮಿಯಂ ₹180 (650 ಎಂಎಲ್), ಕಿಂಗ್‌ಫಿಶರ್ ಅಲ್ಟ್ರಾ ಮ್ಯಾಕ್ಸ್ ಪ್ರೀಮಿಯಂ ₹245 (650 ಎಂಎಲ್), ಟುಬೋರ್ಗ್ ಸ್ಟ್ರಾಂಗ್ ಪ್ರೀಮಿಯಂ ₹170 (650 ಎಂಎಲ್), ನಾಕ್‌ಔಟ್ ಹೈಪಂಚ್ ₹175 (650 ಎಂಎಲ್).

ಪರೀಕ್ಷಾ ಅಕ್ರಮ: ನೀಟ್‌ನಿಂದ ಕರ್ನಾಟಕ ಹೊರಬರಬೇಕೇ?
ಬೇಕು ಬೇಡ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಯುಎಇ: ಡ್ರೋನ್ ದಾಳಿಯಿಂದ ಬೆಂಕಿ



ಅಬುಧಾಬಿ (ಎಎಫ್‌ಪಿ): ಯುಎಇಯ ಪರಮಾಣು ವಿದ್ಯುತ್ ಸ್ಥಾವರದ ಬಳಿ ಭಾನುವಾರ ಡ್ರೋನ್ ದಾಳಿ ನಡೆದಿದ್ದು, ಬೆಂಕಿ ಕಾಣಿಸಿಕೊಂಡಿದೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ ಮತ್ತು ವಿಕಿರಣ ಸೋರಿಕೆಯ ಅಪಾಯ ಉಂಟಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ದೇಶದ ಪಶ್ಚಿಮ ಗಡಿ ಭಾಗದಿಂದ ಮೂರು ಡ್ರೋನ್‌ಗಳು ಹಾರಿ ಬಂದಿದ್ದು, ಅವುಗಳಲ್ಲಿ ಒಂದು ಬರಕಾ ಪರಮಾಣು ವಿದ್ಯುತ್ ಸ್ಥಾವರದ ಒಳ ಆವರಣದ ಹೊರಭಾಗದಲ್ಲಿರುವ ಜನರೇಟರ್‌ಗೆ ಅಪ್ಪಳಿಸಿ ಬೆಂಕಿ ಹೊತ್ತಿಕೊಂಡಿದೆ' ಎಂದು ಯುಎಇಯ ರಕ್ಷಣಾ ಸಚಿವಾಲಯ ತಿಳಿಸಿದೆ.

'ದಾಳಿಯ ಮೂಲವನ್ನು ಪತ್ತೆಹಚ್ಚಲು ಪ್ರಯತ್ನಿಸಲಾಗುತ್ತಿದ್ದು, ತನಿಖೆ ಪೂರ್ಣಗೊಂಡ ಬಳಿಕ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಲಾಗುವುದು' ಎಂದು ಹೇಳಿದೆ.

ಇರಾಕ್‌ನಲ್ಲಿರುವ ಇರಾನ್ ಬೆಂಬಲಿತ ಸಶಸ್ತ್ರ ಬಂಡುಕೋರರು ಮತ್ತು ಯೆಮನ್‌ನಲ್ಲಿರುವ ಇರಾನ್ ಬೆಂಬಲಿತ ಹೂಥಿ ಬಂಡುಕೋರರು ಡ್ರೋನ್‌ಗಳನ್ನು ಹೊಂದಿದ್ದಾರೆ. ಆದರೆ, ಈ ದಾಳಿಯ ಹೊಣೆಯನ್ನು ಯಾರೂ ಹೊತ್ತುಕೊಂಡಿಲ್ಲ.

ಯುಎಇ ರಾಜಧಾನಿ ಅಬುಧಾಬಿಯಿಂದ 200 ಕಿ.ಮೀ. ದೂರದಲ್ಲಿರುವ ಬರಾಕ್ ಪರಮಾಣು ವಿದ್ಯುತ್ ಸ್ಥಾವರ ಸೌದಿ ಅರೇಬಿಯಾ ಮತ್ತು ಕತಾರ್‌ನ ಗಡಿಯ ಸಮೀಪದಲ್ಲಿದೆ. ಸ್ಥಾವರವು 2020ರಲ್ಲಿ ಕಾರ್ಯಾರಂಭ ಮಾಡಿದೆ.

ಸಿಎನ್‌ಜಿ ದರ ಕೆ.ಜಿಗೆ ₹1 ಹೆಚ್ಚಳ

ನವದೆಹಲಿ (ಪಿಟಿಐ): ಸಾಂದ್ರೀಕೃತ ನೈಸರ್ಗಿಕ ಅನಿಲದ (ಸಿಎನ್‌ಜಿ) ದರವನ್ನು ಪ್ರತಿ ಕೆ.ಜಿಗೆ ಮತ್ತೆ ₹1ರಷ್ಟು ಹೆಚ್ಚಿಸಲಾಗಿದೆ. ಪರಿಷ್ಕೃತ ದರವು ಭಾನುವಾರದಿಂದಲೇ ಜಾರಿಗೆ ಬಂದಿದೆ.

ಇದು ವಾರದ ಅವಧಿಯಲ್ಲಿ ಎರಡನೇ ಬೆಲೆ ಏರಿಕೆ, ಗುರುವಾರವಷ್ಟೇ ಬೆಲೆಯನ್ನು ಕೆ.ಜಿಗೆ ₹2ರಷ್ಟು ಹೆಚ್ಚಿಸಲಾಗಿತ್ತು.

ದೆಹಲಿಯಲ್ಲಿ ಪ್ರಸ್ತುತ ಸಿಎನ್‌ಜಿ ದರ ಕೆ.ಜಿ.ಗೆ ₹80.09 ಆಗಿದೆ ಎಂದು ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ ತಿಳಿಸಿದೆ.

ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್‌ನ ಕಾರ್ಯವ್ಯಾಪ್ತಿಯಲ್ಲಿ ಸಿಎನ್‌ಜಿ ದರ ಹೆಚ್ಚಳ ಆಗಿದೆ ಎಂದು ಕಂಪನಿ ತಿಳಿಸಿದೆ. ಇಂದ್ರಪ್ರಸ್ಥ ಕಂಪನಿಯು ಉತ್ತರ ಭಾರತದಲ್ಲಿ ಹೆಚ್ಚಿನ ಮಾರುಕಟ್ಟೆಯನ್ನು ಹೊಂದಿದೆ.

'ಒಪ್ಪಂದಕ್ಕೆ ಬರಲು ಅಮೆರಿಕ ಸೋತಿದೆ'

ಟೆಹರಾನ್ (ಎಎಫ್‌ಪಿ): 'ಯುದ್ಧ ಅಂತ್ಯಗೊಳಿಸಲು ಇರಾನ್‌ನ ಮುಂದಿಟ್ಟಿದ್ದ ಪ್ರಸ್ತಾವಗಳಿಗೆ ಸಂಬಂಧಿಸಿ ಅಮೆರಿಕವು ಯಾವುದೇ ಒಂದು ಅಂಶಕ್ಕೂ ಒಪ್ಪಿಕೊಳ್ಳುವಂತೆ ಕಾಣುತ್ತಿಲ್ಲ. ಒಪ್ಪಂದಕ್ಕೆ ಬರಲು ಅಮೆರಿಕವು ಸೋತಿದೆ' ಎಂದು ಇರಾನ್‌ನ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ಒಂದು ಅಣು ಸ್ಥಾವರ ಮಾತ್ರವೇ ಕಾರ್ಯನಿರ್ವಹಿಸಲು ಅವಕಾಶ, ತನಗೆ ಯುರೇನಿಯಂ ವರ್ಗಾಯಿಸಬೇಕು ಎನ್ನುವುದೂ ಸೇರಿ ಐದು ಅಂಶಗಳ ಬೇಡಿಕೆಯನ್ನು ಅಮೆರಿಕ ಮುಂದಿಟ್ಟಿದೆ ಎಂದು 'ಫಾರ್ಸ್ ನ್ಯೂಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ. 'ಮುಟ್ಟುಗೋಲು ಹಾಕಿಕೊಂಡಿರುವ ನಮ್ಮ ಆಸ್ತಿಯ ಶೇ 25ರಷ್ಟನ್ನಾದರೂ ನೀಡಿ ಅಥವಾ ಫೆಬ್ರುವರಿ 28ರಿಂದ ಆರಂಭವಾದ ಯುದ್ಧದ ಕಾರಣ ಆದ ನಷ್ಟವನ್ನಾದರೂ ಭರಿಸಿ' ಎಂದು ಇರಾನ್ ಕೇಳಿತ್ತು. ಇದನ್ನೂ ಅಮೆರಿಕ ಒಪ್ಪಿಕೊಂಡಿಲ್ಲ. ಅಮೆರಿಕವು ಯಾವುದೇ ಪರಿಣಾಮಕಾರಿ ವಿನಾಯಿತಿ ನೀಡಿಲ್ಲ. ಯುದ್ಧ ಮಾಡಿ ವಿನಾಯಿತಿ ಪಡೆದುಕೊಳ್ಳಲು ಅದಕ್ಕೆ ಸಾಧ್ಯವಾಗಿಲ್ಲ. ಇದು ಸಂಧಾನಕ್ಕೆ ಬಿಕ್ಕಟ್ಟು ಎದುರಾಗಲು ಕಾರಣವಾಗಿದೆ ಎಂದು ಇರಾನ್ ತಿಳಿಸಿದೆ ಎಂದು 'ಮೆಹರ್ ನ್ಯೂಸ್' ವರದಿ ಮಾಡಿದೆ.

ದ್ವಿವೇದಿ ಹೇಳಿಕೆಗೆ ಪಾಕ್ ಟೀಕೆ



ಉಪೇಂದ್ರ ದ್ವಿವೇದಿ

ಇಸ್ಲಾಮಾಬಾದ್ (ಪಿಟಿಐ): ಭಾರತವು ಪಾಕಿಸ್ತಾನವನ್ನು ಗೌರವಿಸಬೇಕು ಹಾಗೂ ನಮ್ಮೊಂದಿಗೆ ಸಹಬಾಳ್ವೆಯಿಂದ ಇರುವುದನ್ನು ಕಲಿಯಬೇಕು ಎಂದು ಪಾಕಿಸ್ತಾನ ಸೇನೆ ಹೇಳಿದೆ.

ಭಾರತೀಯ ಸೇನಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರ ಇತ್ತೀಚಿನ ಹೇಳಿಕೆಗಳನ್ನು ಟೀಕಿಸಿರುವ ಸೇನೆಯು, 'ಪಾಕಿಸ್ತಾನವನ್ನು ಗುರಿಯಾಗಿಸುವ ಯಾವುದೇ ಕ್ರಮ ಕೈಗೊಂಡಲ್ಲಿ, ಪರಿಣಾಮವನ್ನು ಎದುರಿಸಬೇಕಾಗುತ್ತದೆ' ಎಂದೂ ಹೇಳಿದೆ.

ಪಾಕಿಸ್ತಾನವು ಭಯೋತ್ಪಾದಕರಿಗೆ ಆಶ್ರಯ ನೀಡಿ, ಭಾರತದ ವಿರುದ್ಧ ಕಾರ್ಯಾಚರಣೆ ನಡೆಸುವುದನ್ನು ಮುಂದುವರಿಸಿದರೆ, ಅದು ಭೂಗೋಳದ ಭಾಗವಾಗಿರಬೇಕೇ ಅಥವಾ ಇತಿಹಾಸದಲ್ಲಿ ಉಳಿಯಬೇಕೇ? ಬೇಡವೇ ಎಂಬುದನ್ನು ನಿರ್ಧರಿಸಲಿದ್ದೇವೆ' ಎಂದು ದ್ವಿವೇದಿ ಅವರು ಎಚ್ಚರಿಕೆ ನೀಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಪಾಕಿಸ್ತಾನ ಸೇನೆಯು, 'ದ್ವಿವೇದಿ ಹೇಳಿಕೆ ಪ್ರಚೋದನಕಾರಿಯಾಗಿದ್ದು, ಅಣ್ವಸ್ತ್ರ ಹೊಂದಿರುವ ದೇಶಗಳು ಜವಾಬ್ದಾರಿಯುತವಾಗಿ ಮತ್ತು ಸಂಯಮದಿಂದ ವರ್ತಿಸಬೇಕು. ಅಣ್ವಸ್ತ್ರ ಹೊಂದಿರುವ ನೆರೆಯ ದೇಶವನ್ನು ಭೌಗೋಳಿಕವಾಗಿ ನಾಶ ಮಾಡುವ ಬೆದರಿಕೆ ಹಾಕುವುದು ಅರಿವಿನ ಕೊರತೆಯಾಗಿದೆ' ಎಂದಿದೆ.

'ಪ್ಯಾನಿಕ್ ಬಟನ್: ಖಚಿತಪಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾರ್ವಜನಿಕ ಸೇವಾ ವಾಹನಗಳಲ್ಲಿ ವಾಹನ ಸ್ಥಳ ಪಥ ಸಾಧನಗಳು (ವಿಎಲ್‌ಟಿಡಿ) ಹಾಗೂ ಪ್ಯಾನಿಕ್ ಬಟನ್‌ಗಳನ್ನು ಸಮಯಕ್ಕೆ ಅನುಗುಣವಾಗಿ ಮತ್ತು ಪರಿಶೀಲಿಸಬಹುದಾದ ರೀತಿಯಲ್ಲಿ ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವಂತೆ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ.

ಶೇ 1ಕ್ಕಿಂತ ಕಡಿಮೆ ಸಾರಿಗೆ ವಾಹನಗಳು ವಿಎಲ್‌ಟಿಡಿ ಹೊಂದಿವೆ ಎಂಬುದು ಆತಂಕಕಾರಿ ಸಂಗತಿ. ಈ ಸಾಧನವು ಪ್ರಯಾಣಿಕರ ಸುರಕ್ಷತೆಯನ್ನು ಖಾತ್ರಿಪಡಿಸಲಿದೆ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠವು ಹೇಳಿದೆ.

'ಕೇಂದ್ರ ಮೋಟಾರು ವಾಹನ ನಿಯಮಗಳು-1989'ರ (ಸಿಎಂವಿಆರ್) ಪೈಕಿ 125 'ಎಚ್' ಅನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಆದೇಶಿಸಿರುವ ನ್ಯಾಯಾಲಯವು, ವಿಎಲ್‌ಟಿಡಿ ಹಾಗೂ 'ಪ್ಯಾನಿಕ್ ಬಟನ್'ಗಳನ್ನು ಪರಿಶೀಲಿಸದೆ ಯಾವುದೇ ಸಾರ್ವಜನಿಕ ಸೇವಾ ವಾಹನಗಳಿಗೆ ಸೆಕ್ಷನ್ 56ರ ಅಡಿ ಫಿಟ್ನೆಸ್ ಪ್ರಮಾಣಪತ್ರ ಅಥವಾ ಎಂವಿ ಕಾಯ್ದೆಯ ಸೆಕ್ಷನ್ 66ರ ಅಡಿಯಲ್ಲಿ ಅನುಮತಿ ನೀಡಬಾರದು ಎಂದು ನಿರ್ದೇಶಿಸಿದೆ.

ಸಿಎಂವಿಆರ್‌ನ ನಿಯಮ 125 ಎಚ್‌ನ ಉದ್ದೇಶಕ್ಕೆ ಅನುಗುಣವಾಗಿ 2018ರ ಡಿ.31ರವರೆಗೆ ನೋಂದಾಯಿಸಲಾದ ಸಾರ್ವಜನಿಕ ಸೇವಾ ವಾಹನಗಳಲ್ಲಿ ವಿಎಲ್‌ಟಿಡಿಗಳು ಹಾಗೂ 'ಪ್ಯಾನಿಕ್ ಬಟನ್'ಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವಂತೆ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡುತ್ತೇವೆ. ಇದು ಪ್ರಯಾಣಿಕರ ಸುರಕ್ಷತೆಯನ್ನು ಹೆಚ್ಚಿಸಲಿದೆ ಎಂದು ಪೀಠ ಹೇಳಿದೆ.

ಅಮಿಕಸ್ ಕ್ಯೂರಿ, ಹಿರಿಯ ವಕೀಲ ಗೌರವ್ ಅಗರ್ವಾಲ್ ನೀಡಿದ ಸಲಹೆ ಪರಿಗಣಿಸಿರುವ ನ್ಯಾಯಪೀಠವು ಈ ಆದೇಶವನ್ನು ನೀಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರವಾಸ
Travel
ಹೆಸರಾಂತ ಏಷ್ಯನ್ ಟ್ರಾವೆಲ್ ಏಜೆನ್ಸಿ ವತಿಯಿಂದ 01.06.2026 ಚಾರ್‌ಧಾಮ್ ಪ್ರವಾಸ. 19.06.2026. ನೇಪಾಳ, ಮುಕ್ತಿನಾಥ್, ಪೋಕ್ರಾ, ಮನೋಕಾಮನ. 05.07.2026 ಅಮರನಾಥ್ ಹಿಮಲಿಂಗ ದರ್ಶನ. ಸಂಪರ್ಕಿಸಿ: 84310888138, 8317446683, 9686708171.

ಉದ್ಯೋಗಾವಕಾಶ
Part-Time Jobs
ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆ ವಿದ್ಯಾರ್ಹತೆಯಿಲ್ಲದವರಿಗೂ. 20,000 / 25,000 ಕೊರಿಯರ್, 7090177446

General
ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಹೊಸಬಾಳೆ ಹೇಳಿಕೆಗೆ ಮೆಹಬೂಬ ಮುಫ್ತಿ ಬೆಂಬಲ

ಶ್ರೀನಗರ (ಪಿಟಿಐ): ಆರ್‌ಆರ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆಗೆ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬ ಮುಫ್ತಿ ಬೆಂಬಲ ವ್ಯಕ್ತಪಡಿಸಿದ್ದಾರೆ.

'ಪಾಕಿಸ್ತಾನದ ಸೇನೆ ಮತ್ತು ರಾಜಕೀಯ ನಾಯಕತ್ವವು ಭಾರತದ ವಿಶ್ವಾಸವನ್ನು ಕಳೆದುಕೊಂಡಿದೆ. ಭಾರತ ಮತ್ತು ಪಾಕಿಸ್ತಾನದ ಜನರ ಪರಸ್ಪರ ಸಂಪರ್ಕದಿಂದ ಉಭಯ ದೇಶಗಳ ನಡುವಿನ ಬಿಕ್ಕಟ್ಟು ಬಗೆಹರಿಯಬಹುದು' ಎಂದು ಹೊಸಬಾಳೆ ಹೇಳಿಕೆ ನೀಡಿದ್ದರು.

'ಕಾಶ್ಮೀರದ ಸಮಸ್ಯೆಗೆ ಪರಿಹಾರ ಹಾಗೂ ಮಾತುಕತೆಯೂ ಸಂವಿಧಾನಾತ್ಮಕ ಚೌಕಟ್ಟಿನೊಳಗಿದೆ. ನಾವು ಏನನ್ನು ಸಾಧಿಸಬೇಕೋ ಅದನ್ನು (ಜಮ್ಮು ಕಾಶ್ಮೀರ) ಹಾಗೂ ದೆಹಲಿಯಿಂದ ಮಾಡಬೇಕಿದೆ. ನಾವು ಮಾತುಕತೆಯಲ್ಲಿ ನಂಬಿಕೆ ಇಟ್ಟಿದ್ದು, ಘನತೆಯಿಂದ ಶಾಂತಿಯನ್ನು ಎದುರು ನೋಡುತ್ತಿದ್ದೇನೆ' ಎಂದು ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮೆಹಬೂಬ ತಿಳಿಸಿದ್ದಾರೆ.

'ಹೊಸಬಾಳೆಯವರು ಈಗ ಏನು ಹೇಳಿದ್ದಾರೋ ಅದನ್ನು ಪಿಡಿಪಿಯ ಸಂಸ್ಥಾಪಕರಾದ ಮೊಹಮ್ಮದ್ ಸಯೀದ್ ಅವರು ಕೊನೆಯ ಉಸಿರಿರುವವರೆಗೂ ಪ್ರತಿಪಾದಿಸಿದರು. ಕಾಶ್ಮೀರದಿಂದ ಇನ್ನೊಂದು ಬದಿಗೆ ಹೋಗುವ ರಸ್ತೆಯನ್ನು ತೆರೆಯಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಹೆಸರು ಮಾಡಬೇಕು ಎಂದು ಬಯಸಿದರೆ, ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಬಹುದು. ಈ ಪ್ರಕ್ರಿಯೆಯಲ್ಲಿ ಪಾಕಿಸ್ತಾನವು ಭಾಗಿಯಾಗಬೇಕು' ಎಂದು ಹೇಳಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)


	ಬೆಂಗಳೂರು	ಮೈಸೂರು:
100 ಕ್ಕೆ	₹600	₹610
12 ಕ್ಕೆ	₹86	

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹402-685
ದ್ವಿತಳಿ (ಬಿ.ವಿ)	₹435-814

ಖಾಸಗಿ ಕಂಪನಿಗಳು, ಸಂಸ್ಥೆಗಳಿಗೆ ದೆಹಲಿ ಸರ್ಕಾರ ಮನವಿ

'ವರ್ಕ್ ಫ್ರಂ ಹೋಂ ನೀತಿ ಅಳವಡಿಸಿಕೊಳ್ಳಿ'



ನವದೆಹಲಿ (ಪಿಟಿಐ): ವಾರಕ್ಕೆ ಎರಡು ದಿನ ಮನೆಯಿಂದ ಕೆಲಸ (ವರ್ಕ್ ಫ್ರಂ ಹೋಂ) ಮತ್ತು ಕಚೇರಿ ಸಮಯ ಬದಲಾವಣೆ ನೀತಿಯನ್ನು ಅಳವಡಿಸಿಕೊಳ್ಳುವಂತೆ ಖಾಸಗಿ ಕಂಪನಿಗಳು ಮತ್ತು ಸಂಸ್ಥೆಗಳಿಗೆ ದೆಹಲಿ ಸರ್ಕಾರ ಸಲಹೆ ನೀಡಿದೆ.

ಜಾಗತಿಕ ಅನಿಶ್ಚಿತತೆಯಿಂದಾಗಿ ಬಿಕ್ಕಟ್ಟು ಎದುರಾಗಿದ್ದು, ಇಂಧನ ಉಳಿತಾಯಕ್ಕಾಗಿ ಕಾರ್ ಪೂಲಿಂಗ್ ಮತ್ತು ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಉದ್ಯೋಗಿಗಳಲ್ಲಿ ಮನವಿ ಮಾಡಿದೆ.

ಆರೋಗ್ಯ, ವಿದ್ಯುತ್, ನೀರು, ನೈರ್ಮಲ್ಯ ಮತ್ತಿತರ ಅತ್ಯಗತ್ಯ ಮತ್ತು ತುರ್ತು ಸೇವೆ ಸಲ್ಲಿಸುವ ಖಾಸಗಿ ಸಂಸ್ಥೆಗಳು ಈ ಮನವಿಯಿಂದ ಹೊರತಾಗಿವೆ ಪ್ರಕಟಣೆಯಲ್ಲಿ ತಿಳಿಸಿದೆ.

ಕಾರ್ಮಿಕ ಇಲಾಖೆ ಭಾನುವಾರ ಬಿಡುಗಡೆ ಮಾಡಿರುವ ಮಾರ್ಗಸೂಚಿಯಲ್ಲಿ, ಜಾಗತಿಕ ಅನಿಶ್ಚಿತತೆ ಸಂದರ್ಭದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಸಿಎನ್‌ಜಿಯಂತಹ ಇಂಧನಗಳ ಮಿತ ಬಳಕೆಯು ಅತ್ಯಗತ್ಯವಾಗಿದೆ ಎಂದು ಒತ್ತಿಹೇಳಿದೆ.

ಇದಕ್ಕೂ ಮುನ್ನ, ಮುಖ್ಯಮಂತ್ರಿ ರೇಖಾ ಗುಪ್ತಾ ಅವರು, ರಾಜ್ಯ ಸರ್ಕಾರಿ ನೌಕರರು ವಾರಕ್ಕೆ ಎರಡು ದಿನ ಮನೆಯಿಂದಲೇ ಕೆಲಸ ಮಾಡಲು ಸೂಚಿಸಿದ್ದರು ಮತ್ತು ಸಾರ್ವಜನಿಕ ಸಾರಿಗೆ ಬಳಸಲು ಸೂಚಿಸಿದ್ದರು.

ಹೆಚ್ಚುವರಿ ಮೆಟ್ರೊ ಸೇವೆ

ನವದೆಹಲಿ (ಪಿಟಿಐ): ಜನರು ಖಾಸಗಿ ವಾಹನಗಳ ಹೊರತಾಗಿ ಸಾರ್ವಜನಿಕ ಸಾರಿಗೆಯನ್ನು ಬಳಸಲು ಪ್ರೋತ್ಸಾಹ ನೀಡುವ ಅನೇಕ ಕ್ರಮಗಳನ್ನು ದೆಹಲಿ ಮೆಟ್ರೊ ರೈಲು ನಿಗಮ (ಡಿಎಂಆರ್‌ಸಿ) ಘೋಷಿಸಿದೆ.

ಪ್ರತಿ ದಿನ ಹೆಚ್ಚುವರಿ 24 ಟ್ರಿಪ್, ಹೆಚ್ಚುವರಿ ಭದ್ರತಾ ಸಿಬ್ಬಂದಿ ನಿಯೋಜನೆ, ಟಿಕೆಟ್ ಕೌಂಟರ್‌ಗಳ ವಿಸ್ತರಣೆ ಸೇರಿದಂತೆ ಹಲವು ಕ್ರಮಗಳನ್ನು ಪ್ರಕಟಿಸಿದೆ.

'ಮೇ 18ರಿಂದ ಪ್ರತಿ ಸೋಮವಾರ ಆರು ಹೆಚ್ಚುವರಿ ರೈಲುಗಳ ಮೂಲಕ ಹೆಚ್ಚುವರಿ 24 ಟ್ರಿಪ್ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ವಾರದ ಇತರ ದಿನವೂ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಇಂಥದ್ದೇ ಕ್ರಮ ಕೈಗೊಳ್ಳಲಾಗುವುದು' ಎಂದು ಡಿಎಂಆರ್‌ಸಿ ತಿಳಿಸಿದೆ.


ಉಕ್ರೇನ್ ದಾಳಿ: ರಷ್ಯಾದಲ್ಲಿ ಭಾರತೀಯ ಸಾವು

ಮಾಸ್ಕೊ (ಪಿಟಿಐ): ರಷ್ಯಾದ ಮಾಸ್ಕೊ ಮೇಲೆ ಉಕ್ರೇನ್ ನಡೆಸಿದ ಡ್ರೋನ್ ದಾಳಿಯಲ್ಲಿ ಒಬ್ಬ ಭಾರತೀಯ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ ಎಂದು ಅಲ್ಲಿನ ಭಾರತೀಯ ರಾಯಭಾರ ಕಚೇರಿ ಭಾನುವಾರ ತಿಳಿಸಿದೆ.

ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಕಚೇರಿಯು, ಅಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ತೆರಳಿ, ಗಾಯಾಳುಗಳ ಆರೋಗ್ಯ ವಿಚಾರಿಸಿರುವುದಾಗಿ ತಿಳಿಸಿದೆ.

ರಾತ್ರಿಯಿಡೀ ಉಕ್ರೇನ್ 600 ಡ್ರೋನ್‌ಗಳಿಂದ ದಾಳಿ ನಡೆಸಿದ್ದು, ಇದರಲ್ಲಿ ಒಟ್ಟು ಮೂವರು ಸಾವಿಗೀಡಾಗಿದ್ದಾರೆ. ಇತ್ತೀಚೆಗೆ ಉಕ್ರೇನ್ ರಾಜಧಾನಿ ಕೀವ್‌ನ ಮೇಲೆ ರಷ್ಯಾ ನಡೆಸಿದ ಡ್ರೋನ್ ಹಾಗೂ ಕ್ಷಿಪಣಿ ದಾಳಿಯಲ್ಲಿ 24 ಮಂದಿ ಸಾವಿಗೀಡಾಗಿದ್ದಾರೆ.

ಬೇಲ್ ಸಿಗದಿದ್ದರೆ ಜೈಲ್ ಎಂದ ಶಿವಣ್ಣ


ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್ ನಟನೆಯ 'ಬೇಲ್' ಚಿತ್ರದ ಫಸ್ಟ್‌ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿಜಿ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿರುವ ಶಿವಣ್ಣ ವಿಭಿನ್ನ ಲುಕ್‌ನಿಂದ ಗಮನ ಸೆಳೆಯುತ್ತಿದ್ದಾರೆ. ಪವನ್ ಒಡೆಯರ್ ನಿರ್ದೇಶನದ ಚಿತ್ರದ ಚಿತ್ರೀಕರಣ ಕೊನೆ ಹಂತದಲ್ಲಿದೆ.

'ಬೇಲ್ ಸಿಗದಿದ್ದರೆ ಜೈಲೇ ಗತಿ ಎನ್ನುವ ಪರಿಕಲ್ಪನೆ ಚಿತ್ರವಿದು. ಆ್ಯಕ್ಷನ್, ಮಾಸ್ ಅಂಶಗಳ ಜತೆಗೆ ಭಾವುಕ ಪಯಣವಿದೆ. ವರಮಹಾಲಕ್ಷ್ಮಿ ಹಬ್ಬಕ್ಕೆ ಚಿತ್ರ ಬಿಡುಗಡೆ ಆಲೋಚನೆಯಿದೆ' ಎಂದಿದ್ದಾರೆ ಪವನ್.

ಕೆವಿಎನ್ ಸಂಸ್ಥೆ ನಿರ್ಮಾಣ ಮಾಡುತ್ತಿರುವ ಚಿತ್ರದಲ್ಲಿ ಜಯರಾಮ್, ದೀಕ್ಷಿತ್ ಶೆಟ್ಟಿ, ಸಾಯಿಕುಮಾರ್ ಮುಂತಾದವರು ಪ್ರಮುಖ ಪಾತ್ರಗಳಲ್ಲಿದ್ದಾರೆ. ಶಿವಣ್ಣನ ಫಸ್ಟ್‌ಲುಕ್ ಟೀಸರ್‌ನಲ್ಲಿ 'ನೀನು ಹಚ್ಚಿರುವ ಬೆಂಕಿ ಬರೀ ಊರನ್ನಲ್ಲ, ದೇಶವನ್ನು ಸುಡುತ್ತಿದೆ' ಎಂಬ ಮಾತು ಬರುತ್ತದೆ. ನಾಯಕ ಮತ್ತು ಖಳರ ಗುಂಪಿನ ನಡುವಿನ ಭರ್ಜರಿ ಆ್ಯಕ್ಷನ್ ಸಿನಿಮಾ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ವೈದ್ಯ ಛಾಯಾಚಿತ್ರಗ್ರಹಣ, ಶಶಾಂಕ್ ನಾರಾಯಣ್ ಸಂಕಲನ ಚಿತ್ರಕ್ಕಿದೆ.


ಹೊಸಬರ ರಗಡೋ ರಕ್ಕಿ

ಬಹುತೇಕ ಹೊಸಬರಿಂದಲೇ ಕೂಡಿರುವ 'ರಕ್ಕಿ' ಚಿತ್ರದ 'ರಗಡೋ ರಕ್ಕಿ' ಹಾಡು ಇತ್ತೀಚೆಗಷ್ಟೆ ಬಿಡುಗಡೆಯಾಗಿದೆ. ವೆಂಕಟ್ ಭಾರದ್ವಾಜ್ ಕಥೆ, ಚಿತ್ರಕಥೆ ಮತ್ತು ನಿರ್ದೇಶನವಿದೆ.

ಈ ಹಾಡಿಗೆ ಲೋಕಿ ತವಸ್ಯ ಸಂಗೀತ ಮತ್ತು ಸಾಹಿತ್ಯವಿದೆ. ಕಂಬಿರಾಜು ಅವರ ನೃತ್ಯ ಸಂಯೋಜನೆ, ಐ ಸಾಕ್ ಪ್ರಭಾಕರ್ ಛಾಯಾಚಿತ್ರಗ್ರಹಣವಿದೆ. 'ಈ ತಲೆಮಾರಿನ ಪ್ರೇಮಕಥೆಯ ಚಿತ್ರ. ಸದ್ಯ ಸೆನ್ಸಾರ್ ಹಂತದಲ್ಲಿದ್ದು, ಶೀಘ್ರದಲ್ಲೇ ಚಿತ್ರ ತೆರೆಗೆ ಬರಲಿದೆ. ಸಾಹಸ , ಭಾವನೆ, ಸಂಗೀತ, ಪ್ರೇಮ ಮತ್ತು ಮಾಸ್ ಅಂಶಗಳಿಂದ ಕೂಡಿದ ಕಮರ್ಷಿಯಲ್ ಎಂಟರ್‌ಟೈನರ್ ಚಿತ್ರ' ಎಂದಿದ್ದಾರೆ ನಿರ್ದೇಶಕ.

ರಕ್ಕಿ ಸುರೇಶ್ ಚಿತ್ರದ ನಾಯಕ. ಸುರೇಶ್ ಸಾಲಿಗ್ರಾಮ ಬಂಡವಾಳ ಹೂಡಿದ್ದಾರೆ. ಪಲ್ಲವಿ ಮಂಜುನಾಥ್, ಆಶಿಕಾ ಸೋಮಶೇಖರ್, ಬಿ.ಸರೇಶ್, ಸಂಪತ್ ಮೈತ್ರೇಯ, ರಮೇಶ್ ಪಂಡಿತ್, ಬಲ ರಾಜವಾಡಿ, ಜಿ.ಜಿ, ಹರಿಣಿ ಶ್ರೀಕಾಂತ್ ಮುಂತಾದವರು ಚಿತ್ರದಲ್ಲಿದ್ದಾರೆ.


ರಕ್ಕಿ ಸುರೇಶ್


ಪ್ರವೀಣ್ ತೇಜ್


'ಗೀಕ್'ನಲ್ಲಿ ಪ್ರವೀಣ್ ತೇಜ್

ಪ್ರವೀಣ್ ತೇಜ್, ಚೈತ್ರಾ ಆಚಾರ್ ಮುಖ್ಯಭೂಮಿಕೆಯಲ್ಲಿರುವ 'ಗೀಕ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸೈಬರ್ ಕ್ರೈಂ ಜಾನರ್ ಕಥೆ ಹೊಂದಿರುವ ಚಿತ್ರಕ್ಕೆ ಡಿ.ಹರಿಪ್ರಕಾಶ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ನಾನೊಬ್ಬ ಸಾಫ್ಟ್‌ವೇರ್ ಎಂಜಿನಿಯರ್. ಈ ಹಿಂದೆ ಕಿರುಚಿತ್ರಗಳನ್ನು ನಿರ್ದೇಶಿಸಿದ್ದೆ. ಇದು ನನ್ನ ಚೊಚ್ಚಲ ಸಿನಿಮಾ. ಮೊಬೈಲ್ ಸಂಬಂಧಿತ ಆ್ಯಪ್‌ಗಳು ಹಾಗೂ ಡೇಟಾ ದುರುಪಯೋಗಪಡಿಸಿಕೊಳ್ಳುತ್ತಿರುವ ಕುರಿತ ಕಥಾಹಂದರ ಹೊಂದಿರುವ ಸಿನಿಮಾವಿದು. ಸಸ್ಪೆನ್ಸ್-ಥ್ರಿಲ್ಲರ್ ಅಂಶಗಳೂ ಇವೆ. ಬಹುತೇಕ ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ. ಚಿತ್ರೀಕರಣ ಮುಕ್ತಾಯಗೊಂಡಿದ್ದು, ಸದ್ಯ ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ' ಎಂದರು ನಿರ್ದೇಶಕ.

ಚಿತ್ರೋದ್ಯಮದ ಐವತ್ತಕ್ಕೂ ಹೆಚ್ಚು ತಾರೆಯರು ಸಾಮಾಜಿಕ ಜಾಲತಾಣಗಳಲ್ಲಿ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದ್ದಾರೆ.

ಕಿರಣ್ ಶ್ರೀನಿವಾಸ್, ವಿರಾನಿಕಾ ಶೆಟ್ಟಿ ಪ್ರಮುಖ ಪಾತ್ರದಲ್ಲಿದ್ದಾರೆ. ಎಸ್.ವಿ.ಎಂ ಪ್ರೊಡಕ್ಷನ್ಸ್ ಹಾಗೂ ಹರಿಪ್ರಕಾಶ್ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಸಂದೀಪ್ ನಾಗರಾಜ್ ಹಾಗೂ ಪ್ರಿಯಾಂಕಾ ಜಂಟಿಯಾಗಿ ಈ ಸಿನಿಮಾಕ್ಕೆ ಬಂಡವಾಳ ಹೂಡಿದ್ದಾರೆ. ಕೀರ್ತನ್ ಪೂಜಾರಿ ಛಾಯಾಚಿತ್ರಗ್ರಹಣ, ಜೋ ಕೋಸ್ಟಾ ಸಂಗೀತ ಸಂಯೋಜನೆ, ಶಶಾಂಕ್ ನಾರಾಯಣ್ ಸಂಕಲನ ಚಿತ್ರಕ್ಕಿದೆ.


ಸಾತ್ವಿಕಾ ರಾವ್, ಶೀಲಮ್

ಜೂ.26ಕ್ಕೆ 'ಮೋಡ ಕವಿದ ವಾತಾವರಣ'

ಸಿಂಪಲ್ ಸುನಿ ನಿರ್ದೇಶನದ 'ಮೋಡ ಕವಿದ ವಾತಾವರಣ' ಚಿತ್ರ ಜೂನ್ 26ರಂದು ತೆರೆಗೆ ಬರಲಿದೆ. ಪ್ರೇಮಕಥೆಯನ್ನು ಹೊಂದಿರುವ ಚಿತ್ರಕ್ಕೆ ಯು/ಎ ಪ್ರಮಾಣ ಪತ್ರ ಲಭಿಸಿದೆ.

ಸುನಿ ಅವರ ಗರಡಿಯಲ್ಲಿ ಪಳಗಿರುವ ಯುವ ನಟ ಶೀಲಮ್ ಈ ಸಿನಿಮಾದ ನಾಯಕ. ಶೀಲಮ್ ಅವರು ಈ ಹಿಂದೆ ಹಲವು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು. 'ಹದಿಹರೆಯದ ಜೆನ್ ಜಿ ಪ್ರೇಮಕಥೆ ಹೊಂದಿರುವ ಚಿತ್ರವಿದು. ಇಂದಿನ ತಲೆಮಾರಿಗೆ ಇಷ್ಟವಾಗುವ ರೀತಿಯ ಕಥೆ' ಎಂದಿದ್ದಾರೆ ಸುನಿ.

ಸಾತ್ವಿಕಾ ರಾವ್ ಹಾಗೂ ಮೋಕ್ಷಾ ಕುಶಾಲ್ ನಾಯಕಿಯರು. ಈ ಹಿಂದೆ 'ಒಂದು ಸರಳ ಪ್ರೇಮಕಥೆ' ಸಿನಿಮಾ ನಿರ್ಮಾಣ ಮಾಡಿದ್ದ ರಾಮ್ ಮೂವೀಸ್ ಈ ಚಿತ್ರಕ್ಕೆ ಬಂಡವಾಳ ಹೂಡಿದೆ. ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣ, ಜೂಡಾ ಸ್ಯಾಂಡಿ ಸಂಗೀತ ನಿರ್ದೇಶನ ಹಾಗೂ ಆದಿತ್ಯ ಕಶ್ಯಪ್ ಸಂಕಲನ ಈ ಸಿನಿಮಾಗಿದೆ.

ಕೇರಳಂ: ಸತೀಶನ್ ಪ್ರಮಾಣವಚನ ಇಂದು

ಸಚಿವರ ಪಟ್ಟಿ ಅಂತಿಮ
ಸಂಪುಟ ಸೇರಲಿರುವ ರಮೇಶ್ ಚೆನ್ನಿತ್ತಲ

ತಿರುವನಂತಪುರ (ಪಿಟಿಐ): ಕೇರಳಂ ಮುಖ್ಯಮಂತ್ರಿಯಾಗಿ ವಿ.ಡಿ ಸತೀಶನ್ ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಭಾನುವಾರ ಇಲ್ಲಿ ನಡೆದ ಯುಡಿಎಫ್ ಸಭೆಯಲ್ಲಿ ಹೊಸ ಸರ್ಕಾರದ ಸಚಿವ ಸಂಪುಟ ಸ್ಥಾನಗಳನ್ನು ಅಂತಿಮಗೊಳಿಸಲಾಯಿತು. ಖಾತೆ ಹಂಚಿಕೆ ಇನ್ನೂ ಅಂತಿಮಗೊಂಡಿಲ್ಲ. ಕಾಂಗ್ರೆಸ್‌ನ ಹಿರಿಯ ಮುಖಂಡರಾದ ರಮೇಶ್ ಚೆನ್ನಿತ್ತಲ, ಕೆ.ಮುರಳೀಧರನ್, ಸಣ್ಣಿ ಜೋಸೆಫ್ ಸಹ ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ.

20 ಸದಸ್ಯರ ಸಂಪುಟದಲ್ಲಿ, ಇಬ್ಬರು ಮಹಿಳೆಯರು, ಇಬ್ಬರು ಪರಿಶಿಷ್ಟ ಸಮುದಾಯದವರು ಸೇರಿ ಮೊದಲ ಬಾರಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವವರು 14 ಮಂದಿ ಇದ್ದಾರೆ. ಆರ್‌ಎಸ್‌ಪಿ ಮುಖಂಡ ಶಿಬು ಬೇಬಿ ಜಾನ್, ಕೇರಳ ಕಾಂಗ್ರೆಸ್ ಮುಖಂಡ ಮೋನ್ಸ್ ಜೋಸೆಫ್, ಅನೂಪ್ ಜೇಕಬ್ ಅವರಿಗೂ ಸಚಿವ ಸ್ಥಾನ ಲಭಿಸಿದೆ.

'ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 63 ಸ್ಥಾನಗಳನ್ನು ಗೆದ್ದಿದೆ. ಸಚಿವ ಸ್ಥಾನಕ್ಕೆ ಅರ್ಹರು ಅನೇಕರಿದ್ದರೂ ಎಲ್ಲರಿಗೂ ಸಂಪುಟದಲ್ಲಿ ಅವಕಾಶ ಸಿಕ್ಕಿಲ್ಲ. ಪಕ್ಷವು ಸಾಮಾಜಿಕ ಮತ್ತು ಪ್ರಾದೇಶಿಕ ಸಮತೋಲನ, ಮಿತ್ರ ಪಕ್ಷಗಳ ಅಭಿಪ್ರಾಯ ಸೇರಿ ಹಲವು ಸಂಗತಿಗಳನ್ನು ಪರಿಗಣಿಸಿ ಸಚಿವರ ಪಟ್ಟಿಯನ್ನು ಅಂತಿಮಗೊಳಿಸಿದೆ' ಎಂದರು.

ಅಂತಿಮ ಪಟ್ಟಿಯನ್ನು ಔಪಚಾರಿಕವಾಗಿ ರಾಜ್ಯಪಾಲರಿಗೆ ಸಲ್ಲಿಸಲಾಗುತ್ತದೆ. ಅನುಮೋದನೆ ನಂತರ ಅಧಿಕೃತ ಗೆಜೆಟ್ ಅಧಿಸೂಚನೆ ಹೊರಡಿಸಲಾಗುತ್ತದೆ.

ರಾಧಾಕೃಷ್ಣನ್ ಸ್ಪೀಕರ್: ತಿರುವಂಜೂರ್ ರಾಧಾಕೃಷ್ಣನ್ ಅವರನ್ನು ಸಭಾಪತಿ ಹಾಗೂ ಶಾನಿಮೋಳ್ ಉಸ್ಮಾನ್ ಅವರನ್ನು ಉಪ ಸಭಾಪತಿಯಾಗಿ ನೇಮಿಸಲು ಯುಡಿಎಫ್ ನಿರ್ಧರಿಸಿದೆ.

ಲೀಗ್‌ಗೆ 5 ಸ್ಥಾನ

ಯುಡಿಎಫ್ ಮಿತ್ರಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ಐವರಿಗೆ ಸ್ಥಾನ ಲಭಿಸಲಿದೆ.

ಪಿ.ಕೆ.ಕುಂಞಾಲಿಕುಟ್ಟಿ, ಎನ್.ಶಂಸುದ್ದೀನ್, ಕೆ.ಎಂ.ಶಾಜಿ, ಪಿ.ಕೆ ಬಶೀರ್ ಮತ್ತು ವಿ.ಇ.ಅಬ್ದುಲ್ ಗಫೂರ್ ಅವರಿಗೆ ಕೇರಳಂನ ಹೊಸ ಸರ್ಕಾರದಲ್ಲಿ ಸಚಿವ ಸ್ಥಾನ ಲಭಿಸಲಿದೆ ಎಂದು ಐಯುಎಂಎಲ್ ಮುಖಂಡ ಪಾಣಕ್ಕಾಡ್ ಸಾದಿಕ್ ಅಲಿ ಶಿಹಾಬ್ ತಂಗಳ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.


ಸೀರೊ ಮಲಂಕರ ಕ್ಯಾಥೋಲಿಕ್ ಚರ್ಚ್‌ನ ಆರ್ಚ್ ಬಿಷಪ್ ಮಾರ್ ಬಸಲಿಯೋಸ್ ಕ್ಲೀಮಿಸ್ ಬಾವ ಅವರನ್ನು ಕೇರಳಂನ ನಿಯೋಜಿತ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಭಾನುವಾರ ಭೇಟಿಯಾದರು

ಚರ್ಚ್ ಮುಖ್ಯಸ್ಥರ ಭೇಟಿ

ತಿರುವನಂತಪುರ(ಪಿಟಿಐ): ಕೇರಳಂನ ನಿಯೋಜಿತ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಭಾನುವಾರ ಇಲ್ಲಿನ ಪಟ್ಟೋಮ್‌ನಲ್ಲಿರುವ ಬಿಷಪ್ ಹೌಸ್‌ನಲ್ಲಿ ಸೀರೊ-ಮಲಂಕರ ಕ್ಯಾಥೋಲಿಕ್ ಚರ್ಚ್‌ನ ಆರ್ಚ್ ಬಿಷಪ್ ಮಾರ್ ಬಸಲಿಯೋಸ್ ಕ್ಲೀಮಿಸ್ ಬಾವ ಅವರನ್ನು ಭೇಟಿಯಾದರು.

ಕೇರಳಂನ ನೂತನ ಮುಖ್ಯಮಂತ್ರಿಯಾಗಿ ತಮ್ಮ ಹೆಸರನ್ನು ಎಐಸಿಸಿ ಆಯ್ಕೆ ಮಾಡಿದ ನಂತರ ಸತೀಶನ್ ಅವರು ರಾಜ್ಯದ ಪ್ರಮುಖ ವ್ಯಕ್ತಿಗಳನ್ನು ಭೇಟಿಯಾಗುತ್ತಿದ್ದಾರೆ.

ಬಿಷಪ್ ಹೌಸ್‌ಗೆ ಬಂದ ಸತೀಶನ್ ಅವರನ್ನು ಧರ್ಮಗುರು ಕ್ಲೀಮಿಸ್ ಅವರು ಪ್ರವೇಶದ್ವಾರದಲ್ಲೇ ಸ್ವಾಗತಿಸಿದರು. ನಂತರ ಚಹಾ ಸೇವನೆಯೊಂದಿಗೆ ಇಬ್ಬರೂ ಅರ್ಧ ಗಂಟೆ ಚರ್ಚೆ ನಡೆಸಿದರು. ಇದೇ ವೇಳೆ ಸತೀಶನ್ ಅವರನ್ನು ಅಭಿನಂದಿಸಿದ ಕ್ಲೀಮಿಸ್, ರಾಜ್ಯವನ್ನು ಯಶಸ್ವಿಯಾಗಿ ಮುನ್ನಡೆಸುವಂತೆ ಶುಭ ಕೋರಿದರು.

ನಂತರ ಇಬ್ಬರೂ ಒಟ್ಟಿಗೆ ವರದಿಗಾರರನ್ನು ಭೇಟಿಯಾದರು. 'ಈ ಭೇಟಿಯಲ್ಲಿ ಅಲ್ಪಸಂಖ್ಯಾತರ ವಿಷಯಗಳ ಬಗ್ಗೆ ಚರ್ಚಿಸಲಾಗಿ ದೆಯೇ' ಎಂದು ಕ್ಲೀಮಿಸ್ ಅವರನ್ನು ಸುದ್ದಿಗಾರರು ಕೇಳಿದರು. 'ಸತೀಶನ್ ಅವರಿನ್ನೂ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸದ ಕಾರಣ, ಅಂತಹ ಯಾವುದೇ ಚರ್ಚೆಗಳನ್ನು ನಡೆದಿಲ್ಲ' ಎಂದು ಕ್ಲೀಮಿಸ್ ಪ್ರತಿಕ್ರಿಯಿಸಿದರು.

'ಮುಖ್ಯಮಂತ್ರಿಯಾಗಿ ನೇಮಕವಾದ ಮೇಲೆ ಸತೀಶನ್ ಅವರು ಇದನ್ನು 'ದೇವರ ಇಚ್ಛೆ' ಎಂದು ಬಣ್ಣಿಸಿದ್ದಾರೆ. ನಾವೂ ಅದನ್ನು ಹಾಗೆಯೇ ನಂಬುತ್ತೇವೆ' ಎಂದು ಕ್ಲೀಮಿಸ್ ಹೇಳಿದರು. ಸತೀಶನ್ ಮತ್ತು ಅವರ ಪೂರ್ಣ ಸಚಿವ ಸಂಪುಟ ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದೆ.

ಖರ್ಗೆ, ರಾಹುಲ್, ಪ್ರಿಯಾಂಕಾ ಭಾಗಿ

ನವದೆಹಲಿ(ಪಿಟಿಐ): ತಿರುವನಂತಪುರದಲ್ಲಿ ಸೋಮವಾರ ನಡೆಯಲಿರುವ ಕೇರಳಂನ ನಿಯೋಜಿತ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ವಯನಾಡ್ ಸಂಸದೆ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಕೂಡ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ ಕಾಂಗ್ರೆಸ್ ಪಕ್ಷದ ಸಂಸದೀಯ ಮಂಡಳಿಯ ಅಧ್ಯಕ್ಷೆ ಸೋನಿಯಾ ಗಾಂಧಿ ಭಾಗವಹಿಸುತ್ತಿರುವ ಕುರಿತು ಖಚಿತ ಮಾಹಿತಿ ಇಲ್ಲ.

ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ಮುಖ್ಯಮಂತ್ರಿಗಳೂ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ ಅವರನ್ನೂ ಕಾರ್ಯಕ್ರಮಕ್ಕೆ ಪಕ್ಷ ಆಹ್ವಾನಿಸಿದೆ. ಆದರೆ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಕುರಿತು ಅವರಿನ್ನೂ ಖಚಿತಪಡಿಸಿಲ್ಲ ಎಂದು ಮೂಲಗಳು ತಿಳಿಸಿವೆ.

'ತಿರುವನಂತಪುರದ ಸೆಂಟ್ರಲ್ ಕ್ರೀಡಾಂಗಣದಲ್ಲಿ ಸೋಮವಾರ ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗುವ ಸಮಾರಂಭದಲ್ಲಿ ಸತೀಶನ್ ತಮ್ಮ ಕೆಲವು ಸಚಿವರೊಂದಿಗೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ' ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಗ್ಗೆ ಮೌನ ಮುರಿದ ಸೂಪರ್‌ಸ್ಟಾರ್
'ವಿಜಯ್ ಮೇಲೆ ಅಸೂಯೆ ಇಲ್ಲ'

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ ಸಿ. ಜೋಸೆಫ್ ವಿಜಯ್ ಅವರು ಗೆದ್ದು ಮುಖ್ಯಮಂತ್ರಿ ಆದದ್ದಕ್ಕೆ ತಮಗೆ ಅಸಮಾಧಾನವಿದೆ ಎಂಬ ಊಹಾಪೋಹಗಳ ಕುರಿತಂತೆ ತಮಿಳು ಸಿನಿಮಾರಂಗದ ಸೂಪರ್‌ಸ್ಟಾರ್ ರಜನಿಕಾಂತ್ ಮೌನ ಮುರಿದಿದ್ದಾರೆ.

ಪೋಯಸ್ ಗಾರ್ಡನ್‌ನಲ್ಲಿರುವ ತಮ್ಮ ನಿವಾಸದಲ್ಲಿ ಭಾನುವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 'ಇಂತಹ ವದಂತಿಗಳಿಗೆ ಯಾವುದೇ ಆಧಾರವಿಲ್ಲ. ಇದನ್ನು ತಳ್ಳಿ ಹಾಕಲು ಪತ್ರಿಕಾಗೋಷ್ಠಿ ನಡೆಸುತ್ತಿದ್ದೇನೆ. ಇಲ್ಲದಿದ್ದರೆ, ವದಂತಿಯನ್ನೇ ನಿಜವೆಂದು ಜನ ನಂಬುವ ಸಾಧ್ಯತೆಯಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಚುನಾವಣಾ ಫಲಿತಾಂಶಗಳ ನಂತರ ಡಿಎಂಕೆ ಮುಖಂಡ ಎಂ.ಕೆ. ಸ್ಟಾಲಿನ್ ಅವರನ್ನು ನಾನು ಭೇಟಿಯಾಗಿರುವುದು ಟೀಕೆಗೆ ಕಾರಣವಾಯಿತು. ನಮ್ಮ ಸ್ನೇಹ ರಾಜಕೀಯ ಮೀರಿದ್ದು. ಕೊಳತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಸ್ಟಾಲಿನ್ ಸೋತಿದ್ದಕ್ಕೆ ನನಗೆ ಬೇಸರವಾಗಿದೆ' ಎಂದು ವಿವರಿಸಿದ್ದಾರೆ.

'ವಿಜಯ್ ಮುಖ್ಯಮಂತ್ರಿ ಆಗಬಾರದು ಎಂದು ನಾನು ಹೇಳಿದ್ದೇನೆ, ಎಐಡಿಎಂಕೆ ಮತ್ತು ಡಿಎಂಕೆ ಪಕ್ಷಗಳನ್ನು ವಿಲೀನಗೊಳಿಸಲು ಪ್ರಯತ್ನಿಸುತ್ತಿದ್ದೇನೆ ಎಂಬಂತಹ ವದಂತಿಗಳು ಹರಡಲು ಪ್ರಾರಂಭಿಸಿದವು. ನಾನು ಈಗಾಗಲೇ ಅವರಿಗೆ (ವಿಜಯ್) ಸಾಮಾಜಿಕ ಮಾಧ್ಯಮದಲ್ಲಿ (ಎಕ್ಸ್) ಶುಭ ಕೋರಿದ್ದರೂ, ವಿಮಾನ ನಿಲ್ದಾಣದಲ್ಲಿ ಅವರಿಗೆ ಶುಭ ಹಾರೈಸಲಿಲ್ಲ ಎಂದು ತಪ್ಪು ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಯಾವುದೇ ವಿಷಯದ ಬಗ್ಗೆ ಅನಗತ್ಯವಾಗಿ ಮಾತನಾಡಲು ನಾನು ಸಣ್ಣತನದ ವ್ಯಕ್ತಿಯಲ್ಲ. ವಿಜಯ್ ಮುಖ್ಯಮಂತ್ರಿಯಾಗಿದ್ದಾರೆ ಎಂದು ಕೇಳಿದಾಗ ನನಗೆ ಆಶ್ಚರ್ಯವಾಯಿತು. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದಂತೆ ನಾನು ಅವರಿಗೆ (ವಿಜಯ್) ಅಭಿನಂದನೆ ಸಲ್ಲಿಸಿದೆ. ನಾನು ರಾಜಕೀಯದಲ್ಲೇ ಇಲ್ಲ, ಹಾಗಿರುವಾಗ ನಾನು ವಿಜಯ್ ಬಗ್ಗೆ ಯಾಕೆ ಅಸೂಯೆ ಪಡಬೇಕು? ಬಹುಶಃ ಕಮಲ್ ಹಾಸನ್ ಮುಖ್ಯಮಂತ್ರಿಯಾದರೆ, ನನಗೆ ಅಸೂಯೆ ಆಗುತ್ತಿತ್ತು(ನಗು). ವಿಜಯ್ ಮತ್ತು ನನ್ನ ನಡುವೆ 25 ವರ್ಷಗಳ ಅಂತರವಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

ಮುಂದುವರಿದು, 'ಅವರ ಬಗ್ಗೆ ಅಸೂಯೆಪಡಲು ನನಗೆ ಯಾವುದೇ ಕಾರಣವಿಲ್ಲ. ನಾನು ಅವರ ಬಗ್ಗೆ ಸಂತೋಷವಾಗಿದ್ದೇನೆ. ವಿಜಯ್ ಅವರಿಂದ ಸಾಕಷ್ಟು ನಿರೀಕ್ಷೆಗಳಿವೆ. ಅವರಿಗೆ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ' ಎಂದು ಹೇಳಿದ್ದಾರೆ.

ಟಿವಿಕೆ ಚಿತ್ತ ಕೇರಳಂನತ್ತ

ತಿರುವನಂತಪುರ: ಚೊಚ್ಚಲ ಪ್ರಯತ್ನದಲ್ಲೇ ತಮಿಳುನಾಡಿನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವು, ಇದೀಗ ಕೇರಳಂನತ್ತ ತನ್ನ ಚಿತ್ತ ಹರಿಸಿದೆ.

ಹಿಂದಿನ ವಾರವೇ ಟಿವಿಕೆಯ ಘಟಕಗಳನ್ನು ರಚಿಸಿದ್ದ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರ ಅಭಿಮಾನಿಗಳು ಪಾಲಕ್ಕಾಡ್‌ನಲ್ಲಿ ಭಾನುವಾರ ಸಭೆ ನಡೆಸಿದರು. ಮಹಿಳೆಯರು, ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬಹುತೇಕರು ಐ.ಟಿ ಕ್ಷೇತ್ರದವರು.

ಎರಡು ವರ್ಷಗಳ ಹಿಂದೆ ಟಿವಿಕೆ ಸ್ಥಾಪನೆ ಆದಾಗಲೇ, ಕೇರಳಂನಲ್ಲಿನ ವಿಜಯ್ ಅಭಿಮಾನಿಗಳು ಪಕ್ಷದ ಘಟಕ ರಚಿಸಲು ಯತ್ನಿಸಿದ್ದರು. ತಮಿಳುನಾಡಿನಲ್ಲಿನ ವಿಜಯವು ಈ ಯತ್ನಕ್ಕೆ ಮತ್ತಷ್ಟು ಬಲ ತುಂಬಿದೆ. ವಿಜಯ್ ಪ್ರಮಾಣವಚನ ಸ್ವೀಕರಿಸಿದಾಗ, ಕೇರಳಂನ ವಿವಿಧ ಭಾಗಗಳಲ್ಲಿರುವ ಅಭಿಮಾನಿಗಳು ಭಾರಿ ಸಂಭ್ರಮಾಚರಣೆಗೆ ಸಾಕ್ಷಿ ಆಗಿದ್ದರು.

'ಮತಗಟ್ಟೆ ಮಟ್ಟದಿಂದ ಚಟುವಟಿಕೆಗಳನ್ನು ಆರಂಭಿಸಲಿದೆ. ಕೇರಳಂನಲ್ಲೂ ಭಾರಿ ಬೆಂಬಲ ಸಿಗುವ ಸಾಧ್ಯತೆ ಹೆಚ್ಚಿದೆ. ಟಿವಿಕೆಯ ನಾಯಕತ್ವವು ಎಲ್ಲ ಜಿಲ್ಲೆಗಳಲ್ಲಿನ ಚಟುವಟಿಕೆಗಳನ್ನು ನೇರವಾಗಿ ಸಮನ್ವಯಗೊಳಿಸುತ್ತಿದೆ' ಎಂದು ಸಭೆಯಲ್ಲಿ ಭಾಗವಹಿಸಿದ್ದವರು ಹೇಳಿದರು.

'ರಾಜ್ಯ ಸರ್ಕಾರಿ ಒಡೆತನದ ಒಟಿಟಿ ಪ್ರಾರಂಭಿಸಿ'


ಕಮಲ್ ಹಾಸನ್

ಚೆನ್ನೈ (ಪಿಟಿಐ): ರಾಜ್ಯ ಸರ್ಕಾರಿ ಒಡೆತನದ ಒಟಿಟಿ ಪ್ರಾರಂಭಿಸಬೇಕು ಎಂದು ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರನ್ನು ಭೇಟಿ ಮಾಡಿ, ನಟ ಕಮಲ್ ಹಾಸನ್ ಅವರು ಆಗ್ರಹಿಸಿದ್ದಾರೆ.

ಶನಿವಾರ ತಡರಾತ್ರಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿಗೆ ಸಲ್ಲಿಸಿದ ಆರು ಬೇಡಿಕೆಗಳ ಪಟ್ಟಿಯನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಕಮಲ್ ಹಾಸನ್ ಅವರು ವಿವರಿಸಿದ್ದಾರೆ.

ತಮಿಳು ಚಲನಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳನ್ನು ಕಡಿಮೆ ಮತ್ತು ಸಬ್ಸಿಡಿ ದರದಲ್ಲಿ ತಮಿಳು ಪ್ರೇಕ್ಷಕರು ವೀಕ್ಷಿಸಲು ರಾಜ್ಯ ಸರ್ಕಾರಿ ಒಡೆತನದ ಒಟಿಟಿ ಪ್ರಾರಂಭಿಸಿ ಎಂದು ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ಅವರು ಹೇಳಿದ್ದಾರೆ.

ಇದರೊಂದಿಗೆ, ಸ್ಥಳೀಯ ಸಂಸ್ಥೆಗಳು ವಿಧಿಸುವ ಶೇ 4ರಷ್ಟು ಮನರಂಜನಾ ತೆರಿಗೆಯನ್ನು ರದ್ದುಗೊಳಿಸಬೇಕು, ಪೈರಸಿ ತಡೆಯಲು ತಂಡವನ್ನು ರಚಿಸಬೇಕು, ರಾಜ್ಯದಾದ್ಯಂತ ಎಲ್ಲ ಚಿತ್ರಮಂದಿರಗಳಲ್ಲಿ ದಿನಕ್ಕೆ ಐದು ಪ್ರದರ್ಶನಗಳಿಗೆ ಅನುಮತಿ ನೀಡಬೇಕು ಎಂದು ಸರ್ಕಾರಕ್ಕೆ ಅವರು ಮನವಿ ಮಾಡಿದ್ದಾರೆ.

ಎಂಟು ವಾರಕ್ಕೂ ಮುನ್ನ ಚಲನಚಿತ್ರಗಳು ಒಟಿಟಿ ವೇದಿಕೆಗಳಲ್ಲಿ ಬಿಡುಗಡೆಯಾಗದಂತೆ ನಿರ್ಬಂಧ ಹೇರಬೇಕು ಮತ್ತು ಚಲನಚಿತ್ರ ನಿರ್ಮಾಣಕ್ಕೆ ಪ್ರೋತ್ಸಾಹಧನ ನೀಡುವ ಯೋಜನೆ ಜಾರಿಗೊಳಿಸಬೇಕು ಎಂದೂ ಕೇಳಿದ್ದಾರೆ.

ಡಿಎಂಕೆ ಮಿತ್ರಪಕ್ಷವಾದ ಕಮಲ್ ಹಾಸನ್ ಅವರ ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷವು 2026ರ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ.

ಬಂಡಿ ಭಗೀರಥ: ನ್ಯಾಯಾಂಗ ಬಂಧನ


ಹೈದರಾಬಾದ್ (ಪಿಟಿಐ): ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಸೈಬರಾಬಾದ್ ಪೊಲೀಸರು ಶನಿವಾರ ರಾತ್ರಿ ಬಂಧಿಸಿದ ಬಂಡಿ ಸಾಯಿ ಭಗೀರಥ (ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಮಗ) ಅವರನ್ನು ಇಲ್ಲಿನ ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಆರೋಪಿಯು ದೇಶಬಿಟ್ಟು ತೆರಳದಂತೆ ನೋಡಿಕೊಳ್ಳಲು ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿಗೊಳಿಸಿದ್ದರು.

ಅಲ್ಲದೆ, ಬಂಧನದಿಂದ ರಕ್ಷಣೆ ಕೋರಿ ಭಗೀರಥ ಅವರು ತೆಲಂಗಾಣ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ ರಕ್ಷಣೆ ನೀಡಲು ನ್ಯಾಯಾಲಯ ನಿರಾಕರಿಸಿದ ಬೆನ್ನಲ್ಲೇ, ಪೊಲೀಸರು ಆರೋಪಿಯನ್ನು ಬಂಧಿಸಿದ್ದರು.

'ಪಂಚ ಸಾಕ್ಷಿಗಳ ಸಮ್ಮುಖದಲ್ಲಿ ಭಗೀರಥ ಅವರನ್ನು ತನಿಖಾಧಿಕಾರಿ ಪರೀಕ್ಷಿಸಿದರು. ಆರೋಪಿ ಅಪರಾಧ ಎಸಗಿರುವುದನ್ನು ಒಪ್ಪಿಕೊಂಡಿದ್ದಾರೆ, ಹೀಗಾಗಿ ತನಿಖಾಧಿಕಾರಿ ಅವರನ್ನು ಬಂಧಿಸಿದ್ದಾರೆ' ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಪಶ್ಚಿಮ ಬಂಗಾಳ ಸಿ.ಎಂ. ಸುವೇಂದುಗೆ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಪತ್ರ
ಪ್ರಾಣಿ ವಧೆ ಮಾರ್ಗಸೂಚಿ ಗೊಂದಲ


ಅಧೀರ್ ರಂಜನ್ ಚೌಧರಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಸರ್ಕಾರವು ಪ್ರಾಣಿ ವಧೆ ಮಾರ್ಗಸೂಚಿಗೆ ಸಂಬಂಧಿಸಿದಂತೆ ನೀಡಿರುವ ಸಾರ್ವಜನಿಕ ಪ್ರಕಟಣೆ ವಿಚಾರದಲ್ಲಿ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಮಧ್ಯಪ್ರವೇಶಿಸುವಂತೆ ಕಾಂಗ್ರೆಸ್ ಹಿರಿಯ ನಾಯಕ ಅಧೀರ್ ರಂಜನ್ ಚೌಧರಿ ಭಾನುವಾರ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರಿಗೆ ಪತ್ರ ಬರೆದಿರುವ ಚೌಧರಿ, 'ರಾಜ್ಯ ಸರ್ಕಾರದ ಸಾರ್ವಜನಿಕ ಪ್ರಕಟಣೆಯು ನಿರ್ದಿಷ್ಟವಾಗಿ ಮುರ್ಷಿದಾಬಾದ್ ಜಿಲ್ಲೆಯ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಗೊಂದಲ ಮತ್ತು ಗಲಭೆಗಳಿಗೆ ಕಾರಣವಾಗುವಂತಿದೆ' ಎಂದು ಅವರು ಹೇಳಿದ್ದಾರೆ.

ಮುರ್ಷಿದಾಬಾದ್ ಜಿಲ್ಲೆಯಲ್ಲಿ ಅಲ್ಪಸಂಖ್ಯಾತ ಸಮುದಾಯದವರೇ ಹೆಚ್ಚಿದ್ದಾರೆ. ಇಂಥ ಪ್ರದೇಶಗಳನ್ನು ಗುರುತಿಸಿ ಜನರು ತಮ್ಮ ಧಾರ್ಮಿಕ ನಂಬಿಕೆಯನ್ನು ಅನುಸರಿಸಲು ಅವಕಾಶ ನೀಡಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಅಧಿಕೃತ ಪ್ರಮಾಣಪತ್ರ (ಫಿಟ್ನೆಸ್ ಸರ್ಟಿಫಿಕೇಟ್) ಇಲ್ಲದೆ ಎತ್ತು, ಆಕಳು, ಎಮ್ಮೆ ಮತ್ತು ಕೋಣಗಳನ್ನು ವಧೆ ಮಾಡುವಂತಿಲ್ಲ ಎಂದು ಮೇ 13ರಂದು ನೋಟಿಸ್ ಮೂಲಕ ತಿಳಿಸಲಾಗಿತ್ತು.

ಗೋವುಗಳ ಜನನ ಪ್ರಮಾಣಪತ್ರ ತೋರಿಸಿ: ಬಿಜೆಪಿ ಶಾಸಕಿ

ಪಶ್ಚಿಮ ಬಂಗಾಳದ ಬಿಜೆಪಿಯ ನೂತನ ಶಾಸಕಿ, ರೇಖಾ ಪಾತ್ರಾ ಅವರು ಗೋವುಗಳಿದ್ದ ವಾಹನವನ್ನು ತಡೆದು, ಗೋವುಗಳನ್ನು ಕಸಾಯಿಖಾನೆಗೆ ರವಾನಿಸುವ ಮುನ್ನ ಅವುಗಳ ಜನನ ಪ್ರಮಾಣಪತ್ರವನ್ನು ತೋರಿಸಬೇಕು ಎಂದು ಆಗ್ರಹಿಸಿದ್ದಾರೆ ಎಂಬುದಾಗಿ ಎನ್.ಡಿ.ಟಿ.ವಿ. ವರದಿ ಮಾಡಿದೆ.

ಹಿಂಗಲ್‌ಗಂಜ್‌ನ ಲೇಬುಖಾಲಿ ಪ್ರದೇಶದಲ್ಲಿ ವಾಹನವನ್ನು ತಡೆದು, ಗೋವುಗಳನ್ನು ಕೆಳಗಿಳಿಸಿದರು. ಅವುಗಳನ್ನು ರಸ್ತೆಬದಿಯ ಮರಗಳಿಗೆ ಕಟ್ಟಿಹಾಕಿ, ಕುಡಿಯಲು ನೀರು, ಆಹಾರ ನೀಡಿದರು.

'ಅನಧಿಕೃತ ಗೋವು ವ್ಯಾಪಾರಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಸೂಚಿಸಿದ್ದಾರೆ. ಸರ್ಕಾರದ ನೂತನ ಮಾರ್ಗಸೂಚಿ ಅನ್ವಯ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗೋವುಗಳನ್ನು ಕಸಾಯಿಖಾನೆಗೆ ಕಳಿಸುವಂತಿಲ್ಲ' ಎಂದು ಹೇಳಿದರು.

'ಅಕ್ರಮವಾಗಿ ಗೋವುಗಳನ್ನು ಸಾಗಿಸುವುದು ಕಂಡುಬಂದಲ್ಲಿ ಅವರನ್ನು ತಡೆದು, ಗೋವುಗಳ ಜನನ ಪ್ರಮಾಣಪತ್ರವನ್ನು ತೋರಿಸುವಂತೆ ಕೇಳಲಾಗುವುದು. ಪ್ರಮಾಣಪತ್ರ ಸಲ್ಲಿಸಲು ವಿಫಲವಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಿದೆ' ಎಂದರು.

> ಬಿಜೆಪಿ ಆಡಳಿತದಲ್ಲಿರುವ ದೇಶದ ಇತರ ರಾಜ್ಯಗಳಲ್ಲಿ ಗೋವುಗಳಿಗೆ ಜನನ ಪ್ರಮಾಣಪತ್ರ ನೀಡುತ್ತದೆಯೇ?
> **ತೃಣಮೂಲ ಕಾಂಗ್ರೆಸ್**

ಪುದುಚೆರಿ: ಇಂದು ಹಂಗಾಮಿ ಸ್ಪೀಕರ್ ಪ್ರಮಾಣ ವಚನ

ಪುದುಚೆರಿ(ಪಿಟಿಐ): ರಾಜ್ಯ ವಿಧಾನಸಭೆಯಲ್ಲಿರುವ ಎಐಎಡಿಎಂಕೆಯ ಏಕೈಕ ಶಾಸಕ ಎ. ಅನ್ಬಳಗನ್ ಅವರು ಸೋಮವಾರ ಹಂಗಾಮಿ ಸ್ಪೀಕರ್ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಇಲ್ಲಿನ ಲೋಕನಿವಾಸದ ದರ್ಬಾರ್ ಹಾಲ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಲೆಫ್ಟಿನೆಂಟ್ ಗವರ್ನರ್ ಕೆ. ಕೈಲಾಶನಾಥನ್ ಅವರು ಪ್ರಮಾಣವಚನ ಬೋಧಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅನ್ಬಳಗನ್ ಅವರು ಉಪ್ಪಾಳಂ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ. ಅವರು 2001, 2011 ಮತ್ತು 2016ರಲ್ಲಿ ಉಪ್ಪಾಳಂ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ.

'ಶಿಕ್ಷಣ ಸಚಿವ ಪ್ರಧಾನ್ ವಜಾ ಯಾಕಿಲ್ಲ'

ಪ್ರಜಾವಾಣಿ ವಾರ್ತೆ


ರಾಹುಲ್ ಗಾಂಧಿ

ನವದೆಹಲಿ: 'ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ಕುರಿತು ಪ್ರಧಾನಿ ಅವರು ಮೌನ ತಾಳಿದ್ದಾರೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಯಾಕೆ ವಜಾಗೊಳಿಸಿಲ್ಲ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾನುವಾರ 'ಎಕ್ಸ್' ಮೂಲಕ ಪ್ರಶ್ನಿಸಿದ್ದಾರೆ.

'2024ರಲ್ಲಿ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಯಿತು. ಪರೀಕ್ಷೆ ರದ್ದಾಗಲಿಲ್ಲ. ಸಚಿವರು ರಾಜೀನಾಮೆ ನೀಡಲಿಲ್ಲ. ಸಿಬಿಐ ತನಿಖೆ ನಡೆಸಿತು. ಸಮಿತಿಯೊಂದನ್ನು ರಚಿಸಲಾಯಿತು. 2026ರಲ್ಲಿ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಯಿತು. ಪರೀಕ್ಷೆ ರದ್ದಾಯಿತು, ಸಚಿವರು ರಾಜೀನಾಮೆ ನೀಡಲಿಲ್ಲ. ಸಿಬಿಐ ಮತ್ತೆ ತನಿಖೆ ನಡೆಸುತ್ತಿದೆ. ಮತ್ತೊಂದು ಸಮಿತಿ ರಚನೆಯಾಗಲಿದೆ. ಮೋದಿ ಅವರೇ, ದೇಶವೂ ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತಿದೆ, ಉತ್ತರಿಸಿ!' ಎಂದು ರಾಹುಲ್ ಕೇಳಿದ್ದಾರೆ.

'ಪದೇ ಪದೇ ಪ್ರಶ್ನೆಪತ್ರಿಕೆ ಸೋರಿಕೆ ಯಾಕೆ ಆಗುತ್ತಿದೆ? ಈ ಚರ್ಚೆಯಲ್ಲಿ ನೀವು ಮತ್ತೆ ಮೌನವಾಗಿರುವುದೇಕೆ? ಪ್ರತಿಬಾರಿ ವಿಫಲರಾಗುತ್ತಿರುವ ಶಿಕ್ಷಣ ಸಚಿವರನ್ನು ಯಾಕೆ ವಜಾಗೊಳಿಸುತ್ತಿಲ್ಲ' ಎಂದು ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

ಮೇ 3ರಂದು ನಡೆದ ನೀಟ್-ಯುಜಿ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಪರೀಕ್ಷೆ ರದ್ದಾದ ಬಳಿಕ ಪ್ರಧಾನ್ ಅವರನ್ನು ವಜಾಗೊಳಿಸುವಂತೆ ರಾಹುಲ್ ಗಾಂಧಿ ಅವರು ಆಗ್ರಹಿಸುತ್ತಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಇಲ್ಲಿವರೆಗೆ 9 ಜನರನ್ನು ಬಂಧಿಸಿದೆ.



ಅಯ್ಯರ್ ಆಟಕ್ಕೆ ಮಣಿದ ಶ್ರೇಯಸ್ ಪಡೆ

ಪ್ಲೇ ಆಫ್ ಪ್ರವೇಶಿಸಿದ ಆರ್‌ಸಿಬಿ • ಭುವಿ ಮಿಂಚಿನ ದಾಳಿ • ವಿರಾಟ್ ಅಬ್ಬರ

ಧರ್ಮಶಾಲಾ (ಪಿಟಿಐ): ವೆಂಕಟೇಶ್ ಅಯ್ಯರ್ ಮತ್ತು ವಿರಾಟ್ ಕೊಹ್ಲಿ ಅವರ ಅಮೋಘ ಆಟದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪಂಜಾಬ್ ಕಿಂಗ್ಸ್ ಎದುರು ಜಯಭೇರಿ ಬಾರಿಸಿತು. ಈ ಸಲದ ಐಪಿಎಲ್ ಟೂರ್ನಿಯಲ್ಲಿ ಪ್ಲೇ ಆಫ್ ಪ್ರವೇಶಿಸಿದ ಮೊದಲ ತಂಡವಾಯಿತು.

ಭಾನುವಾರ ಮಧ್ಯಾಹ್ನ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಆತಿಥೇಯ ಪಂಜಾಬ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ರಜತ್ ಪಾಟೀದಾರ್ ಗೈರು ಹಾಜರಿಯಿಂದಾಗಿ ಸ್ಥಾನ ಪಡೆದ ವೆಂಕಟೇಶ್ ಅಯ್ಯರ್ 40 ಎಸೆತಗಳಲ್ಲಿ ಅಜೇಯ 73 ರನ್ ಹೊಡೆದರು. ಆರಂಭಿಕ ಬ್ಯಾಟರ್ ವಿರಾಟ್ ಕೊಹ್ಲಿ (58; 37ಎ) ಮತ್ತು ದೇವದತ್ತ ಪಡಿಕ್ಕಲ್ (45; 25ಎ) ಅವರು ಉತ್ತಮ ಆರಂಭ ನೀಡಿದರು. ಇದರಿಂದಾಗಿ ಆರ್‌ಸಿಬಿ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 222 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಪಂಜಾಬ್ ತಂಡಕ್ಕೆ ಪವರ್ ಪ್ಲೇಯಲ್ಲಿ ವೇಗಿ ಭುವನೇಶ್ವರ್ ಕುಮಾರ್ (38ಕ್ಕೆ2) ಮತ್ತು ಕೊನೆಯ ಹಂತದಲ್ಲಿ ರಸಿಕ್ ಸಲಾಂ ದಾರ್ (36ಕ್ಕೆ3) ಪರಿಣಾಮಕಾರಿ ದಾಳಿ ನಡೆಸಿದರು. ಇದರಿಂದಾಗಿ ಪಂಜಾಬ್ ತಂಡಕ್ಕೆ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 199 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಅದೂ ಶಶಾಂಕ್ ಸಿಂಗ್ (27 ಎಸೆತಗಳಲ್ಲಿ 56) ಅವರ ವಿರೋಚಿತ ಹೋರಾಟದಿಂದಾಗಿ ಇಷ್ಟು ರನ್‌ಗಳು ದಾಖಲಾದವು. ಇಲ್ಲದಿದ್ದರೆ ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕವೂ ಇತ್ತು. 10.5 ಓವರ್‌ಗಳಲ್ಲಿ 93 ರನ್‌ಗಳಿಗೆ 5 ವಿಕೆಟ್‌ಗಳು ಪತನವಾಗಿದ್ದವು.


ವೆಂಕಟೇಶ್ ಅಯ್ಯರ್

ಪಂಜಾಬ್ ತಂಡಕ್ಕೆ ಇದು ಸತತ ಆರನೇ ಸೋಲು. ಲೀಗ್‌ನ ಮೊದಲ ಸುತ್ತಿನ ಏಳು ಪಂದ್ಯಗಳಲ್ಲಿ ಆರರಲ್ಲಿ ಗೆದ್ದಿತ್ತು, ಒಂದು ಮಳೆಗೆ ರದ್ದಾಗಿತ್ತು. ಒಟ್ಟು 13 ಅಂಕ ಗಳಿಸಿರುವ ಶ್ರೇಯಸ್ ಅಯ್ಯರ್ ಬಳಗಕ್ಕೆ ಪ್ಲೇ ಆಫ್ ಹಾದಿ ಕಡುಕಠಿಣವಾಗಿದೆ. ಶ್ರೇಯಸ್ ಅವರಿಗೆ ನಾಯಕನಾಗಿ ಆಡಿದ 100ನೇ ಪಂದ್ಯ ಇದಾಗಿತ್ತು.

ಆರ್‌ಸಿಬಿ ಬೌಲರ್‌ಗಳ ಶಿಸ್ತುಬದ್ಧ ದಾಳಿ ಹಾಗೂ ಫೀಲ್ಡರ್‌ಗಳ ಚುರುಕುತನವು ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದವು. ಭುವನೇಶ್ವರ್ ಕುಮಾರ್ ಅವರು ಮೊದಲ ಓವರ್‌ನಲ್ಲಿಯೇ ಪ್ರಿಯಾಂಶ್ ಆರ್ಯ ಅವರ ವಿಕೆಟ್ ಗಳಿಸಿದರು. ತಮ್ಮ ಎರಡನೇ ಓವರ್‌ನಲ್ಲಿ ಭುವಿ ಮತ್ತೆ ಮಿಂಚಿದರು. ಪ್ರಭಸಿಮ್ರನ್ ಸಿಂಗ್ ವಿಕೆಟ್ ತಮ್ಮ ಬುಟ್ಟಿಗೆ ಹಾಕಿಕೊಂಡರು.

ರಸಿಕ್ ಸಲಾಮ್ ದಾರ್ ಬೌಲಿಂಗ್‌ನಲ್ಲಿ ಆಫ್‌ಸ್ಟಂಪ್ ಹೊರಗಿನ ಎಸೆತವನ್ನು ಕೆಣಕಿದ ಶ್ರೇಯಸ್ ಅಯ್ಯರ್ (1 ರನ್) ವಿಕೆಟ್‌ಕೀಪರ್–ಹಂಗಾಮಿ ನಾಯಕ ಜಿತೇಶ್ ಶರ್ಮಾಗೆ ಕ್ಯಾಚ್ ಆದರು.

ಸೂರ್ಯಾಂಶ್ ಶೆಡ್ಗೆ (35; 22ಎ) ಮತ್ತು ಕೂಪರ್ ಕೊನೊಲಿ (37; 22ಎ) ಒಂದಿಷ್ಟು ಭರವಸೆ ಮೂಡಿಸಿದ್ದರು. ಅವರಿಬ್ಬರಿಗೂ ಕ್ರಮವಾಗಿ ಸ್ಪಿನ್ನರ್ ಸುಯಶ್ ಶರ್ಮಾ ಹಾಗೂ ರೊಮಾರಿಯೊ ಶೆಫರ್ಡ್ ಅವರು ಡಗ್‌ಔಟ್ ದಾರಿ ತೋರಿಸಿದರು.

ಈ ಹಂತದಲ್ಲಿ ಶಶಾಂಕ್ ಸಿಂಗ್ ಅವರು ತಮ್ಮ ಹೋರಾಟವನ್ನು ಆರಂಭಿಸಿದರು. ಅವರಿಗೆ ಮಾರ್ಕಸ್ ಸ್ಟೊಯಿನಿಸ್ (37; 25ಎ) ಜೊತೆ ನೀಡಿದರು. ಎರಡನೇ ಸ್ಪೆಲ್ ಹಾಕಿದ ಜೋಶ್ ಹೇಝಲ್‌ವುಡ್ ಸ್ಟೊಯಿನಿಸ್ ಅವರ ವಿಕೆಟ್ ಪಡೆದು ಜೊತೆಯಾಟ ಮುರಿದರು.

ಕೊನೆಯ ಓವರ್‌ನಲ್ಲಿ ಗೆಲುವಿಗೆ 33 ರನ್‌ಗಳು ಬೇಕಿತ್ತು. ಈ ಓವರ್ ಬೌಲಿಂಗ್ ಮಾಡಿದ ರಸಿಕ್ ಅವರು ಶಶಾಂಕ್ ಸಿಂಗ್ (56; 27ಎ) ವಿಕೆಟ್ ಕಬಳಿಸಿದರು. ಅದೇ ಓವರ್‌ನಲ್ಲಿ ಅಜ್ಮತ್‌ವುಲ್ಲಾ ಒಮರ್‌ಝೈ ಕೂಡ ಟಿಮ್ ಡೇವಿಡ್‌ಗೆ ಕ್ಯಾಚಿತ್ತರು.

ವೆಂಕಟೇಶ್, ವಿರಾಟ್ ಅಬ್ಬರ: ಈ ಪಂದ್ಯದಲ್ಲಿಯೂ ಆರ್‌ಸಿಬಿಯ ಆರಂಭಿಕ ಬ್ಯಾಟರ್ ಜೇಕಬ್ ಬೆಥೆಲ್ ಬೇಗನೆ ನಿರ್ಗಮಿಸಿದರು. ಅದರಿಂದಾಗಿ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ (45 ರನ್) ಎರಡನೇ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸಿದರು. ಅರ್ಧಶತಕದ ಸನಿಹದಲ್ಲಿದ್ದ ದೇವದತ್ತ ವಿಕೆಟ್ ಗಳಿಸುವಲ್ಲಿ ಹರಪ್ರೀತ್ ಬ್ರಾರ್ ಯಶಸ್ವಿಯಾದರು.

ಆದರೆ ಕೊಹ್ಲಿ ಜೊತೆಗೂಡಿದ ವೆಂಕಟೇಶ್ ಬೌಲರ್‌ಗಳ ಬೆವರಿಳಿಯುವಂತೆ ಮಾಡಿದರು. ಎಂಟು ಬೌಂಡರಿ, ನಾಲ್ಕು ಸಿಕ್ಸರ್ ಸಿಡಿಸಿದರು. ಅವರಿಬ್ಬರ ಜೊತೆಯಾಟದಲ್ಲಿ 60 ರನ್ ಸೇರಿದವು. ವಿರಾಟ್ ನಿರ್ಗಮಿಸಿದ ನಂತರ ಟಿಮ್ ಡೇವಿಡ್ (28; 12ಎ) ಬೀಸಾಟವಾಡಿದರು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 4ಕ್ಕೆ 222 (20 ಓವರ್‌ಗಳಲ್ಲಿ)
ಬೆಥೆಲ್ ಬಿ ಬ್ರಾರ್ 11 (7ಎ, 4x2)
ಕೊಹ್ಲಿ ಸಿ ಪ್ರಿಯಾಂಶ್ ಬಿ ಚಾಹಲ್ 58 (37ಎ, 4x4, 6x3)
ಪಡಿಕ್ಕಲ್ ಸಿ ಶ್ರೇಯಸ್ ಬಿ ಬ್ರಾರ್ 45 (25ಎ, 4x4, 6x3)
ವೆಂಕಟೇಶ್ ಅಯ್ಯರ್ ಔಟಾಗದೇ 73 (40ಎ, 4x8, 6x4)
ಡೇವಿಡ್ ಸಿ ಬ್ರಾರ್ ಬಿ ಅರ್ಷದೀಪ್ 28 (12ಎ, 4x2, 6x2)
ಇತರೆ: 7 (ಬೈ 1, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1-21 (ಜೇಕಬ್ ಬೆಥೆಲ್, 2.2), 2-97 (ದೇವದತ್ತ ಪಡಿಕ್ಕಲ್, 9.1), 3-157 (ವಿರಾಟ್ ಕೊಹ್ಲಿ, 14.6), 4-222 (ಟಿಮ್ ಡೇವಿಡ್, 19.6)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–43–1, ಅಜ್ಮತ್‌ವುಲ್ಲಾ ಒಮರ್‌ಝೈ 4–0–38–0, ಹರ್‌ಪ್ರೀತ್ ಬ್ರಾರ್ 4–0–35–2, ಲಾಕಿ ಫರ್ಗ್ಯುಸನ್ 3–0–43–0, ಯಜುವೇಂದ್ರ ಚಾಹಲ್ 3–0–42–1, ಶಶಾಂಕ್ ಸಿಂಗ್ 2–0–20–0

ಪಂಜಾಬ್ ಕಿಂಗ್ಸ್: 8ಕ್ಕೆ 199 (20 ಓವರ್‌ಗಳಲ್ಲಿ)
ಪ್ರಿಯಾಂಶ್ ಸಿ ಶೆಫರ್ಡ್ ಬಿ ಭುವನೇಶ್ವರ್ 0 (3ಎ)
ಪ್ರಭಸಿಮ್ರನ್ ಸಿ ಪಡಿಕ್ಕಲ್ ಬಿ ಭುವನೇಶ್ವರ್ 2 (5ಎ)
ಕೊನೊಲಿ ಸಿ ಬೆಥೆಲ್ ಬಿ ಶೆಫರ್ಡ್ 37 (22ಎ, 4x3, 6x3)
ಶ್ರೇಯಸ್ ಸಿ ಜಿತೇಶ್ ಬಿ ರಸಿಕ್ 1 (3ಎ)
ಸೂರ್ಯಾಂಶ್ ಸಿ ಕೊಹ್ಲಿ ಬಿ ಸುಯಶ್ 35 (22ಎ, 4x2, 6x2)
ಮಾರ್ಕಸ್ ಎಲ್‌ಬಿಡಬ್ಲ್ಯು ಬಿ ಹೇಝಲ್‌ವುಡ್ 37 (25ಎ, 4x5)
ಶಶಾಂಕ್ ಸಿ ಕೊಹ್ಲಿ ಬಿ ರಸಿಕ್ 56 (27ಎ, 4x4, 6x4)
ಒಮರ್‌ಝೈ ಸಿ ಡೇವಿಡ್ ಬಿ ರಸಿಕ್ 14 (10ಎ, 4x1, 6x1)
ಹರಪ್ರೀತ್ ಬ್ರಾರ್ ಔಟಾಗದೇ 5 (3ಎ, 4x1)
ಇತರೆ: 12 (ಲೆಗ್‌ಬೈ 4, ವೈಡ್ 8)
ವಿಕೆಟ್ ಪತನ: 1-1 (ಪ್ರಿಯಾಂಶ್ ಆರ್ಯ, 0.3), 2-18 (ಪ್ರಭಸಿಮ್ರನ್ ಸಿಂಗ್, 2.5), 3-19 (ಶ್ರೇಯಸ್ ಅಯ್ಯರ್, 3.2), 4-62 (ಕೂಪರ್ ಕೊನೊಲಿ, 7.3), 5-93 (ಸೂರ್ಯಾಂಶ್ ಶೆಡ್ಗೆ, 10.5), 6-160 (ಮಾರ್ಕಸ್ ಸ್ಟೊಯಿನಿಸ್, 16.1), 7-194 (ಶಶಾಂಕ್ ಸಿಂಗ್, 19.2), 8-199 (ಅಜ್ಮತ್‌ವುಲ್ಲಾ ಒಮರ್‌ಝೈ, 19.6)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–38–2, ಜೋಶ್ ಹೇಝಲ್‌ವುಡ್ 4–0–36–1, ರಸಿಕ್ ಸಲಾಮ್ 4–0–36–3, ಸುಯಶ್ ಶರ್ಮಾ 4–0–50–1, ರೊಮಾರಿಯೊ ಶೆಫರ್ಡ್ 1–0–8–1, ಕೃಣಾಲ್ ಪಾಂಡ್ಯ 3–0–27–0
ಪಂದ್ಯದ ಆಟಗಾರ: ವೆಂಕಟೇಶ್ ಅಯ್ಯರ್

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 23 ರನ್ ಜಯ


ವಿರಾಟ್ ಕೊಹ್ಲಿ ಮತ್ತು ಭುವನೇಶ್ವರ್ ಕುಮಾರ್ ಅವರ ಸಂಭ್ರಮ ಎಎಫ್‌ಪಿ ಚಿತ್ರ

ಪೂರೆಲ್, ರಾಹುಲ್ ಅರ್ಧಶತಕ; ರಾಯಲ್ಸ್‌ಗೆ ನಿರಾಸೆ

ಸ್ಟಾರ್ಕ್ ಮಿಂಚು: ಡೆಲ್ಲಿಗೆ ಜಯ

ನವದೆಹಲಿ (ಪಿಟಿಐ): ವೇಗಿ ಮಿಚೆಲ್ ಸ್ಟಾರ್ಕ್ ಅವರ ಅಮೋಘ ಬೌಲಿಂಗ್ ಬಳಿಕ ಅಭಿಷೇಕ್ ಪೂರೆಲ್ ಮತ್ತು ಕೆ.ಎಲ್. ರಾಹುಲ್ ಅವರು ಶತಕದ ಜೊತೆಯಾಟವಾಡಿದರು. ಇದರಿಂದಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿತು.

ಅಕ್ಷರ್ ಪಟೇಲ್ ಬಳಗವು ತನ್ನ ತವರಿನಲ್ಲಿ ಐದು ಪಂದ್ಯಗಳ ಸೋಲಿನ ಬಳಿಕ ಕೊನೆಗೂ ಗೆಲುವು ಸಾಧಿಸಿ, ಪ್ಲೇ ಆಫ್‌ನ ಸಣ್ಣ ಅವಕಾಶವನ್ನು ಜೀವಂತವಾಗಿ ಉಳಿಸಿಕೊಂಡಿತು. ಸತತ ಮೂರನೇ ಪಂದ್ಯವನ್ನು ಸೋತ ರಿಯಾನ್ ಪರಾಗ್ ಬಳಗವು ಈಗ ಒತ್ತಡಕ್ಕೆ ಸಿಲುಕಿದೆ. ಹಾಲಿ ಆವೃತ್ತಿಯಲ್ಲಿ ಕ್ಯಾಪಿಟಲ್ಸ್ ವಿರುದ್ಧ ಇದು ಎರಡನೇ ಸೋಲಾಗಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಧ್ರುವ್ ಜುರೇಲ್ (53; 40ಎ, 4X5, 6X2) ಮತ್ತು ಪರಾಗ್ (51; 26ಎ, 4X3, 6X5) ಅವರ ಅರ್ಧಶತಕಗಳ ಬಲದಿಂದ ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 193 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಅಭಿಷೇಕ್ (51;31ಎ, 4x7, 6x1) ಮತ್ತು ರಾಹುಲ್ (56;42ಎ, 4x1, 6x3) ಅವರು ಮೊದಲ ವಿಕೆಟ್‌ಗೆ 105 ರನ್ ಸೇರಿಸಿ ಭರ್ಜರಿ ಆರಂಭ ಒದಗಿಸಿದರು. ಎದುರಾಳಿ ಬೌಲರ್‌ಗಳನ್ನು ದಂಡಿಸಿದ ಅವರು ಓವರ್‌ಗೆ 10 ರನ್ ಸರಾಸರಿಯಲ್ಲಿ ರನ್ ಬಾಚಿದರು. ಆದರೆ, ನಂತರ 28 ರನ್ ಅಂತರದಲ್ಲಿ ಮೂರು ವಿಕೆಟ್‌ಗಳು ಉರುಳಿದವು.

ಈ ಹಂತದಲ್ಲಿ ಅಕ್ಷರ್ ಪಟೇಲ್ (ಔಟಾಗದೇ 34;18ಎ) ನಾಯಕನ ಆಟವಾಡಿದರು. ಆಶುತೋಷ್ ಶರ್ಮಾ (ಔಟಾಗದೇ 15;5ಎ, 4x1, 6x2) ಮತ್ತೊಮ್ಮೆ ಫಿನಿಷರ್ ಪಾತ್ರವನ್ನು ಯಶಸ್ವಿಯಾಗಿ ನಿಭಾಯಿಸಿದರು. ಹೀಗಾಗಿ, ತಂಡವು 4 ಎಸೆತ ಬಾಕಿ ಇರುವಂತೆ 5 ವಿಕೆಟ್‌ಗೆ 197 ರನ್ ಗಳಿಸಿ ಸಂಭ್ರಮಿಸಿತು.

ಇದಕ್ಕೂ ಮೊದಲು ರಾಜಸ್ಥಾನ ತಂಡಕ್ಕೆ ವೈಭವ್ ಸೂರ್ಯವಂಶಿ (46; 21ಎ, 4X5, 6X3) ಅಬ್ಬರದ ಆರಂಭ ನೀಡಿದರು. ಆದರೆ, ಯಶಸ್ವಿ ಜೈಸ್ವಾಲ್ (12; 9ಎ) ಅವರು ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಲುಂಗಿ ಎಸೆತದಲ್ಲಿಯೇ ಔಟಾದರು. ವೈಭವ್ ಮತ್ತು ಜುರೇಲ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 70 (34ಎ) ರನ್ ಸೇರಿಸಿದರು. ವೈಭವ್ ಔಟಾದ ನಂತರ ಜುರೇಲ್ ಮತ್ತು ಪರಾಗ್ ಮೂರನೇ ವಿಕೆಟ್ ಪಾಲುದಾರಿಕೆಯಲ್ಲಿ 72 ರನ್ ಸೇರಿಸಿದರು. ಇದರಿಂದಾಗಿ ತಂಡವು 14 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 160 ರನ್ ಗಳಿಸಿ, ದೊಡ್ಡ ಮೊತ್ತ ಕಲೆಹಾಕುವ ಭರವಸೆ ಮೂಡಿತ್ತು.

ಆದರೆ ಸ್ಟಾರ್ಕ್ (4–0–40–4) ಅವರ ದಾಳಿಯಿಂದಾಗಿ ರಾಜಸ್ಥಾನ ತಂಡಕ್ಕೆ 200ರ ಗಡಿ ದಾಟಲು ಸಾಧ್ಯವಾಗಲಿಲ್ಲ. ಲುಂಗಿ ಎನ್‌ಗಿಡಿ (24ಕ್ಕೆ2) ಹಾಗೂ ಮಾಧವ್ ತಿವಾರಿ (27ಕ್ಕೆ2) ಅವರೂ ಉತ್ತಮ ದಾಳಿ ನಡೆಸಿದರು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 193 (ಯಶಸ್ವಿ ಜೈಸ್ವಾಲ್ 12, ವೈಭವ್ ಸೂರ್ಯವಂಶಿ 46, ಧ್ರುವ್ ಜುರೇಲ್ 53, ರಿಯಾನ್ ಪರಾಗ್ 51, ಮಿಚೆಲ್ ಸ್ಟಾರ್ಕ್ 40ಕ್ಕೆ4, ಲುಂಗಿ ಎನ್‌ಗಿಡಿ 24ಕ್ಕೆ2, ಮಾಧವ್ ತಿವಾರಿ 27ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 19.2 ಓವರ್‌ಗಳಲ್ಲಿ 5 ವಿಕೆಟ್‌ಗೆ 197 (ಅಭಿಷೇಕ್ ಪೊರೆಲ್ 51, ಕೆ.ಎಲ್.ರಾಹುಲ್ 56, ಅಕ್ಷರ್ ಪಟೇಲ್ ಔಟಾಗದೇ 34; ಜೋಫ್ರಾ ಆರ್ಚರ್ 35ಕ್ಕೆ 2, ಬ್ರಿಜೇಶ್ ಶರ್ಮಾ 44ಕ್ಕೆ 2). ಪಂದ್ಯದ ಆಟಗಾರ: ಮಿಚೆಲ್ ಸ್ಟಾರ್ಕ್


ವಿಕೆಟ್ ಪಡೆದ ಮಿಚೆಲ್ ಸ್ಟಾರ್ಕ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸಹ ಆಟಗಾರರು ಅಭಿನಂದಿಸಿದರು ಪಿಟಿಐ ಚಿತ್ರ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	13	9	4	0	18	1.065
ಜಿ ಟಿ	13	8	5	0	16	0.400
ಎಸ್‌ಆರ್‌ಎಚ್	12	7	5	0	14	0.331
ಪಿಬಿಕೆಎಸ್	13	6	6	1	13	0.227
ಸಿಎಸ್‌ಕೆ	12	6	6	0	12	0.027
ಆರ್ ಆರ್	12	6	6	0	12	0.027
ಡಿ ಸಿ	13	6	7	0	12	- 0.871
ಕೆಕೆಆರ್	12	5	6	1	11	- 0.038
ಎಂ ಐ	12	4	8	0	8	- 0.504
ಎಲ್‌ಎಸ್‌ಜಿ	12	4	8	0	8	- 0.701

ಆರೆಂಜ್ ಕ್ಯಾಪ್: ಸಾಯಿ ಸುದರ್ಶನ್, ಜಿ ಟಿ (554 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (24 ವಿಕೆಟ್)

ಸೂಪರ್ ಕಿಂಗ್ಸ್– ಸನ್‌ರೈಸರ್ಸ್ ಮುಖಾಮುಖಿ ಇಂದು

ಚೆಪಾಕ್‌ನಲ್ಲಿ 'ದಕ್ಷಿಣ ಡರ್ಬಿ'

ಚೆನ್ನೈ (ಪಿಟಿಐ): ಐದು ಸಲದ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಒಂದು ಬಾರಿಯ ಪ್ರಶಸ್ತಿ ವಿಜೇತ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಸೋಮವಾರ ಮುಖಾಮುಖಿಯಾಗಲಿವೆ.

'ದಕ್ಷಿಣ ಡರ್ಬಿ' ಎಂದೇ ಬಿಂಬಿತವಾಗಿರುವ ಈ ಪಂದ್ಯವು ತೀವ್ರ ಕುತೂಹಲ ಕೆರಳಿಸಿದೆ. ಚೆಪಾಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಹಣಾಹಣಿಯು ಉಭಯ ತಂಡಗಳಿಗೂ ಮಹತ್ವದ್ದಾಗಿದೆ. ಆತಿಥೇಯ ತಂಡಕ್ಕಂತೂ ಪ್ಲೇ ಆಫ್ ಪ್ರವೇಶದ ಅವಕಾಶ ಜೀವಂತವಾಗಿ ಇಟ್ಟುಕೊಳ್ಳಲು 'ಮಾಡು ಇಲ್ಲವೇ ಮಡಿ' ಪಂದ್ಯವಾಗಿದೆ. ಇನ್ನು ಸನ್‌ರೈಸರ್ಸ್ ಬಳಗಕ್ಕೆ ಅಗ್ರ ನಾಲ್ಕರಲ್ಲಿ ಸ್ಥಾನ ಗಟ್ಟಿಯಾಗಿಸಿಕೊಳ್ಳಲು ಗೆಲುವು ಮುಖ್ಯವಾಗಿದೆ.

ಚೆನ್ನೈ 12 ಅಂಕಗಳೊಂದಿಗೆ ಆರನೇ ಸ್ಥಾನದಲ್ಲಿದೆ. ಹೈದರಾಬಾದ್ 14 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. ಚೆನ್ನೈಗೆ ತನ್ನ ಪಾಲಿಗೆ ಉಳಿದಿರುವ ಎರಡೂ ಪಂದ್ಯಗಳಲ್ಲಿ ಗೆದ್ದರೆ ಪ್ಲೇಆಫ್ ಅವಕಾಶ ಸಿಗುವ ಸಾಧ್ಯತೆ ಇದೆ.

ಚೆನ್ನೈ ತಂಡವು ಕಳೆದ ನಾಲ್ಕು ಪಂದ್ಯಗಳಲ್ಲಿ ಮೂರರಲ್ಲಿ ಸತತ ಜಯ ಸಾಧಿಸಿತ್ತು. ಆದರೆ, ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಸೋತಿರುವುದು ಈಗ ಒತ್ತಡಕ್ಕೆ ಕಾರಣವಾಗಿದೆ. ಇದೀಗ ಋತುರಾಜ್ ಗಾಯಕವಾಡ್ ಬಳಗವು ಸನ್‌ರೈಸರ್ಸ್ ಮತ್ತು ಗುಜರಾತ್ ಟೈಟನ್ಸ್ ಸವಾಲುಗಳನ್ನು ಮೀರಿ ನಿಲ್ಲಲೇಬೇಕಿದೆ.

ಲಖನೌ ಎದುರಿನ ಪಂದ್ಯದಲ್ಲಿ ಕಾರ್ತಿಕ್ ಶರ್ಮಾ ಅರ್ಧಶತಕ, ಶಿವಂ ದುಬೆ ಹಾಗೂ ಡೆವಾಲ್ಡ್ ಬ್ರೆವಿಸ್ ಅವರ ಉಪಯುಕ್ತ ಕಾಣಿಕೆಯ ಬಲದಿಂದ ತಂಡವು ಹೋರಾಟದ ಮೊತ್ತ ಪೇರಿಸಿತ್ತು. ಆದರೆ 'ದ್ವಿಶತಕ'ದ ಗಡಿ ದಾಟಿರಲಿಲ್ಲ. ಈ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಮತ್ತು ನಾಯಕ ಋತುರಾಜ್ ಅವರು ಲಯಕ್ಕೆ ಮರಳಿದರೆ ದೊಡ್ಡ ಮೊತ್ತ ಗಳಿಕೆ ಸುಲಭವಾಗಲಿದೆ.


ಚೆನ್ನೈ ಬೌಲರ್‌ಗಳು ಲಖನೌದ ಮಿಚೆಲ್ ಮಾರ್ಷ್ ಅವರಿಂದ ದಂಡನೆಗೆ ಒಳಗಾದರು. ಮುಕೇಶ್ ಚೌಧರಿ, ಸ್ಪೆನ್ಸರ್ ಜಾನ್ಸನ್ ಮತ್ತು ಅನ್ಷುಲ್ ಕಂಬೋಜ್ ಅವರು ದುಬಾರಿಯಾದರು. ಅನ್ಷುಲ್ ಅವರಂತೂ 2.4 ಓವರ್‌ಗಳಲ್ಲಿ 63 ರನ್ ಬಿಟ್ಟುಕೊಟ್ಟರು. ಅವರ ಒಂದೇ ಓವರ್‌ನಲ್ಲಿ ನಿಕೊಲಸ್ ಪೂರನ್ ಸತತ ನಾಲ್ಕು ಸಿಕ್ಸರ್ ಹೊಡೆದಿದ್ದರು.

ಸನ್‌ರೈಸರ್ಸ್ ಕೂಡ ಈಚೆಗೆ ಗುಜರಾತ್ ಟೈಟನ್ಸ್ ವಿರುದ್ಧ ಸೋತಿತ್ತು. ಬ್ಯಾಟರ್‌ಗಳ ವೈಫಲ್ಯವೇ ಸೋಲಿಗೆ ಪ್ರಮುಖ ಕಾರಣವಾಗಿತ್ತು. ತಂಡವು ಕೇವಲ 86 ರನ್‌ಗಳಿಗೆ ಆಲೌಟ್ ಆಗಿತ್ತು.

ಆದರೆ ತಂಡದಲ್ಲಿರುವ ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಇಶಾನ್ ಕಿಶನ್, ಹೆನ್ರಿಚ್ ಕ್ಲಾಸೆನ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ಅವರು ತಮ್ಮ ಲಯಕ್ಕೆ ಮರಳಿದರೆ ಚೆನ್ನೈ ಬೌಲರ್‌ಗಳಿಗೆ ಕಠಿಣ ಸವಾಲು ಎದುರಾಗುವುದು ಖಚಿತ. ಕನ್ನಡಿಗ ಆರ್.ಸ್ಮರಣ್ ಅವರಿಗೆ ಕಳೆದ ಪಂದ್ಯದಲ್ಲಿ ಅವಕಾಶ ಲಭಿಸಿತ್ತು. ಅವರು 15 ಎಸೆತಗಳಲ್ಲಿ 9 ರನ್ ಗಳಿಸಿದ್ದರು.

ಹೈದರಾಬಾದ್ ತಂಡದ ಬೌಲಿಂಗ್ ವಿಭಾಗದಲ್ಲಿ ಪ್ಯಾಟ್ ಕಮಿನ್ಸ್ ಅವರೊಬ್ಬರೇ ಹೆಚ್ಚು ಅನುಭವಿ. ನಿತೀಶ್ ಕುಮಾರ್ ರೆಡ್ಡಿ, ಪ್ರಫುಲ್ ಹಿಂಗೆ, ಸಕೀಬ್ ಹುಸೇನ್ ಅವರು ವಿಕೆಟ್ ಗಳಿಸುತ್ತಿದ್ದಾರೆ. ಆದರೆ ರನ್‌ಗಳಿಗೆ ನಿಯಂತ್ರಣವನ್ನೂ ಹಾಕಬೇಕಾದ ಅವಶ್ಯಕತೆ ಇದೆ.


ಸಂಜು ಸ್ಯಾಮ್ಸನ್


ಅಭಿಷೇಕ್ ಶರ್ಮಾ

ಇಂದಿನ ಪಂದ್ಯ
ಚೆನ್ನೈ ಸೂಪರ್ ಕಿಂಗ್ಸ್ V/s ಸನ್‌ರೈಸರ್ಸ್ ಹೈದರಾಬಾದ್
ತಾಣ: ಚೆನ್ನೈ, ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಚೆಸ್: ಪ್ರಶಾಂತ್ ನಾಯಕ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಪ್ರಶಾಂತ್ ಜೆ. ನಾಯಕ್ ಅವರು ಭಾನುವಾರ ನಗರದಲ್ಲಿ ಮುಕ್ತಾಯಗೊಂಡ ಕರ್ನಾಟಕ ರಾಜ್ಯ ಅಮೆಚೂರ್ (2000 ರೇಟಿಂಗ್ ಒಳಗಿನವರ) ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಕಾಟನ್‌ಪಲ್ಲೂರಿನ ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆದ ಈ ಮೂರು ದಿನಗಳ ಕೂಟದಲ್ಲಿ ಅವರು 9 ಸುತ್ತುಗಳಿಂದ 8 ಪಾಯಿಂಟ್ಸ್ ಕಲೆಹಾಕಿದರು. ಬೆಂಗಳೂರಿನ ವಿಧು ತೋಟ ಮತ್ತು ದಕ್ಷಿಣ ಕನ್ನಡದ ಆಟಗಾರ್ತಿ ಆರುಷಿ ಹೆಲೆನ್ ಡಿಸಿಲ್ವ ಸಹ 8 ಪಾಯಿಂಟ್ಸ್ ಕಲೆಹಾಕಿದರೂ ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಬೆಂಗಳೂರಿನ ಇಂದ್ರಜಿತ್ ಮಜುಂದಾರ್ ಮತ್ತು ದಿಗ್ವಿಜಯ್ ಸುನೀಲ್ (ತಲಾ 7.5) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರು.

ಬೆಂಗಳೂರು ಗ್ರಾಮೀಣ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದಲ್ಲಿ ನಡೆದ ಟೂರ್ನಿಯಲ್ಲಿ 457 ಮಂದಿ ಭಾಗವಹಿಸಿದ್ದು 246 ಮಂದಿ ರೇಟಿಂಗ್ ಪಡೆದಿದ್ದರು.


ಟ್ರೋಫಿಯೊಂದಿಗೆ ಪ್ರಶಾಂತ್ ಜೆ. ನಾಯಕ್ ಮತ್ತು ವಿಧು ತೋಟ

ಸಿನ್ನರ್‌ಗೆ 'ಇಟಾಲಿಯನ್ ಓಪನ್' ಕಿರೀಟ

ರೋಮ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಯಾನಿಕ್ ಸಿನ್ನರ್ ಅವರು ಭಾನುವಾರ ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಕ್ಯಾಸ್ಪರ್ ರೂಡ್ ಅವರನ್ನು ಮಣಿಸಿ, ದಾಖಲೆಯ ಸತತ ಆರನೇ 'ಮಾಸ್ಟರ್ಸ್ 1000' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಫೈನಲ್ ಹಣಾಹಣಿಯಲ್ಲಿ ಸಿನ್ನರ್ 6-4, 6-4 ಸೆಟ್‌ಗಳಿಂದ ನಾರ್ವೆಯ ರೂಡ್ ಅವರನ್ನು ಮಣಿಸಿದರು. ಆ ಹಾದಿಯಲ್ಲಿ 'ಮಾಸ್ಟರ್ಸ್ 1000' ಟೂರ್ನಿಗಳಲ್ಲಿ ಸತತ 34 ಗೆಲುವು ದಾಖಲಿಸಿದ ದಾಖಲೆಯನ್ನು ಉತ್ತಮಪಡಿಸಿದರು.

ಆ್ಯಡ್ರಿಯಾನೊ ಪನಾಟ್ಟಾ ನಂತರ ಈ ಕಿರೀಟ ಗೆದ್ದ ಇಟಲಿಯ ಮೊದಲ ಆಟಗಾರ ಎಂಬ ಹಿರಿಮೆಗೂ ಸಿನ್ನರ್ ಪಾತ್ರರಾದರು. 50 ವರ್ಷಗಳ ಹಿಂದೆ ಆ್ಯಡ್ರಿಯಾನೊ ಪ್ರಶಸ್ತಿ ಗೆದ್ದಿದ್ದರು. 24 ವರ್ಷದ ಸಿನ್ನರ್, ಎಟಿಪಿಯ ಎಲ್ಲಾ ಉನ್ನತ ರ‍್ಯಾಂಕ್‌ನ ಟೂರ್ನಿಗಳನ್ನು ಗೆದ್ದು 'ಗೋಲ್ಡನ್ ಮಾಸ್ಟರ್ಸ್' ಅನ್ನು ಪೂರ್ಣಗೊಳಿಸಿದರು.



ವೇಟ್‌ಲಿಫ್ಟಿಂಗ್: ಭಾರತಕ್ಕೆ 11ನೇ ಸ್ಥಾನ

ಗಾಂಧಿನಗರ (ಪಿಟಿಐ): ಭಾನುವಾರ ಇಲ್ಲಿ ಮುಕ್ತಾಯಗೊಂಡ ಏಷ್ಯನ್ ಸೀನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವು 11 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ 11ನೇ ಸ್ಥಾನ ಪಡೆಯಿತು.

ಭಾರತ ಒಂದು ಬೆಳ್ಳಿ ಮತ್ತು 10 ಕಂಚು ಪದಕಗಳನ್ನು ಗೆದ್ದುಕೊಂಡಿತು. 21 ಚಿನ್ನ, 12 ಬೆಳ್ಳಿ ಮತ್ತು 8 ಕಂಚು ಸೇರಿದಂತೆ 41 ಪದಕ ಗೆದ್ದ ಚೀನಾ ಚೀನಾ ಅಗ್ರಸ್ಥಾನದೊಂದಿಗೆ ಅಭಿಯಾನ ಮುಗಿಸಿತು. 30 ಪದಕ ಗೆದ್ದ ಉತ್ತರ ಕೊರಿಯಾ (18 ಚಿನ್ನ, 11 ಬೆಳ್ಳಿ, 1 ಕಂಚು) ಎರಡನೇ ಸ್ಥಾನ ಪಡೆಯಿತು.

ಲಿಯಾಂಡರ್ ಪೇಸ್‌ಗೆ ಮಾತೃವಿಯೋಗ



ಬೆಂಗಳೂರು: ಟೆನಿಸ್ ದಂತಕಥೆ ಲಿಯಾಂಡರ್ ಪೇಸ್ ಅವರ ತಾಯಿ, ಮಾಜಿ ಒಲಿಂಪಿಯನ್ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿ ಜೆನ್ನಿಫರ್ ಪೇಸ್ (72) ಅವರು ಭಾನುವಾರ ಅನಾರೋಗ್ಯದಿಂದ ನಿಧನರಾದರು.

ಭಾರತೀಯ ಮಹಿಳಾ ಬ್ಯಾಸ್ಕೆಟ್‌ಬಾಲ್‌ನ ಪ್ರವರ್ತಕರಲ್ಲಿ ಒಬ್ಬರಾಗಿರುವ ಜೆನ್ನಿಫರ್ ಅವರು 1972ರ ಮ್ಯೂನಿಚ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ನಂತರ ಭಾರತ ಮಹಿಳಾ ಬ್ಯಾಸ್ಕೆಟ್‌ಬಾಲ್ ತಂಡದ ನಾಯಕತ್ವ ವಹಿಸಿದ್ದರು.

ಜೆನ್ನಿಫರ್ ಅವರು ಭಾರತದ ಅತ್ಯಂತ ಪ್ರತಿಷ್ಠಿತ ಕ್ರೀಡಾ ಕುಟುಂಬಕ್ಕೆ ಸೇರಿದವರು. ಅವರ ಪತಿ ದಿವಂಗತ ಡಾ.ವೇಸ್ ಪೇಸ್ ಅವರು 1972ರ ಮ್ಯೂನಿಚ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ಹಾಕಿ ತಂಡದ ಸದಸ್ಯರಾಗಿದ್ದರು. ಅವರ ಪುತ್ರ ಲಿಯಾಂಡರ್ 1996ರ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು.

'ಭಾರತೀಯ ಕ್ರೀಡೆಗಳಿಗೆ ಜೆನ್ನಿಫರ್ ಪೇಸ್ ಅವರ ಕೊಡುಗೆ ಅಪಾರವಾದುದು. ಅತ್ಯುತ್ತಮ ಕ್ರೀಡಾಪಟು ಮತ್ತು ಸ್ಫೂರ್ತಿದಾಯಕ ತಾಯಿಯಾಗಿ ಅವರ ಪರಂಪರೆ ಯಾವಾಗಲೂ ಸ್ಮರಣೀಯವಾಗಿರುತ್ತದೆ' ಎಂದು ಫಿಬಾ ಏಷ್ಯಾ ಅಧ್ಯಕ್ಷ ಕೆ.ಗೋವಿಂದರಾಜ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಥಾಯ್ಲೆಂಡ್ ಓಪನ್: ಇಂಡೊನೇಷ್ಯಾದ ಲಿಯೋ–ಮಾರ್ಟಿನ್ ಜೋಡಿಗೆ ಪ್ರಶಸ್ತಿ

ಸಾತ್ವಿಕ್–ಚಿರಾಗ್ ರನ್ನರ್ಸ್ ಅಪ್

ಬ್ಯಾಂಕಾಕ್ (ಪಿಟಿಐ): ಭಾರತದ ಸ್ಟಾರ್ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ರನ್ನರ್ಸ್ ಅಪ್‌ನೊಂದಿಗೆ ಅಭಿಯಾನ ಮುಗಿಸಿದರು.

ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕದ ಸಾತ್ವಿಕ್–ಚಿರಾಜ್ 12-21, 23-25ರಿಂದ ಇಂಡೊನೇಷ್ಯಾದ ಲಿಯೋ ರೋಲಿ ಕಾರ್ನಾಂಡೊ ಮತ್ತು ಡೇನಿಯಲ್ ಮಾರ್ಟಿನ್ ಅವರಿಗೆ ಸೋತರು. ಆರಂಭದ ಗೇಮ್‌ನಲ್ಲಿ ಭಾರತದ ಆಟಗಾರರು ಲಯಕ್ಕೆ ಪರದಾಡಿದರು. ಆದರೆ, ಎರಡನೇ ಗೇಮ್‌ನಲ್ಲಿ ಒತ್ತಡದ ಮಧ್ಯೆ ಉತ್ತಮ ಮಾನಸಿಕ ಸ್ಥೈರ್ಯವನ್ನು ಪ್ರದರ್ಶಿಸಿದರು.

ವಿಶ್ವದ ನಾಲ್ಕನೇ ಕ್ರಮಾಂಕದ ಸಾತ್ವಿಕ್– ಚಿರಾಗ್ ಅವರಿಗೆ ಇದು ಈ ಋತುವಿನ ಮೊದಲ ಫೈನಲ್ ಆಗಿತ್ತು. 2019 ಮತ್ತು 2024ರಲ್ಲಿ ಪ್ರಶಸ್ತಿ ಗೆದ್ದಿದ್ದ ಭಾರತದ ಆಟಗಾರರು ಇಲ್ಲಿ ಮೂರನೇ ಬಾರಿ ಕಿರೀಟ ಗೆಲ್ಲುವ ಪ್ರಯತ್ನದಲ್ಲಿದ್ದರು. ಆದರೆ, ಇಂಡೊನೇಷ್ಯಾದ ಆಟಗಾರರು ಪಾರಮ್ಯ ಸಾಧಿಸಿದರು. ಒಟ್ಟು ₹4.55 ಕೋಟಿ ಬಹುಮಾನ ಮೊತ್ತದ ಟೂರ್ನಿ ಇದಾಗಿತ್ತು.

ಕಳೆದ ವರ್ಷ ಚೀನಾ ಮಾಸ್ಟರ್ಸ್ ಮತ್ತು ಹಾಂಗ್‌ಕಾಂಗ್ ಓಪನ್‌ನಲ್ಲಿ ರನ್ನರ್ಸ್ ಅಪ್ ಆಗಿದ್ದ ಭಾರತದ ಜೋಡಿ, ಈ ಬಾರಿ ಸಾತ್ವಿಕ್ ಅವರ ಭುಜದ ಗಾಯದಿಂದಾಗಿ ಕೆಲ ಟೂರ್ನಿಗಳನ್ನು ತಪ್ಪಿಸಿಕೊಂಡಿತ್ತು. ಆದರೆ, ಕಳೆದ ತಿಂಗಳು ಥಾಮಸ್ ಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿತ್ತು. ಇದರಿಂದಾಗಿ ಭಾರತ ತಂಡವು ಕಂಚಿನ ಪದಕದ ಸಾಧನೆ ಮಾಡಿತ್ತು.

'ಫೈನಲ್ ಫಲಿತಾಂಶ ಹೊರತುಪಡಿಸಿ, ಈ ವಾರ ನಾವು ಆಡಿದ ರೀತಿ ಸಮಾಧಾನ ತಂದಿದೆ. ಫೈನಲ್ ಪಂದ್ಯದಲ್ಲಿ ಸೋಲಿಗೆ ಕಾರಣವಾದ ಅಂಶಗಳ ಬಗ್ಗೆ ಪರಾಮರ್ಶೆ ನಡೆಸುತ್ತೇವೆ' ಎಂದು ಸಾತ್ವಿಕ್ ಪ್ರತಿಕ್ರಿಯಿಸಿದರು.

ಇಂಡೊನೇಷ್ಯಾದ ಆಟಗಾರರು ಇದೇ ಮೊದಲ ಬಾರಿ ಸಾತ್ವಿಕ್–ಚಿರಾಗ್ ವಿರುದ್ಧ ಗೆಲುವು ಸಾಧಿಸಿತು. ಈ ಹಿಂದಿನ ನಾಲ್ಕು ಮುಖಾಮುಖಿಗಳಲ್ಲಿ ಭಾರತದ ಜೋಡಿಯೇ ಪಾರಮ್ಯ ಮೆರೆದಿತ್ತು.


ಪ್ರಶಸ್ತಿ ಗೆದ್ದ ಇಂಡೊನೇಷ್ಯಾದ ಡೇನಿಯಲ್ ಮಾರ್ಟಿನ್ ಮತ್ತು ಲಿಯೋ ರೋಲಿ ಕಾರ್ನಾಂಡೊ (ಬಲ). ರನ್ನರ್ಸ್ ಅಪ್ ಆದ ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಎಎಫ್‌ಪಿ ಚಿತ್ರ

ಚೆಸ್: ಜಂಟಿ ಅಗ್ರಸ್ಥಾನದಲ್ಲಿ ಪ್ರಜ್ಞಾನಂದ

ಬುಕಾರೆಸ್ಟ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಇಲ್ಲಿ ನಡೆಯುತ್ತಿರುವ ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯ ಮೂರನೇ ಸುತ್ತಿನಲ್ಲಿ ವಿನ್ಸೆಂಟ್ ಕೀಮರ್ ಅವರೊಂದಿಗೆ ಡ್ರಾ ಮಾಡಿಕೊಂಡರು.

ಪ್ರಜ್ಞಾನಂದ ಅವರು ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಜಾ ಫಿರೋಝಾ ವಿರುದ್ಧ ಡ್ರಾ ಸಾಧಿಸಿದ್ದರೆ, ಎರಡನೇ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಅವರನ್ನು ಮಣಿಸಿದ್ದರು. ನಾಲ್ಕನೇ ಸುತ್ತಿನಲ್ಲಿ ನೆದರ್ಲೆಂಡ್ಸ್‌ನ ಜೋರ್ಡೆನ್ ವ್ಯಾನ್ ಫಾರೆಸ್ಟ್ ಅವರನ್ನು ಎದುರಿಸಲಿದ್ದಾರೆ. ಕಣದಲ್ಲಿರುವ 10 ಆಟಗಾರರ ಪೈಕಿ ಪ್ರಜ್ಞಾನಂದ ಭಾರತದ ಏಕೈಕ ಸ್ಪರ್ಧಿಯಾಗಿದ್ದಾರೆ.

ಭಾರತದ ಆಟಗಾರ ಒಟ್ಟು 2 ಅಂಕ ಗಳಿಸಿ ಇತರ ನಾಲ್ವರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಫ್ರಾನ್ಸ್‌ನ ಮ್ಯಾಕ್ಸಿಮ್ ವೇಷಿಯರ್–ಲಗ್ರೇವ್, ಜರ್ಮನಿಯ ಕೀಮರ್, ನೆದರ್ಲೆಂಡ್ಸ್‌ನ ಅನೀಶ್ ಗಿರಿ ಮತ್ತು ಜೋರ್ಡೆನ್ ಅವರೂ ತಲಾ 2 ಅಂಕ ಗಳಿಸಿದ್ದಾರೆ.

